ವಿಷಯ : ಶ್ರೀ ಜೆ. ಹೆಚ್. ಪಟೇಲ್ ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯದ ಮೇಲಿನ ಮುಂದುವರಿದ ಚರ್ಚೆ

(ಸದನವು ಮಧ್ಯಾಹ್ನ 3 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು,
ಉಪಾಧ್ಯಕ್ಷರು (ಶ್ರೀ ಚಂದ್ರ ಶೇಖರ ಮಾಮನಿ)ರವರು ಪೀಠವನ್ನು ಅಲಂಕರಿಸಿದ್ದರು)

★★★

ಉಪಾಧ್ಯಕ್ಷರು: ಈಗ ಪ್ರಮೀಳಾ ನೇಸರ್ಗಿಯವರು ಮಾತನಾಡಿ, ತಾವೆಲ್ಲರೂ ಹತ್ತು ಹತ್ತು ನಿಮಿಷಗಳಲ್ಲಿ ಮುಗಿಸಬೇಕು.

+ಶ್ರೀಮತಿ. ಪ್ರಮೀಳಾ ನೇಸರ್ಗಿ (ಚಾಮರಾಜ ಪೇಟೆ ಕ್ಷೇತ್ರ): ಆಗುವುದಿಲ್ಲ ಸರ್, ನೀವು ಹತ್ತು ಹತ್ತು ನಿಮಿಷಗಳನ್ನು ಕೊಡುವುದಾದರೆ ಬೇಡವೇ ಬೇಡ....

ಉಪಾಧ್ಯಕ್ಷರು : ಅದು ತಮ್ಮ ಇಷ್ಟ ನಾವು ಏನು ಮಾಡುವುದಕ್ಕಾಗುವುದಿಲ್ಲ, ಎಲ್ಲರಿಗೂ ಒಂದೇ, ಅದು ಆಗುವುದಿಲ್ಲ.

ಶ್ರೀಮತಿ. ಪ್ರಮೀಳಾ ನೇಸರ್ಗಿ : ನಾನು ಒನ್ ಆಫ್ ದಿ ಸಿಗ್ನೇಟರಿ, ನಾವು ಸಿಗ್ನೇಚರ್ ಮಾಡಿ ಮಾತನಾಡಲಿಲ್ಲವೆಂದರೆ ಹೇಗೆ?

ಉಪಾಧ್ಯಕ್ಷರು: ನಿಮ್ಮ ನಾಯಕರು ಮತ್ತು ನಾವು ಸ್ಪೀಕರ್ ರೂಂನಲ್ಲಿ ಮಾತನಾಡಿ ಸಮಯವನ್ನು ನಿಗದಿ ಮಾಡಿದ್ದೇವೆ, ತಾವು ದಯಮಾಡಿ ಆ ಪ್ರಕಾರ ಮಾತನಾಡಿ.

ಶ್ರೀಮತಿ. ಪ್ರಮೀಳಾ ನೇಸರ್ಗಿ: ನಾವು ಮಾತನಾಡುವುದಿಲ್ಲವೆಂದು ಹೇಳಲೇ ಇಲ್ಲ, ತಾವು ಹತ್ತು ಹತ್ತು ನಿಮಿಷವೆಂದು ಸಮಯವನ್ನು ನಿಗದಿ ಮಾಡಿದರೆ ಖಂಡಿತಾ ಸಾಧ್ಯವಾಗುವುದಿಲ್ಲ.

ಉಪಾಧ್ಯಕ್ಷರು: ತಾವು ದಯಮಾಡಿ ಮಾತನಾಡಿ.

ಶ್ರೀಮತಿ. ಪ್ರಮೀಳಾ ನೇಸರ್ಗಿ: ಹಾಗಲ್ಲ ಸರ್, ಎಲ್ಲರೂ ಮಾತನಾಡುವುದಕ್ಕೆ ಸಮಯಕ್ಕೆ ಸಮಯವಿರುತ್ತದೆ ನಾವು ಮಾತನಾಡುತ್ತೇವೆ.

ಉಪಾಧ್ಯಕ್ಷರು : ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾದರೆ ನಾವು ಸಮಯಕ್ಕೆ ಹೊಂದಿಕೊಳ್ಳಬೇಕು.

ಶ್ರೀಮತಿ. ಪ್ರಮೀಳಾ ನೇಸರ್ಗಿ: ಸನ್ಮಾನ್ಯ ಸಭಾಧ್ಯಕ್ಷರೆ, ಅವಿಶ್ವಾಸ ನಿರ್ಣಯದ ಬಗ್ಗೆ ಬಹಳ ಮಾತನಾಡತಕ್ಕಂಥ ಸಂದರ್ಭದಲ್ಲಿ ನಾನಾದರೂ ತಮಗೆ ಹೇಳುವುದು ಇಷ್ಟೆ, ಈಗ ಈ ಕರ್ನಾಟಕ ರಾಜ್ಯದಲ್ಲಿ ಎರಡು ವರ್ಗಗಳಾಗಿವೆ. ಒಂದು ಆಡಳಿತ ವರ್ಗ ಮತ್ತೊಂದು ವಿರೋಧಪಕ್ಷದ ವರ್ಗ. ಬ್ಯಾಕ್‌ವರ್ಡ್ ಕ್ಲಾಸಸ್ ಆಗಲಿ, ಷೆಡ್ಯೂಲ್ ಕಾಸ್ಟ್ ಆಗಲಿ ಎಲ್ಲವೂ ಈಗ ಹೋಯಿತು. ಯಾವುದಾದರೂ ಒಂದು ವರ್ಗಕ್ಕೆ ಒಳ್ಳೆಯದನ್ನು ಈ ಸರ್ಕಾರ ಮಾಡಿದೆಯೇ ಎನ್ನುವುದನ್ನು ನಾವು ಇವತ್ತು ನೋಡಬೇಕಾಗಿದೆ. ಆ ದೃಷ್ಟಿಯಲ್ಲಿ ನಾನು ನೋಡಿದಾಗ, ಮೊದಲು ನಾನು ತಮ್ಮ ಗಮನಕ್ಕೆ ತರತಕ್ಕಂಥ ವಿಷಯ ಸನ್ಮಾನ್ಯ ಶ್ರೀಮತಿ. ಬಿ. ಟಿ. ಲಲಿತಾ ನಾಯಕ್‌ರವರನ್ನು ಮಂತ್ರಿಮಂಡಲಕ್ಕೆ ತೆಗೆದುಕೊಳ್ಳುತ್ತಾರೆಂದು ನಾವು ತಿಳಿದುಕೊಂಡಿದ್ದೆವು, ಆದರೆ ಅವರಿಗೆ ಕಾರಣಾಂತರಗಳಿಂದ ಮಂತ್ರಿಪದವಿಯನ್ನು ಕೊಡಲಿಲ್ಲ. ಕಾರಣವೇನು ಎಂದರೆ, ನಮಗೆ ತಿಳಿದು ಬಂ[illegible] ವಿಷಯ, ಅವರ ಮೇಲೆ ಯಾವುದೋ ಕೇಸ್ ಇದೆ, ಆದ್ದರಿಂದ ಕೊಡುವುದಿಲ್ಲವೆಂದು ಹೇಳಿದರು ಎಂದು ತಿಳಿದು ಬಂತು. ಆದರೆ ಇದೇ ಮಂತ್ರಿ ಮಂಡಲದಲ್ಲಿ ಕ್ರಿಮಿನಲ್ ಕೇಸ್‌ಗಳಿರುವ ಮಂತ್ರಿಗಳನ್ನು ಇವತ್ತು ತಾವು ಮಂತ್ರಿಗಳನ್ನಾಗಿ ಇಟ್ಟುಕೊಂಡಿದ್ದೀರಿ. ಏನು ಹೇಳಿದಿರಿ ಎಂದರೆ, ಅವರ ಮೇಲೆ ಕೇಸ್ ಇಲ್ಲವೆಂದು ಹೇಳಿದಿರಿ. ಆದರೆ ಇವತ್ತೂ ಕೂಡ ಅವರ ಮೇಲೆ ಕೇಸ್ ಇದ್ದು ಜೈಲ್ ಮಂತ್ರಿಗಳಾಗಿರತಕ್ಕಂಥ ಸಂದರ್ಭದಲ್ಲಿ ಟ್ರಾನ್ಸ್‌ಫರ್ ಅಪ್ಲಿಕೇಷನ್ ಅನ್ನು ಹೈಕೋರ್ಟಿನಲ್ಲಿ ಹಾಕಿ, ಕೇಸು ಹೈಕೋರ್ಟಿನಲ್ಲಿ ಟ್ರಾನ್ಸ್‌ಫರ್ ಆಗಿದೆ ಎಂದು ಹೇಳಿದಾಗ, ಈ ಕೋರ್ಟಿನಲ್ಲಿ ಯಾವುದೇ ಕೋರ್ಟಿನಲ್ಲಿ ಕೇಸ್ ಇಲ್ಲವೆಂದು ಹೇಳಿ, ಈಗ ಅವರನ್ನು ಮಂತ್ರಿಮಂಡಲದಲ್ಲಿ ಸೇರಿಸಿ ಕೊಂಡಿದ್ದೀರಿ, ಅವರ ಮೇಲೆ ಇವತ್ತು ಕೂಡ ಕೇಸ್ ಚಾಲು ಇದೆ. ಅಂದರೆ ಕ್ರಿಮಿನಲ್ ಕೇಸ್ ಇರತಕ್ಕಂಥವರನ್ನು ಇವತ್ತಿನದಿವಸ ತಾವು ಮಂತ್ರಿಮಂಡಲದಲ್ಲಿ ಇಟ್ಟುಕೊಂಡಿದ್ದೀರೆಂದರೆ, ಈ ಮಂತ್ರಿಮಂಡಲದಲ್ಲಿ ಕ್ರಿಮಿನಲ್ ಕೇಸ್ ಇರುವವರು ಇರುವುದಾದರೆ, ಹೇಗೆ ಈ ಮಂತ್ರಿಮಂಡಲ ಕೆಲಸ ನಿರ್ವಹಿಸಬಹುದು ಎನ್ನುವುದನ್ನು ಇವತ್ತಿನದಿವಸ ನಮ್ಮ ಮುಖ್ಯಮಂತ್ರಿಗಳು ಹೇಳಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟ ಪ್ರತಿಯೊಂದು ದಾಖಲೆ, ಹೈಕೋರ್ಟಿನಲ್ಲಿ ಆದಂಥ ಆರ್ಡರ್, ಕೇಸ್ ಪೆಂಡಿಂಗ್ ಇರುವ ಆರ್ಡರ್ ಎಲ್ಲಾ ಪೂರ್ತಿ ದಾಖಲೆಗಳು ಇವತ್ತಿನದಿವಸ ನನ್ನ ಹತ್ತಿರವಿದೆ ; ದಯವಿಟ್ಟು ನಮ್ಮ ಮಂತ್ರಿಗಳು ತಾವು ನೋಡಬೇಕು. ಇವರ ಮೇಲೆ ಇರತಕ್ಕ ಎರಡೂ ಕ್ರಿಮಿನಲ್ ಕೇಸ್‌ಗಳು ಇವತ್ತು ಈ ಕೋರ್ಟಿನಲ್ಲಿ ಪೆಂಡಿಂಗ್ ಇದೆ ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ಇವತ್ತಿನದಿವಸ ತರುತ್ತಿದ್ದೇನೆ. ಎರಡು ಕೇಸ್‌ಗಳು , ಸಿಸಿ ನಂಬರ್ 99/96, ಮತ್ತೆ ಇನ್ನೊಂದು, ಎರಡೂ ಕೇಸ್‌ಗಳು ಕೂಡ ಒಂದು ಕೋರ್ಟಿನಿಂದ ಇನ್ನೊಂದು ಕೇಸಿಗೆ ಸಿಸಿ ಕ್ರೈಂ ನಂಬರ್ 5/96 ಮತ್ತು ಕ್ರೈಂ ನಂಬರ್ 6/96, ಜೆಎಂಎಫ್‌ಸಿ ಹುಮ್ನಾಬಾದ್‌ನಲ್ಲಿ ಈ ಎರಡು ಕೇಸ್‌ಗಳು ಕೂಡ ಇವತ್ತು ಹಾಲಿ ಇವೆ.

ಶ್ರೀ . ಹೆಚ್.ಎನ್.ನಂಜೇಗೌಡ : ಯಾರನ್ನಾದರೂ ಕರೆಯುವುದಕ್ಕಾದರೂ ಕಳುಹಿಸಿ, ಇದೇನು, ಹೇಳುವುದನ್ನು ಯಾರೂ ಕೇಳುವವರಿಲ್ಲ.

ಉಪಾಧ್ಯಕ್ಷರು : ಗೊವಿಂದೇಗೌಡರೇ ಕರೆಯಿಸಿರಿ.

ಶ್ರೀ ಹೆಚ್. ಎನ್.ನಂಜೇಗೌಡ: ಒಬ್ಬರ ಮೇಲೆ ಕ್ರಿಮಿನಲ್ ಕೇಸ್ ಇರತಕ್ಕಂಥವರನ್ನು ಮಂತ್ರಿ ಮಾಡಿಕೊಂಡಿದ್ದಾರೆಂದು ಗಂಭೀರವಾದ ಅಪಾದನೆಯನ್ನು ಅವರು ಮಾಡುತ್ತಿದ್ದಾರೆ. ಇದನ್ನು ಏತಕ್ಕೆ ಇಷ್ಟೊಂದು ಲಘುವಾಗಿ ತೆಗೆದುಕೊಳ್ಳುತ್ತಾರೆಂದು ನನಗೆ ಗೊತ್ತಾಗುತ್ತಿಲ್ಲ. ಕೇಸ್ ನಂಬರ್ ಎಲ್ಲಾ ಹೇಳುತ್ತಿದ್ದಾರೆ, ಇವರನ್ನೆಲ್ಲಾ ಮಂತ್ರಿಗಳನ್ನಾಗಿ ಮಾಡಿಕೊಂಡಿದ್ದೀರೆಂದು ಹೇಳುತ್ತಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಎರಡು ಕೇಸ್‌ಗಳು ಪೆಂಡಿಂಗ್ ಇವೆ. ಇದೊಂದೇ ಅಲ್ಲ, ಮತ್ತೆ ಈ ಕೇಸ್ ನಲ್ಲಿ ಸಂಬಂಧಪಟ್ಟಂಥ ಯಾವ ಒಬ್ಬ ಡಿಸ್ಟಿಲರಿಯಲ್ಲಿದ್ದಂಥ, ಅವರ ಹೆಸರುಗಳಿರತಕ್ಕಂಥ ಬಾಟಲ್‌ಗಳನ್ನು ಸೀಜ್ ಮಾಡಿದೆವು ಎಂದು ಹೇಳಿದರೂ, ಅವರ ಬಗ್ಗೆ ಮಹಜರ್ ಆಗಿದೆ. ಅವರ ಕಂಪನಿಯಲ್ಲಿದ್ದಂಥ ಮಾಲುಗಳಿವೆ ಎಂದು, ಅವರ ಕಂಪನಿ ಹೆಸರುಗಳು ಕೂಡ ಮಹಜರ್‌ನಲ್ಲಿ ದಾಖಲಾಗಿವೆ. ಅವರನ್ನೂ ಕೂಡ ಇವತ್ತು ತಾವು ಮಂತ್ರಿಮಂಡಲದಲ್ಲಿಟ್ಟು ಕೊಂಡಿದ್ದೀರಿ. ಅಂದರೆ ಇಬ್ಬರು ಮಂತ್ರಿಗಳು ಉಪಾಧ್ಯಕ್ಷರೆ, ನನಗೆ ಏನು ಆಶ್ಚರ್ಯವಾಗುತ್ತದೆ ಎಂದರೆ, ಮಹಿಳೆಯರೊಬ್ಬರನ್ನು ಮಂತ್ರಿ ಮಂಡಲದಲ್ಲಿ ತೆಗೆದುಕೊಳ್ಳಿ ಎಂದು ಹೇಳಿದಾಗ, ಮಾಡುವುದಕ್ಕಾಗುವುದಿಲ್ಲವೆಂದರು, ಏತಕ್ಕೆ ಎಂದು ಕೇಳಿದಾಗ, ಅವರ ಮೇಲೆ ಕೇಸ್ ಇದೆ ಎಂದು ಹೇಳಿದರು. ಮಗ ಮಾಡಿದ ತಪ್ಪಿಗೆ, ತಾಯಿಯನ್ನು ಹೊಣೆಯನ್ನಾಗಿ ಮಾಡಿ, ನೀವು ಅವರನ್ನು ಮಂತ್ರಿಮಂಡಲದಲ್ಲಿಟ್ಟುಕೊಂಡಿದ್ದೀರಲ್ಲಾ, ಇವರನ್ನು ಹೇಗೆ ಇಟ್ಟುಕೊಂಡಿದ್ದೀರಿ? ಈ ತರಹದ ಮಂತ್ರಿಮಂಡಲದಿಂದ ಸಾಮಾನ್ಯಜನರಿಗೆ ಏನಾದರೂ ಬೆಲೆ ಬರುತ್ತದೆಯೇ, ನ್ಯಾಯ ದೊರೆಯುತ್ತದೆಯೇ ಎನ್ನುವ ವಿಷಯವನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇದು ನನಗೆ ಬಹಳ ದುಃಖತರತಕ್ಕಂಥ ವಿಷಯ ಇದರ ಬಗ್ಗೆ ತಾವು ಗಮನ ಹರಿಸಬೇಕೆಂದು ನಾನು ಕೇಳುತ್ತಿದ್ದೇನೆ. ನನಗೆ ಮಾತನಾಡುವುದಕ್ಕೆ ಸಮಯ ಹೆಚ್ಚಾಗಿ ಕೊಡದಿರುವ ಸಂದರ್ಭದಲ್ಲಿ ನಾನು ಅದನ್ನು, ಪ್ರತಿಯೊಂದನ್ನು ವಿವರವಾಗಿ ಓದುವುದಕ್ಕೆ ಹೋಗುತ್ತಿಲ್ಲ. ನಗರ ಮತ್ತು ಪೌರಾಡಳಿತಕ್ಕೆ ಸಂಬಂಧಪಟ್ಟಂಥ ಒಬ್ಬ ಮಂತ್ರಿ, ಮತ್ತು ಅವರ ಡಿಸ್ಟಿಲರಿಯಲ್ಲಿದ್ದಂಥ ಮಾಲುಗಳನ್ನು, ಇವತ್ತು ಆ ಬಾಟಲ್‌ಗಳ ಮೇಲಿರುವುದನ್ನು ಮಹಜರ್ ಮಾಡಿ, ಸೀಲ್ ಮಾಡಿ, ಕೆಮಿಕಲ್ ಎಕ್ಸಾಮಿನೇಷನ್‌ಗೆ ಹೋಗಿ ರಿಪೋರ್ಟ್ ಬಂದಿದೆ. ಅವರನ್ನು ಇವತ್ತು ತಮ್ಮ ಮಂತ್ರಿಮಂಡಲದಲ್ಲಿಟ್ಟು ಕೊಂಡಿದ್ದೀರಿ. ಜೈಲ್ ಮಂತ್ರಿಗಳು ಅವರನ್ನೂ ಕೂಡ ಇವತ್ತು ಮಂತ್ರಿಮಂಡಲದಲ್ಲಿಟ್ಟುಕೊಂಡಿದ್ದೀರಿ ಇವರಿಬ್ಬರೂ ಮಂತ್ರಿಗಳು ಕೂಡ ನಿಮ್ಮ ಮಂತ್ರಿಮಂಡಲದಲ್ಲಿದ್ದಾರೆ, ಇಂಥವರಿಂದ ಹೇಗೆ ನ್ಯಾಯ ದೊರಕುತ್ತದೆ ಎನ್ನುವುದನ್ನು ತಮ್ಮ ಮುಖಾಂತರ ಕೇಳುವುದಕ್ಕೆ ಇಚ್ಛೆಪಡುತ್ತೇದೆ. ಕ್ಷಮಿಸಬೇಕು, ನಾನು ಹೆಸರು ಹೇಳಿದ್ದಕ್ಕೆ. ಏಕೆಂದರೆ ಅವರು ಮಾಜಿ ಜೈಲು ಮಂತ್ರಿಗಳು. ಮಾಜಿ ಜೈಲು ಮಂತ್ರಿಗಳು, ಈಗ ಹಾಲಿ ಮಂತ್ರಿ ಮಂಡಲದಲ್ಲಿ ಸೇರಿಸಿಕೊಂಡಿದ್ದೀರಿ ಎಂದು ಹೇಳುತ್ತಿದ್ದೇನೆ. ಅರ್ಥವಾಯಿತವಲ್ಲವೇ ? ಅರ್ಥವಾಗದಿದ್ದರೆ ಹೆಸರು ಹೇಳಬೇಕು ಎಂದರೂ ನಾನು ಹೇಳುತ್ತೇನೆ. ಸನ್ಮಾನ್ಯ ಮೀರಾಜುದ್ದೀನ್‌ರವರು ಮತ್ತು ಸನ್ಮಾನ್ಯ ಗುತ್ತೇದಾರದವರು, ಈ ಇಬ್ಬರೂ ಕೂಡ ಇವತ್ತು ಮಂತ್ರಿ ಮಂಡಲದಲ್ಲಿದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ತಾವು ಸ್ವಲ್ಪ ತಿದ್ದಿಕೊಳ್ಳಬೇಕು. ಅಂದರೆ ಜೈಲು ಮಂತ್ರಿಗಳು ಎಂದು ಹೇಳಬೇಕು. ಮಾಜಿ ಜೈಲು ಎಂದು ಹೇಳಬೇಡಿ ನೀವು. ಇದನ್ನು ಸ್ವಲ್ಪ ತಿದ್ದಿಕೊಳ್ಳಬೇಕು.

ಶ್ರೀ ಮತಿ ಪ್ರಮೀಳಾ ನೇಸರ್ಗಿ : ಜೈಲಿನ ಮಾಜಿ ಮಂತ್ರಿಗಳು.

ಶ್ರೀ ಸಿ. ಬೈರೇಗೌಡ : ಮೀರಾಜುದ್ದೀನರ ಬಗ್ಗೆ ಎಂಥಾದ್ದೋ ಒಂದು ಕೇಸು ಬೀದರ್‌ನಲ್ಲಿ ಇರತಕ್ಕಂಥಾದ್ದು, ಅದು ಚಚ್ಚಿಚೂಗಿರತಕ್ಕಂಥಾದ್ದು ಎಲ್ಲರಿಗೂ ಗೊತ್ತಿದೆ. ಅದು ಎಲ್ಲರಿಗೂ ಗೊತ್ತಿರತಕ್ಕಂಥಾದ್ದು. ಯಾರಿಗೂ ಗೊತ್ತಿಲ್ಲದೇ ಇರತಕ್ಕಂಥ ವಿಚಾರವೇನಲ್ಲ ಅದು. ಅವರು ನಿರಪರಾಧಿ ಎಂದು ಇತ್ಯರ್ಥವಾಗಿ ತೀರ್ಮಾನವಾಗಿದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಇಲ್ಲ ತೀರ್ಮಾನವಾಗಿಲ್ಲ.

ಶ್ರೀ ಸಿ. ಭೈರೇಗೌಡ : ನಿರಪರಾಧಿ ಎನ್ನತಕ್ಕಂಥಾದ್ದು ಈಗ ತೀರ್ಮಾನವಾಗಿದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನೀವು ಅವರನ್ನು ಮಂತ್ರಿಮಂಡಲಕ್ಕೆ ತೆಗೆದುಕೊಂಡಾಗ ಅವರ ಕೇಸ್ ಕೋರ್ಟ್‌ನಲ್ಲಿ ಕಂಪ್ಲೀಟ್ ತೀರ್ಮಾನವಾಗಿರಲಿಲ್ಲ. ಅವು ಕ್ರೈಮ್ ನಂ. 5 ಮತ್ತು 6. ಹೈಕೋರ್ಟ್‌ನಲ್ಲಿ ಸ್ಟೇ ತೆಗೆದುಕೊಂಡಿದ್ದರು. ಟ್ರಾನ್ಸ್‌ಫರ್ ಆಗಬೇಕು ಎಂದು ಕೇಸ್ ಹಾಕಿದ್ದರು. ಟ್ರಾನ್ಸ್‌ಫರ್ ಮಾಡಿದ್ದೇವೆ ಎಂದು ಹೇಳಿದ ಮೇಲೆ ಅಲ್ಲಿ ಕೇಸ್ ನಿಖಾಲೆ ಅಯಿತು. ಆ ಕೇಸ್ ಹಾಲಿ ಇವತ್ತೂ ಕೂಡ ಬೀದರ್ ಕೋರ್ಟಿನಲ್ಲಿ ಪೆಂಡಿಂಗ್ ಇದೆ ಎನ್ನತಕ್ಕಂಥ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಹೆಚ್. ಶಿವಪ್ಪ : ಪೊಲಿಟಿಕಲ್ ಕೇಸ್‌ಗಳು ಬೇಕಾದಷ್ಟು ಎಲ್ಲರ ಮೇಲೆ ಇರುತ್ತವೆ. ಹಾಗೆಂದು ಕಾಮನ್ ಕಂಮೆಂಟ್ ಕೊಟ್ಟದ್ದಕ್ಕಿಲ್ಲಾ......

(ಈ ಹಂತದಲ್ಲಿ ಶ್ರೀ ಮೀರಾಜುದ್ದೀನ್ ಪಾಟೀಲ್‌ರವರು ಮಾತನಾಡಲು ಎದ್ದರು)

ಉಪಾಧ್ಯಕ್ಷರು : ಅವರು ಮಾತನಾಡಲಿ. ತಾವು ರಿಪ್ಲೈ ಕೊಡುವಾಗ ಹೇಳಿ. ನೀವು ಮಾತನಾಡಿ. ಬೇಗ ಮುಗಿಸಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಮ್ಮ ನಾಯಕರಾದಂಥ ಸನ್ಮಾನ್ಯ ಯಡಿಯೂರಪ್ಪ ನವರು ನಿನ್ನೆ ದಿವಸ ಈಗಲ್‌ಟಬನ್, ಮೈಸೂರು ರೋಡು, ಇಲ್ಲಿರುವ ಜಮೀನಿನ ಬಗ್ಗೆ ತಮಗೆ ವಿಷಯವನ್ನು ಪರಾಂಭರಿಸಿದರು. ನನಗೆ ಬಂದಿರತಕ್ಕ ಆಶ್ಚರ್ಯ ಏನೆಂದರೆ ಮೊನ್ನೆ 3-7-96 ಮತ್ತು 4-7-96 ರಲ್ಲಿ ಇಂಡಸ್ಟ್ರೀಯಲ್ ಪರ್ಪಸ್‌ಗೆ ಎಂದು ನೋಟಿಫಿಕೇಷನ್ ಆಗಿದೆ.

ಆದರೆ ಇದಕ್ಕೆ ಮುಂಚೆಯೇ ಅಲ್ಲಿ ಎಲ್ಲಾ ಎನ್. ಆರ್.ಐ.ಗಳ ಹತ್ತಿರ ಹಣವನ್ನು ತೆಗೆದುಕೊಂಡು ಈ ಒಂದು ಈಗಲ್‌ಟನ್‌ನವರು ಏನಿದ್ದಾರೆ, ಪತ್ರಗಳನ್ನು ಮಾಡಿ, ಅಲಾಟ್‌ಮೆಂಟ್‌ಗಳನ್ನು ಕೂಡ ಮಾಡಿ, ಇವರ ಹತ್ತಿರ ಹಣವನ್ನೂ ವಸೂಲು ಮಾಡಿದ್ದಾರೆ. ಇದರ ಬಗ್ಗೆ ಕೂಡ ತಾವು ಯೋಚನೆ ಮಾಡಬೇಕು. ಈಗಲ್‌ಟನ್‌ದು ಒಂದೇ ಎಂದು ಅಂದುಕೊಂಡಿದ್ದರೆ ನಾವೇನೋ ಸುಮ್ಮನೆ ಇರಬಹುದಾಗಿತ್ತು. ಆದರೆ ಸನ್ಮಾನ್ಯ ಆದಿಕೇಶವಲು ಎನ್ನತಕ್ಕಂಥವರು, ಆಂಧ್ರ ಪ್ರದೇಶದವರು ಇವರಿಗೆ 4 ಸಾವಿರ ಎಕರೆ ಜಮೀನು ಸರ್ಜಾಪುರ ಮತ್ತು ಈ ರೋಡುಗಳಲ್ಲಿ ಇವತ್ತು ವ್ಯವಹಾರವಾಗಿದೆ. ಸರ್ಜಾಪುರ ರಸ್ತೆಯ ವಿರುದ್ಧ ದಿಕ್ಕಿನಲ್ಲಿ ಹೌಸಿಂಗ್ ಕಾಂಪ್ಲೆಕ್ಸ್ ಆಗಿದೆ. ಇದು ಮ್ಯಾ - ಸೀವ್ ಪ್ರಾಜೆಕ್ಟ್. 4 ಸಾವಿರ ಎಕರೆ ಜಮೀನಿನದು. ಇವತ್ತಿನ ದಿವಸ ಸನ್ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ, ಇವರಿಗೆ ಯಾರು ಅಧಿಕಾರ ಕೊಟ್ಟರು? ಇಲ್ಲಿ ಯಾರು ಮಾಡುವುದಕ್ಕೋಸ್ಕರ ಅಧಿಕಾರ ಕೊಟ್ಟರು? ಒಂದಲ್ಲ, ಎರಡಲ್ಲ, ಸಹಸ್ರಾರು ಜನ ಇವತ್ತು ಕರ್ನಾಟಕದಲ್ಲಿ ಸೈಟ್ ಇಲ್ಲ ಎಂದು ಹೋರಾಟ ಮಾಡುತ್ತಿರತಕ್ಕಂಥ ಸಂದರ್ಭದಲ್ಲಿ ಇವರಿಗೆ 4 ಸಾವಿರ ಎಕರೆ ಕೊಟ್ಟಿದ್ದಾರೆ. ಇನ್ನೊಂದು ಕಂಪನಿ, ವಿ.ಐ.ಸಿ.ಎಲ್. , ವೆಲ್ವೆಟ್ ಇಂಡಿಯಾ ಕಾರ್ಪೊರೇಷನ್ ಪ್ರಾಜೆಕ್ಟ್ಸ್ ಲಿಮಿಟೆಡ್, ನನಗೆ ಬಹಳ ಆಶ್ಚರ್ಯವಾಗುತ್ತದೆ, ಇದು ಸಂಪೂರ್ಣವಾಗಿ ವಿದೇಶೀಯರದ್ದು. ಕರ್ನಾಟಕದವರದಲ್ಲ. ಎಂಟೈರ್ ಪ್ರಾವರ್ಟಿ ಇನ್‌ವೆಸ್ಟ್‌ಮೆಂಟ್ ಎಲ್ಲಾ ಕೂಡ ವಿದೇಶೀಯರದ್ದು. ಇದರಲ್ಲಿ 6 ಸಾವಿರ ಎಕರೆ ಪ್ರಾಜೆಕ್ಟ್ ಎಂದು ಹೇಳಿ ದೇವನಹಳ್ಳಿಯಲ್ಲಿ 20 ಎಕರೆಯನ್ನು ಅಕ್ವೈರ್ ಮಾಡಿದ್ದಾರೆ. ಇದರಲ್ಲಿ ಇವರ ಪಬ್ಲಿಸಿಟಿ ಹೇಗೆ ಎಂದರೆ ಇವರು ವ್ಯಾನ್‌ನಲ್ಲಿ ಹೋಗುತ್ತಾರೆ. 30 ವಿದೇಶಗಳಲ್ಲಿ ಇದರ ಬಗ್ಗೆ ಜಾಹೀರಾತು ಕೊಡುತ್ತಾರೆ, ಮನೆ ಕೊಡುತ್ತೇವೆ ಎಂದು ಹೇಳಿ. ಬಹಳ ಮುಖ್ಯವಾದುದು ಎಂದರೆ ಮಾಜಿ ಪ್ರಧಾನ ಮಂತ್ರಿಗಳು ಮತ್ತು ಆಗ ಇದ್ದಂಥ ಹಾಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು, ಇಲ್ಲಿ ಏನಾಗಿದೆ ಎಂದರೆ ಎಫ್.ಐ.ಪಿ.ಬಿ. - ಫಾರಿನ್ ಇನ್‌ವೆಸ್ಟ್‌ಮೆಂಟ್ ಪ್ರೊಮೋಷನ್ ಬೋರ್ಡ್ ಇದರಲ್ಲಿ ಅವರು ಅನುಮತಿಯನ್ನು ಪಡೆದುಕೊಂಡಿದ್ದಾರೆ. ಯಾವುದೇ ಫಾರಿನ್ ಕಂಪನಿಗೆ ಇನ್‌ವೆಸ್ಟ್‌ಮೆಂಟ್ ಮಾಡಬೇಕಾದರೆ ಶೇ.50.ಕ್ಕಿಂತ ಹೆಚ್ಚು ಇನ್‌ವೆಸ್ಟ್‌ಮೆಂಟ್ ಮಾಡುವುದಕ್ಕೆ ನಮ್ಮ ಕಾನೂನಿನಲ್ಲಿ ಅಧಿಕಾರವಿಲ್ಲ, ಅವಕಾಶವಿಲ್ಲ. ಯಾರೂ ಕೂಡ ಇಲ್ಲಿ ಬಂದು ಜಮೀನನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರವಿಲ್ಲ. ಆದರೆ ವಿ.ಐ.ಸಿ.ಎಲ್. ಎನ್ನತಕ್ಕಂಥ ಕಂಪನಿಗೆ ಶೇ.77ರಷ್ಟು ಹೆಚ್ಚಾಗಿ ಅಂದು ಇದ್ದಂಥ ಮಾಜಿ ಪ್ರಧಾನ ಮಂತ್ರಿಗಳು ಅವರಿಗೆ ಸ್ಪೆಷಲ್ ಬೋನಸ್ ಕೊಟ್ಟಿದ್ದಾರೆ. ನಮ್ಮ ಕರ್ನಾಟಕ ದೇಶದಲ್ಲಿರತಕ್ಕ, ನಮ್ಮ ನಾಡಿನ ಜಾಗವನ್ನು, 600 ಎಕರೆ ಜಮೀನನ್ನು ಪ್ರಾಜೆಕ್ಟ್ ಎಂದು ಮಾಡಿಕೊಳ್ಳುವುದಕ್ಕೆ ಇವತ್ತು ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಇದು ಯಾರ ದುಡ್ಡು? ಯಾರ ಮನೆ? ಯಾರ ಆಸ್ತಿಯನ್ನು ಈ ರೀತಿ ಹರಾಜು ಮಾಡುವುದಕ್ಕೆ ಹೊರಟಿದ್ದಾರೆ ಎನ್ನತಕ್ಕಂಥ ವಿಷಯವನ್ನು ನಾನು ಇವತ್ತು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮತ್ತು ಇದಲ್ಲದೆ ಜಿಯಾ -ಉಲ್ಲಾ-ಷರೀಫ್ ಇವರಿಗೆ 20 ಎಕರೆ ಕೊಟ್ಟಿದ್ದಾರೆ. ಈಸ್ಟ್ ಕೋಸ್ಟ್ ಜಾನ್ಸನ್, ಒಬೇರಾಯ್ ಅವರ ಹತ್ತಿರ ಇರತಕ್ಕಂಥ ಟೈ-ಅಫ್ ಗೆ 300 ಎಕರೆಯನ್ನು ಕೊಡುತ್ತಿದ್ದಾರೆ. ಇವು ಏರ್‌ಪೋರ್ಟ್ ರಸ್ತೆಯಲ್ಲಿ ಇತರಕ್ಕಂಥದ್ದು. ನಿನ್ನೆ ನಮ್ಮ ನಾಯಕರುಗಳು ಆಗಲೇ ತಮಗೆ ತಂದು ಕೊಟ್ಟಿದ್ದಾರೆ. ಬಿ.ಎಂ.ಆರ್.ಡಿ.ಎ. ಇವರ್‍ಯಾರಿಗೂ ಕೂಡ

ಪರ್ಮಿಷನ್ ಕೊಟ್ಟಿಲ್ಲ. ಎಲ್ಲಾ ಕೂಡ ಕ್ಲಿಯರೆನ್ಸ್ ಆಗಿಲ್ಲ. ಇವತ್ತು ಆಗಲೇ ಹೌಸಿಂಗ್ ಪ್ರಾಜೆಕ್ಟ್‌ಗಳು ಬಂದಿದೆ. 2 ಸಾವಿರ ಎಕರೆ ವೈಟ್ ಫೀಲ್ಡ್ ಹತ್ತಿರ ಮತ್ತು ಲಾಯ್ಡ್ ಸೊಸೈಟಿಗೆ ಕೊಟ್ಟಿದ್ದಾರೆ. ಲಾಯ್ಡ್ ಸೊಸೈಟಿ ಬಗ್ಗೆ ಹೇಳುವಾಗ ನಾನು ಇಲ್ಲಿ ಸಂಪೂರ್ಣವಾದ ದಾಖಲೆಗಳನ್ನು ತಂದಿದ್ದೇನೆ, ಅವುಗಳನ್ನು ತಮ್ಮ ಗಮನಕ್ಕೆ ಕೊಡಲು ತಂದಿದ್ದೇನೆ. ಲಾಯ್ಡ್ ಸೊಸೈಟಿಯವರು ಈಗಾಗಲೇ ಎಲ್ಲರಿಗೂ ಸೈಟಿಗಳನ್ನು ಹಂಚುವುದಕ್ಕೆ ಬ್ರೋಚರ್‌ಗಳನ್ನು ಮಾಡಿಬಿಟ್ಟಿದ್ದಾರೆ ಮತ್ತು ಹಂಚುತ್ತಿದ್ದಾರೆ. ನನಗನ್ನಿಸುತ್ತದೆ, ನಾನವೇನಾದರೂ ಕರ್ನಾಟಕದಲ್ಲಿದ್ದೇವೆಯೇ ಅಥವಾ ಬೇರೆ ದೇಶದಲ್ಲಿದ್ದೇವೆಯೇ ಎಂದು. ಲಾಯ್ಡ್ ಸೊಸೈಟಿಯವರು ಪ್ರತಿಯೊಂದು ಬ್ರೋಚರ್‌ಗಳನ್ನೂ ಹಂಚಿಬಿಟ್ಟಿದ್ದಾರೆ. ಬೆಳ್ಳಂದೂರು ಪಂಚಾಯಿತಿಯಲ್ಲಿ ಬರತಕ್ಕಂಥ ಜಾಗದಲ್ಲಿ 51 ಎಕರೆ ಗೋಮಾಳವಿದೆ. ಇವತ್ತು ಬೆಳ್ಳಂದೂರ್ ಪಂಚಾಯಿತಯವರು ಒಂದು ರೆಸೊಲ್ಯೂಷನ್ ಮಾಡಿದ್ದಾರೆ, ಸೆಕ್ಷನ್ 93ರ ಪ್ರಕಾರವಾಗಿ ಗೋಮಾಳವನ್ನು ಬೇರೆಯವರಿಗೆ ಕೊಡಲು ಬರುವುದಿಲ್ಲ, ಅದನ್ನು ಮಾರುವುದಿಲ್ಲ ಎಂದು. ಆದರೂ ಸಹ ಅದಕ್ಕೆ ವಿರುದ್ಧವಾಗಿ, ಯಾವುದೇ ಅನುಮತಿ ಇಲ್ಲದೇ ಬೆಳ್ಳಂದೂರಿನಲ್ಲಿ ಇವತ್ತಿನ ದಿವಸ ಅದಕ್ಕೆ ಅವಕಾಶವನ್ನು ಮಾಡಿ ಕೊಟ್ಟಿದ್ದಾರೆ. ಸೊಸೈಟಿಯವರು ಈಗಾಗಲೇ ಅಲ್ಲಿಗೆ ಹೋಗಿ ಮನೆಗಳನ್ನು ಮಾರಾಟ ಮಾಡುವುದಕ್ಕೋಸ್ಕರ ಬ್ರೋಚರ್‌ವನ್ನು ಹೊರಡಿಸಿ, ಲಕ್ಷಾಂತರ ರೂಪಾಯಿಗಳ ಮುಂಗಡವನ್ನು ವಸೂಲು ಮಾಡಿದ್ದಾರೆ. ಇದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಇದಕ್ಕೆ ಸರ್ಕಾರದ್ದು ಸ್ಪೆಷಲ್ ನೋಟಿಫಿಕೇಷನ್ ಇದೆ. ಏನೆಂದರೆ ಮೊದಲು ಇದು ರಿಂಗ್ ರೋಡ್‌ನಲ್ಲಿ ಬರುತ್ತದೆ ಎಂದು ಒಂದು ನೋಟಿಫಿಕೇಷನ್ ಹೊರಡಿಸಿದರು. ಸನ್ಮಾನ್ಯ ಮೊಯ್ಲಿಯವರ ಕಾಲದಲ್ಲಿ ಯಾವುದೇ ಹೌಸಿಂಗ್ ಪ್ರಾಜೆಕ್ಟ್ ಇರಲಿಲ್ಲ. ಅವರು ಹೋದ ನಂತರ 1995ನೇ ಇಸವಿಯಲ್ಲಿ ಆ ರಿಂಗ್ ರೋಡನ್ನು ಬದಲಾಯಿಸಿ ಬೇರೆ ನೋಟಿಫಿಕೇಷನ್ ಹೊರಡಿಸಿದಿರಿ. ಈಗ ಮತ್ತೊಂದು ನೋಟಿಫಿಕೇಷನ್ ಹೋರಡಿಸಿದ್ದೀರಿ. ಆ ನೋಟಿಫಿಕೇಷನ್‌ನಲ್ಲಿ ಏನು ಹೇಳುತ್ತೀರಿ ಎಂದರೆ, ಆ ಬಾರ್ಡರ್ ಲೈನಿನಲ್ಲಿ ಇರತಕ್ಕಂಥ ಎಲ್ಲಾ ಜಮೀನುಗಳನ್ನು ಕಮರ್ಷಿಯಲ್ ಪರ್ಪಸ್‌ಗೆ ಪ್ರೈವೇಟ್ ಪರ್ಪಸ್‌ಗೆ ತೆಗೆದುಕೊಳ್ಳಬಹುದು, ಎಂದು ನೋಟಿಫಿಕೇಷನ್ ಹೊರಡಿಸಿದ್ದೀರಿ. ರೈತರಿಗೆ ಮಣ್ಣು ಮುಕ್ಕಿಸಿ, ಅವರ ಜಮೀನನ್ನು ತೆಗೆದುಕೊಂಡು ಇವತ್ತಿನ ದಿವಸ ಈ ಲಾಯ್ಡ್ ಸೊಸೈಟಿಗೆ, ಬೆಳ್ಳಂದೂರು ಗ್ರಾಮ ಪಂಚಾಯಿತಿ ವಿರುದ್ಧವಾಗಿ ಈ ಕಾರ್ಯಕ್ರಮ ಹಾಕಿಕೊಂಡಿದ್ದೀರಲ್ಲಾ, ಇದಕ್ಕೆ ಯಾರು ಅವಕಾಶ ಮಾಡಿ ಕೊಟ್ಟರು ? ಇದನ್ನು ಯಾರು ಮಾಡಿಕೊಟ್ಟರು ಎಂದು ಹೇಳಬೇಕಾಗುತ್ತದೆ ಇವತ್ತಿನ ದಿವಸ. ಇರಿಗೇಷನ್ ಮಿನಿಸ್ಟರ್ ಇಲ್ಲಿ ಇದ್ದಾರೆ. ಈ ಜಮೀನಿನ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಇರಿಗೇಷನ್ ಪ್ರಾಜೆಕ್ಟ್‌ನಲ್ಲಿ ಈ ಎಲ್ಲಾ ಜಮೀನನ್ನೂ ಕೂಡ ತೆಗೆದುಕೊಂಡಿದ್ದೀರಿ. ರೈತರಿಗೆ ಮಾಡಿಕೊಡುತ್ತೇವೆ ಎಂದು ಹೇಳಿದಿರಿ. ಬೆಳ್ಳಂದೂರು ಕೆರೆ ಇದೆ. ಅದಕ್ಕೆ ಒಂದು ಇರಿಗೇಷನ್ ಪ್ರಾಜೆಕ್ಟ್ ಮಾಡಿದರು. ಲಕ್ಷಾಂತರ ರೂಪಾಯಿ ಹಣವನ್ನು ಉಪಯೋಗಿಸಿದರು. ಇಲ್ಲಿ ಸನ್ಮಾನ್ಯ ಬಚ್ಚೇಗೌಡರು ಇದ್ದಾರೆ. ಹೊಸಕೋಟೆ ಕೆರೆ ಇದೆ. ಬೆಳ್ಳಂದೂರು ಕೆರೆಯ ನೀರು ಹೊಸಕೋಟೆ ಕೆರೆಯ ನೀರು, ಇವತ್ತು ಬೇರ್ಕೆಗೆ ಹೋಗುತ್ತಿದೆ. ಬೇರ್ಕೆಯಲ್ಲಿ ತಮಿಳುನಾಡಿನವರು ಡ್ಯಾಂ ಕಟ್ಟಿದ್ದಾರೆ. ನಮ್ಮ ನೀರು, ಕರ್ನಾಟಕದ ನೀರು, ಬೆಳ್ಳಂದೂರು ಕೆರೆಯ ನೀರು ಮತ್ತು ಹೊಸಕೋಟೆ ಕೆರೆಯ ನೀರು ಇವತ್ತಿನ ದಿವಸ ಬೇರ್ಕೆಗೆ

ಹೋಗುತ್ತದೆ, ಅಲ್ಲಿ ಡ್ಯಾಂ ಕಟ್ಟಿದ್ದಾರೆ. ಕರ್ನಾಟಕದ ನೀರನ್ನು ಉಳಿಸಿಕೊಳ್ಳುವುದಕ್ಕೆ ಇವರಿಗೆ ಶಕ್ತಿ ಇಲ್ಲ. ಇರಿಗೇಷನ್ ಪ್ರಾಜೆಕ್ಟ್ ಹಾಕಿದ್ದನ್ನು ತೆಗೆದುಹಾಕಿದ್ದಾರೆ. ಇರಿಗೇಷನ್ ಪ್ರಾಜೆಕ್ಟನ್ನು ಇವತ್ತು ವರ್ತೂರು ಕ್ಷೇತ್ರಕ್ಕೆ ವರ್ಗಾಯಿಸುವುದಕ್ಕೆ ಹೊರಟಿದ್ದಾರೆ, ಇದು ಯಾರಿಗೋಸ್ಕರ ಎಂದರೆ ಲಾಯ್ಡ್ ಸೊಸೈಟಿಗೋಸ್ಕರ. ಗೋಮಾಳವನ್ನು ತೆಗೆದು ಹಾಕಿ, ಜಮೀನನ್ನು ಒಡೆದು ಹಾಕಿ, ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ರೈತರ ಹೊಟ್ಟೆ ಬಟ್ಟೆಗೆ ಮಣ್ಣು ಹಾಕಿ ಎಲ್ಲವನ್ನೂ ತೆಗೆದುಕೊಂಡು ಹೋಗಿ ಇವತ್ತು ಲಾಯ್ಡ್ ಸೊಸೈಟಿಗೋಸ್ಕರ ಮಾಡುತ್ತಿದ್ದಾರೆ. ಇದನ್ನು ಯಾರಿಗೋಸ್ಕರ ಮಾಡುತ್ತಿದ್ದೀರಿ ಎನ್ನತಕ್ಕಂಥ ವಿಷಯವನ್ನು ನಾನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಅದಕ್ಕೆ ಸನ್ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ಮತ್ತೊಂದು ಚಲ್‌ಫ್ರೀ ಬಿಲ್ಡರ್ಸ್ ಎಂದು. ನನಗೆ ಕೇವಲ 10 ನಿಮಿಷ ಸಮಯ ಎಂದು ಹೇಳಿದ್ದಕ್ಕೋಸ್ಕರ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು. ಬೇಗ ಮುಗಿಸಬೇಕು ತಾವು.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಪೂರ್ತಿ ಎಲ್ಲಾ ದಾಖಲೆಗಳನ್ನು ಕೊಡುತ್ತೇನೆ. ನಾನು ಏತಕ್ಕೋಸ್ಕರ ಹೇಳುತ್ತಿದ್ದೇನೆ ಎಂದರೆ, ಬಹು ದುಃಖವಾಗಿ ಈ ಸಂದರ್ಭದಲ್ಲಿ ಮಾತನಾಡುತ್ತಿದ್ದೇನೆ. 1993ನೇ ಇಸವಿಯಲ್ಲಿ ರಿಂಗ್ ರೋಡ್ ಹಾಕುತ್ತೇವೆ ಎಂದು ಹೇಳಿ ಜನಗಳ ಹತ್ತಿರ, ರೈತರ ಹತ್ತಿರ ರಿಂಗ್ ರೋಡ್ ಸೆಸ್ ಕಲೆಕ್ಟ್ ಮಾಡಿದರು. 1994ನೇ ಇಸವಿಯಲ್ಲಿ ರಿಂಗ್ ರೋಡ್ ಮಾಡುತ್ತೇವೆ ಎಂದು ಹೇಳಿದರು. 1996 ನೇ ಇಸವಿಯಲ್ಲಿ ಗೆಜೆಟ್ ನೋಟಿಫಿಕೇಷನ್ ತಂದು ಶೇ. 30ರಷ್ಟು ಭೂಮಿಯನ್ನು ಅವರು ಕೊಡುವುದಾದರೆ ಕೊಡುತ್ತೇವೆ ಎಂದು ಹೇಳಿದರು. 1997ನೇ ಇಸವಿಯಲ್ಲಿ ಏನಾಗುತ್ತದೋ ದೇವರಿಗೇ ಗೊತ್ತು. 1100 ಕೋಟಿಗಳ ಲಾಭ ತರುವುದಕ್ಕೋಸ್ಕರ ಈ ಪ್ರಾಜೆಕ್ಟ್‌ಗಳನ್ನು ಕೊಟ್ಟಿದ್ದಾರೆ. ಇದರಲ್ಲಿ 30ರಿಂದ ಒಂದು ಕೋಟಿ ರೂಪಾಯಿವರೆಗೆ ಬಿ.ಡಿ.ಎ.ನವರು ಎಸ್ಟಿಮೇಟ್ ಮಾಡಿ ಎಕರೆಗೆ 3 ಲಕ್ಷ ರೂ.ಗಳ ಪರಿಹಾರ ಕೊಡುತ್ತೇವೆ ಎಂದು ಭೂಮಾಲೀಕರಿಗೆ ಹೇಳಿದರು. ಆದರೆ ಈಗ ಮಾರುಕಟ್ಟೆ ಬೆಲೆ ಎಷ್ಟಿದೆ ಎಂದರೆ, ಕೋರಮಂಗಲದಲ್ಲಿ 1500 ರೂ. ಒಂದು ಸ್ಕ್ವೇರ್ ಫೀಟ್‌ಗೆ, ಹೆಚ್.ಎಸ್.ಆರ್. ಲೇಔಟ್‌ನಲ್ಲಿ 800 ರೂ. ಒಂದು ಸ್ಕ್ವೇರ್ ಫೀಟ್‌ಗೆ B.D.A wanted to gift it. ಆದರೆ ಇದನ್ನು 150 ರೂಪಾಯಿಗೆ ಕೊಡತಕ್ಕಂಥ ಕೆಲಸವನ್ನು ಇವತ್ತು ನೀವು ಮಾಡುತ್ತಿದ್ದೀರಿ. ತಾವು ಇದನ್ನು ಏನು ಮಾಡಬೇಕು ಎಂದು ಅಂದುಕೊಂಡಿದ್ದೀರಿ ? ಇಲ್ಲಿ ಎಲ್ಲಾ ಸರ್ವೆ ನಂಬರ್‌ಗಳು ಇವೆ. ಇದಕ್ಕೆ ಸಂಬಂಧಪಟ್ಟಂಥ ಪ್ಲಾನ್ ಕೂಡ ತಂದಿದ್ದೇನೆ. ಮ್ಯಾಪ್ ಕೂಡ ತಂದಿದ್ದೇನೆ. ಇದು ಏನಾಗಿದೆ ಎಂದು ನನಗೆ ಬಹಳ ದುಃಖವಾಗುತ್ತಿದೆ. ಸನ್ಮಾನ್ಯ ಉಪಾಧ್ಯಕ್ಷರೇ, ತಾವು ನೋಡಬಹುದು, ಮಧ್ಯದಲ್ಲಿ ಗೋಮಾಳ ಇರತಕ್ಕಂಥ ಭೂಮಿಯ ಸುತ್ತಲೂ ಕಮರ್ಷಿಯಲ್ ಎಕ್ಸ್‌ಪ್ಲಾಯಿಟೇಷನ್‌ಗೆ ಗೆಜೆಟ್ ನೋಟಿಫಿಕೇಷನ್ ಮಾಡಿ, ಈ ಪ್ರೈವೇಟ್ ಲಾಯ್ಡ್ ಸೊಸೈಟಿಯವರು ಕೊಂಡುಕೊಳ್ಳಬಹುದು, ಅಂಗಡಿಗಳನ್ನು ಕಟ್ಟಬಹುದು ಎಂದು ಮಾಡಿದ್ದಾರೆ. ಇದು ಪ್ಲಾನ್, ಆದನ್ನು ತಂದಿದ್ದೇನೆ. ಇದಾದನಂತರ ಅಲ್ಲಿರತಕ್ಕಂಥ ಗೋಮಾಳರ ಫೋಟೋ ಕೂಡ ತಂದಿದ್ದೇನೆ. ಎಲ್ಲಾ ರೈತರು ಮೊರೆಹೊಕ್ಕು ಇದನ್ನು ಮಾಡಬಾರದು ಎಂದು

ಹೇಳಿದರೆ, ಲಾಯ್ಡ್ ಸೊಸೈಟಿಯವರ ಜೊತೆ ಬಿ.ಡಿ.ಎ. ಆಫಿಷಿಯಲ್ಸ್ ಕೂಡ ಹೋಗಿ ಅವರಿಗೆ ಹೆದರಿಕೆ ಹಾಕಿ ಇದನ್ನು ತೆಗೆದು ಕೊಳ್ಳತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಇದರ ಬಗ್ಗೆ 21-5-96ರಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಎಲ್ಲಾ ಗ್ರಾಮಸ್ಥರುಗಳು ಸೇರಿ ಇದನ್ನು ಮಾಡಬಾರದು ಎಂದು ಇದಕ್ಕೆ ಒಂದು ರೆಸೊಲ್ಯೂಷನ್ ಮಾಡಿದ್ದಾರೆ. ಅದರ ಬಗ್ಗೆ ಯಾರೂ ಕೂಡ ಕೇಳಿಲ್ಲ. 8-5-95ರಲ್ಲಿ ಚೀಫ್ ಸೆಕ್ರೆಟರಿಯವರಿಂದ ಒಂದು ರೆಸೊಲ್ಯೂಷನ್ ಮಾಡಿದ್ದಾರೆ, ಇದನ್ನು ಹೇಗೆ ಮಾಡಬಹುದು ಎಂದು ಹೇಳಿ, ಯಾವ ಹಣದಲ್ಲಿ ಕೊಡಬಹುದು ಎಂದು ಹೇಳಿ, ರಿಂಗ್ ರೋಡ್ ಕನ್ಸ್‌ಟ್ರಕ್ಷನ್ ಅನ್ನು ಬಿಲ್ಡ್ ಅಂಡ್ ಟ್ರಾನ್ಸ್‌ಫರ್ ಸಿಸ್ಟಮ್ ಎಂದು ಹೇಳಿ ರಿಂಗ್ ರೋಡನ್ನು 12 ರಿಂದ 20 ಕಿ.ಮೀ. ವರೆಗೆ ಹಳೆ ಮದ್ರಾಸ್ ರಸ್ತೆಯಿಂದ ಸರ್ಜಾಪುರ ರಸ್ತೆಯವರೆಗೆ ಖಾಸಗಿಯವರಿಗೆ ಕಾಂಪಿಟೇಟಿವ್ ರೇಟ್ಸ್‌ನಲ್ಲಿ ಕೊಡುತ್ತೇವೆ ಎಂದು ಹೇಳಿ ಈಗಾಗಲೇ ಇದನ್ನು ಕೊಡುವುದಕ್ಕೆ ಮಾಡಿದ್ದಾರೆ. ಲಕ್ಷಾಂತರ ರೂಪಾಯಿ ಹಣ ಕೂಡ ಇದರಲ್ಲಿ ವ್ಯವಹಾರವಾಗಿದೆ. ನನಗನ್ನಿಸುತ್ತದೆ ಇದರಿಂದ ದೇಶ ಉದ್ಧಾರವಾಗುವುದಿಲ್ಲ, ನಮ್ಮ ಜನಗಳಿಗೂ ಉದ್ಧಾರವಾಗುವುದಿಲ್ಲ. ನಾನೇ ಖುದ್ದಾಗಿ ಈ ಸ್ಥಳವನ್ನು ನೋಡಿ ಬಂದಿದ್ದೇನೆ. ಸುತ್ತಮುತ್ತಲ ಗ್ರಾಮಸ್ಥರು ಇವತ್ತು ತತ್ತರಿಸುತ್ತಿದ್ದಾರೆ. ಇಂಥ ಜನಗಳಿಗೆ ಕೊಟ್ಟಿದ್ದೇ ಆದರೆ ನಾವು ಬದುಕುವುದಾದರೂ ಹೇಗೆ ಎಂದು ಪ್ರಶ್ನೆಯನ್ನು ಹಾಕುತ್ತಿದ್ದಾರೆ. ಆದ್ದರಿಂದ ಇವತ್ತಿನ ದಿವಸ ಸರ್ಕಾರ ಇದಕ್ಕೆ ಏನು ಉತ್ತರ ಕೊಡುತ್ತದೆ? ಅದನ್ನು ಜನಗಳಿಗೆ ಉಳಿಸಿಕೊಡುತ್ತಾರೆಯೇ, ? ಎನ್ನತಕ್ಕಂಥ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. 1985ನೇ ಇಸವಿಯಲ್ಲಿ ತಮ್ಮ ಸರ್ಕಾರ ಇತ್ತು, ಎಲ್.ಕೆ.ಟ್ರಸ್ಟ್ ಎನ್ನುವಂಥ ಒಂದು ಟ್ರಸ್ಟ್ ಇದೆ. ಇದು ಯಾರಿಗೆ ಸೇರಿದೆಯೆಂದರೆ ಅದು ಸನ್ಮಾನ್ಯ ಖೋಡೆರವರಿಗೆ ಸೇರಿದೆ. ನಮಗೆ ಬಹಳ ದುಃಖವಾಗತಕ್ಕಂಥ ವಿಷಯ. ಮಂಗಳೂರಿನಲ್ಲ ಕಾರ್ಪೊರೇಷನ್ ಬ್ಯಾಂಕಿನಿಂದ 30 ಸಾವಿರ ಎಕರೆ ಜಮೀನು, ಆವಾಗ ಯಾರು ಇದ್ದರು ಲೀಸ್ ಹೋಲ್ಡರ್ ಅವನು ಊರು ಬಿಟ್ಟು ಹೋದ. 30 ಸಾವಿರ ಜಮೀನನ್ನು ಕಾರ್ಪೊರೇಷನ್ ಬ್ಯಾಂಕ್ ಹರಾಜು ಮಾಡುತ್ತದೆ. ಅಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕಂಥ ಟೀಕ್ ವುಡ್ ಇತ್ತು. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಸದನದಲ್ಲಿ ಅರಣ್ಯ ಇಲಾಖೆಯ ಸಚಿವರು ಇದ್ದಾರೆಂದು ತಿಳಿದುಕೊಂಡಿದ್ದೇನೆ. ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕಂಥ ಮರಗಳು ಇವೆ. ಅವುಗಳನ್ನು 4 ಲಕ್ಷ ರೂಪಾಯಿಗೆ ಹರಾಜು ಮಾಡುತ್ತೇವೆಂದು ಹೇಳುತ್ತಾರೆ. ಆ ಜಮೀನನ್ನು ಎಲ್.ಕೆ.ಟ್ರಸ್ಟ್‌ಗೆ ವಹಿಸಿಕೊಡುತ್ತಾರೆ. 30 ಸಾವಿರ ಎಕರೆ ಜಮೀನು ಅದು ಸರ್ಕಾರದ ಭೂಮಿ, ಒಬ್ಬ ಮಾಲೀಕ ಇಲ್ಲವೆಂದಾಗ ಅವರು ಊರು ಬಿಟ್ಟು ಹೋದಾಗ the land should belong to the Government. 30 ಸಾವಿರ ಎಕರೆ ಜಮೀನನ್ನು ಒಬ್ಬ ವ್ಯಕ್ತಿಗೆ ಕೊಡುವುದಕ್ಕೆ ಬರುವುದಿಲ್ಲ. ಇಷ್ಟು ಭೂಮಿಯನ್ನು ಒಂದು ಟ್ರಸ್ಟ್ ಕೂಡ ಇಟ್ಟುಕೊಳ್ಳುವುದಕ್ಕೆ ಬರುವುದಿಲ್ಲ. ಇದೇ ಸಂದರ್ಭದಲ್ಲಿ ಸನ್ಮಾನ್ಯ ಜಾಲಪ್ಪನವರು ಮಂತ್ರಿಗಳು ಆಗಿದ್ದಂಥ ಸಂದರ್ಭದಲ್ಲಿ ಒಂದು ಕಮಿಟಿಯನ್ನು ಮಾಡಿ ಇದರ ಬಗ್ಗೆ ಎನ್‌ಕ್ವಾಯರಿ ಮಾಡಿ ವರದಿ ತರಿಸಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೇ, ನನಗೆ ಒಂದು ಕ್ಲಾರಿಫಿಕೇಷನ್ ಬೇಕು, ಅದು ಏನೆಂದರೆ 1974ರಲ್ಲಿ ಲ್ಯಾಂಡ್ ರಿಪಾರ್ಮ್ಸ್ ಆ್ಯಕ್ಟ್ ಬಂದಮೇಲೆ ಯಾವಾಗ ಸೀಲಿಂಗ್ ಆಪ್ಲಿಕ್ ಬಲ್ ಆಗುತ್ತದೋ, ಈ ಸೀಲಿಂಗ್ ಆಪ್ಲಿಕಬಲ್ ಆದಮೇಲೆ ಇಂಡಿವಿಜ್‌ಯುಲ್ ಓನರ್ ಹೆಸರಿನಲ್ಲಿ 30 ಸಾವಿರ ಎಕರೆ ಜಮೀನು ಉಳಿದದ್ದು ಹೇಗೆ? ಆ ನಂತರ 30 ಸಾವಿರ ಎಕರೆ ಜಮೀನು ಇಂಡಿವಿಜ್‌ಯುಲ್ ಹೆಸರಿಗೆ ಹೋದ ಮೇಲೆ ಪುನಃ ಟ್ರಸ್ಟ್‌ಗೆ ಆಗಲಿ ಅಥವಾ ಬೇರೆ ಇಂಡಿವಿಜಿಯಲ್‌ಗೆ ಆಗಲಿ ಹೇಗೆ ಟ್ರಾನ್ಸ್‌ಫರ್ ಆಗುತ್ತದೆ? The Hon'ble Member is a prectising Advocate ನಾವು ಬರೀ ಎಲ್‌ಎಲ್‌ಬಿ ತೆಗೆದುಕೊಂಡವರು ಅಷ್ಟೆ, ಅದಕ್ಕೆ No trust or Company can hold a land more than double the ceiling fixed for indivuduals. If it is a single ceiling. ಇದ್ದರೆ, ಅವರಿಗೆ ಏನು ಎಂದರೆ ಡಬ್ಲಿಂಗ್ ದಿ ಸೀಲಿಂಗ್ ಎಂದು ಇದೆ. How is it that this much of land is in the name of a particular individual? ಅದು್ವಾಗಿ ಗೊತ್ತಗುವುದಿಲ್ಲ. After 20 - 30 years, it is coming in existence. ಈ 1974ರ ಅಮೆಂಡ್‌ಮೆಂಟ್ ಬರುವುದಕ್ಕಿಂತ ಮುಂದೆಯೇ 1962ರಲ್ಲಿ ಶ್ರೀಮಾನ್ ಜತ್ತಿ ಯಾವರ ಕಾಲದಲ್ಲಿ ಬಂದಂಥ ಲ್ಯಾಂಡ್ ರಿಫಾರ್ಮ್ ಆ್ಯಕ್ಟ್ ಇತ್ತು. 1974ರಲ್ಲಿ ಫರ್‌ದರ್ ಅಮೆಂಡ್‌ಮೆಂಟ್ ತಂದು ಸೀಲಿಂಗ್ ರೆಡ್ಯೂಸ್ ಆಯಿತೇ ಹೊರತಾಗಿ, ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್ ಅಂತೂ ಇದ್ದೇ ಇದೆ. ಅದರಿಂದಾಗಿ ಅದರ ಅರ್ಥ ಗೊತ್ತಾಗುತ್ತಿಲ್ಲ. ಅದಕ್ಕೆ ದಯವಿಟ್ಟು ಸ್ವಲ್ಪ ವಿವರಿಸಿ ಹೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೆ, ನಾನು ಹೇಳಬೇಕೆಂದು ಇದ್ದದ್ದು ಅದೇ ವಿಷಯ. ಈ ರೀತಿ ಆಗುವುದಕ್ಕೆ ಹೇಗೆ ಬಿಟ್ಟರೆಂದು ಅರ್ಥವಾಗುತ್ತಿಲ್ಲ. Toget over the individual names ಇಂಡಿವಿಜ್ಯುಅಲ್ ಹೆಸರಿನಲ್ಲಿ ಆಗುವುದಿಲ್ಲವೆಂದು ಹೇಳಿ ಟ್ರಸ್ಟ್ ಹೆಸರಿನಲ್ಲಿ ಈ ಜಮೀನುಗಳನ್ನು ಇಟ್ಟುಕೊಂಡಿದ್ದಾರೆ.

Sri. C.BYREGOWDA : According to the Land Reforms Act, no individuals can hold the lands more than the ceiling fixed, I was the active participant for this amendment which was brought about.

ಉಪಾಧ್ಯಕ್ಷರು : ಸದಸ್ಯರು ಹೇಳುವುದನ್ನು ಹೇಳಲಿ. ಆ ನಂತರ ತಾವು ಉತ್ತರ ಹೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೆ, ನಾನು ಹೇಳುತ್ತಿರತಕ್ಕಂಥ ವಿಷಯ ಏನೆಂದರೆ 30 ಸಾವಿರ ಎಕರೆ ಜಮೀನನ್ನು ಮಂಗಳೂರಿನಲ್ಲಿ ಇವತ್ತು ಇಟ್ಟು ಕೊಂಡಿದ್ದಾರೆ. ದಯವಿಟ್ಟು ಅದರ ಬಗ್ಗೆ ತಾವು ಮಾಡಬೇಕಾದ ಕೆಲಸ ಇದೆಯೆಂದು ತಮ್ಮಗಮನಕ್ಕೆ ತರುತ್ತಿದ್ದೇನೆ.

ತಾವು ಕ್ರಮ ತೆಗೆದುಕೊಳ್ಳುವುದು ಅಥವಾ ಬಿಡುವುದು ನಿಮಗೆ ಸೇರಿದ್ದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಇರುವುದೇ ಇಲ್ಲ. ಸರ್ಕಾರ ಬಿದ್ದುಹೋಗುತ್ತದೆಂದು ಮಾನ್ಯ ಪ್ರಮೀಳಾರವರು ಹೇಳುತ್ತಾರೆ. ಮುಂದೆ ಮಾತನಾಡುತ್ತಾ ಕ್ರಮ ತೆಗೆದುಕೊಳ್ಳಿ, ಕೆಲಸ ಮಾಡಿ ಎಂದು ಹೇಳುತ್ತಾರೆ.

ಶ್ರೀಮತಿ ಪ್ರಮಿಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೆ, ಖೋಡೆ ಕಂಪನಿಯವರಿಗೆ ಬೇನಾಮಿ ಟ್ರಾನ್ಸ್‌ಕ್ಷನ್‌ನಲ್ಲಿ ಜಮೀನು ಇದೆಯೆಂದು ಹೇಳಿ, ಸನ್ಮಾನ್ಯ ಜಾಲಪ್ಪನವರು ಎನ್‌ಕ್ವಾಯರಿ ಮಾಡಿ ಒಂದು ವರದಿ ಕೊಡಿ ಎಂದು ಹೇಳಿದ್ದರು. ಒಂದು ವರದಿಯನ್ನು ಈಗ ಕೊಟ್ಟಿದ್ದಾರೆ. ಆ ವರದಿಯನ್ನು ಸರ್ಕಾರ ನಮ್ಮ ಮುಂದೆ ಇಟ್ಟಿಲ್ಲ. ಈ ವರದಿಯನ್ನು ಏತಕ್ಕೆ ನಮ್ಮ ಮುಂದೆ ಇಟ್ಟಿಲ್ಲ ? ತಾವು ಮಾಡಿರುವ ಒಳ್ಳೆಯ ಕೆಲಸವನ್ನು ನಾನು ಹೇಳುತ್ತಿದ್ದೇನೆ. ತರಿಸಿಕೊಂಡಿರತಕ್ಕಂಥ ವರದಿಯಲ್ಲಿ ಈ 30 ಸಾವಿರ ಎಕರೆ ಜಮೀನು ಸೇರಿಲ್ಲ. ಸನ್ಮಾನ್ಯ ಖೋಡೆ ಎನ್ನುವವರದ್ದು ಬೇನಾಮಿ ಹೆಸರಿನಲ್ಲಿ 6 ಸಾವಿರ ಎಕರೆ ಜಮೀನು ಇದೆಯೆಂದು ಹೇಳಿ ಈಗ ವರದಿ ಬಂದಿದೆ. ದಯವಿಟ್ಟು ಅದನ್ನು ವೆರಿಫೈ ಮಾಡಿ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆದರೆ ಇದುವರೆಗೂ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ. ಅದಕ್ಕೋಸ್ಕರ ನಮ್ಮ ನಿಮ್ಮಲ್ಲಿ ಅವಿಶ್ವಾಸ ಏರ್ಪಟ್ಟಿರುವುದು. ಯಾವುದೇ ಕಾರ್ಯಕ್ರಮ ಹಾಕಿಕೊಂಡಿಲ್ಲ. ಇಷ್ಟು ಜಮೀನುಗಳನ್ನು ಇಟ್ಟುಕೊಂಡಿರುವವರ ಮೇಲೆ ನೀವು ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಇದು ಮೊಟ್ಟಮೊದಲನೇಯ ಬಾರಿ ಇಲ್ಲ. ಸನ್ಮಾನ್ಯ ವೀರೇಂದ್ರ ಪಾಟೀಲರ ಕಾಲದಲ್ಲಿ ಆಗ ಸೋಮಶೇಖರ್ ರವರು ಸ್ಪೆಷಯಲ್ ಸೆಕ್ರೆಟರಿ, ಅಂಡರ್ ಸೆಕ್ರೆಟರಿ ಹತ್ತಿರ ಅವಾಗಲೂ ಕೂಡ ಇವರ ಜಮೀನುಗಳ ಮೇಲೆ ವಿಚಾರಣೆ ಮಾಡಿ ಒಂದು ವರದಿ ನಿಮ್ಮ ಮುಂದೆ ಬಂದಿತ್ತು. ಅವಾಗಲೂ ಕೂಡ ಕ್ರಮ ತೆಗೆದುಕೊಳ್ಳಲಿಲ್ಲ. ಈಗ ಸನ್ಮಾನ್ಯ ಜಾಲಪ್ಪನವರು ವರದಿ ತರಿಸಿದ್ದಾರೆ. ಈಗಲೂ ಸಹಕ್ರಮ ತೆಗೆದುಕೊಂಡಿಲ್ಲ. ಇವರ ಮೇಲೆ ಕ್ರಮ ತೆಗೆದುಕೊಳ್ಳುವುದನ್ನು ಏಕೆ ಕೈಬಿಟ್ಟಿದ್ದೀರಿ ಎಂದರೆ ನಿಮಗೂ ಅವರಿಗೂ ಬಹಳ ಸ್ನೇಹ ಸಂಬಂಧವಿದೆ. ಈ ಸ್ನೇಹದಡಿಯಲ್ಲಿ ನೀವು ಇವರ ಮೇಲೆ ಕ್ರಮವನ್ನು ತೆಗೆದುಕೊಳ್ಳತಕ್ಕಂಥ ಸ್ಥಿತಿಯಲ್ಲಿಲ್ಲ. ಅದಕ್ಕೋಸ್ಕರವಾಗಿ ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಈ ರೀತಿ ಹಲವಾರು ಜನ ಜಮೀನುಗಳನ್ನು ಕಬಳಿಸಿಕೊಂಡು ಸರ್ವರ ಆಸ್ತಿಯನ್ನು ಇಟ್ಟು ಕೊಂಡಿರತಕ್ಕಂಥ ಸಂದರ್ಭದಲ್ಲಿ ತಾವು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ. ಸನ್ಮಾನ್ಯ ಸಿದ್ದರಾಮಯ್ಯನವರು ಈಗ ಇಲ್ಲಿ ಸದನದಲ್ಲಿ ಇಲ್ಲ. ಬಹಳ ಒಳ್ಳೆಯ ಫೈನಾನ್ಸ್ ಬಿಲ್‌ನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ. ಸರ್ಕಾರ ಬಹಳ ದೊಡ್ಡದಾಗಿ ಮಂಡಲ ಪಂಚಾಯಿತಿ, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಮಾಡಿಬಿಟ್ಟಿದ್ದೇವೆಂದು, ಇವತ್ತು ಥ್ರೀ ಟಯರ್ ಸಿಸ್ಟಮ್ ತಂದಿದ್ದೇವೆಂದು ಹೇಳಿ, ಡಿಸೆಂಟ್ರಲೈಸ್ಲೇಷನ್ ಆಫ್ ಪವರ್ ಎಂದು ಹೇಳಿ ತಂದಿದ್ದೀರಿ. ಆದರೆ ಇವತ್ತಿನವರೆಗೂ ನಿಮ್ಮ ಸರ್ಕಾರದಲ್ಲಿ 175 ತಾಲ್ಲೂಕು ಪಂಚಾಯತಿ

ಕಮಿಟಿಗಳಿಗೆ ತಾಲ್ಲೂಕು ಪಂಚಾಯತಿ ಫಂಡ್ ಇಟ್ಟಿಲ್ಲ. ತಾಲ್ಲೂಕು ಪಂಚಾಯತಿ ಫಂಡ್ ಇಟ್ಟಿದ್ದರೆ ಸರ್ಕಾರ ಇವತ್ತು ಹೇಳಲಿ. ಒಂದೂವರೆ ವರ್ಷವಾದರೂ ಇವತ್ತಿನವರೆಗೆ ತಾಲ್ಲೂಕು ಪಂಚಾಯತಿ ಫಂಡ್ ಇಟ್ಟಿಲ್ಲ, ಈ ರೀತಿ ಕೆಲಸಗಳನ್ನು ಮಾಡಬೇಕು, ಇಂಥಿಂಥ ಕೆಲಸಗಳು ತಾಲ್ಲೂಕು ಪಂಚಾಯತಿ ಮಾಡಬೇಕೆಂದು ಹೇಳಿ ನೋಟಿಫಿಕೇಷನ ಹೊರಡಿಸಿದ್ದಾರೆ. ಆದರೆ ತಾಲ್ಲೂಕು ಪಂಚಾಯತಿಗಳಲ್ಲಿ ಫಂಡ್ ಇಲ್ಲ. ತಾಲ್ಲೂಕು ಪಂಚಾಯತಿಯವರು ಮಾಡುತ್ತಿರತಕ್ಕಂಥ ಕೆಲಸ ಏನೆಂದು ಹೇಳಿದರೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಸಂಬಳ ತೆಗೆದುಕೊಂಡು ಮನೆಯಲ್ಲಿ ಕುಳಿತುಕೊಂಡಿರತಕ್ಕಂಥ ಕೆಲಸ ಮಾಡುತ್ತಿದ್ದಾರೆ. ಅದು ಬಿಟ್ಟು ಇನ್ನೇನೂ ಮಾಡಿಲ್ಲ. ತಾಲ್ಲೂಕು ಪಂಚಾಯತಿಗಳಿಗೆ ಬಜೆಟ್‌ನಲ್ಲಿ ಹಣ ಒದಗಿಸಿಕೊಟ್ಟಿಲ್ಲ. ಅವರ ಸ್ಕೀಂಗಳಿಗೆ ಎಷ್ಟು ಹಣ ಕೊಟ್ಟಿದ್ದೀರಿ? ಅವರ ಕೆಲಸಕಾರ್ಯಗಳಿಗೆ ಏನು ಇಟ್ಟಿದ್ದೀರಿ? ಅದನ್ನು ಕೂಡ ಇಟ್ಟಿಲ್ಲ. ಇದು ಫೈನಾನ್ಸ್ ಬಿಲ್ ಎಂದು ಇಟ್ಟಿರುವಂಥದ್ದು.

ಉಪಾಧ್ಯಕ್ಷರು : ನೇಸರ್ಗಿಯವರೆ ದಯವಿಟ್ಟು ಅದಷ್ಟು ಬೇಗ ಮುಗಿಸಿಬಿಡಿ.

ಶ್ರೀಮತಿ ಪ್ರಮಿಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೆ, ನನ್ನ ಚರ್ಚೆಯನ್ನು ಬೇಗನೆ ಮುಗಿಸುತ್ತೇನೆ. ನನಗೆ ಬಹಳ ದುಃಖ ತರತಕ್ಕಂಥ ಮತ್ತೊಂದು ವಿಷಯ ಇದೆ.

ಶ್ರೀ ಎಂ. ವಿ.ಗುತ್ತೇದಾರ್ (ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ನಾನು ಸದನದಲ್ಲಿ ಇರಲಿಲ್ಲ. ಮಾನ್ಯ ಸದಸ್ಯರು ಮಾತನಾಡುವಾಗ ನಮ್ಮ ಹೆಸರು ತೆಗೆದುಕೊಂಡು ಏನೋ ಪ್ರಸ್ತಾವನೆ ಮಾಡಿದ್ದಾರೆಂದು ತಿಳಿದುಬಂತು. ಇಷ್ಟು ಅಪಾದನೆಯನ್ನು ಮಾಡಿದರೆ ನಾವು ಸಹಿಸುವುದಕ್ಕಾಗುವುದಿಲ್ಲ.

ಶ್ರೀಮತಿ ಪ್ರಮೀಲಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೆ, ಇದು ರೆಕಾರ್ಡ್‌ಗೆ ಹೋಗಬೇಕಾಗುತ್ತದೆ.

ಶ್ರೀ ಎಂ.ವಿ. ಗುತ್ತೇದಾರ್ : ಮಾನ್ಯ ಉಪಾಧ್ಯಕ್ಷರೆ, ಏನೇ ಆದರೂ ರುಜುವಾತು ಮಾಡಬೇಕಾಗುತ್ತದೆ. ಸುಮ್ಮಸುಮ್ಮನೆ ಆಪಾದನೆ ಮಾಡುವುದಕ್ಕಿಂತ ಸತ್ಯಾಂಶ ತಿಳಿದುಕೊಂಡು ಮಾತನಾಡಿದರೆ ಒಳ್ಳೆಯದು. ಇದನ್ನು ತಮ್ಮ ಮುಖಾಂತರ ಸದಸ್ಯರಿಗೆ ಹೇಳುತ್ತಿದ್ದೇನೆ. ಮಾತುನಾಡುವುದಕ್ಕೆ ಅವಕಾಶವಿದೆಯೆಂದು ಏನೇನೋ ಮಾತನಾಡುವುದಿಲ್ಲ. ಆ ತರಹ ಏನಾದರೂ ಅಪಾದನೆಗಳು ಬಂದರೆ ಚೆನ್ನಾಗಿರುವುದಿಲ್ಲವೆಂದು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಸನ್ಮಾನ್ಯ ಉಪಾಧ್ಯಕ್ಷರೆ, ತಾರೀಖು 27-10-1995 Proceedings of the Governing Council of Jayadeva Institute of Cardiology ನಮ್ಮ ಈಗಿನ ಪ್ರಧಾನ ಮಂತ್ರಿಗಳು ಮತ್ತು ಹಿಂದೆ ಇದ್ದಂಥ ಮುಖ್ಯಮಂತ್ರಿಗಳು ಅದಕ್ಕೆ ಚೇರ್‌ಮನ್ ಆಗಿದ್ದರು. ಪ್ರಮೋಷನ್ಸ್ ಮಾಡಬೇಕಾದರೆ ಒಂದು ಸ್ಪೆಷಲ್ ರೆಸಲ್ಯೂಷನ್ ಮಾಡಿದ್ದಾರೆ. ಸನ್ಮಾನ್ಯ ಮಹದೇವಪ್ಪನವರು ಇಂಥದ್ದನ್ನು ಕೇಳಬೇಕು. ಹರಿಜನ ಗಿರಿಜನರಿಗೆ ಸಂಬಂಧಪಟ್ಟಂತೆ ನಿಮ್ಮ ಕಳಕಳಿ ಎಷ್ಟು ಇದೆಯೆಂದು ಹೇಳುವುದನ್ನು ಈ ರೆಸಲ್ಯೂಷನ್ ಹೇಳುತ್ತದೆ. ಏನು ರೆಸಲ್ಯೂಷನ್ ಮಾಡಿದ್ದಾರೆ ಎನ್ನುವುದನ್ನು ದಯವಿಟ್ಟು ತಾವು ಕೇಳಬೇಕು. ದಿನಾಂಕ 27-10-1995 ರಲ್ಲಿ ಜಯದೇವ ಕಾರ್ಡಿಯಾಲಜಿಯಲ್ಲಿ ನಿಮ್ಮ ಮುಖ್ಯಮಂತ್ರಿಗಳು ಆಗಿದ್ದಂಥವರು, ಅಧ್ಯಕ್ಷರು ಆಗಿದ್ದಂಥವರು ಏನು ರೆಸಲ್ಯೂಷನ್ ಮಾಡಿದ್ದಾರೆಂದರೆ :

"This is a Super -Speciality Institute established for providing full range of diagnostic and treatment facilities for various heart ailments. In such an Apex level institute, the only criterion for selection of the doctors should be the efficiency and skill and also the merit There should not be any scope for reservation of caste and community basis for seleting the doctors right from the cadre of Lecturers to the Post of Directore. For promotion, it is the merit and not the Seniority that should count..."

3.40 ಪಿ ಎಂ

ಡಾಕ್ಟರ್ಸ್ ಪ್ರಮೋಷನ್ ಮಾಡಬೇಕಾದರೆ, ಡಾಕ್ಟರ್‌ಗಳನ್ನು ಅಪಾಯಿಂಟ್‌ಮೆಂಟ್ ಮಾಡಬೇಕಾದರೆ ಸೀನಿಯಾರಿಟಿ ಮೆರಿಟ್ ಮಾತ್ರ Caste should not be the criterion ಅಂದರೆ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಎಲ್ಲಿಗೆ ಹೋಗಬೇಕು? ಬ್ಯಾಕ್‌ವರ್ಡ್ ಕ್ಯಾಸ್ಟ್‌ನವರು ಎಲ್ಲಿಗೆ ಹೋಗಬೇಕು? ನಿಮ್ಮ ರೂಲ್ಸ್‌ಗೆ ವಿರುದ್ಧವಾಗಿ, ಕ್ಯಾಸ್ಟ್‌ಗೆ ವಿರುದ್ಧವಾಗಿ you are the signatory to it. ಇದನ್ನು ಮಾಡಬಹುದಾ? ಇದನ್ನು ಮಾಡಿ ನಾವು ಹರಿಜನ ಗಿರಿಜನರಿಗೆ ವಿರುದ್ಧವಾಗಿಲ್ಲವೆಂದು ಹೇಳುತ್ತಿದ್ದೀರಿ. ಇದರ ರೆಸಲ್ಯೂಷನ ಕಾಪಿ ಇದೆ ಅದನ್ನು ತಮಗೆ ಕಳುಹಿಸುತ್ತಿದ್ದೇನೆ.

Sri.Y. RAMAKRISHNA : Are you a signatory to this resolution? If that is so, I am seeking your resignation. Proceedings cannot over-ride the constitution. If you are a singtory to it and it your have not placed in the Cabinet, than you have to resign.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೆ, ರೆಸಲ್ಯೂಷನ್ ಪ್ರತಿಸಾರಿ ಕಳುಹಿಸಿ ಕೊಡುತ್ತೇನೆ, ಇದರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಯಾರಿಗೂ ಸಹ ಇಲ್ಲ. ಅದೇ ಕಾರಣದಿಂದ ಇವೊತ್ತಿನ ದಿವಸ ಮಾಡಿರತಕ್ಕಂತಹ ವಿಷಯವಾಗಿದೆ. ಮತ್ತೊಂದು ಮುಖ್ಯವಾದಂತಹ ವಿಷಯವೆಂದರೆ, ನೆನ್ನೆಯ ದಿವಸ.......

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಯಾವುದೇ ಇದ್ದರೂ ಕೂಡ ರೈಟಿಂಗ್‌ನಲ್ಲಿ contrary tothe established rules ರೂಲ್ಸ್‌ಗೆ ವಿರುದ್ಧವಾಗಿ, ಅಥವಾ ಕಾನ್ಸ್ಟಿಟ್ಯೂಷನಲ್ ಪ್ರಾವಿಷನ್‌ಗೆ ವಿರುದ್ಧವಾಗಿ ನಾವುಗಳು ಮಾಡಬಾರದು. ಇರಲಿಲ್ಲ ಎಂದರೆ ಬಿಟ್ಟುಬಿಡಿ; ಆದರೆ ನೀವೇ ಒಂದು ರೆಸಲ್ಯೂಷನ್ ಮಾಡಿ ಇಟ್ಟರೆ ಏನಾಗುತ್ತದೆಂದರೆ ಮುಂದೆ ಬರತಕ್ಕಂಥವರು ಎಲ್ಲಾರೂ ಕೂಡ ಅದರ ಉಪಯೋಗವನ್ನು ಎಲ್ಲಿ ಮಾಡುತ್ತಾರೆಂದರೆ, ಅಸಿಸ್ಟೆಂಟ್ ಸರ್ಜನ್ ಇಟ್ಟುಕೊಂಡು ಅಥವಾ ಕೆಳಗಡೆಯಲ್ಲಿರತಕ್ಕಂತಹ ಗುಮಾಸ್ತರನ್ನು ಹಿಡಿದುಕೊಂಡು ಅದನ್ನೇ ಲೆಕ್ಕ ಹಾಕಿಕೊಂಡು ಬರುತ್ತಾರೆ, ಇಲ್ಲಿ ಒಂದು ರೆಸಲ್ಯೂಷನ್ ಆಗಿದೆ ಅದನ್ನೇ ಅದಾಷ್ಟೆ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ಅದಕ್ಕಾಗಿ ಸಂವಿಧಾನದ ವಿರುದ್ಧವಾದಂತಹ ಯಾವುದೇ ರೆಸಲ್ಯೂಷನ್ ಪಾಸ್ ಮಾಡುವುದಕ್ಕೆ ಹೋಗಬಾರದು, ಆ ರೀತಿಯಾಗಿ ಇದ್ದರೆ ಅದನ್ನು ಹಿಂತೆಗೆದುಕೊಳ್ಳಿ.

ಶ್ರೀ ಕಾಗೋಡು ತಿಮ್ಮಪ್ಪ : ಪ್ರತಿಭಾವಂತರು ಇರಲಿಲ್ಲವೆಂದು ನಿಮಗೆ ಯಾರು ಹೇಳಿದವರು ? ಡಾ. ಗುರುಪ್ಪನವರು ಸ್ಪೇಷಲಿಸ್ಟ್ ಅಲ್ಲವೇ ? ಆದಿಕೇಶವಲು, ಡಾ. ಮೋಹನನವರು ಇಲ್ಲವೇ

Dr. H.C.MAHADEVAPPA : It is a super-speciality Hospital. ಎಲ್ಲಿ ಅವರಿಗೆ ಸಾಮರ್ಥ್ಯ ಇದೆ ಅವರನ್ನು ಮಾಡಲಿಕ್ಕೆ ಓಪನ್ ಆಗಿಯೇ ಇಟ್ಟಿದ್ದೇವೆ. It is one of the best institutions in India - ಓಪನ್ ಇಡೀ ಭಾರತದೇಶದಲ್ಲಿಯೇ ಅತ್ಯಂತ ಉತ್ತಮವಾದಂತಹ ಒಂದು ಹೃದ್ರೋಗ ಆಸ್ಪತ್ರೆ ಸ್ಥಾಪನೆಯಾಗಿದೆ. ಇಲ್ಲಿ ದೇಶದಲ್ಲಿ ಸಿಗತಕ್ಕಂತಹ ಅತ್ಯಂತ ಶ್ರೇಷ್ಠ ತಜ್ಞರನ್ನು ಅಳವಡಿಸಿ ತರಬೇಕು ಎಂಬ ಸದುದ್ದೇಶದಿಂದ ಮಾಡಲಾಗಿದೆ. ಎಲ್ಲಿ ಹಿಂದುಳಿದವರು ಅಲ್ಪಸಂಖ್ಯಾತರು, ಸಿಗುತ್ತಿದ್ದಾರೆ ಅವರಿಗೆ ಸಹಾಯ ಮಾಡಲಿಕ್ಕೆ ಸರ್ಕಾರದವರು ಏನೂಹಿಂಜರಿಯುವುದಿಲ್ಲ. ಯಾವುದೇ ಮೀಸಲಾತಿ ಇರುವವರನ್ನು ಹತ್ತಿಕ್ಕಬೇಕು ಎನ್ನುವ ಪ್ರಶ್ನೆಯೂ ಕೂಡ ಸರ್ಕಾರದ ಮುಂದೆ ಇಲ್ಲ, ಮೀಸಲಾತಿಯ ವಿಚಾರದಲ್ಲಿ ನಿಮಗಿಂತಲೂ ನಾವು ಒಂದು ಕೈ ಮುಂದೆ ಇದ್ದೇವೆ. ಸಾಮಾಜಿಕ ನ್ಯಾಯದ ಬಗ್ಗೆ ನಮಗೇನೂ ಹಿತವಚನವನ್ನು ಹೇಳಬೇಕಾಗಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೆ, ನಿನ್ನೆಯ ದಿವಸ ನನಗೆ ಬಹಳ ದುಃಖವಾಯಿತು. ನಮ್ಮ ಕರ್ನಾಟಕದಲ್ಲಿ ಬ್ಲೂದಾರ್ಟ್ ಎನ್ನತಕ್ಕಂತಹ , ಇದೊಂದು ಕೊರಿಯರ್ ಕಂಪನಿ, ಇದೊಂದು ಪೋಸ್ಟರ್ ಡಿಪಾರ್ಟ್‌ಮೆಂಟ್. ಇದರಲ್ಲಿ ಏನಾಗಿದೆ ಇವೊತ್ತು ಆ ಬ್ಲೂ ಡಾರ್ಟ್‌ಗಳಲ್ಲಿ ಮಕ್ಕಳಿಗೆ ಸ್ಕೂಲಗಳ ಹತ್ತಿರ ಗಾಂಜಾ ಎಲ್ಲವನ್ನು ತೆಗೆದುಕೊಂಡು ಹೋಗಿ ಪ್ಯಾಕೆಟ್‌ಗಳಲ್ಲಿ ಮಾರುತ್ತಿದ್ದಾರೆ, ಇದರ ಬಗ್ಗೆ ತಾವು ಕ್ರಮವನ್ನು ತೆಗೆದುಕೊಂಡಿಲ್ಲ. ಇದರ ಬಗ್ಗೆ ಏನೂ ಕೆಲಸವನ್ನು ಮಾಡುತ್ತಿಲ್ಲ. ಇಲ್ಲಿ ಬಹಳ ಕೆಲಸವನ್ನು ಮಾಡುತ್ತಿದ್ದಾರೆ. ನಿನ್ನೆಯ ದಿವಸ ಒಂದು ಜಾಹಿರಾತು ಬಂದಿದೆ. ಇದು ರೆವ್ರೋಲ್ಟ್ ಎಂಬ ಜಾಹಿರಾತು ಏಜೆನ್ಸಿ, ಇದರಲ್ಲಿ ಏನು ಹೇಳಿದ್ದಾರೆ ಎಂದರೆ, ಮಾನ್ಯ ಉಪಾಧ್ಯಕ್ಷರೆ, ಇದನ್ನು ಕಳುಹಿಸಿಕೊಡುತ್ತೇನೆ, ಇದು ಕೇಳ ಬೇಕಾದಂತಹ ವಿಚಾರ. ಇದು ಜಾಹಿರಾತು, ಅದರಲ್ಲಿಯೂ ಕರ್ನಾಟಕದಲ್ಲಿ ರುವಂತಹ ಜಾಹಿರಾತು Revolts Advertising Agency ಸನ್ಮಾನ್ಯ ಉಪಾಧ್ಯಕ್ಷರೆ, ರೆವ್ರೋಲ್ಟ್ ಜಾಹಿರಾತಿನಲ್ಲಿ ಏನು ಬರೆದಿದ್ದಾರೆಂದರೆ, " Men mentally undress women: women don't seem interested in returning the favour, because they have better things to do, because of the state of means "Underwear" It is a shame on this Government. ಇದು ಅಂಡರ್‌ವೇರ್ ಜಾಹಿರಾತು. ಈ ರಿವ್ರೋಲ್ಟ್ ಎಂಬ ಜಾಹಿರಾತು ಕಂಪನಿಯಲ್ಲಿ 'Mentaly undress women' ಅದಕೋಸ್ಕರವಾಗಿ ನಿನ್ನೆಯ ದಿವಸ ಅಮಿತಾಬಚ್ಚನ್‌ನನ್ನು ಕರೆದು ಬಂದು ಇಲ್ಲಿ ಫ್ಯಾಷನ್ ಷೋ ಮಾಡುವುದಕ್ಕೆ ಹೊರಟಿದ್ದಿರಿ ? ನಮ್ಮ ಹೆಣ್ಣುಮಕ್ಕಳಿಗೆ ಅನ್ಯಾಯವನ್ನು ಮಾಡುವುದಕ್ಕೆ . The dignity of women is at stake ಇವೊತ್ತು ಏನು ಮಾಡುತ್ತಿದ್ದೀರಿ ? ಇಡೀ ಕರ್ನಾಟಕದ ಹೆಣ್ಣು ಮಕ್ಕಳಿಗೆ ಅವಮಾನವನ್ನು ಮಾಡಿರತಕ್ಕಂತಹ ವಿಷಯ ಇದು. ಬರೀ ಜಾಹಿರಾತು ಒಂದರಲ್ಲೇ ಅಲ್ಲ. ಇವೊತ್ತಿನ ದಿವಸ ಮುಖ್ಯಮಂತ್ರಿಗಳಾಗಿ ಅವರನ್ನು ಸ್ವಾಗತವನ್ನು ಮಾಡುತ್ತೀರಿ, ವಿಧಾನ ಸೌಧದಲ್ಲಿ ಜಾಹಿರಾತಿಗೆ ಒಂದು ಪತ್ರಿಕಾ ಗೋಷ್ಠಿಯನ್ನು ಮಾಡುತ್ತೀರಿ. ನಮ್ಮ ಕರ್ನಾಟಕದಲ್ಲಿ ಹೆಣ್ಣುಮಕ್ಕಳನ್ನು ಮೂರಾ ಬಟ್ಟೆಯಲ್ಲಿ ಮಾಡುವುದಕೋಸ್ಕರವಾಗಿ ಪೇರೆಡ್ ಶೋ ಮಾಡುತ್ತೀರಿ. ಹೆಣ್ಣುಮಕ್ಕಳನ್ನು ಮಾಡುವುದಕೋಸ್ಕರವಾಗಿ ಇದನ್ನು ಮಾಡುತ್ತಿದ್ದೀರಿ. ಇದನ್ನು ಮಾಡುವುದಕ್ಕೆ ಎಂದಿಗೂ ಸಹ ಬಿಡುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಒನಕೆ ಓಭವ್ವ ಮರೆತಿದ್ದಾರೆಂದು ಅಂದುಕೊಳ್ಳಬೇಡಿ. ಇಡೀ ಕರ್ನಾಟಕದಲ್ಲಿರತಕ್ಕಂತಹ ಹೆಣ್ಣು ಮಕ್ಕಳು ಒನಕೆಯನ್ನು ಹಿಡಿದುಕೊಂಡು ಬಂದು ಚೆಚ್ಚಾರು ನಿಮ್ಮ ಅಮಿತಾಬ್ ಬಚ್ಚನ್‌ನ್ನನ್ನು. ಇದನ್ನು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಇವೊತ್ತಿನ ದಿವಸ ಕರ್ನಾಟಕ ರಾಜ್ಯವನ್ನು ಇವರುಗಳು ಏನು ಅಂದುಕೊಂಡಿದ್ದಾರೆ, ಏನು ಬೇಕಾದರೂ ಮಾಡಬಹುದು, ಕರ್ನಾಟಕ ರಾಜ್ಯದಲ್ಲಿ ಬೆಂಗಳೂರಿನಲ್ಲಿ ಮಾಡಬಹುದೆಂದು ಅಂದುಕೊಂಡಿದ್ದರೆ, ಅದು ನಿಮ್ಮ ಮೂರ್ಖತನವಾಗೀತು. ಚಾಮುಂಡೇಶ್ವರಿ ಹುಟ್ಟಿದಂತಹ ನಾಡು ಇದು, ಇಲ್ಲಿ ಮಾಹಿಷಾಸುರನನ್ನು ಮರ್ಧನ ಮಾಡಿದಂತಹ ನಾಡು ಇದು. ಯಾವ ಕೆಲಸವನ್ನು ಮಾಡುವುದಕ್ಕೆ ಹೋಗುತ್ತಿದ್ದೀರಿ, ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಕಾನೂನು ಇದೆ, ಮುಖ್ಯ ನ್ಯಾಯಾಧೀಶರಾಗಿದ್ದಂತಹ ಚಂದ್ರ ಚೂಡರವರು ಏನು ಹೇಳಿದ್ದಾರೆಂದರೆ, ಕೋಸ್ಲಾ

ಕಮಿಟಿಯವರು ಏನು ಹೇಳಿದ್ದಾರೆ ಆಟೋ ಶಂಕರ್ ಕೇಸ್‌ನಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಏನು ಜಿಜ್ಜಿಮೆಂಟ್‌ನ್ನು ಕೊಟ್ಟಿದ್ದಾರೆ ಅದನ್ನು ಏನಾದರೂ ಓದಿದ್ದೀರಾ ? ಕೃಷ್ಣಾ ಅಯ್ಯರ್‌ರವರು ಇದರ ಬಗ್ಗೆ ಏನು ಹೇಳಿದ್ದಾರೆ ಎಂಬುದನ್ನು ಏನಾದರೂ ಕೇಳಿದ್ದೀರಾ ? ಇವೊತ್ತಿನ ದಿವಸ ಏನು ಮಾಡಿದ್ದಾರೆಂದರೆ ಬ್ಯಾಂಡಿಟ್ ಕ್ವೀನ್ ಎಂಬ ಸಿನಿಮಾ ಪ್ರದರ್ಶನವನ್ನು ಮಾಡಿದರು. ಏನು ಮಾಡಿದರು ಸೀಮಾಚೆಸ್ವಾಂತ್‌ನ್ನು ಬೆತ್ತಲೆಯ ಪ್ರದರ್ಶನವನ್ನು ಮಾಡಿದರು. ಇವೊತ್ತು ಎಲ್ಲಾ ವಿದೇಶದಲ್ಲಿರತಕ್ಕಂತಹ 120 ಹೆಣ್ಣು ಮಕ್ಕಳನ್ನು ಬೇರೆ ದೇಶಗಳಿಂದ ಕರೆದುಕೊಂಡು ಬಂದು ಇಲ್ಲಿ ಬೆತ್ತಲೆಯನ್ನು ಮಾಡುವುದಕೋಸ್ಕರವಾಗಿ ಅವರಿಗೆ ಬಟ್ಟೆ ಹಾಕದೆ ಓಡಾಡಿಸುವುದಕೊಸ್ಕರವಾಗಿ ಕರೆದುಕೊಂಡು ಬಂದಿದ್ದಿರಾ ? ಇವೊತ್ತು ಏನು ಮಾಡುತ್ತಿದ್ದೀರಿ ಎಂದು ಕೇಳುತ್ತಿದ್ದೇನೆ. ಇಂತಹ ಪ್ರದರ್ಶನವನ್ನು ಮಾಡಲು ಕರ್ನಾಟಕ ಹೆಣ್ಣುಮಕ್ಕಳು ಎಂದಿಗೂ ಸಹ ಅವಕಾಶವನ್ನು ಕೊಡುವುದಿಲ್ಲ ಎನ್ನತಕ್ಕಂತಹ ಮಾತನ್ನು ಹೇಳಬೇಕಾಗುತ್ತದೆ. ಏನು ಸರ್ಕಾರ ಇದು ? ಎಂತಹ ಸರ್ಕಾರ ಇದು ?

(ಗೊಂದಲ)

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಶ್ರೀಮತಿ ಪ್ರಮೀಳಾನೇಸರ್ಗಿಯವರು ಬಹಳ ಚನ್ನಾಗಿ ಮಾತನಾಡುತ್ತಾರೆ. ಅದಕ್ಕೆ ನಮ್ಮದು ತರರಾರು ಇಲ್ಲ. ಆದರೆ ಸೌಂದರ್ಯ ಅಂದ ತಕ್ಷಣ ಬೆತ್ತಲೆಯ ಪ್ರದರ್ಶನ ಎನ್ನತಕ್ಕಂತಹ ಭಾವನೆಯಿಂದ ಮಾತನಾಡಬಾರದು. ಏಕೆಂದರೆ ಮಹಿಳೆಯವರ ಬಗ್ಗೆ ಮಾತನಾಡುವಾಗ ಒಳ್ಳೆಯ ವಿಷಯಗಳನ್ನು ಹೇಳುವಾಗ ಕೇಳೋಣ. ಆದರೆ ಈ ಮಟ್ಟಕ್ಕೆ ಹೋಗಿ, ಸೌಂದರ್ಯ ಪ್ರದರ್ಶನ ಅಥವಾ ಸರ್ಕಾರದವರು ಒಳ್ಳೆಯ ಕೆಲಸವನ್ನು ಮಾಡುವಾಗ, ಸರ್ಕಾರದವರು ಸಹಾಯವನ್ನು ಮಾಡುವಾಗ ಈ ರೀತಿಯಾಗಿ ಆ ಮಟ್ಟದಲ್ಲಿ ಮಾತನಾಡುವುದು ಒಳ್ಳೆಯದಲ್ಲವೆಂದು ಹೇಳುತ್ತೇನೆ.

ಶ್ರೀ .ವಾಟಾಳ್ ನಾಗರಾಜ್ : ತಾವು ಕೃಪೆಯನ್ನು ಮಾಡಿದರೆ ಅರ್ಧ ನಿಮಿಷಗಳ ಕಾಲ ಮಾತನಾಡುತ್ತೇನೆ.

ಉಪಾಧ್ಯಕ್ಷರು : ಬೇಡ,

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೆ, ನಾನು ಜಡ್ಜ್‌ಮೆಂಟ್‌ನ್ನು ಹೇಳ ಬೇಕಾಗಿದೆ. ಇದನ್ನು ತಮ್ಮ ಗಮನಕ್ಕೆ ತರಲೇಬೇಕಾಗಿದೆ.

ಉಪಾಧ್ಯಕ್ಷರು : ಈಗ ಬಹಳ ಸಮಯವಾಗಿದೆ, ನೀವು ಅದನ್ನು ಅವರಿಗೆ, ಕಳುಹಿಸಿಕೊಡಿ. ಈಗ ಜಯಚಂದ್ರರವರು ಮಾತನಾಡಲಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೆ, ನ್ಯಾಯಾಧೀಶರಾದ ಕೃಷ್ಣ ಅಯ್ಯರ್‌ರವರು ಏನು ಹೇಳಿದ್ದಾರೆಂದರೆ, ಸೆನ್ಸಾರ್ ಬೋರ್ಡ್‌ನವರು.....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನನ್ನದು ಒಂದು ಕ್ರಿಯಲೋಪ ಇದೆ.

ಉಪಾಧ್ಯಕ್ಷರು : ಬೇಡಿ, ದಯಮಾಡಿ ಶ್ರೀ ವಾಟಾಳ್ ನಾಗರಾಜ್‌ರವರು ಸಹಕಾರವನ್ನು ಮಾಡಬೇಕು. ಅವರು ಮುಗಿಸಲಿ.

ಶ್ರೀ ವಾಟಾಳ್ ನಾಗರಾಜ್ : ಅವರು ಮಾತನಾಡಿ ಮುಗಿಸಿದ ಮೇಲೆ ನನಗೆ ಅವಕಾಶವನ್ನು ಕೊಡುತ್ತೀರೋ ? ಆ ರೀತಿಯಾಗಿ ಆದರೆ ಆಗಲಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸೆನ್ಸಾರ್ ಬೋರ್ಡ್‌ನವರು ಕ್ಲಿಯರ್ ಮಾಡಿದ್ದರೂ ಕೂಡ, See. 292, Criminal Prosecution is nobar ಎಂದು ಜಸ್ಟೀಸ್ ಕೃಷ್ಣಯ್ಯರ್‌ರವರು ಹೇಳಿದ್ದಾರೆ. ಬ್ಯಾಂಡಿಟ್ ಕ್ವೀನ್ ಪಿಕ್ಚರ್‌ನ್ನು ಹಾಕಿದ್ದರಿಂದ ಅಮಿತಾ ಬಚ್ಚನ್‌ರವರ ಮೇಲೆ ಐ.ಪಿ.ಸಿ ಸೆಕ್ಷನ್ 291, 292, 293 ರ ಪ್ರಕಾರ ಕ್ರಮವನ್ನು ತೆಗೆದುಕೊಳ್ಳ ಬೇಕಾಗಿತ್ತು. ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲು ಮಾಡಬೇಕಾಗಿತ್ತು. ಆದರೆ ಅವರನ್ನು ಹೀರೋ ಎಂದು ಕರೆದಿದ್ದೀರಿ. ಅವರನ್ನು ಹೀರೋ ಎಂದು ಕರೆದಿದ್ದರಿಂದ ಮುಖ್ಯ ಮಂತ್ರಿಗಳಾದ ನೀವು ಅಬೇಟರ್ ಆಗಿದ್ದೀರಿ. ನೀವೂ ಆ ಸ್ಥಾನದಲ್ಲಿರುವುದರಿಂದ ನಿಮ್ಮ ಮೇಲೂ ಕೂಡ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆಂಬ ಮಾತನ್ನು ಹೇಳಬಯಸುತ್ತೇನೆ. ಇದರ ಬಗ್ಗೆ ಜಸ್ಟೀಸ್ ಚಂದ್ರಚೂಡ್‌ರವರು ಹೇಳಿರುವಂಥ ಒಂದು ಮಾತನ್ನು ಹೇಳುತ್ತೇನೆ.

"Women are born and born as victims and live as victims if they live at all and die as victims of gang rape, dowry or suicide. and parental abandonment - moral and material."

ಎಂದು ಹೇಳಿದ್ದಾರೆ. ಇಂಥ ಸಂದರ್ಭದಲ್ಲಿ ...

ಉಪಾಧ್ಯಕ್ಷರು : ಮತ್ತೆ ನೀವು ಏನನ್ನೂ ಹುಡುಕುವ ಅವಶ್ಯಕತೆ ಇಲ್ಲ. ಜಯಚಂದ್ರರವರೇ, ನೀವು ಮಾತನಾಡಿ.

ಶ್ರೀಮತಿ ಪ್ರಮಿಳಾ ಎಸ್. ನೇಸರ್ಗಿ : ಆದ್ದರಿಂದಲೇ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡಬೇಕೆಂದು ಹೇಳಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತಿದ್ದೆನೆ.

+ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಉಪಾಧ್ಯಕ್ಷರೆ, ಇವತ್ತು ಅವಿಶ್ವಾಸ ನಿರ್ಣಯದಮೇಲೆ ಮಾತುನಾಡುವುದಕ್ಕೆ ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟದ್ದಕ್ಕೆ ಪ್ರಥಮವಾಗಿ ತಮಗೆ ವಂದಿಸುತ್ತೇನೆ. ಕೇವಲ 3 ತಿಂಗಳ ಹಿಂದೆ ಅಧಿಕಾರಕ್ಕೆ ಬಂದಂಥ ಈ ಸರ್ಕಾರದ ವಿರುದ್ಧ ಅವಿಶ್ವಾಸವನ್ನು ಮಂಡಿಸುವ ಅವಕಾಶ ಒದಗಿಬಂದದ್ದು ವಿರೋಧಪಕ್ಷದವರಿಂದ ಅಲ್ಲ. ಈ ರೀತಿ ಅವಿಶ್ವಾಸ ನಿರ್ಣಯವನ್ನು ಮಂಡಿಸುವ ಪ್ರಸ್ತಾಪ ಯಾವ ಸಂದರ್ಭದಲ್ಲಿ ಬಂದಿತ್ತು ಎಂದರೆ, ಕಳೆದ ಸುಮಾರು 40 ದಿನಗಳಿಂದ ಈ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ಅನೇಕ ರೀತಿಯ ಚರ್ಚೆಗಳು ಈ ಸದನದಲ್ಲಿ ನಡೆಯುತ್ತಾ ಬಂದಿದ್ದು ಇನ್ನೇನು ಈ ವಿಧಾನ ಸಭಾ ಅಧಿವೇಶನ ಕೊನೆಗೊಳ್ಳಬೇಕೆಂಬ ಹಂತದಲ್ಲಿ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡುವಂಥ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. 40 ದಿನಗಳಿಂದ ಈ ವಿಧಾನಸಭೆಯಲ್ಲಿ ನಡೆದಂಥ ಚರ್ಚೆಯ ಧಾಟಿಯನ್ನು ನೋಡಿದರೆ ಒಂದಲ್ಲೊಂದು ರೀತಿಯಲ್ಲಿ ಆಡಳಿತ ಮತ್ತು ವಿರೋಧಪಕ್ಷದವರ ಮಧ್ಯೆ ಆಗುತ್ತಿರುವಂಥ ಚರ್ಚೆಯ ಒಟ್ಟಾರೆ ತಾತ್ಪರ್ಯವನ್ನು ನೋಡಿದರೆ ಒಂದೇ ರೀತಿಯ ಆರೋಪ ನಿಮ್ಮ ಸರ್ಕಾರದಮೇಲೆ ಬರುತ್ತಿತ್ತು. ಅದು ಏನು ಎಂದರೆ ಈ ಕರ್ನಾಟಕ ರಾಜ್ಯದ ಜನರ ಹಿತವನ್ನು ರಕ್ಷಣೆ ಮಾಡುವುದರಲ್ಲಿ ನೀವು ಸಂಪೂರ್ಣ ವಿಫಲರಾಗಿದ್ದೀರಿ ಎಂದು ಪ್ರತಿ ಸಂದರ್ಭದಲ್ಲೂ ಬರುತ್ತಿತ್ತು. ಒಂದು ಮಾತನ್ನು ಹೇಳುವುದಾದರೆ, ಕೇವಲ ವಿರೋಧಪಕ್ಷದ ಟೀಕೆಗೆ ಗುರಿಯಾಗುವುದಕ್ಕಿಂತ ಹೆಚ್ಚಾಗಿ ಜನರ ದೃಷ್ಟಿಯಲ್ಲೂ ಕೂಡ ನೀವು ವಿಶ್ವಾಸವನ್ನು ಕಳೆದು ಕೊಂಡಿದ್ದೀರೆಂದರೆ ತಪ್ಪಾಗಲಾರದು. ತಾವು ಅಧಿಕಾರಕ್ಕೆ ಬಂದು ಸುಮಾರು 20 ತಿಂಗಳಾಯಿತು. ಚುನಾವಣೆಗೆ ಪೂರ್ವದಲ್ಲಿ ಜನರ ಮುಂದೆ ಹೋದಂಥ ಸಂದರ್ಭದಲ್ಲಿ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮ ಅಂತಿಮವಾದ ದೊರೆಗಳು ಯಾರೆಂದರೆ, ಜನಗಳು. ಈ ಜನರ ಮುಂದೆ ಹೋಗುವಂಥ ಸಂದರ್ಭದಲ್ಲಿ ನಿಮ್ಮ ಈ ಪಕ್ಷದ ಎಲ್ಲಾ ನಾಯಕರೂ ಕೂಡ ಏನು ಅಶ್ವಾಸನೆಯನ್ನು ಕೊಟ್ಟರು ಎಂದರೆ, ನಮಗೆ ನೀವು 2-3 ಅವಕಾಶಗಳನ್ನು ಕೊಟ್ಟಿರಿ - ಆಗ ನಮ್ಮ ಒಳಜಗಳದಿಂದಾಗಿ ನಮ್ಮ ಅಧಿಕಾರವನ್ನು ಕಳೆದುಕೊಳ್ಳಬೇಕಾಗಿ ಬಂತು. ಇನ್ನು ಮುಂದೆ ಈ ರೀತಿ ಆಗುವುದಿಲ್ಲ ಎನ್ನತಕ್ಕ ವಚನವನ್ನು ಜನರಿಗೆ ಕೊಟ್ಟು ಬಂದಿರಿ. ನೀವು ಈ ರೀತಿ ವಚನವನ್ನು ಕೊಟ್ಟು ಅಧಿಕಾರಕ್ಕೆ ಬಂದ 18-20 ತಿಂಗಳಲ್ಲಿ ಆಗಿರುವುದಾದರೂ ಏನು ? ಜನರು ನಮ್ಮ ಮೇಲೆ ವಿಶ್ವಾಸವನ್ನು ಇಟ್ಟರು. ಪ್ರತಿಯೊಂದು ಚುನಾವಣೆಯಲ್ಲೂ ಜನರು ನಿಮ್ಮ ಮೇಲೆ ವಿಶ್ವಾಸವಿಟ್ಟು ಮತ ನೀಡಿದರು. ಇತ್ತೀಚೆಗೆ ನಡೆದಂಥ ಲೋಕಸಭೆ ಚುನಾವಣೆಯಲ್ಲೂ ಕೂಡ, ಬಹುಶಃ ಐತಿಹಾಸಿಕ ತೀರ್ಪನ್ನು ಕೊಟ್ಟು 16 ಜನ ಸದಸ್ಯರನ್ನು ಆಯ್ಕೆಮಾಡಿದಂಥ ಕೆಲವೇ ದಿನಗಳಲ್ಲಿ ಆಗಿರುವಂಥಾದ್ದಾದರೂ ಏನು ? ಈ ಪ್ರಜಾಪ್ರಭುತ್ವದಲ್ಲಿ ಜನರ ವಿಶ್ವಾಸವನ್ನುಗಳಿಸಿಕೊಂಡು ಆ ಜನರಿಗೆ ಕೊಟ್ಟಿರತಕ್ಕಂಥ ನಮ್ಮ ವಚನ ಏನಿದೆ, ಆ ವಚನಕ್ಕೆ ಭ್ರಷ್ಟರಾದರೆ, ಕೊಟ್ಟಂಥ ವಚನದಿಂದ ದೂರ ಹೋದಾಗ ನಿಮ್ಮಲ್ಲಿ ವಿಶ್ವಾಸ ಇಲ್ಲ ಎಂದು ಅರ್ಥವಾಗುತ್ತದೆ. ಇವತ್ತು ಬಹಳ ಮುಖ್ಯವಾಗಿ ನೀವು ಜನರ ವಿಶ್ವಾಸವನ್ನು ಕಳೆದುಕೊಂಡಿದ್ದೀರಿ. ಇದರಿಂದಾಗಿ ನಿಮ್ಮ ವಿರುದ್ಧ ಅವಿಶ್ವಾಸ ನಿರ್ಣಯವನ್ನು ನಾವು ಅನಿವಾರ್ಯವಾಗಿ ಮಂಡಿಸಬೇಕಾದ ಪ್ರಸಂಗ ಒದಗಿ ಬಂತು. ಚುನಾವಣೆಗೆ ಪೂರ್ವದಲ್ಲಿ ಮತ್ತು ಚುನಾವಣೆಯ

ನಂತರ ನಿಮ್ಮ ಪಕ್ಷದೊಳಗೆ ನಡೆಯುತ್ತಿರುವಂಥ ವಿದ್ಯಮಾನಗಳನ್ನು ನೋಡಿದರೆ ನೀವು ಸಂಪೂರ್ಣವಾಗಿ ನಿಮ್ಮ ಬಹುಮತವನ್ನು ಕಳೆದುಕೊಂಡಿದ್ದೀರಿ, ಆತ್ಮಸಾಕ್ಷಿಯಾಗಿ ಹೇಳಬೇಕೆಂದರೆ, ನಿಮಗೆ ಇವತ್ತು ಬಹುಮತ ಇಲ್ಲ. ಅಂದಮೇಲೆ ನೀವು ಆಡಳಿತವನ್ನು ಮಾಡುವಂಥ ಶಕ್ತಿ ಇದೆಯೇ: ಮುಖ್ಯವಾಗಿ ಇಷ್ಟೊಂದು ಜನರ ಆಕ್ಷೇಪಣೆಗೆ ಗುರಿ ಆಗಿರುವಂಥ ವಿಚಾರ ಎಂದರೆ, ಆಲಮಟ್ಟಿ ವಿಚಾರ ಪ್ರಸ್ತಾಪ ಆಗುವಂಥ ಸಂದರ್ಭದಲ್ಲಿ ನೀವು ಜನರ ಬಗ್ಗೆ ನಡೆದುಕೊಂಡಂಥ ರೀತಿಯನ್ನು ನೋಡಿದರೆ, ಎಲ್ಲರಿಗೂ ಗೊತ್ತಾಗುತ್ತದೆ. ನಮ್ಮ ಪಾಲಿನ ಹಕ್ಕಿನ ನೀರುನ್ನು ಕಳೆದುಕೊಳ್ಳತಕ್ಕ ಪರಿಸ್ಥಿತಿ ಬಂದಿದೆ. ಆ ಹಕ್ಕನ್ನು ಉಳಿಸಿಕೊಳ್ಳುವ ಶಕ್ತಿಯನ್ನು ನೀವು ಕಳೆದುಕೊಂಡಿದ್ದೀರೆಂದು ನಮಗೆ ಭಾವನೆ ಬಂದಿದ್ದರಿಂದ ನಾವು ಇವತ್ತು ಈ ಅವಿಶ್ವಾಸ ನಿರ್ಣಯವನ್ನು ಇಲ್ಲಿ ಮಂಡಿಸಬೇಕಾಗಿ ಬಂತು. ನಾನಾದರೂ ಒಂದು ಮಾತನ್ನು ಕೇಳಬಯಸುತ್ತೇನೆ. ನಮ್ಮ ಪಾಲಿನ ಹಕ್ಕಿನ ನೀರು ಅಂದರೆ 734 ಟಿ.ಎಂ.ಸಿ. ಇವತ್ತು ಗೋದಾವರಿ ಡೈವರ್ಷನಿಂದ ಬರತಕ್ಕದ್ದು 23 ಟಿ.ಎಂ.ಸಿ. ನೀರು. ಒಟ್ಟಾರೆ 757 ಟಿ.ಎಂ.ಸಿ.ನೀರಿನ ಮೇಲಿನ ಹಕ್ಕನ್ನು ಇವತ್ತು ಸ್ಥಾಪನೆ ಮಾಡಬೇಕಾಗಿದೆ. ಈ ನೀರನ್ನು ಇನ್ನು ಕೇವಲ 4 ವರ್ಷದೊಳಗೆ ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳಬೇಕಾಗಿದೆ. ಈ ಹಂತದಲ್ಲಿ ಕೇಂದ್ರಸರ್ಕಾರದ ಅನುಮತಿಯ ಮೇರೆಗೆ ಆಲಮಟ್ಟಿಯ ಎತ್ತರವನ್ನು ಮಾಡಿಸುವ ಸಂದರ್ಭದಲ್ಲಿ ಆಂಧ್ರಪ್ರದೇಶದವರು ನಮ್ಮಮೇಲೆ ಕಾಲು ಕೆರೆದುಕೊಂಡು ಜಗಳ ಮಾಡುವುದಕ್ಕೆ ಬಂದಾಗ ನೀವು ಮಾಡಿದ್ದದರೂ ಏನು ? ಕೇಂದ್ರಸರ್ಕಾರದ ಒತ್ತಾಯಕ್ಕೆ ಮಣಿದು, ಅವರು ಹಾಕಿದ ತಾಳಕ್ಕೆ ತಕ್ಕಂತೆ ಕುಣಿದು ನಮ್ಮ ಕೆಲಸ ಸ್ಥಗಿತವಾಗುವ ಮಟ್ಟಕ್ಕೆ ನೀವು ನಡೆದುಕೊಂಡಿದಿರಿ ಎಂಬುದು ನಮ್ಮ ಆರೋಪ. 734 ಟಿ.ಎಂ.ಸಿ.ನೀರಿನ ಪೈಕಿ ನಾವು ಉಪಯೋಗ ಮಾಡಿಕೊಳ್ಳುತ್ತಿರುವುದು ಕೇವಲ 480 ಟಿ.ಎಂ.ಸಿ.ನೀರು ಮಾತ್ರ. ಇನ್ನೂ ಸುಮಾರು 250 ಟಿ.ಎಂ.ಸಿ ಗಿಂತ ಹೆಚ್ಚಿನ ನೀರನ್ನು ಉಪಯೋಗಿಸಿಕೊಳ್ಳಬೇಕಾಗಿದೆ. ಇದನ್ನು ಬಳಸಿಕೊಳ್ಳಬೇಕಾದರೆ ಏನು ಸಂಪನ್ಮೂಲವನ್ನು ವ್ಯವಸ್ಥೆ ಮಾಡಿದ್ದೀರಿ ? ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನೀವು ನಮ್ಮ ನೀರಿನ ಹಕ್ಕನ್ನು ಉಳಿಸಿಕೊಳ್ಳುವುದಕ್ಕೆ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನೂ ರೂಪಿಸಿಕೊಳ್ಳುತ್ತೇವೆಂದು ಹೇಳಿಸಿದ್ದೀರಿ. ನಾನಾದರೂ ಕೇಳುತ್ತೇನೆ. ನಮ್ಮ ಪಾಲಿನ ಹಕ್ಕಿನ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕಾದರೆ ಸುಮಾರು 8 ಸಾವಿರ ಕೋಟಿ ರೂ. ಗಳಿಗಿಂತ ಹೆಚ್ಚಿನ ಹಣ ಬೇಕಾಗುತ್ತದೆ. ಜನತೆ ನಮ್ಮನ್ನು ತ್ಯಜಿಸಿ ನಿಮ್ಮನ್ನು ಈ ಅಧಿಕಾರಕ್ಕೆ ತಂದಿರುವಾಗ ಈ ಯೋಜನೆಗಾಗಿ ನೀವು ಇಟ್ಟಿರತಕ್ಕ ಹಣವಾದರೂ ಎಷ್ಟು? ಈ ರೀತಿ ನೀವು ಒದಗಿಸುತ್ತಿರುವ ಹಣವನ್ನು ಲೆಕ್ಕ ಹಾಕಿದರೆ ಇನ್ನು ಎಷ್ಟು ವರ್ಷಗಳಲ್ಲಿ ಈ ಯೋಜನೆಗಳನ್ನು ಮುಗಿಸುವುದಕ್ಕೆ ಸಾಧ್ಯ ? ನಮ್ಮ ಹಕ್ಕಿನ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವೇ? ಈಗ ನಮ್ಮ ರಾಜ್ಯದ ಜನತೆಯ ಮನಸ್ಸಿನಲ್ಲಿ ಬಂದಿರತಕ್ಕ ಭಾವನೆಯಾದರೂ ಇಷ್ಟೆ. ಅವರ ಭಾವನೆಗಳನ್ನು ವಿರೋಧಪಕ್ಷದವರಾದ ನಾವು ಇಲ್ಲಿ ಕೂತು ಇವತ್ತು ನಿಮ್ಮಮುಂದೆ ಇಡುತ್ತಿದ್ದೇವೆ. ಯಾವ ಸಂದರ್ಭದಲ್ಲೂ ಕೂಡ ನಮ್ಮ ಪಾಲಿನ ಹಕ್ಕಿನ ನೀರುನ್ನು ಉಳಿಸಿಕೊಳ್ಳುವ ಜವಾಬ್ದಾರಿ, ಆ ಶಕ್ತಿ ನಿಮ್ಮಲ್ಲಿಲ್ಲ ಎನ್ನತಕ್ಕ ಭಾವನೆ ನಮ್ಮ ಜನರನಲ್ಲಿ ಬಂದಿದೆ. ಎನ್ನುವ ಮಾತನ್ನು ನಿಮ್ಮ ಮುಂದೆ ಹೇಳಬೇಕಾಗಿದೆ. ಯಾವರೀತಿಯಲ್ಲಿ ನಮ್ಮ ಪಾಲಿನ ಹಕ್ಕಿನ ನೀರನ್ನು ಶೇಖರಿಸುವುದಕ್ಕೆ ಸಾಧ್ಯ ಎಂಬುದನ್ನು ತಾವು ಇವತ್ತು ಹೇಳಬೇಕು. ಯೋಜನೆಯಲ್ಲಿ ಹಣವನ್ನು ಇಟ್ಟಿಲ್ಲ. ಆಡಳಿತದ

ವೆಚ್ಚವನ್ನುಕಡಿಮೆ ಮಾಡುವ ಪ್ರಸ್ತಾಪ ಇಲ್ಲ. ಇಲಾಖೆ ಬೇಡಿಕೆಗಳ ಮೇಲೆ ಮಾತನಾಡುವಂಥ ಸಂದರ್ಭದಲ್ಲಿ ಅನೇಕ ಸದಸ್ಯರು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದಾಗಲೂ ಕೂಡ ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆಯನ್ನು ನೋಡಿದಾಗ ಈ ಸರ್ಕಾರಕ್ಕೆ ಯಾವುದೇ ರೀತಿಯ ಜವಾಬ್ದಾರಿಯೂ ಇಲ್ಲ, ಜನರಿಗೆ ಏನು ವಚನವನ್ನು ಕೊಟ್ಟು ಬಂದಿರಿ, ಜನರಿಗೆ ವಿಶ್ವಾಸ ಹುಟ್ಟಿಸಿ ಮತವನ್ನು ಗಳಿಸಿ ಏನು ಅಧಿಕಾರಕ್ಕೆ ಬಂದಿರಿ, ಆ ಜನರ ವಿಶ್ವಾಸವನ್ನು ಉಳಿಸಿಕೊಳ್ಳುವ ದಾರಿಯಲ್ಲಿ ನೀವು ಇವತ್ತು ಹೋಗುತ್ತಿಲ್ಲ. ನಮ್ಮ ಪಾಲಿನ ಹಕ್ಕಿನ ನೀರನ್ನು ಸಂಪೂರ್ಣವಾಗಿ ಬಳಕೆ ಮಾಡಲು ನಿಮಗೆ ಸಾಧ್ಯವಿಲ್ಲ. ಈ ದೆಸೆಯಲ್ಲಿ ಅಗತ್ಯವಾಗಿ ಬೇಕಾದ ಸಂಪನ್ಮೂಲವನ್ನು ಕ್ರೋಢೀಕರಿಸುವ ಕೆಲಸವನ್ನು ನೀವು ಮಾಡದೇ ಇರುವುದರಿಂದ ನಿಮ್ಮಮೇಲೆ ಜನರಿಗೆ ವಿಶ್ವಾಸ ಇಲ್ಲದಂತಾಗಿದೆ. ಇದರ ಜೊತೆಗೆ ನಿಮ್ಮ ಮೇಲೆ ಬಹಳ ದೊಡ್ಡ ಜವಾಬ್ದಾರಿ ಇದೆ. ಇನ್ನುಕೇವಲ 4 ವರ್ಷದೊಳಗೆ ನಮ್ಮಪಾಲಿನ ಹಕ್ಕಿನ ನೀರುನ್ನು ಉಪಯೋಗಿಸಿಕೊಳ್ಳುವುದರ ಜೊತೆಗೆ ತದನಂತರ ಸ್ಕೀಂ 'ಬಿ' ನಲ್ಲಿ ಬರುವಂಥ 180 ಟಿ.ಎಂ.ಸಿ.ನೀರು ಇರಬಹುದು, ಅಥವಾ ಬೇರೆಯದು ಇರಬಹುದು. ಇತ್ತೀಚೆಗೆ ಈ ಮನೆಯ ಸದಸ್ಯರಾಗಿದ್ದು ರಾಷ್ಟ್ರದ ಪ್ರಧಾನಿ ಆಗಿರುವವರು ಇಂಟರ್‌ಸ್ಟೇಟ್ ನದಿಗಳನ್ನು ಲಿಂಕ್ ಮಾಡುವ ಯೋಚನೆಯನ್ನು ಮಾಡಿದ್ದೇನೆ, ಇದಕ್ಕಾಗಿ ಕೇಂದ್ರ ಸರ್ಕಾರದ ಸಚಿವರ ಒಂದು ಸಮಿತಿಯನ್ನೂ ಕೂಡ ರಚನೆ ಮಾಡುತ್ತೇನೆಂದು ಹೇಳಿರುವುದನ್ನು ನಿಜವಾಗಿಯೂ ನಾವು ಸ್ವಾಗತಿಸಬೇಕಾಗುತ್ತದೆ. ಆಗ ಮಹಾ ನದಿಯನ್ನು ಗೋದಾವರಿಯಿಂದ, ಗೋದಾವರಿಯಿಂದ ಕೃಷ್ಣಾಕ್ಕೆ ಸೇರಿಸುವ ಸಂದರ್ಭದಲ್ಲಿ ಬಹುಶಃ ಹೆಚ್ಚಿನ ಸಂಪನ್ಮೂಲ ಬೇಕಾಗುತ್ತದೆ. ನಮ್ಮ 3-4 ರಾಜ್ಯಗಳನ್ನು ಮಧ್ಯೆ ಇರತಕ್ಕಂಥ ಈ ಸಮಸ್ಯೆಯನ್ನು ಪ್ರಧಾನ ಮಂತ್ರಿಗಳಾಗಿರುವವರು ಬಗೆಹರಿಸಿದ್ದೇ ಆದರೆ ಅತ್ಯಂತ ಉತ್ತಮ ಕೆಲಸವನ್ನು ಮಾಡಿದಂತಾಗುತ್ತದೆ. ಈ ಪ್ರಸ್ತಾಪ ಈಗಾಗಲೇ 1980ರಲ್ಲಿ ಕೂಡ ಬಂದು ಹೋಗಿರುವ ಸಂದರ್ಭದಲ್ಲಿ, ಇವತ್ತು ಒಂದು ಸಾವಿರ ಟಿ.ಎಂ.ಸಿ.ಗೂ ಹೆಚ್ಚು ನೀರು ಬರತಕ್ಕ ಅವಕಾಶ ನಮಗೆ ಇದೆ. ನಾನು ಒಂದು ಮಾತು ಹೇಳುತ್ತೇನೆ. ನಾಲ್ಕು ವರ್ಷದಲ್ಲಿ ನಮ್ಮ ಹಕ್ಕನ್ನು ಉಳಿಸಿಕೊಳ್ಳತಕ್ಕದ್ದು ಹೇಗೆ? ಸ್ಕೀಂ 'ಬಿ' ಯಲ್ಲಿ ಬರತಕ್ಕ 180 ಟಿ.ಎಂ.ಸಿ. ನೀರು ಬರತಕ್ಕದ್ದು ಹೇಗೆ? ತಡನಂತರ, ಇಂಟರ್‌ಲಿಂಕಿಂಗ್ ರಿವರ್ಸ್ ಆಗತಕ್ಕ ಸಂದರ್ಭದಲ್ಲಿ ಒಂದು ಸಾವಿರ ಟಿ.ಎಂ.ಸಿ.ಗೂ ಹೆಚ್ಚು ನೀರು ಬರತಕ್ಕ ಸಂದರ್ಭದಲ್ಲಿ ಅದನ್ನು ಉಪಯೋಗಿಸಿಕೊಳ್ಳತಕ್ಕದ್ದು ಹೇಗೆ? ಅದಕ್ಕೆ ಯಾವ ರೀತಿ ಕಾರ್ಯಕ್ರಮ ಹಾಕುತ್ತಿದ್ದೀರಿ? ಯಾವ ರೀತಿ ಯೋಜನೆ ಹಾಕುತ್ತಿದ್ದೀರಿ ಎಂಬುದು ತಮ್ಮ ಮುಂದೆ ಇಲ್ಲ. ದಯಮಾಡಿ ತಾವು ಚಿಂತನೆ ಮಾಡಬೇಕಾಗುತ್ತದೆ. ಈಗಾಗಲೇ ಕರ್ನಾಟಕದ ನೀರು ಬಹಳ ರೀತಿಯಾಗಿ ಯಾವುದು ಯಾವುದೋ ಹೆಸರಿನಲ್ಲಿ ಹೋಗಿ ಒಂದು ರೀತಿಯಲ್ಲಿ ಕರ್ನಾಟಕ ರಾಜ್ಯದವರು ಶೋಷಣೆಗೆ ಒಳಗಾಗಿದ್ದಾರೆ, ವಂಚಿತರಾಗಿದ್ದಾರೆ. ಇನ್ನು ಮುಂದೆ ಅಂಥ ಪರಿಸ್ಥಿತಿ ಬರಬಾರದು. ದಯಮಾಡಿ ಹೇಳುತ್ತೇನೆ, ನಿಮ್ಮ ಮುಂದೆ ಯಾವುದೇ ರೀತಿಯ ಯೋಜನೆಗಳು ಇಲ್ಲ. ಹಿಂದೆ ಬಜೆಟ್ ಮೇಲೆ ಮಾತನಾಡುವ ಸಂದರ್ಭದಲ್ಲಿ, ಭದ್ರ ಮೇಲ್ದಂಡೆ ಯೋಜನೆ ಮಾಡಿ ಎಂದು ಹೇಳಿದ್ದೆ. ಇವತ್ತು ಬಚಾವತ್ ತೀರ್ಪಿನಲ್ಲಿ ಪ್ರಸ್ತಾಪವಾಗಿರತಕ್ಕ ದೃಷ್ಟಿಯಿಂದ 4 ವರ್ಷದೊಳಗೆ ನಮ್ಮ ನೀರುನ್ನು ಸಂಪೂರ್ಣ ಬಳಸ ಬೇಕಾದರೆ ಭದ್ರ ಮೇಲ್ದಂಡೆ ಯೋಜನೆಗೆ ಕನಿಷ್ಟ 70 - 80 ಟಿ.ಎಂ.ಸಿ. ನೀರನ್ನು ಕೊಟ್ಟು ಯಾವತ್ತೂ ಶಾಶ್ವತವಾಗಿ ಬರಗಾಲ

ಪೀಡಿತ ಪ್ರದೇಶವಾಗಿರತಕ್ಕ ಕೋಲಾರ, ತುಮಕೂರು ಚಿತ್ರದುರ್ಗ, ಬಳ್ಳಾರಿ, ಚಿಕ್ಕಮಗಳೂರಿನ ಅನೇಕ ಭಾಗಗಳಿಗೆ ನೀರನ್ನು ಕೊಡತಕ್ಕ ಸೌಲಭ್ಯ ಮಾಡಿ ಎಂಬ ಮಾತನ್ನು ಅನೇಕ ಸಂದರ್ಭಗಳಲ್ಲಿ ಹೇಳುತ್ತಾ ಬಂದಿದ್ದೇವೆ. ಇವತ್ತು ಪ್ರಧಾನ ಮಂತ್ರಿಗಳ ಆದೇಶದ ಮೇರೆಗೆ ಸಚಿವರಾಗಿರತಕ್ಕ ಶ್ರೀ ನಾಗೇಗೌಡರೂ ಸಹ ಎರಡು ಸಾರಿ ಸಭೆ ಕರೆದು ಚರ್ಚೆ ಮಾಡಿದ್ದರು. ಆದರೆ ಅಂತಿಮವಾಗಿ ಯಾವ ರೀತಿಯಾಗಿ ನಾವು ರೂಪುರೇಷೆಗಳನ್ನು ಮಾಡಿ ಯಾವ ರೀತಿ ಯೋಜನೆ ಮಾಡಿದರೆ ಸಂಪೂರ್ಣನೀರನ್ನು ಬಳಕೆ ಮಾಡಿಕೊಳ್ಳಬಹುದೆಂಬುದರ ಬಗ್ಗೆ ಕಾರ್ಯಕ್ರಮ ಹಾಕಲಿಲ್ಲ, ಕ್ರಿಯಾ ಯೋಜನೆಯನ್ನು ಮಾಡಲಿಲ್ಲ, ದಯಮಾಡಿ ಅದು ಬಗ್ಗೆ ಚಿಂತನೆ ಮಾಡತಕ್ಕದ್ದು ಅವಶ್ಯಕ. ಈಗಾಗಲೇ ನಮ್ಮ ಭಾಗದಲ್ಲಿ ಜನಗಳು ಹೆಚ್ಚು ವಿಶ್ವಾಸವನ್ನು ಇಟ್ಟು ನಿಮ್ಮ ಪಕ್ಷಕ್ಕೆ ಓಟು ಕೊಟ್ಟು ಸಂದರ್ಭದಲ್ಲಿ ಇವತ್ತು ಜನ ವಿಶ್ವಾಸ ಕಳೆದುಕೊಂಡಿದ್ದಾರೆ. ಇವತ್ತು ಎಲ್ಲಾ ರೀತಿಯಲ್ಲಿ ವಿಶ್ವಾಸ ಕಳೆದುಕೊಳ್ಳತಕ್ಕ ಪರಿಸ್ಥಿತಿ ಬಂದಿದೆ. ಏಕೆಂದರೆ ನಾವು ಬರೀ ಬಾಯಲ್ಲಿ ಮಾತನಾಡುತ್ತೀರಿ, ಕಾರ್ಯಕ್ರಮಗಳನ್ನು ಏನೂ ಹಾಕುವುದಿಲ್ಲ ಎಂಬ ಭಾವನೆ ಬಂದಿರತಕ್ಕದ್ದು, ಅದರ ಜೊತೆಗೆ ಇವತ್ತು ಕಾವೇರಿ ವಿಚಾರ ಒಂದು . ಈ ಗಾಗಲೇ ಅನೇಕ ಸಮಿತಿಗಳು ಬಂದಿದೆ. ಆಲಮಟ್ಟಿ ಜಲಾಶಯದ ಕೆಲಸವನ್ನು ನಿಲ್ಲಿಸಬೇಕೆಂಬುದರ ಬಗ್ಗೆ ಇವತ್ತು ಸ್ಪಷ್ಟವಾದ ನಿಲುವನ್ನು ಸರ್ಕಾರ ತಾಳಬೇಕಾಗುತ್ತದೆ. ಇವತ್ತು ಯಾವುದೋ ಒಂದು ರಾಜಕೀಯ ಕುರ್ಚಿ ಆಸೆ ಗೋಸ್ಕರ, ಕುರ್ಚಿ ಉಳಿಸಿಕೊಳ್ಳುವುದಕ್ಕೋಸ್ಕರ ಎಲ್ಲರೂ ಕೂಡ ದೆಹಲಿ ಕಡೆ ನೋಡಿ, ಇವತ್ತು ಕರ್ನಾಟಕ ರಾಜ್ಯದ ಹಿತವನ್ನು ತಾವು ಜಲೆಯುತ್ತಿದ್ದೀರಿ ಎಂಬ ಭಾವನೆ ಜನರಲ್ಲಿ ಎನಿದೆ, ದಯಮಾಡಿ ಆ ಕೆಲಸ ಆಗಬಾರದು. ಯಾವತ್ತೂ ಕೂಡ ನೀವು ದೆಹಲಿ ಕಡೆ ನೋಡದೆ ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವುದರಲ್ಲಿ ನೀವು ಯಾವತ್ತೂ ಕೂಡ ಮುಂದಾಗ ಬೇಕೆಂಬತಕ್ಕದ್ದು ನಮ್ಮ ಬಯಕೆ ಇದ್ದರೂ ಕೂಡ ಆ ವಿಶ್ವಾಸಕ್ಕೆ ಇವತ್ತು ಎಲ್ಲಾ ರೀತಿಯ ಎಲ್ಲಾ ವರ್ಗದ ಜನರು ವಿಶ್ವಾಸ ಇಟ್ಟರೂ ಕೂಡ ಆ ವಿಶ್ವಾಸವನ್ನು ಉಳಿಸಿಕೊಳ್ಳತಕ್ಕ ಕೆಲಸವನ್ನು ತಾವು ಮಾಡಲಿಲ್ಲ. ಅದೇ ರೀತಿ ಕಾವೇರಿ ನದಿ ವಿವಾದದ ಪ್ರಶ್ನೆ ಬಂದ ಸಂದರ್ಭದಲ್ಲಿ ಕೂಡ. ಇವತ್ತು ನೀವು ಒಂದುನೂರು ವರ್ಷಕ್ಕೂ ಹಳೆಯದಾಗಿರತಕ್ಕ ಕಾವೇರಿಯ ಈ ಒಂದು ವಿವಾದ ಎನಿದೆ ಅದನ್ನು ಬಗೆಹರಿಸುವುದರಲ್ಲಿ ನೀವು ನಿಜವಾಗಿ ಕೂಡ ವಿಫಲರಾಗಿದ್ದೀರಿ. ಈಗಾಗಲೇ ಸುಪ್ರೀಂ ಕೋರ್ಟಿನವರು ಆದೇಶ ಕೊಟ್ಟ ಮೇಲೆ ಮದ್ರಾಸ್‌ನವರು ಮತ್ತು ತಾವು ಕುಳಿತುಕೊಂಡು ಇವತ್ತು ಏನೋ ಒಂದು ಕಾರ್ಯಕ್ರಮ ಹಾಕತಕ್ಕ ಪ್ರಯತ್ನದಲ್ಲಿದ್ದೀರಿ. ಅದರಲ್ಲೂ ಕೂಡ ಹೆಚ್ಚು ಪ್ರಗತಿಯನ್ನು ನಾವು ಕಾಣದೆ ಇರುವಂತ ಸಂದರ್ಭದಲ್ಲಿ ನಿಮ್ಮ ಮೇಲೆ ವಿಶ್ವಾಸ ಇಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಸರ್ಕಾರ 18 ತಿಂಗಳ ಕೆಳಗೆ ಅಧಿಕಾರಕ್ಕೆ ಬಂದಂಥ ಸಂದರ್ಭದಲ್ಲಿ ತಾವು ಒಂದು ಮಾತು ಹೇಳಿದ್ದೀರಿ. ನಮ್ಮ ಸರ್ಕಾರ ಹೇಗೆ ಎಂದರೆ ಒಂದು ಟ್ರಾನ್ಸ್‌ಫರೆಂಟ್ ಇದ್ದಂತೆ: ನಮ್ಮಲ್ಲಿ ಯಾವುದೇ ಒಂದು ಅವ್ಯವಹಾರ, ಭ್ರಷ್ಟಾಚಾರ ಯಾವುದೇ ರೀತಿಯಲ್ಲಿ ಆಗಲಿಕ್ಕೆ ಸಾಧ್ಯವಿಲ್ಲ ಎಂಬ ಮಾತು ಹೇಳಿದಿರಿ, ತಾವು ಅಧಿಕಾರಕ್ಕೆ ಬಂದಮೇಲೆ, ಬರುವ ಆದಿ ಭಾಗದಲ್ಲಿ ಆ ರೀತಿಯಾಗಿ ಇದ್ದೀರಿ. ಆದನಂತರ ಬರತಕ್ಕ ದಿನಗಳಲ್ಲಿ ನಿಮ್ಮ ದೃಷ್ಟಿ ಬದಲಾವಣೆಯಾಯಿತು. ನೀವು ಕೂಡ ಇವತ್ತು ವಿಶ್ವಾಸ ಕಳೆದುಕೊಳ್ಳುವ ಮಟ್ಟಕ್ಕೆ ಹೋಗಿ, ವಿರೋಧ ಪಕ್ಷದವರ ಕೊನೆಯ ಅಸ್ತ್ರವಾಗಿರತಕ್ಕ ಅವಿಶ್ವಾಸ ನಿರ್ಣಯವನ್ನು

ಮಂಡನೆ ಮಾಡತಕ್ಕ ಪರಿಸ್ಥಿತಿಗೆ ತಂದಿದ್ದಕ್ಕೆ ನೀವೇ ಕಾರಣ ಎಂಬ ಮಾತನ್ನು ಈ ಒಂದು ಸಂದರ್ಭದಲ್ಲಿ ಹೇಳುತ್ತಾ ಒಂದೇ ಒಂದು ವಿಷಯವನ್ನು ಪ್ರಸ್ತಾಪ ಮಾಡಿ ನನ್ನ ಮಾತು ಮುಗಿಸಿಬಿಡುತ್ತೇನೆ. ಈಗಾಗಲೇ ನಮ್ಮ ನಾಯಕರಾಗಿರತಕ್ಕ ಶ್ರೀ ಖರ್ಗೆಯವರು ಮತ್ತು ಶ್ರೀ ಯಡಿಯೂರಪ್ಪನವರು ಹಾಗೂ ಶ್ರೀಮತಿ ಪ್ರಮೀಳಾರವರು ಮಾತನಾಡತಕ್ಕ ಸಂದರ್ಭದಲ್ಲಿ ಭೂಹಗರಣಕ್ಕೆ ಸಂಬಂಧಪಟ್ಟ ಅನೇಕ ಪ್ರಸ್ತಾವಗಳನ್ನೂ ಕೂಡ ಇವತ್ತು ನಿಮ್ಮ ಮುಂದೆ ಇಟ್ಟಿದ್ದಾರೆ. ಏನಾಗಿದೆ ಎಂದರೆ ನೀವು ಅಧಿಕಾರಕ್ಕೆ ಬಂದನಂತರ ಯಾವ ರೀತಿಯಾಗಿ ನೀವು ಭ್ರಷ್ಟರ ಜೊತೆ ಜಮೀನು ಕಳ್ಳರ ಜೊತೆ ಶಾಮೀಲಾಗಿದ್ದೀರಿ ಎಂಬುದಕ್ಕೆ ಒಂದೇ ಒಂದು ನಿದರ್ಶನ ಕೊಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಚೈತನ್ಯ ಪ್ರಾಪರ್ಟಿಸ್ ಪ್ರೈವೇಟ್ ಲಿಮಿಟೆಡ್ ಎಂಬ ಒಂದು ಸಂಸ್ಥೆ, ಅದರಲ್ಲಿರತಕ್ಕ ಯಾರೋ ಶ್ರೀನಿವಾಸಮೂರ್ತಿ ಎಂಬುವವರು ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಸಂದರ್ಭದಲ್ಲಿ ಮೊನ್ನೆ ದಿವಸ ಬೆಂಗಳೂರಿನಲ್ಲಿ 85 ಎಕರೆಗಿಂತ ಹೆಚ್ಚು ಜಮೀನನ್ನು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕನ್‌ವರ್ಷನ್ ಮಾಡುತ್ತಾರೆ. ಬೆಂಗಳೂರಿನಲ್ಲಿ ಜಮೀನು ಒಂದು ಎಕರೆಗೆ ಎರಡು ಕೋಟಿ ರೂಪಾಯಿಗಳು ಹೆಚ್ಚು ಬೆಲೆ ಬಾಳತಕ್ಕ ಸಂದರ್ಭ ಇರಬೇಕಾದರೆ, ವೈಟ್‌ಫೀಲ್ಡ್ ಹತ್ತಿರದಲ್ಲಿರತಕ್ಕ ಜಾಗದಲ್ಲಿ ಸುಮಾರು 200-300 ಕೋಟಿ ರೂಪಾಯಿಗಳ ವ್ಯಾಲ್ಯು ಇರತಕ್ಕ ಪ್ರಾಪರ್ಟಿಯನ್ನು ಒಂದೇ ತಿಂಗಳಲ್ಲಿ ಇವತ್ತು ಕನ್‌ವರ್ಷನ್ ಮಾಡಿ ಕೊಡುತ್ತಾರೆ ತಾವೇ ಹೇಳಿದಿರಿ ತಮ್ಮ ಸರ್ಕಾರ ಪಾರದರ್ಶಕ ಎಂದು ಅದನ್ನು ನಾನು ಹೆಚ್ಚು ಏನು ಪ್ರಸ್ತಾಪ ಮಾಡಬೇಕಾಗಿಲ್ಲ. ಒಂದೇ ವಿಷಯ ಹೇಳುತ್ತೇನೆ. ಹೂಡಿ ಎಂಬ ಗ್ರಾಮದಲ್ಲಿ ಸರ್ವೆ ನಂಬರ್ 129: 130ರಲ್ಲಿ 5 ಎಕರೆ 18 ಗುಂಟೆ ಕನ್‌ವರ್ಷನ್ ಮಾಡಿದಿರಿ. ಅರ್ಜಿ ಕೊಟ್ಟದ್ದು ಯಾವತ್ತು ಎಂದರೆ 13-10-95 ರಂದು, 14-11-95 ರಂದು ಬಿ.ಡಿ.ಎ ಯವರು ಎನ್.ಓ.ಸಿ. ಕೊಡುತ್ತಾರೆ. 16 ರಂದೇ ಕನ್‌ವರ್ಷನ್ ಆಗುತ್ತದೆ. ಇದು ಒಂದು ಕಡೆಯಾದರೆ, ಸಾಗರ ಮಂಗಲ ಎಂದು ಪಕ್ಕದಲ್ಲಿ ಬರತಕ್ಕ ಗ್ರಾಮದಲ್ಲಿ ಸರ್ವೆ ನಂಬರ್ 70ರಲ್ಲಿ 18 ಎಕರೆ 30 ಗುಂಟೆ ರೆಸಿಡೆನ್ಸಿಯಲ್ ಪರ್ಪಸ್‌ಗೋಸ್ಕರ ಅರ್ಜಿ ಬಂದಿರತಕ್ಕದ್ದು 13-10-95ರಂದು, ಕನ್‌ವರ್ಷನ್ ಆರ್ಡರ್ ಆಗಿರತಕ್ಕದ್ದು 23 - 11-95ರಲ್ಲಿ ಅದೇ ರೀತಿ ನಾಗಮಂಗಲದಲಿ ಸರ್ವೆ ನಂಬರ್ 72:73:74:77:78 ರಲ್ಲಿ 50 ಎಕರೆಗೂ ಹೆಚ್ಚು ಜಮೀನನ್ನು ರೆಸಿಡೆನ್ಸಿಯಲ್ ಪರ್ಪಸ್‌ಗೋಸ್ಕರ ಕನ್‌ವರ್ಷನ್ ಮಾಡುತ್ತಾರೆ. ಈ ಅರ್ಜಿ ಹಾಕಿರ ತಕ್ಕದ್ದು 13ನೇ ತಾರಿಖು, ಕನ್‌ವರ್ಷನ್ ಆಗಿರತಕ್ಕದ್ದು 16ನೇ ತಾರಿಖು, ಮೂರು ದಿನಗಳಲ್ಲಿ ಕನ್‌ವರ್ಷನ್ ಮಾಡತಕ್ಕದ್ದು ಇದೆ. ನಾನು ಒಂದು ಮಾತು ಕೇಳುತ್ತೇನೆ, ಇವತ್ತು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಹೋಗಿ ನೋಡಿ ಸಚಿವರಾಗಿರತಕ್ಕವರು: ಕನ್‌ವರ್ಷನ್‌ಗೋಸ್ಕರ ಎಷ್ಟು ವರ್ಷಗಳಿಂದ ಅರ್ಜಿಗಳು ಬಿದ್ದಿವೆ ಎಂಬುದನ್ನು ನೋಡಿ. ಅದಕ್ಕೆ ಏತಕ್ಕೋಸ್ಕರ ಇಷ್ಟೊಂದು ಮುತುವರ್ಜಿ ವಹಿಸಿ ಮಾಡಿದಿರಿ? ಇನ್ನೊಂದು ಬಹಳ ಮುಖ್ಯವಾಗಿರತಕ್ಕದ್ದು, ಪ್ರಾಪರ್ಟಿ ಯಾರ ಹೆಸರಿನಲ್ಲಿದೆ ಎಂದರೆ, ವೈಕಾಲಿ ಇಂಡಸ್ಟ್ರೀಸ್ ರವರ ಹೆಸರಿನಲ್ಲಿ ಪಹಣಿ ಇದೆ. ನನಗನ್ನಿಸುತ್ತದೆ, ನೀವು ಸೆಕ್ಷನ್ 79(ಬಿ) ಪ್ರಕಾರ ಇವತ್ತು ಅವರು ಪರ್ಮಿಷನ್ ತೆಗೆದುಕಂಡಿದ್ದಾರೆಯೇ ? ಪ್ರೈವೇಟ್ ಲಿಮಿಟೆಡ್‌ಗೆ ಪರ್ಚೇಸ್ ಮಾಡತಕ್ಕ ಅಧಿಕಾರ ಇದೆಯೇ? ಆ ಆಸ್ತಿ ಹೇಗೆ ಬಂತು? ದಯಮಾಡಿ ಅದರ ಬಗ್ಗೆ ಹೇಳುತ್ತೇನೆ, ಇವತ್ತು ಎಲ್ಲಾ ಹಗರಣಗಳು ಒಂದೆ. ಇದರ ಹಿಂದೆ

ಇರತಕ್ಕಪ್ರಭಾವಿಗಳು, ರಾಜಕಾರಣಿಗಳು ಯಾರು ಎಂಬುದರ ಬಗ್ಗೆ ತಾವು ಚಿಂತನೆ ಮಾಡಬೇಕು. ನಾನು ಯಾರ ಮೇಲೆ ಕೂಡ ಆರೋಪ ಮಾಡುವುದಕ್ಕೆ ಹೋಗಿಲ್ಲ. ಇಂಥದ್ದು ಒಂದಲ್ಲ ನೂರಾರು ಹಗರಣಗಳು ಬೆಂಗಳೂರು ಸುತ್ತಮುತ್ತ ತಲೆತ್ತಿ ನಡೆಯುತ್ತಿರಬೇಕಾದರೆ ಇದಕ್ಕೆಲ್ಲಾ ಒಂದು ಪರಿಹಾರ ಕಾಣಬೇಕಾದರೆ ಇವತ್ತು ಕೇವಲ ಯಾವುದೇ ತರಹ ವಿಚಾರಣೆಯಿಂದ ಪ್ರಯೋಜನವಿಲ್ಲ. ಸಿಬಿಐ. ವಿಚಾರಣೆ ಮಾಡಿಸಿದಂತ ಸಂದರ್ಭದಲ್ಲಿ ಇವತ್ತು ಅನೇಕ ಜನ ಭ್ರಷ್ಟರ ಜೊತೆ ತಾವು ಶಾಮೀಲಾಗಿರತಕ್ಕದ್ದು ಈಚೆಗೆ ಬರುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುಕ್ಕೆ ಇಷ್ಟಪಡುತ್ತೇನೆ. ದಯಮಾಡಿ ಈ ಕೆಲಸವನ್ನು ಮೊದಲು ಮಾಡಿಸತಕ್ಕ ಕೆಲಸ ಮಾಡಿ. ತಾವು ಉತ್ತರ ಕೊಡುವ ಸಂದರ್ಭದಲ್ಲಿ ಯಾವ ರೀತಿ ಮಾಡಿದಿರಿ ಎಂಬುದನ್ನು ತಾವು ವಿಚಾರ ಮಾಡಿ ನನಗೆ ಹೇಳಿ. ಇದರ ಜೊತೆಗೆ ನಿಮಗೆ ಅಧಿಕೃತವಾಗಿ ಸಿಕ್ಕಿರತಕ್ಕದ್ದು ಕೇವಲ 75 ಎಕರೆಯಾದರೆ ಆವರಿಸಿಕೊಂಡಿರತಕ್ಕದ್ದು 300 ಎಕರೆಗೂ ಹೆಚ್ಚು ಜಾಗವನ್ನು, ಈಗಾಗಲೇ ಅದಕ್ಕೆ ಪ್ಲಾನ್ ಸ್ಯಾಂಕ್ಷನ್ ಮಾಡಿ ಇವತ್ತು ದೇಶದ ಹೊರಭಾಗ ಸಿಂಗಾಮರದಲ್ಲಿ ಎಲ್ಲಾ ಅಪಾರ್ಟಮೆಂಟ್ಸ್ ಕೂಡ ಸೇಲ್ ಆಗುತ್ತಿವೆ. ನಾನು ಕೇಳುತ್ತೇನೆ, ಇವುತ್ತು ಇದೆಲ್ಲಾ ನಿಮಗೆ ಗೊತ್ತಿಲ್ಲವೆ? ಗೊತ್ತಿದ್ದರು ಕೂಡ ನೀವು ಏತಕ್ಕೋಸ್ಕರ ಸುಮ್ಮನಿದ್ದೀರಿ ಅಥವಾ ನೀವೂ ಇದರಲ್ಲಿ ಶಾಮೀಲಾಗಿದ್ದೀರೇ ಎಂಬ ಮಾತನ್ನು ನಾನು ನೇರವಾಗಿ ಕೇಳಬೇಕಾಗುತ್ತದೆ. ಇದು ಎಲ್ಲಾ ಜನರಿಗೆ ಗೊತ್ತಿರತಕ್ಕ ವಿಷಯ ನೀವು ಜನರ ವಿಶ್ವಾಸವನ್ನು ಕಳೆದುಕೊಂಡಿದ್ದೀರಿ. ಈಗಾಗಲೇ ನೀವು ಜನರ ವಿಶ್ವಾಸವನ್ನು ಕಳೆದುಕೊಂಡಿರುವ ದೃಷ್ಟಿಯಿಂದ ಒಂದು ಕ್ಷಣ ಕೂಡ ನೀವು ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ.

4: 10. ಪಿ.ಎಂ

ಇವತ್ತು ಜನತಾದಳದ ಒಡೆದ ಮನೆಯಾಗಿರತಕ್ಕ ಸಂದರ್ಭದಲ್ಲಿ ಈಗಾಗಲೇ ಎರಡು ಗುಂಪು, ಎರಡು ಬಣ್ಣ ಆಗಿರತಕ್ಕ ಸಂದರ್ಭದಲ್ಲಿ ಆತ್ಮಸಾಕ್ಷಿಯಾಗಿ ನಿಜವಾಗಿಯೂ ಕೂಡ ನಿಮಗೆ ಬಹುಮತ ಇಲ್ಲ. ಬಹುಮತ ಸಾಬೀತುಗೋಳಿಸುವ ಮಟ್ಟಕ್ಕಿಲ್ಲ. ಇವತ್ತು ನಿಜವಾಗಿಯೂ ಕೂಡ ಅವಿಶ್ವಾಸ ನಿರ್ಣಯವನ್ನು ಸಂಖ್ಯಾ ಆಧಾರದಮೇಲೆ ಇವತ್ತು ಉಳಿಯತಕ್ಕದ್ದಾಗಬಹುದು. ಆದರೆ ನೈತಿಕವಾಗಿ ನಿಮಗೆ ಉಳಿಯತಕ್ಕಂಥ ಹಕ್ಕಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನಗೆ ಮಾತನಾಡುವದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಪುಟ್ಟಣ್ಣಯ್ಯನವರು. ತಾವು 15 ನಿಮಿಷದಲ್ಲಿ ಮುಗಿಸಬೇಕು.

+ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : 15 ನಿಮಿಷ ಅಂದರೆ ಮಾತನಾಡುವುದೇ ಇಲ್ಲ.

ಉಪಾಧ್ಯಕ್ಷರು : ಮಾತನಾಡಬೇಕು. ಸಂಕ್ಷಿಪ್ತವಾಗಿ ತಾವು ಮಾತನಾಡಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ): ಸನ್ಮಾನ್ಯ ಉಪಾಧ್ಯಕ್ಷರೆ, ಅವಿಶ್ವಾಸ ನಿರ್ಣಯದ ವಿಚಾರದಲ್ಲಿ ಸರ್ಕಾರ ಉರುಳಬಹುದು. ಇಲ್ಲವೇ ಉಳಿದುಕೊಳ್ಳಬಹುದು. ಪ್ರಜಾಪ್ರಭುತ್ವದಲ್ಲಿ ಇದು ಕೊನೇ ಅಸ್ತ್ರ ಆಗಬಹುದು. ಆದರೆ ಜನರ ವಿಶ್ವಾಸವನ್ನು ಗಳಿಸಿ ಒಂದು ಜವಾಬ್ದಾರಿ ಸರ್ಕಾರ ರಚನೆ ಮಾಡಿ ಒಂದು ವರ್ಷ 3 ತಿಂಗಳಾಯಿತು. ಈ ಅವಿಶ್ವಾಸ ನಿರ್ಣಯದಲ್ಲಿ ಅವರು ಉಳಿದುಕೊಳ್ಳಬಹದು. ಆದರೆ ಎಚ್ಚರಿಕೆಯ ಗಂಟೆ ಎನ್ನುವುದನ್ನು ನೆನವೆಟ್ಟುಕೊಳ್ಳಬೇಕು ಅವರು. ಆಡಳಿತ ಮತ್ತು ರಾಜಕಾರಣದ ಬಗ್ಗೆ ಜನರು ಅತ್ಯಂತ ಗಂಭೀರವಾಗಿ ಆಲೋಚನೆ ಮಾಡುತ್ತಿದ್ದಾರೆ. ಇನ್ನು ಐದು ವರ್ಷಗಳಲ್ಲಿ ರಾಜಕಾರಣಿಗಳನ್ನು ಕಂಡರೆ ಜನ ಯಾವ ಮಟ್ಟಕ್ಕೆ ಮಾತನಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ರಸ್ತೆಯಲ್ಲಿ ಬಡಿಯುತಕ್ಕಂಥ ಒಂದು ವ್ಯವಸ್ಥೆ ಸೃಷ್ಟಿಯಾಗುತ್ತದೆ. ಆದ್ದರಿಂದ ಯಾವುದೇ ಆಡಳಿತ ಹಿಡಿಯುತಕ್ಕಂಥವರು ಅತ್ಯಂತ ಜವಾಬ್ದಾರಿಯಾಗಿ ಕೆಲಸ ಮಾಡಬೇಕು. ಇದುವರೆಗೂ ಬಹಳ ಜನ ಜವಾಬ್ದಾರಸ್ಥರು ಮಾತನಾಡಿದರು ರೆವಿನ್ಯೂ ಇಲಾಖೆ ಬಗ್ಗೆ. ಸುಮಾರು ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ವಿಕೇಂದ್ರೀಕರಣ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿ ಎಲ್ಲಾ ತಹಸೀಲ್ದಾರರನ್ನು ಇ.ಓ.ಸ್ ಮಾಡಿದರು. ಎಲ್ಲರೂ ಪ್ರೊಮೋಷನ್ ಮೇಲೆ ತಹಸೀಲ್ದಾರರು ಆದರು. ಇವತ್ತು ಎಲ್ಲಾ ತಾಲ್ಲುಕು ಕಛೇರಿಯಲ್ಲಿ ತಹಸೀಲ್ದಾರರು ಕೋಮಾ ಸ್ಟೇಜಿನಲ್ಲಿದ್ದಾರೆ. ಇವತ್ತು ನಾವೇ ಯೋಚನೆ ಮಾಡೋಣ. ನ್ಯಾಯಾಲಯದಲ್ಲಿ ಎಲ್ಲಾ ಮೊಕದ್ದಮೆಗಳೂ ಭೂಮಿಗೆ ಸಂಬಂಧಪಟ್ಟವು. 80 ಭಾಗ ಎಲ್ಲಾ ಮೊಕದ್ದಮೆಗಳು ಭೂಮಿಗೆ ಸಂಬಂಧಪಟ್ಟವು. ಏತಕ್ಕೆ ಸೃಷ್ಟಿಯಾಯಿತು? ಕನಿಷ್ಟ ರೈತರ ಬಗ್ಗೆ ಸೌಜನ್ಯದಿಂದ ಇದೇ ಸರ್ಕಾರ ಯೋಚನೆ ಮಾಡಿತ್ತು ಬೋಮ್ಮಾಯಿ ಯವರ ಕಾಲದಲ್ಲಿ. ಒಂದು ಪಾಸ್ ಬುಕ್ ಕೊಡುವುದರ ಮೂಲಕ ರೆವಿನ್ಯೂ ಕಛೇರಿಗೆ ರೈತರು ಹೋಗದ ಹಾಗೆ ಎಲ್ಲಾ ದಾಖಲೆಗಳನ್ನು ಕೊಡತಕ್ಕಂಥ ಸರಳೀಕರಿಸತಕ್ಕಂಥ ಒಂದು ಆಲೋಚನೆ ಮಾಡಿದ್ದೇವೆ ಎಂದು. ಆದರೆ ಏನು ಮಾಡಿತು? ಏನೂ ಇಲ್ಲ ಇಲ್ಲಿ. ಇವತ್ತು ನಾವು ಒಂದು 25 ಜನ ವಿಲೇಜ್ ಅಕೌಂಟೆಂಟ್ ಸಸ್ಪೆಂಡ್ ಮಾಡಿದ್ದೇವೆ, ಒಂದು 50 ಜನ ರೆವಿನ್ಯೂ ಇನ್‌ಸ್ಪೆಕ್ಟರನ್ನು ಮನೆಗೆ ಕಳುಹಿಸಿದ್ದೇವೆ. ಆದ್ದರಿಂದ ಅಲ್ಲಿ ಏನು ಇಲ್ಲ ಅಂತಾನಾ ? ಒಂದು ಸರ್ಕಾರ ಜೀವ ಇದೆ ಎಂದು ಗೊತ್ತಾಗಬೇಕಾದರೆ ತಪ್ಪಿತಸ್ಥರನ್ನು ಸಾರ್ವಜನಿಕರಿಗೆ ಅನಾನುಕೂಲ ಮಾಡುವ ಅಧಿಕಾರಿಗಳಿಗೆ ಶಿಕ್ಷೆ ಮಾಡಿದರೆ ಸರ್ಕಾರಕ್ಕೆ ಜೀವ ಇದೆ ಎಂದು ಒಪ್ಪಿಕೊಳ್ಳಬಹುದು. ಆದರೆ ನೀವು ಉಳಿದುಕೊಳ್ಳಬಹುದು. ಆದರೆ ನಿಮ್ಮ ಆಡಳಿತ ವೈಖರಿ ಏನಾಗಬಹುದು ಎಂಬುದನ್ನು ಯೋಚನೆ ಮಾಡಬೇಕು ಆಸೆಗಳು ಬೇಕಾದಷ್ಟಿವೆ. ಯಾರೋ ಒಂದು ಊರಿನಲ್ಲಿ ಒಂದು ದೇಶದ-ರಾಜ ಇದ್ದನಂತೆ. ಅವನಿಗೆ ಕಿವಿ ಕೇಳುತ್ತಾ ಇರಲಿಲ್ಲವಂತೆ. ಅದು ಯಾರಿಗೂ ಗೊತ್ತಾಗಬಾರದು ಎಂದು ಹೇಳಿ ಬಹಳ ಹುಷಾರಾಗಿದ್ದ. ಒಂದು ಸಾರಿ ದೊಡ್ಡ ರಾಜ ಸಭೆ ನಡೆಯುತ್ತಿತ್ತು. ಸೇನಾಧಿಪತಿಯನ್ನು ಕೇಳಿದನಂತೆ ನಮ್ಮ ಸೇನೆ ಹೇಗಿದೆ ಎಂದು. ಆಗ ಸೇನಾಧಿಪತಿಯು, ''ಮಹಾಪ್ರಬು, ನಮ್ಮ ಸೇನೆಯು ಪರರ ಸೇನೆಯನ್ನು ಕಂಡರೆ ಗಡಗಡನೆ ನಡುಗುವುದು'' ಅಂದ. ಕಿವಿ ಕೇಳಲಿಲ್ಲವಲ್ಲಾ. ನಿನ್ನಂಥ ಸೇನಾಧಿಪತಿಯನ್ನು ಪಡೆದ ನಾನೇ ಧನ್ಯ, ಆಸ್ಥಾನವನ್ನು ಅಲಂಕರಿಸು ಎಂದು ಹೇಳಿದನಂತೆ. ಇನ್ನೊಬ್ಬ ಇದ್ದನಂತೆ. ನಮ್ಮ ಕಂದಾಯ ಇಲಾಖೆ ಯಾವರೀತಿ ಇರುವುದು ಎಂಬುದನ್ನು ವಿವರಿಸುವಂಥವನಾಗು ಎಂದು ಹೇಳಿದ.

ಏನೆಂದು ಹೇಳಲಿ ಮಹಾಪ್ರಭು, ಯಾರು ಯಾರು ಅನುಭವದಲ್ಲಿದ್ದಾರೋ ಅವರನ್ನು ಬಿಟ್ಟು ಬೇರೆಯವರ ಹೆಸರಿಗೆ ಖಾತೆಯನ್ನು ಮಾಡಿಸಿಕೊಂಡು ನಾವೆಲ್ಲರೂ ಸುಖವಾಗಿರುವೆವು ಮಹಾಪ್ರಭು ಎಂದು ಹೇಳಿದ. ಇಂಥ ಕಂದಾಯಾಧಿಕಾರಿಯನ್ನು ಪಡೆದ ನಾನೇ ಧನ್ಯ ಆಸ್ಥಾನವನ್ನು ಅಲಂಕರಿಸು ಎಂದ. ಇನ್ನೊಂದು ವಿಶೇಷ ಸಂಗತಿ ಎಂದು ಹೇಳಿದನಂತೆ. ಏನು ಎಂದ. ನಿಮ್ಮ ಅರಮನೆಯನ್ನೂ ಬೇರೆಯವರ ಹೆಸರಿಗೆ ಖಾತೆ ಮಾಡಿಸಿದ್ದೇನೆ ಮಹಾಪ್ರಭು ಎಂದು ಹೇಳಿದನಂತೆ. ಅದಕ್ಕೂ ಸಂತೋಷಪಟ್ಟ, ಆದ್ದರಿಂದ ತಿಳಿದುಕೊಳ್ಳಬೇಕು ಈ ತರಹ ರೆವಿನ್ಯೂ ಇಲಾಖೆಯನ್ನು ಇಟ್ಟುಕೊಂಡು ಯಾವುದೇ ಬದಲಾವಣೆ ಮಾಡದೆ ಇದ್ದರೆ ಏನೂ ಪ್ರಯೋಜನವಿಲ್ಲ, ಬರೀ ತಹಸೀಲ್ದಾರರೇ ಕೋಮಾ ಸ್ಟೇಜಿನಲ್ಲಿದ್ದರೆ ಪರ್ವಾಗಿಲ್ಲ. ಸರ್ಕಾರವೂ ಕೋಮಾ ಸ್ಟೇಜಿನಲ್ಲಿದೆ ಅದರ ಮೇಲೆ ಗಂಭೀರವಾಗಿ ಆಲೋಚನೆ ಮಾಡಿ ಕ್ರಮ ತೆಗೆದುಕೊಂಡಿದ್ದರೆ ಅದರ ವಿಚಾರವೇ ಬೇರೆ ಇತ್ತು. ಬಹಳ ಜವಾಬ್ದಾರಿಯುತವಾಗಿ ಹೇಳಿದರು ಇವರು. ನಮ್ಮ ಸರ್ಕಾರ ರೈತರ ಸಮಗ್ರ ಸಮಸ್ಯೆಯನ್ನು ಚರ್ಚೆ ಮಾಡಿ ರೈತರ ಪರವಾಗಿ ಮಣ್ಣಿನ ಮಕ್ಕಳಿಗೆ ನ್ಯಾಯ ದೊರಕಿಸಿಕೊಡುತ್ತೇವೆ ಎಂದು ಹೇಳತಕ್ಕ ವಿಷಯದ ಮೇಲೆ ಹೆಚ್ಚು ಅಧಿಕಾರಕ್ಕೆ ಬಂದಿರಿ. ರೈತರ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದಿರಿ. ಈಗ ಏನು ಹೇಳಿದ್ದೀರಿ ಸಾಲದ ಬಗ್ಗೆ? ಪ್ರಕೃತಿ ವಿಕೋಪಕ್ಕೆ ಸಿಕ್ಕಿ ರೈತರು ಕಷ್ಟಕ್ಕೆ ಸಿಕ್ಕಿರುವಾಗ ಬಡ್ಡಿಯನ್ನು ಮನ್ನಾ ಮಾಡಿದ್ದೇವೆ. ಎಂಥ ಸುಳ್ಳು? ಪ್ರಪಂಚದಲ್ಲಿ ಇದಕ್ಕಿಂತ ಸುಳ್ಳು ಇನ್ನು ಯಾರೂ ಹೇಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಪ್ರಕೃತಿ ವಿಕೋಪಕ್ಕೆ ಅಸಲು ಸಿಕ್ಕಿಹಾಕಿಕೊಳ್ಳಿತೋ ಅಥವಾ ಬರೀ ಬಡ್ಡಿ ಸಿಕ್ಕಿಹಾಕಿಕೊಳ್ಳಿತೋ? ಬರೀ ಬಡ್ಡಿ ಸಿಕ್ಕಿಹಾಕಿಕೊಳ್ಳಿತು ಎಂದರೆ ಪರ್ವಾಗಿಲ್ಲ.

ಶ್ರೀ ಎಂ ನಾರಾಯಣಸ್ವಾಮಿ : ಸುಳ್ಳು ಹೇಳುವುದಕ್ಕೆ ಹೊರಟು ರೈತಸಂಘದಿಂದ ಒಬ್ಬರೇ ಒಬ್ಬರು ಬಂದಿದ್ದೀರಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಉದಾಹರಣೆಗೆ ಹೇಳುತ್ತೇನೆ. ಜಾಸ್ತಿ ಬೇಡ, ಒಂದೇ ಒಂದು ಉದಾಹರಣೆ. ಕಬ್ಬು. ಸರ್ಕಾರ ಇರಬೇಕೆ ಎಂಬುದನ್ನು ಮೊದಲು ಯೋಚನೆ ಮಾಡಿ. ನಾಲ್ಕು ಮೀಟಿಂಗ್ ಕರೆದಿದ್ದೀರಿ. ನಾಲ್ಕು ಮೀಟಿಂಗ್‌ನಲ್ಲಿ ಕಬ್ಬಿನ ದರ ನಿಗದಿ ಮಾಡುವುದಕ್ಕೆ ರೈತರಿಗೆ ಬಾಕಿ ಕೊಡುವುದಕ್ಕೆ. ಒಬ್ಬ ಖೋಡೆ, ಅವನು ಬರುವುದು ಬೇಡ ಮಾನ್ಯ ಉಪಾಧ್ಯಕ್ಷರೆ ಅವನ ಪರವಾಗಿ ಒಬ್ಬ ಫೀಲ್ಡ್‌ಮನ್. ಖೋಡೇಸ್ ಕಂಪನಿಗೆ ಸಂಬಂಧಪಟ್ಟ ಒಬ್ಬ ಕ್ಷೇತ್ರಾಭಿವೃದ್ಧಿ ಅಧಿಕಾರಿ ನಾಲ್ಕು ಮೀಟಿಂಗ್‌ನಲ್ಲಿ, ರೈತರಿಗೆ ಕೊಡಬೇಕಾಗಿರತಕ್ಕಂಥ 12 ಕೋಟಿ ರೂಪಾಯಿ ಬಾಕಿಗೆ ಒಬ್ಬ ಫೀಲ್ಡ್‌ಮೆನ್ ಕಳುಹಿಸಿದರೆ ಸರ್ಕಾರಕ್ಕೆ ಜೀವ ಇದೆ ಎಂದು ಒಪ್ಪಿಕೊಳ್ಳಬಹುದೇ? ಒಂದು ಸರ್ಕಾರವನ್ನೆ ಒಬ್ಬ ಖೋಡೇ ನಿರ್ಲಕ್ಷ್ಯ ಮಾಡುತ್ತಾನೆ ಅಂದರೆ ನೀವೇ ಹೇಳಬೇಕು ಸರ್ಕಾರಕ್ಕೆ ಜೀವ ಇದೆಯೋ ಅಥವಾ ಇಲ್ಲವೇ ಎಂದು. ನಾವು ಸೇರಿದ್ದೇವೆ. ನಮಗೂ ಅವಮಾನ ಇದು. ನೀವೊಬ್ಬರೇ ಅಲ್ಲ. ನಾವೂ ಇದ್ದೇವೆ. ನೋಡಿದೆ ನಾಲ್ಕು ಮೀಟಿಂಗ್‌ನಲ್ಲಿ. ಒಬ್ಬ ರೈತ ತನ್ನ ಕಬ್ಬನ್ನು ಸರಬರಾಜು ಮಾಡಿ 8 ತಿಂಗಳಾಗಿದೆ. ಅವನಿಗೆ ಕೊಡಬೇಕಾಗಿರುವ ಬಾಕಿಯನ್ನು ಕೊಡಲಿಲ್ಲ ಅಂದರೆ ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಮಾನ್ಯ ಸಕ್ಕರೆ ಮಂತ್ರಿಗಳು

ಹೇಳಿದರು ಅವನನ್ನು ಆರೆಸ್ಟ್ ಮಾಡುತ್ತೇವೆ ಎಂದು. ಅವನನ್ನು ಅರೆಸ್ಟ್ ಮಾಡಿ ಒಳಗೆ ಹಾಕುವುದಿದ್ದರೆ ಇನ್ನೂ ಮೂರು ತಿಂಗಳು ಲೇಟಾಗಿ ಕೊಡಿ. ನಮಗೆ ಪೇಮೆಂಟ್. ಅವನನ್ನು ಆರೆಸ್ಟೂ ಮಾಡಲಿಲ್ಲ ನಮ್ಮ ಕಬ್ಬು ಹಾರ್ವೆಸ್ಟೂ ಇಲ್ಲ. ಪೇಮೆಂಟೂ ಇಲ್ಲ. ಆದ್ದರಿಂದ ಮಾನ್ಯ ಉಪಾಧ್ಯಕ್ಷರೆ, ಅದೇನು ಅವನ ಬಗ್ಗೆ ನಿಮಗೆ ಅಷ್ಟೊಂದು ಹೆದರಿಕೆ? ಏಕೆ ಹೆದರಿಕೊಳ್ಳುತ್ತೀರಿ? ಆಖೋಡೇಸ್‌ಗೆ ಹೆದರಿಕೊಳ್ಳುವಂಥದ್ದು ಏನಿದೆ? ಯಾರು ಆ ಖೋಡೇಸ್? ಆದೇ ಕೊಶ್ಚನ್ ಮಾರ್ಕ್. ಕೊಳ್ಳೆಗಾಲದಲ್ಲಿ ವೀರಪ್ಪನ್ ಒಬ್ಬ ಆನೆ ಕಳ್ಳ; ಇವನು ಕಬ್ಬು ಕಳ್ಳ. ಗೊತ್ತಾಯಿತ್ತೆ? ವೀರಪ್ಪನ್ ಇದ್ದಾನಲ್ಲಾ ಅವನು ಆನೆ ಕಳ್ಳ! ಇವನು ಕಬ್ಬು ಕಳ್ಳ! ಅಲ್ಲದೇ ಇನ್ಯಾರೂ ಅಲ್ಲ ಅವನು. ಅವನನ್ನು ಹುಡುಕಬೇಕಾಗುತ್ತದೆ ಮಾನ್ಯ ಸಿಂಧ್ಯಾರವರು ಬಹಳ ಜವಾಬ್ದಾರಿ ಕ್ಷೇತ್ರದಿಂದ ಬಹಳ ಕಷ್ಟಕರವಾದ ಪ್ರದೇಶದಿಂದ ಜನರ ಪರವಾಗಿ ಬಂದಿದ್ದಾರೆ. ಕಬ್ಬ ಬೆಳೆಯುವುದರಲ್ಲಿ ಪ್ರಪಂಚಕ್ಕೇ ಮೊದಲನೆಯವರು ನಾವು. ಆದರೆ ಬಾಕಿ ಬಹಳ ಫ್ಯಾಕ್ಟರಿಗಳವರು ಕೊಡಬೇಕು. ಕಾನೂನು ಪ್ರಕಾರ ಬಡ್ಡಿ ಸಮೇತ ಕೊಡಿಸಿಕೊಡಿ ಎಂದು ಸರ್ಕಾರಕ್ಕೆ ನಾಲ್ಕು ಸಾರಿ ಮನವಿ ಮಾಡಿದ್ದಾರೆ. ಇನ್ನೂ ಬೆಲೆ ನಿಗದಿ ಮಾಡಿಲ್ಲ. ಬಹಳ ಅದ್ಭುತ ಇದು. ಇನ್ನೂ ಖಂದಸಾರಿಯವರನ್ನು ಕರೆದು ಮೀಟಿಂಗ್ ಮಾಡಿಲ್ಲ ನೀವು. ರೈತರ ಸಮಗ್ರ ಸಮಸ್ಯೆಯನ್ನು ಬಗೆಹರಿಸುವಂಥ ಆಲೋಚನೆ ಮಾಡಿ ರೈತರ ಹೆಸರಿನಲ್ಲಿ ಬಂದಂಥ ಸರ್ಕಾರ, ಇವತ್ತು ಎಷ್ಟು ಜನ ರೈತರು ಬೆಂಕಿ ಇಟ್ಟಿದ್ದಾರೆ ಕಬ್ಬಿಗೆ, ಈ ವರ್ಷವೂ ಎಷ್ಟೊಂದು ಅನಾನುಕೂಲ ಅನುಭವಿಸುತ್ತಾ ಇದ್ದಾರೆ, ಎಷ್ಟೊಂದು ಜವಾಬ್ದಾರಿಯುತವಾಗಿ ನೀವು ಜೂನ್ ತಿಂಗಳಲ್ಲಿ ಕೆಲಸ ಮಾಡಬೇಕಾಗಿತ್ತು ಆದರೆ ಈಗಲೂ ಮಾಡಲಿಲ್ಲ ಯಾವ ಖಂದಸಾರಿಯವರನ್ನೂ ನೀವು ಕರೆದಿಲ್ಲ ಯಾವುದೇ ಖಂದಸಾರಿಯವರನ್ನು ಕರೆದು ರೈತರ ಸಮಸ್ಯೆಯನ್ನು ಚರ್ಚೆ ಮಾಡಲ್ಲಿಲ. ಕನಿಷ್ಠ ಬೆಲೆ ನಿಗದಿ ಮಾಡಲಿಲ್ಲ. ಇವತ್ತು ಲೆವಿ ದರ 130 ರೂಪಾಯಿ ಜಾಸ್ತಿಯಾಗಿದೆ. ಮಾರುಕಟ್ಟೆಯಲ್ಲಿ 50 ರೂಪಾಯಿ ಜಾಸ್ತಿಯಾಗಿದೆ. ಯಾವುದೇ ಬೆಲೆ ನಿಗದಿ ಮಾಡಲಿಲ್ಲ. ಈ ದೇಶದ ರೈತರು ಕಬ್ಬು ಬೆಳೆಯುವುದರಲ್ಲಿ ಮೊದಲಿಗರು. ಬೆಲೆ ನಿಗದಿ ಮಾಡುವುದಕ್ಕಾಗಲಿಲ್ಲ ನಿಮ್ಮ ಕೈಯಲ್ಲಿ. ಎರಡನೆಯದು ರೇಷ್ಮೆ. ಪ್ರಪಂಚಕ್ಕೆ ಹೇಳುತ್ತೇವೆ ರೇಷ್ಮೆ ಬೆಳೆಯುವುದು. ಕನಿಷ್ಠ ಬೆಲೆ. ನಾನು ಹೇಳುವುದು ರೇಷ್ಮೆ ಸೀರೆಗೆ 5 ಸಾವಿರ 6 ಸಾವಿರ ಬೆಲೆ ನಿಗದಿ ಮಾಡಿರಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪುಟ್ಟಣ್ಣಯ್ಯನವರೇ, ಈಗ ಕಬ್ಬು ಬೆಳೆಯತಕ್ಕದ್ದು ಎಲ್ಲಿ ಬರುತ್ತದೆ? ಏಕೆಂದರೆ ಈಗಾಗಲೇ ಕಾವೇರಿ ನೀರಿಗೆ ಏನು ಇಲ್ಲಿಯವರೆಗೆ ಒಂದು ರೀತಿ ಸೌಹಾರ್ದ ರೀತಿಯಿಂದ ನಾವು ಬಗೆಹರಿಸಿಕೊಳ್ಳುತ್ತೇವೆ ಎನ್ನುವಂಥದಿತ್ತು ಈಗ ಪುನಃ ಇವತ್ತು ಪ್ರಧಾನಮಂತ್ರಿಗಳು ಚೀಫ್ ಜಸ್ಟೀಸ್ ಆಫ್ ಇಂಡಿಯಾ ಮಾನ್ಯ ಅಹಮದಿ ಅವರಿಗೆ ಒಂದು ಪತ್ರವನ್ನು ಬರೆದು ಛೇರ್ಮನ್ ಅಪಾಯಿಂಟ್ ಮಾಡಿ ಎಂದು ಹೇಳಿದ್ದಾರೆ. ಅಂದರೆ ಯಾವುದು ಆಗಬಾರದಿತ್ತು ಅದು ಆಗುತ್ತಿದೆ. ಈ ಸದನದಲ್ಲಿ ನಾವೆಲ್ಲರೂ ಕೂಡ ಮಾನ್ಯ ಪ್ರಧಾನಮಂತ್ರಿಗಳಿಗೆ ಹಿಂದೆ ಕೂಡ ಕೇಳಿಕೊಂಡಿದ್ದೇವೆ. ಏಕೆಂದರೆ ಈಗ ಚಿತ್ತೋಘೋಷ್ ಮುಖರ್ಜಿ ಅವರು ಟ್ರಿಬ್ಯುನಲ್ ಛೇರ್ಮನ್ ಹುದ್ದೆಗೆ ರಿಸೈನ್ ಕೊಟ್ಟಮೇಲೆ ಈಗ ಹೊಸದಾಗಿ ಕಾವೇರಿ ಟ್ರಿಬ್ಯುನಲ್‌ಗೆ ಛೇರ್ಮನ್ ಮಾಡತಕ್ಕದ್ದು, ನೀವು ಹೊಸ ಛೇರ್ಮನ್ ಅಪಾಯಿಂಟ್‌ಮೆಂಟ್

ಮಾಡಬೇಡಿಯೆಂದು ನಾವು ಹೋದಸಲ ಡಿಬೆಟ್‌ನಲ್ಲೂ ಕೂಡ ಕೇಳಿಕೊಂಡಿದ್ದೇವೆ, ಮತ್ತು ದೆಹಲಿಗೆ ಹೋದಾಗ ಕೂಡ ಅವರು ರಾಜೀನಾಮೆಯನ್ನು ಕೊಟ್ಟಮೇಲೆ ಹೊಸ ಛೇರ್ಮನ್ ನೀವು ಅಪಾಯಿಂಟ್‌ಮೆಂಟ್ ಮಾಡಬೇಡಿ ಎಂದೂ ಕೂಡ ನಾವು ಹೇಳಿದ್ದೇವೆ. ಆದರೆ ಇವತ್ತು ಅವರು ಒಂದು ಸ್ಪಷ್ಟವಾಗಿ ಹೇಳಿದ್ದಾರೆ, ಮಾನ್ಯ ಪುಟ್ಟಣ್ಣಯ್ಯನವರು ಕಬ್ಬಿನ ವಿಚಾರ ಎತ್ತಿದಕ್ಕಾಗಿ ನಾನು ಹೇಳುತ್ತೇನೆ. ಮುಂದೆ ನೀವು ಕಬ್ಬನ್ನು ಬೆಳೆಸುವಹಾಗೆ ಇಲ್ಲ, ನೀರು ತೆಗೆದುಕೊಳ್ಳತಕ್ಕ ಪ್ರಸ್ನೆ ಕೂಡ ಉದ್ಭವವಾಗುವುದಿಲ್ಲ. ತಮಿಳುನಾಡು ಅಸೆಂಬ್ಲಿಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಏನೆಂದರೆ, ಈ ರೀತಿ ಇದೆ.

"The Prime Minister Sri. H.D. Devegowdaji has written to the Supreme Court Chief Justice. A.M. Ahmadi to appoint a new Chairman for the Cauvery Water Dispute Tribunal following the resignation of Mr. Justice Chittosh Ghosh Mukherjee from the post in the June last. The Tamilnadu Chief Minister Mr. M. Karunanidhi told the State Assembly today replying to a special call attention motion moved by leaders of the opposition Mr. Balakrishnan and 4 others. Mr. M. Karunanidhi disclosed that the Prime Minister informed him about the development during his visit to the city on Saturday last, Admitting that the resignation had created an embarrasing situation to Tamilnadu. He, however, said that the delay in appointing new Chairman was due to the fact that the Supreme Court Chief Justice had not returned from his foreign tour. The Prime Minister told that there was no need for this House to pass a resolution demanding the immediate appointment of a new Chairman as he had already written a letter, he added."

ಅಂದರೆ ನಮಗೆ ಗೊತ್ತಾಯಿತಲ್ಲಾ ಸೀಕ್ರೇಟ್ ಏನು ತಮಿಳುನಾಡಿಗೆ ಹೋದಾಗ ನಡೆದಿತ್ತು ಎಂದು ಹೇಳುತ್ತಿದ್ದರಲ್ಲಾ ಇದೇ. ನೀವು 5 ಟಿ ಎಂ ಸಿ ನೀರನ್ನು ಬಿಟ್ಟು ಬಿಡಿ ಅಥವಾ ನೀವು ನಮಗೇನು ಬೇಕು ಅದನ್ನು ಬಿಟ್ಟು ಬಿಡಿ ನಾವೆಲ್ಲರೂ ಕೂಡಿ ಮಾತುಕತೆ ಮಾಡುತ್ತೇವೆಂದು ಹೇಳಿದರಲ್ಲಾ, ಬಹುಶಃ ಇವತ್ತು ಆ ಸೀಕ್ರೇಟ್ ಡಿಸ್‌ಕ್ಲೋಸ್ ಆಗಿದೆ. ಇವರು ಅವರು ಮಾತುಕತೆ ಆಡಿ ಕಾವೇರಿ ಟ್ರಿಬ್ಯುನಲ್‌ಗೆ ಹೊಸದಾಗಿ ಛೇರ್ಮನ್ ಅಪಾಯಿಂಟ್‌ಮೆಂಟ್ ಮಾಡಲಿಕ್ಕೆ ಇವರು ಒಪ್ಪಿಗೆಯನ್ನು ಕೊಟ್ಟು ಬಂದಿದ್ದಾರೆನ್ನುವ ಮಾತನ್ನು ನಾನು ಇವತ್ತಿನ ದಿವಸ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅದಕ್ಕಾಗಿ ಇವತ್ತು ತಮಿಳುನಾಡಿನ ಅಸೆಂಬ್ಲಿಯಲ್ಲಿ ಕರುಣಾನಿಧಿಯವರು

ಸ್ಪಷ್ಟಪಡಿಸಿದ್ದಾರೆ. ಅಲ್ಲಿ ರೆಸಲ್ಯೂಷನ್ ಪಾಸ್ ಮಾಡಬೇಕೆಂದು ಹೇಳಿ ಬಾಲಕೃಷ್ಣನ್‌ರವರು ಕೇಳಿದಾಗ, ಕರುಣಾನಿಧಿಯವರು ಹೇಳಿದ್ದಾರೆ ಇದರ ಅವಶ್ಯಕತೆಯಿಲ್ಲ ನಾನು ಪ್ರಧಾನಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಪ್ರಧಾನಮಂತ್ರಿಗಳು ಈಗಾಗಲೇ ಚೀಫ್ ಜಸ್ಟೀಸ್ ಆಫ್ ಸುಪ್ರೀಂಕೋರ್ಟ್ ಅವರಿಗೆ ಬರೆದಿದ್ದಾರೆ, ಆದಕ್ಕಾಗಿ ನೀವು ಇದನ್ನು ಇಲ್ಲಿ ತೆಗೆದುಕೊಳ್ಳತಕ್ಕ ಅವಶ್ಯಕತೆಯಿಲ್ಲ ನಾನು ಎಲ್ಲವನ್ನೂ ಕೂಡ ಸೆಟಲ್ ಮಾಡಿಕೊಂಡಿದ್ದೇನೆ, ಮಾತನಾಡಿದ್ದೇನೆ ಎನ್ನತಕ್ಕ ಮಾತನ್ನು ಅವರು ಅಲ್ಲಿ ಹೇಳಿದ್ದಾರೆ. ಈ ಹಿಂದೆ ಏನು ಮಾತುಕತೆ ನಡೆದಿದೆ ಎನ್ನುವುದಕ್ಕೆ ಇದೊಂದು ಕಾರಣ. ಇದು ಈಗ ಬಂದಂತಹ ಸುದ್ದಿ. ತಮಿಳುನಾಡಿನ ಅಸೆಂಬ್ಲಿಯಲ್ಲಿ ಕೊಟ್ಟಂತಹ ಸುದ್ದಿ ಅಂದರೆ ಇದರರ್ಥ ಏನೆಂದರೆ, ಇದು ಒಂದೇ ಅಲ್ಲ, ಇನ್ನೊಂದು ಸುದ್ದಿ ಏನೆಂದರೆ, ಲೋಕಸಭೆಯಲ್ಲಿ ಜೀರೋ ಅವರ್‌ನಲ್ಲಿ ಅಲಮಟ್ಟಿಯ ಬಗ್ಗೆ ದೊಡ್ಡ ಗಲಾಟೆಯಾಗಿದೆ. ಲೋಕಸಭೆಯಲ್ಲಿ ಆಂಧ್ರ ಪ್ರದೇಶದ ಪಾರ್ಲಿಮೆಂಟ್ ಸದಸ್ಯರಿಗೂ ಕರ್ನಾಟಕದ ಪಾರ್ಲಿಮೆಂಟ್ ಸದಸ್ಯರಿಗೂ ಅಲ್ಲಿ ಘರ್ಷಣೆಯಾಗಿದೆ. ಹೊಡೆದಾಡುವ ಪರಿಸ್ಥಿತಿ ಬಂದಿದೆ. ಲೋಕಸಭೆ ಅಡ್ಜರ್ನ್ ಆಗತಕ್ಕ ಪರಿಸ್ಥಿತಿ ಬಂತು. ಆದರೆ ಅವರ ಹತ್ತಿರ ಲಿಟರೇಚರ್ ಇಲ್ಲ ಮತ್ತೆ ನೀವು ಅದೇ ಹೇಳಿಕೊಳ್ಳುತ್ತಾ ಹೋದರೆ, ಅರೆ ಇವತ್ತು ಅಲ್ಲಿ ಮಾತನಾಡಬೇಕಾದರೂ ಕೂಡ ಅಲಮಟ್ಟಿ ಮತ್ತು ಕೃಷ್ಣಾದ ಬಗ್ಗೆ ಸಾಯಂಕಾಲದವರೆಗೆ ಕೊಡುತ್ತೇನೆ ಅಂದಿರಿ. ಆದರೆ ಇಷ್ಟು ಅಲ್ಲಿ ಏನಾಯಿತು, ಅದು ಈಗಾಗಲೇ ಅಲ್ಲಿ ರೈಸ್ ಆಗಿ ಹೋಯಿತು. ಅಂದರೆ ನೀವು ಅದಕ್ಕೆ ಇಷ್ಟು ದಿವಸ ಕಾಯಬೇಕಾಗಿತ್ತಾ? ಕೇಳಿದಾಗ ಕೊಡಬೇಕಾ? ಅದಕ್ಕಾಗಿ ಈ ರೀತಿಯಾಗಿ ಈ ಸರ್ಕಾರ ಹಿಂದೊಂದು ಅಗ್ರಿಮೆಂಟ್ ಮುಂದೊಂದು ಅಗ್ರಿಮೆಂಟ್ ಮಾಡಿಕೊಂಡು ನಾವು ಈ ರಾಜ್ಯದ ಹಿತವನ್ನು ಬಲಿಕೊಡುವುದಿಲ್ಲ. , ನಾವು ಒತ್ತಡಕ್ಕೂ ಮಣಿಯುವುದಿಲ್ಲವೆಂದು ಹೇಳುತ್ತಾರೆ ಒಳಗಿಂದೊಳಗೆ ಈ ಕೆಲಸ ಮಾಡುತ್ತಾರೆ. ಇವತ್ತು ಏಕೆ ಡಿಸ್‌ಕ್ಲೋಸ್ ಮಾಡಿದರು ? ಪ್ರಧಾನಮಂತ್ರಿಗಳು ಏನು ಹೇಳಿದರು ಅಂದರೆ, ನಾವು ಯಾವುದೂ ಮಾತುಕತೆ ಆಡಿಲ್ಲ ಅಲ್ಲಿ ಏನೂ ಕೂಡ ನಡೆದಿಲ್ಲವೆಂದು ಮಾನ್ಯ ನಾಗೇಗೌಡರು ಕೂಡ ಹೇಳಿದರು, ಚೀಫ್‌ಮಿನಿಷ್ಟರ್ ಕೂಡ ಹೇಳಿದರು. ಎಲ್ಲರೂ ಹೇಳಿದರು. ಆದರೆ ಇವತ್ತು ಕರುಣಾನಿಧಿಯವರು ಹೇಳುತ್ತಾರೆ ಪ್ರಧಾನಮಂತ್ರಿಗಳು ಒಪ್ಪಿಕೊಂಡಿದ್ದಾರೆ ಎಂದು ಅದು ಒಂದು ಕಡೆ, ನಾವು ಅಪಾಯಿಂಟ್ ಮಾಡುತ್ತೇವೆಂದು ಹೇಳಿ ಅವರು ಹೇಳಿದ್ದಾರೆನ್ನತಕ್ಕ ಮಾತನ್ನು ಇವತ್ತು ಹೌಸ್‌ನಲ್ಲಿ ಡಿಸ್‌ಕ್ಲೋಸ್ ಮಾಡಿದ್ದಾರೆ. ಹೀಗೆ ನಮ್ಮನ್ನು ಕತ್ತಲಿನಲ್ಲಿಡಬಾರದು. ಆದ್ದರಿಂದ ನೀವು ಇಲ್ಲಿ ಏನು ಹೇಳಿದ್ದೀರಿ ಅದಕ್ಕೆ ತದ್ವಿರುದ್ಧವಾಗಿ ಪುನಃ ಇವತ್ತು ಈ ಸ್ಟೇಟ್‌ಮೆಂಟ್ ಬಂದಿದೆ. ದಯವಿಟ್ಟು ಅದನ್ನು ಸ್ಪಷ್ಟಪಡಿಸಬೇಕು. ಇಲ್ಲದಿದ್ದರೆ ಇದೇ ರೀತಿಯಾಗಿ ನೀವು ಪದೇ ಪದೇ ಈ ಸದನವನ್ನು ತಪ್ಪು ದಾರಿಗೆ ಎಳೆಯತಕ್ಕದ್ದು, ಸುಳ್ಳುಮಾಹಿತಿಯನ್ನು ಕೊಡತಕ್ಕದ್ದು ನೀವು ಮಾಡಿದರೆ ನಿಜವಾಗಿಯೂ ಈ ರಾಜ್ಯದ ಜನರಿಗೆ ಮೋಸ ಮಾಡಿದಹಾಗೆ ಆಗುತ್ತದೆ. ಇಲ್ಲಿ ನಾವೇನು ಮೋಷನ್ ಮಾಡಿದ್ದೇವೆ ಇದು ಅಕ್ಷರಶಃ ಪಾಸ್ ಮಾಡಲಿಕ್ಕೆ ನೀವೆಲ್ಲರೂ ಕೂಡ ಇದಕ್ಕೆ ಸಪೋರ್ಟ್ ಮಾಡಬೇಕೆಂದು ಪುನಃ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಉಪಾಧ್ಯಕ್ಷರೆ ಇನ್ನೊಂದು ಮಾತು ಸೇರಿಕೊಂಡಿದೆ. ತಮಿಳುನಾಡು ಅಸೆಂಬ್ಲಿಯಲ್ಲಿ:

"Replying to Mr.B.R.Sundaram, AIALMK, Mr. M.Karunanidhi said, the proposed talks between him and the Karnataka Chief Minister, J.H.Patel would be held very soon. The talks had to be postponed due to the fact that the Patel Government is busy facing a no-confidence Motion in the Karnataka Assembly"

ಯಾರು ಇಲ್ಲಿ ಮುಖ್ಯಮಂತ್ರಿಗಳಾಗಿದ್ದವರು ಇವತ್ತಿನ ದಿವಸ ಪ್ರಧಾನಿಯಾಗಿದ್ದಾರೆ ನ್ಯಾಷನ್ ವಾಟರ್ ಪಾಲಿಸಿ ಫ್ರೇಮ್ ಗೈಡ್‌ಲೈನ್ಸ್ ಆಗಬೇಕೆಂದು, ಯಾವ ಟ್ರಿಬ್ಯುನಲ್ ಮುಂದೆ ಹೋಗಬಾರರೆಂದು ಇಲ್ಲಿ ಹೋರಾಟ ಮಾಡಿಕೊಂಡು ಬಂದರೋ, ಅವರೆಲ್ಲ ತಮಿಳುನಾಡಿನ ಒತ್ತಡಕ್ಕೆ ಮಣಿದು ಕಾವೇರಿ ಟ್ರಿಬ್ಯುನಲಿಗೆ ಛೇರ್ಮನ್ ಅಪಾಯಿಂಟ್‌ಮೆಂಟ್ ಮಾಡಲಿಕ್ಕೆ ಇವರೇ ಪತ್ರ ಬರೆಯುವಂಥಹದ್ದು ಅಲ್ಲಿ ಆಂಧ್ರದ ಒತ್ತಡಕ್ಕೆ ಮಣಿದು ತಜ್ಞರನ್ನು ಕಳುಹಿಸುವಂತಹದ್ದು ಯಾವಕೆಲಸ? ನಾನು ಹೇಳುತ್ತೇನೆ ನೋ ಕಾನ್ಫಿಡೆನ್ಸ್ ಮೋಷನ್‌ಗೆ ನಾಳೆ ಉತ್ತರ ಕೊಡಲಿ. ಇಲ್ಲಿ ಇನ್ನು ಅನೇಕ ವಿಷಯಗಳು ಚರ್ಚೆಯಾಗಬೇಕಾಗಿದೆ. ಈಗ ಅಧಿವೇಶನ ಮುಗಿದರೆ ಇನ್ನು ಅಧಿವೇಶನ ಸೇರಬೇಕಾದರೆ ಆರು ತಿಂಗಳು ಬೇಕಾಗುತ್ತದೆ. ಅಷ್ಟು ಹೊತ್ತಿಗೆ ನಮ್ಮ ರಾಜ್ಯ ಸರ್ವನಾಶವಾಗುತ್ತದೆ, ಸರ್ಕಾರ ಇರುವುದು ಹೋಗುವುದು ಮುಖ್ಯವಲ್ಲ. ನಾವು ಅಧಿಕಾರದಲ್ಲಿ ಇರುವುದು ಹೋಗುವುದು ಮುಖ್ಯವಲ್ಲ. ನಿಮ್ಮ ಸರ್ಕಾರವನ್ನು ಉಳಿಸಿ ಕೊಳ್ಳುವುದಕ್ಕೋಸ್ಕರ ತಮಿಳುನಾಡಿನವರ ಜೊತೆಗೆ ಆಂಧ್ರ ಪ್ರದೇಶದ ಸರ್ಕಾರದ ಜೊತೆಗೆ ನೀವು ಕೈ ಜೋಡಿಸಿಕೊಂಡಿರುವಾಗ ನಮಗೇನು ದ್ರೋಹವಾಗಬಹುದು ಎನ್ನುವ ಮೂಲ ಉದ್ದೇಶವನ್ನು ಇಟ್ಟು ಕೊಂಡು ನಾವು ನೋ ಕಾನ್ಫಿಡೆನ್ಸ್ ಮೋಷನ್ ಮೂವ್ ಮಾಡಿದೆವೋ, ಇದು ಸತ್ಯವೆನ್ನುವುದು ಇಲ್ಲಿ ಸಾಬೀತಾಗುತ್ತಿದೆ. ಲೋಕಸಭೆಯಲ್ಲಿ ಅವರ ಒತ್ತಡಕ್ಕೆ ಮಣಿದು ಈ ಮಾತನ್ನು ಆಡುತ್ತಾರೆ, ಜೆ.ಹೆಚ್. ಪಟೇಲರು ಮತ್ತು ಕರುಣಾನಿಧಿಯವರು ಮಾತುಕತೆ ಆಡುವವರು ಇದ್ದಾರೆ. ಏನು ಮಾತುಕತೆ ಮಾಡುತ್ತೀರಿ? ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಅಪ್ಲೈಮಾಡದೆ ಏನು ಮಾತನಾಡುತ್ತೀರಿ? ಆಲಮಟ್ಟಿಯ ಬಗ್ಗೆ ನೀವೇನು ಮಾತನಾಡುತ್ತೀರಿ? ಸ್ವಾಮಿ ಇದೊಂದು ದೊಡ್ಡ ದ್ರೋಹವಾಗುತ್ತಿದೆ, ಸಂಚು ನಡೆಯುತ್ತಿದೆ. ಕೇಂದ್ರಸರ್ಕಾರವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಕನ್ನಡಿಗರಿಗೆ ಸರ್ವನಾಶ ಆಗುವುದು ಇದೆ. ದಯಮಾಡಿ ಇದಕ್ಕೆ ನಾಳೆ ಉತ್ತರ ಕೊಡಲಿ. ಅನೇಕ ವಿಷಯಗಳ ಬಗ್ಗೆ ನಾವು ಬೆಳಕು ಚೆಲ್ಲಬೇಕಾಗಿದೆ. ಇನ್ನು ಆರು ತಿಂಗಳ ನಂತರ ನಾವು ಇಲ್ಲಿ ಸೇರುತ್ತೇವೆ. ತಾವೂ ಸಹ ಇದನ್ನು ಒಪ್ಪುತ್ತೀರಿ ಎಂದು ತಿಳಿದುಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಅವರಿಗೆ ಮನವರಿಕೆ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ದಯಮಾಡಿ ಯಾರು ಇರಬೇಕು ಯಾರು ಹೋಗಬೇಕು ಎಂದು ಅಲ್ಲ. ಕನ್ನಡನಾಡಿನ ಜನ ಬದುಕಬೇಕಾಗಿದೆ. ನಮ್ಮ ಸ್ವಾರ್ಥ

ಕ್ಕೋಸ್ಕರ ಕುರ್ಚಿಗೋಸ್ಕರ ಜನತೆಗೆ ದ್ರೋಹ ಮಾಡುವುದು ಅಕ್ಷಮ್ಯ ಅಪರಾಧ ಅತ್ಯಂತ ಉನ್ನತಸ್ಥಾನದಲ್ಲಿರುವವರು ಇಂಥ ಕೆಲಸ ಮಾಡುತ್ತಾರೆಂದರೆ ಆಶ್ಚರ್ಯವಾಗುತ್ತದೆ. ತಮಿಳುನಾಡು ಮತ್ತು ಆಂಧ್ರಪ್ರದೇಶದ ಬೆಂಬಲಕ್ಕೋಸ್ಕರ, ಅವರ ಕುರ್ಚಿ ಉಳಿಸಿ ಕೊಳ್ಳುವುದಕ್ಕೋಸ್ಕರ ನಮ್ಮ ಪ್ರಧಾನಿಯವರಿಂದಲೇ ನಮ್ಮ ರಾಜ್ಯಕ್ಕೆ ಧಕ್ಕೆ ಬರುವುದು ಇದೆ ಎನ್ನುವ ಮಾತುನ್ನು ಹೇಳಿದ್ದೆ, ಪ್ರತಿನಿತ್ಯ ಅದು ಸತ್ಯವಾಗುತ್ತಿದೆ. ಹಾಗೆಯೇ ಬೆಳವಣಿಗೆಯಾಗುತ್ತಿದೆ ದಯಮಾಡಿ ಇದರ ಬಗ್ಗೆ ವಿವರವಾದ ಚರ್ಚೆಯನ್ನು ನಾಳೆ ಮಾಡಬೇಕಾಗುತ್ತದೆ. ನೋ ಕಾನ್ಫಿಡೆನ್ಸ್ ಮೋಷನ್‌ಗೆ ಉತ್ತರವನ್ನು ಮುಖ್ಯಮಂತ್ರಿಗಳು ನಾಳೆ ಕೊಡಲಿ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಪ್ರಾಮುಖ್ಯವಾದ ವಿಚಾರ. ಇದು ಅಷ್ಟು ಸುಲಭವಾಗಿ ಬಿಡುವಂತಹದ್ದು ಅಲ್ಲ. ಎರಡು ದಿವಸ ಸಭೆಯನ್ನು ಮುಂದುವರಿಸಬೇಕು. ಈ ಬಗ್ಗೆ ಚರ್ಚೆಯಾಗಲೇಬೇಕು. ಸಮಗ್ರವಾದ ಚರ್ಚೆಯಾಗಲೇಬೇಕು ಚರ್ಚೆಯಾಗದೆ ಸಭೆಯನ್ನು ಮುಂದುವರಿಸುವುದಕ್ಕಾಗುವುದಿಲ್ಲ. ಇದು ಕರ್ನಾಟಕದ ಹಿತದ ಪ್ರಶ್ನೆ. ದಯಮಾಡಿ ತಾವು ಸಭೆಯನ್ನು ನಾಳೆ ಮತ್ತು ಇನ್ನೆರಡು ದಿವಸ ಮುಂದುವರಿಸಬೇಕು. ಇದರ ಬಗ್ಗೆ ಸಮಗ್ರವಾದ ಚರ್ಚೆಯಾಗಲೇಬೇಕು.

ಉಪಾಧ್ಯಕ್ಷರು: ಮಾನ್ಯ ಪುಟ್ಟಣ್ಣಯ್ಯನವರು ತಾವು ತಮ್ಮ ಚರ್ಚೆಯನ್ನು ಮುಂದುವರಿಸಬೇಕು ಮಾನ್ಯ ವಾಟಾಳ್‌ನಾಗರಾಜ್‌ರವರು ತಾವು ದಯಮಾಡಿ ಸಹಕರಿಸಬೇಕು. ಮಾನ್ಯ ಪುಟ್ಟಣ್ಣಯ್ಯನವರು ಅವರ ಮಾತು ಮುಂದುವರಿಸಲಿ.

ಶ್ರೀ ವಾಟಾಳ್‌ನಾಗರಾಜ್ : ಕರ್ನಾಟಕ ರಾಜ್ಯದ ಹಿತ ಪ್ರಧಾನಮಂತ್ರಿಗಳಿಂದಲೇ ಬಲಿಯಾಗುತ್ತಿದೆ. ಬೇರೆಯವರು ಯಾರಿಂದಲೂ ಅಲ್ಲ, ಕೇಳುವವರು ಹೇಳುವವರು ಯಾರು ಇಲ್ಲದೆ ಅವರು ರಾಜ್ಯದ ಹಿತವನ್ನು ಬಲಿ ಕೊಡುತ್ತಿದ್ದಾರೆ. ಇದರ ಬಗ್ಗೆ ಚರ್ಚೆಯಾಗಬೇಕು.

ಉಪಾಧ್ಯಕ್ಷರು : ಮಾನ್ಯ ಪುಟ್ಟಣ್ಣಯ್ಯನವರು ದಯಮಾಡಿ ತಮ್ಮ ಮಾತನ್ನು ಮುಂದುವರಿಸಬೇಕು. ಪುಟ್ಟಣ್ಣಯ್ಯನವರೇ, ತಾವು ದಯಮಾಡಿ ಮಾತನಾಡಿ. ಮಾನ್ಯ ವಾಟಾಳ್‌ನಾಗರಾಜ್‌ರವರೇ, ತಮ್ಮಲ್ಲಿ ನಾನು ವಿನಂತಿ ಮಾಡುತ್ತೇನೆ; ಮಾನ್ಯ ಪುಟ್ಟಣ್ಣಯ್ಯನವರು ಮಾತನಾಡಿ ಮುಗಿಸಲಿ,

ಶ್ರೀ ವಾಟಾಳ್‌ನಾಗರಾಜ್ : ನಾನು ತಮಗೆ ಮನವಿ ಸಲ್ಲಿಸಿದ್ದೆ, ಇವತ್ತು ಏನಾಗುತ್ತದೆಂದರೆ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ಮುಗಿದ ನಂತರ ಅವರು ಉತ್ತರ ಕೊಡುತ್ತಾರೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯಸದಸ್ಯರು ತಮ್ಮ ಭಾಷಣವನ್ನೆಲ್ಲಾ ಮುಗಿಸಲಿ. ನಾವು ಉತ್ತರ ಕೊಡುವಂತಹ ಕಾಲದಲ್ಲಿ ಎಲ್ಲಾ ವಿಚಾರಗಳಿಗೆ ಉತ್ತರ ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಅವಿಶ್ವಾಸ ನಿರ್ಣಯದ ಬಗ್ಗೆ ಉತ್ತರ ಕೊಡುವುದಿಲ್ಲ, ಈಗ ಇದರ ಬಗ್ಗೆ ಮಾನ್ಯ ಖರ್ಗೆಯವರು ಎತ್ತಿರತಕ್ಕ ವಿಚಾರದಲ್ಲಿ ಇಲ್ಲಿ ಚರ್ಚೆಯಾಗಬೇಕು ಸ್ವಾಮಿ. ಇದರ ಬಗ್ಗೆ ಸಮಗ್ರವಾದ ಚರ್ಚೆಯಾಗಬೇಕು.

ಉಪಾಧ್ಯಕ್ಷರು : ಇಲ್ಲ, ಈಗ ಆಗುವುದಿಲ್ಲ. ಮಾನ್ಯ ಪುಟ್ಟಣ್ಣಯ್ಯನವರು ಮಾತನಾಡಲಿ.

ಶ್ರೀ ವಾಟಾಳ್‌ನಾಗರಾಜ್: ಕಾವೇರಿ ನ್ಯಾಯಮಂಡಳಿಗೆ ನ್ಯಾಯಾಧೀಶರನ್ನು ನೇಮಕ ಮಾಡಿರುವ ಬಗ್ಗೆ ಚರ್ಚೆಯಾಗಬೇಕು.

ಉಪಾಧ್ಯಕ್ಷರು : ಇಲ್ಲ ಇಲ್ಲ, ಪುಟ್ಟಣ್ಣಯ್ಯನವರು ಮಾತನಾಡಲಿ,

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲ ಇದರ ಬಗ್ಗೆ ಚರ್ಚೆಯಾಗಲೇಬೇಕು. ನಿಮ್ಮನ್ನು ನಾವು ಬಿಡೋದಿಲ್ಲ , ನೀವು ಮನೆಗೆ ಹೋಗಬೇಕು ನಾಡಿನ ಜನರಿಗೆ ನ್ಯಾಯ ಸಿಗಬೇಕು, ರಾಜೀನಾಮೆಯನ್ನು ಕೊಟ್ಟುಹೋಗಿ ಎಂದು ಹೇಳುತ್ತೇವೆ.

(ಗೊಂದಲ)

(ಹಲವಾರು ಮಂದಿ ಬಿ.ಜೆ.ಪಿ. ಸದಸ್ಯರು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಉಪಾಧ್ಯಕ್ಷರು : ಪುಟ್ಟಣ್ಣಯ್ಯನವರು ಮಾತನಾಡಲಿ. ಈಗ ಪುಟ್ಟಣ್ಣಯ್ಯ ನವರು......

(ಗೊಂದಲ)
(ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡುತ್ತಿದ್ದರು)

ಉಪಾಧ್ಯಕ್ಷರು : ನೀವು - ಈ ರೀತಿ ಮಾಡುವುದು ಸರಿಯಲ್ಲ. ನೀವು ಈ ರೀತಿ ಮಾಡಬಾರದು. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಹೀಗಾದರೆ ಈ ಸಭೆಯನ್ನು ಯಾವ ರೀತಿ ನಡೆಸುವುದು ? ಪುಟ್ಟಣ್ಣಯ್ಯನವರೇ. ತಾವು ಮಾತನಾಡಿ...

(ಗೊಂದಲ)

ಶ್ರೀ ವಿ. ಸೋಮಣ್ಣ : ಇವರೇನು ತಮ್ಮನ್ನು ಹೆದರಿಸುತ್ತಿದ್ದಾರೆನು ?

ಉಪಾಧ್ಯಕ್ಷರು : ಇಲ್ಲ , ಇಲ್ಲ, ಯಾರೂ ಇಲ್ಲಿ ಹೆದರುವುದಕ್ಕೆ ಬಂದಿಲ್ಲ. ಯಾರಿಗೂ ಹೆದರುವಂಥ ಅವಶ್ಯಕತೆಯೂ ಇಲ್ಲ. ಯಾರಿಗೆ ಯಾರು ಹೆದರುವಂಥ ಅವಶ್ಯಕತೆ ಇಲ್ಲ. ಎಲ್ಲರೂ

ಎಲ್ಲರೂ ಕುಳಿತುಕೊಳ್ಳಿ. ಪುಟ್ಟಣ್ಣಯ್ಯನವರೇ, ತಾವು ಮಾತನಾಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಅವಿಶ್ವಾಸ ನಿರ್ಣಯ ಮಂಡನೆ ಮಾಡುವುದರ ಮೂಲಕ, ಬಹಳ ಸಂತೋಷ, ಎಲ್ಲರನ್ನೂ ನೋಡುವಂಥ ಒಂದು ಸೌಭಾಗ್ಯ ಬಂದಿದೆ ಎಂದು ಕಾಣುತ್ತದೆ. 45 ಜನ ಮಂತ್ರಿಗಳು.....

ಮಾನ್ಯ ಸದಸ್ಯರು : ಎಲ್ಲರೂ ಇಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಈ ರೀತಿ ನಿಮ್ಮನ್ನೆಲ್ಲಾ ನೋಡಿ ಈ ರೀತಿ ಕೂಗಾಟ ನೋಡಿದ ಮೇಲೆ ಒಂಭತ್ತು ತಿಂಗಳಾಗಿತ್ತು. ಅವಧಿವರೆಗೂ ಹೀಗೇ ಇರಬೇಕು ಎನ್ನುವುದಕ್ಕಿಂತಲೂ ನಿಮ್ಮ ಅವಧಿ ವರೆಗೂ ಉತ್ತಮವಾದ ಕೆಲಸ ಮಾಡಿ. ಸುಮ್ಮನೆ ನಾವು ಐದು ವರ್ಷ ಇದ್ದೆವು, ನಾವೆಲ್ಲರೂ ಕೋಮಾ ಸ್ಟೇಜೀನಲ್ಲಿ ಇದ್ದೆವು ಎಂದು ಹೇಳುವುದಲ್ಲ. ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವರದೇಗೌಡರು ರೇಷ್ಮೆ, ಮಂತ್ರಿಯಾಗಿದ್ದಾರೆ. ರೈತರ ಬಗ್ಗೆ ಬಹಳ ಗಂಭೀರವಾಗಿ ಯೋಚನೆ ಮಾಡುತ್ತೇನೆ ಎಂದು ಹೇಳಿ ಅಧಿಕಾರಕ್ಕೆ ಬಂದಂಥ ನೀವು ಏನು ಮಾಡುತ್ತೀರೋ, ಏನು ಬಿಡುತ್ತೀರೋ ಅದು ಬೇರೆ ಪ್ರಶ್ನೆ. ಕನಿಷ್ಠ ಸೌಜನ್ಯಕ್ಕೆ ರೇಷ್ಮೆ ಬೆಳೆಯತಕ್ಕಂಥ ರೈತರನ್ನು ಕರೆದು, ನಿಮ್ಮ ನೋವು ಏನು, ನಿಮ್ಮ ಕಷ್ಟ ಏನು, ಯಾವ ಮಟ್ಟಕ್ಕೆ ನೀವು ರೇಷ್ಮೆ ಬೆಳೆಯುತ್ತಿದ್ದೀರಿ, ಏನು ಮಾಡಿದರೆ ನಿಮಗೆ ಅನುಕೂಲವಾಗುತ್ತದೆ ಎಂದು ಒಂದು ದಿವಸವಾದರೂ ಮಾತನಾಡಿದ್ದೀರಾ ? ಹೌದು, ಇನ್ನೂ ಮೂರು ವರ್ಷ ಟೈಮ್ ಇದೆ. ಅಷ್ಟರೊಳಗೆ ರೇಷ್ಮೆ ಬೆಳೆಯುವ ರೈತರು ಸತ್ತು ಹೋಗಿರುತ್ತಾರೆ, ಆಮೇಲೆ ಬೇಕಾದರೆ ಮಾತನಾಡಬಹುದು. ಟೈಮ್ ಇದೆಯಂತೆ. ಯಾವುದಾದರೂ ಒಂದು ಕಾಲದಲ್ಲಿ ಮಾತನಾಡಬಹುದು. ಅದರಲ್ಲೇನೂ ತಪ್ಪಿಲ್ಲ. ಐವತ್ತು ವರ್ಷಗಳಿಂದ ಮಾತನಾಡಿಲ್ಲ ಹೊಸದಾಗಿ ಏನು ಮಾತನಾಡಬೇಕು ? ಅವರು ಹೇಳುತ್ತಿರುವುದೂ ನ್ಯಾಯವೇ. ನೀವು ಏನು ಮಾಡುತ್ತೀರೋ, ಮಾಡುವುದಿಲ್ಲವೋ ಅದು ಎರಡನೇಯ ಪ್ರಶ್ನೆ. ನೀವು ಕನಿಷ್ಟ ಸೌಜನ್ಯಕ್ಕಾದರೂ ಅವರನ್ನು ಕರೆಯಿಸಿ ಮಾತನಾಡಿದ್ದೀರೋ? ರೇಷ್ಮೆ ಬೆಳೆಯತಕ್ಕ ಯಾವುದೇ ರೈತನಿಗೆ ಇವತ್ತು ಕಣ್ಣಲ್ಲಿ ರಕ್ತ ಬರುತ್ತಿದೆ. ಪ್ರಪಂಚದಲ್ಲೇ ನಾವು ರೇಷ್ಮೆ ಬೆಳೆಯುವುದರಲ್ಲಿ ಎರಡನೆಯವರು. ಚೆನಾದೇಶದಿಂದ ರೇಷ್ಮೆಯನ್ನು ತರಿಸಿಕೊಳ್ಳುವುದರ ಮೂಲಕ ನಮ್ಮ ರೇಷ್ಮೆ ಬೆಳೆಗಾರರು ನಾಶವಾಗುತ್ತಿದ್ದಾರೆ. ಜಾಸ್ತಿ ಏನೂ ಮಾಡುವುದು ಬೇಡ, ಕನಿಷ್ಟ ಬೆಲೆ ಕೊಡಿ. 150 ರೂಪಾಯಿಗಿಂತ ಕಡಿಮೆ ಹರಾಜಿನಲ್ಲಿ ಕೂಗಕೂಡದು. ಬೈವೋಲ್ಟಿನ್‌ನಲ್ಲಿ 250 ರೂಪಾಯಿಗಿಂತ ಕಡಿಮೆ ಕೂಗಕೂಡದು ಎಂದು ಮಾಡಿ. ಈ ದೇಶದಲ್ಲಿ ಎಲ್ಲಾ ಪದಾರ್ಥಗಳಿಗೂ ಕನಿಷ್ಟ ಬೆಲೆಯನ್ನು ನಿಗದಿ ಮಾಡತಕ್ಕಂಥ ಕಾನೂನು ಮಾಡುತ್ತಾರೆ. ಆದರೆ ರಾಜ್ಯಸರ್ಕಾರ ತನ್ನ ವ್ಯಾಪ್ತಿಯಲ್ಲಿ ಬರತಕ್ಕಂಥ ಕನಿಷ್ಟ ಕಾನೂನನ್ನು ಮಾಡದೇ ಇರತಕ್ಕಂಥಾದ್ದು ಸರಿಯೇ? ನೀವು ರೈತರ ಪರ ಎಂದು ಹೇಳುತ್ತೀರಿ. ನೀವು ರೇಷ್ಮೆಬೆಳೆಗಾರರ ಚಿಂತನೆ ಮಾಡುತ್ತೀರಿ. ಆಮೇಲೆ ನಿಮ್ಮದೇ ಬೆಂಗಳೂರಿನಲ್ಲಿ 5 ಗುಂಟೆ, 4 ಗುಂಟೆ ಯಲ್ಲಿ ವೀಳ್ಯದೆಲೆ ಬೆಳೆಯತಕ್ಕಂಥವರು. ಅವರು ಯಾರು ? ಎಲ್ಲಾ ತೋಟವನ್ನು ಗುತ್ತಿಗೆ ಮಾಡಿಕೊಂಡು, ಕೂಲಿ

ಮಾಡತಕ್ಕಂಥವರು. ನಾವೇನು ಕೃಷಿಕಾರ್ಮಿಕರು ಎಂದು ಹೇಳುತ್ತೇವೆ. ಅಂಥವರು. ಇಡೀ ಪ್ರಪಂಚದಲ್ಲಿ ವೀಳ್ಯದಲೆ ವಿಲೇವಾರಿಯಾಗುತ್ತದೆ; ಬೆಂಗಳೂರು ಸುತ್ತ ಮುತ್ತ. ವೀಳ್ಯದೆಲೆ ಬೆಳೆಯತಕ್ಕಂಥ ರೈತರಿಗೆ, ಎಷ್ಟೊಂದು ದರ ಇವತ್ತು ಕಡಿಮೆ ಇದೆ ಗೊತ್ತೇನು ? ಜೊತೆಗೆ ಲೇಬರ್ ಓರಿಯಂಟೆಡ್ ಜಾಬ್ ಜಾಸ್ತಿ. ಮನೆಯವರೆಲ್ಲರೂ ದುಡಿದರೂ ಐದು ಗುಂಟೆಯಲ್ಲಿ ವತ್ತು ವೀಳ್ಯದೆಲೆ ಬೆಳೆಯುವುದು ಕಷ್ಟ. ಏನಾದರೂ ಮಾಡಿ. ಏನು ವೀಳ್ಯದೆಲೆ ಬೆಳೆಯುವವನ ಬಾಳು ಹೇಗಾಗಿದೆ ಎಂದು ನೀವು ಯೋಚನೆ ಮಾಡಿದ್ದೀರೋ? ಒಂದು ದಿವಸವೂ ಯೋಚನೆ ಮಾಡಿಲ್ಲ. ಆಯಿತು, ಇನ್ನು ಹತ್ತಿ. ಇದೇ ಸದನದಲ್ಲಿ ನಾನು ಮಾತನಾಡಿದ್ದೇನೆ. ಇವತ್ತು ಹತ್ತಿ ಬೇಳೆಯತಕ್ಕಂಥ ಯಾವ ರೈತನ ಹತ್ತಿರವೂ ಹತ್ತಿ ಇಲ್ಲ. ಖಾಸಗಿ ಮಾಲೀಕರು ಹತ್ತಿ ಸ್ಟಾಕ್ ಇಟ್ಟುಕೊಂಡಿದ್ದಾರೆ. ನಾಲ್ಕುನೂರು ರೂಪಾಯಿ ಜಾಸ್ತಿಯಾಗಿದೆ. ಬೆಲೆ ಯಾರಿಗೆ ಸಿಗುತ್ತದೆ? ಇವತ್ತು ಕಾಟನ್ ಬಟ್ಟೆ ಪ್ರತಿವರ್ಷ ಮೀಟರ್‌ಗೆ 10 ರೂಪಾಯಿ, 15 ರೂಪಾಯಿ, ಜಾಸ್ತಿಯಾಗುತ್ತದೆ. ಹತ್ತಿಬೆಳೆಗೆ ಸರಿಯಾದ ಮಾರ್ಕೆಟ್ ಇಲ್ಲ. ಹತ್ತಿಬೆಲೆ ನಿಗದಿ ಮಾಡುವ ಸಾಮರ್ಥ್ಯ ಇಲ್ಲ. ರೈತರ ದರವಾಗಿ ಇನ್ನೇನು ಕೆಲಸ ಮಾಡುತ್ತಾರೆ? ರೈತರ ಪರವಾಗಿ ಏನನ್ನೂ ಕೆಲಸ ಮಾಡಲಿಲ್ಲ. ಹೋಗಲಿ, ಸರ್ಕಾರದಲ್ಲಿ ರೈತರ ಪರವಾಗಿ ಕೆಲಸ ಮಾಡದೇ ಇದ್ದರೆ, ಕನಿಷ್ಟ ಆ ರೈತರನ್ನು ಕರೆದು ಸೌಜನ್ಯದಿಂದ ಮಾತನಾಡಿಲ್ಲ. ಮಾನ್ಯ ಬೈರೇಗೌಡರು ಕೃಷಿ ಬಗ್ಗೆ ಬಹಳ ಆಸಕ್ತಿಯಿಂದ, ಬಹಳ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂಬ ಹೋರಾಟದ ಮೂಲಕ, ಆಧುನಿಕ ಬೇಸಾಯ ಪದ್ಧತಿ, ಆಧುನಿಕ ಕೃಷಿಯನ್ನು ವಿಸ್ತರಣೆ ಮಾಡುತ್ತೇವೆ ಎಂದು ಹೇಳಿ, ಹೊಸಹೊಸ ವಿಧಾನದ ಕೃಷಿಯನ್ನು ಪರಿಚಯ ಮಾಡುವುದರ ಮೂಲಕ, ಭೂಮಿತಿ ಕಾಯಿದೆಯನ್ನು ರದ್ದುಮಾಡುವುದರ ಮೂಲಕ, ರೈತರಿಗೆ ಹೂ ಬೆಳೆಸುವುದು, ಸೀಗಡಿ ಸಂಕುವುದು, ಆಮೇಲೆ ಹಣ್ಣು ಬೆಳೆಸುವುದು, ಅಂದರೆ ನಮಗೆ ಉತ್ಪಾದನೆ ಎಷ್ಟು ಬೇಕು ? ಲ್ಯಾಂಡ್ ಸೀಲಿಂಗ್ ಲಿಮಿಟ್ ತೆಗೆದ ಮೇಲೆ ಇಡೀ ಬೆಂಗಳೂರು ಸುತ್ತಮುತ್ತ ರೈತರನ್ನು ಎಲ್ಲಾ ಒಕ್ಕಲೆಬ್ಬಿಸತಕ್ಕಂಥ ಕೆಲಸ ನಡೆಯುತ್ತಿದೆ. ಎಲ್ಲಿ ಪಟ್ಟಣ ಇದೆ, ಆ ಪಟ್ಟಣದ ಸುತ್ತಮುತ್ತ ಎಲ್ಲಾ ಒಕ್ಕಲೆಬ್ಬಿಸಿ ಈಗಾಗಲೇ ಅವರು ಕೃಷಿಕಾರ್ಮಿಕ ರಾಗತಕ್ಕಂಥ ಪರಿಸ್ಥಿತಿ ಬಂದಿದೆ. ಹೊಸ ಕೃಷಿ ನೀತಿಯನ್ನು ಪರಿಚಯ ಮಾಡುವುದರ ಮೂಲಕ ಈ ರಾಜ್ಯದಲ್ಲಿ ಆಹಾರ ಉತ್ಪಾದನೆ ಕಡಿಮೆಯಾಗುತ್ತದೆ. ಇವತ್ತು ನಮಗೆ 86-90 ಲಕ್ಷ ಟನ್ ಆಹಾರ ಬೇಕು. ಎರಡು ಸಾವಿರ ಇಸವಿ ಹೊತ್ತಿಗೆ ನಮಗೆ 150 ಲಕ್ಷ ಟನ್ ಆಹಾರ ಬೇಕಾಗಿದೆ. ಆದರೆ ಇದರ ಬಗ್ಗೆ ಯಾವುದೇ ಆಲೋಚನೆ ಮಾಡಿಲ್ಲ. ಭೂಮಿಯನ್ನು ತೆಗೆದುಕೊಂಡು ಕೈಗಾರೀಕರಣ ಮಾಡುತ್ತಿದ್ದಾರೆ. ವಿದೇಶೀಕರಣ ಮಾಡುತ್ತಿದ್ದಾರೆ. ನಾವು ಒಳ್ಳೊಳ್ಳೆ ಹಣ್ಣುಗಳನ್ನು ಬೆಳೆದು, ಒಳ್ಳೊಳ್ಳೆ ಹೂವುಗಳನ್ನು ಬೆಳೆದು, ಒಳ್ಳೆ ಸೀಗಡಿಯನ್ನು ಬೆಳೆದು ವಿದೇಶಗಳಿಗೆ ಕೊಡುವುದು. ಇವತ್ತು ನಮ್ಮ ಜೀವನಾವಶ್ಯಕತೆಗೆ ಬೇಕಾದಂಥ ಯಾವುದೇ ದೇಶ, ಯಾವುದೇ ರಾಜ್ಯ ಆಗಬಹುದು. ತಾವು ಕನಿಷ್ಟ ತಮ್ಮ ಆಹಾರವನ್ನು ಉತ್ಪಾದನೆ ಮಾಡದೇ ಇರತಕ್ಕಂಥ ಸಾಮರ್ಥ್ಯವನ್ನು ಬೆಳೆಸಿಕೊಂಡು ಹೋದರೆ ಆ ರಾಜ್ಯ ಆರ್ಥಿಕವಾಗಿ ನಷ್ಟವಾಗುತ್ತದೆ. ಆದ್ದರಿಂದ ಸರ್ಕಾರ ಯಾವುದೇ ರೈತನ ಬಗ್ಗೆ ಯೋಚನೆ ಮಾಡಬೇಕು. ತಾವು ಅಧಿಕಾರಕ್ಕೆ ಬಂದಮೇಲೆ ಅಂಗಡಿಗಳು ಇಂಥಾದ್ದೇ ಕಡೆಯಲ್ಲಿ ಇರಬೇಕು ಎಂದು ರೂಲ್ಸ್ ಏನಿತ್ತು, ಅದು ಆಗಿಲ್ಲ. ಎಲ್ಲಾ ಪೆಟ್ಟಿಗೆ ಅಂಗಡಿಗಳಲ್ಲೂ

ಮಾರುತ್ತಾರೆ. ಇವತ್ತು ಎಲ್ಲಾ ಪೆಟ್ಟಿಗೆ ಅಂಗಡಿ ಎಲ್ಲಾ ಚಿಲ್ಲರೆ ಅಂಗಡಿ, ಯಾವ ಜ್ಯೂಸ್ ಅಂಗಡಿಯಲ್ಲಿ ಇದು ಸಿಗುತ್ತೆ ಯಾವುದೇ ನಿಯಂತ್ರಣ ಇಲ್ಲ, ಯಾವುದೇ ತಡೆ ಇಲ್ಲ. ಹೇಳುವವರಿಲ್ಲ, ಕೇಳುವವರಿಲ್ಲ. ನೀವು ಮೊನ್ನೆ ದಿವಸ ನಿಮ್ಮ ಜೊತೆಯಲ್ಲೇ ಮಾತನಾಡಿದಾಗ ನಮಗೆ ತೆರಿಗೆ ಎಂಟುನೂರು ಚಿಲ್ಲರೆ ಕೋಟಿ ಬರುತ್ತದೆ ಎಂದಿರಿ. ಬಹಳ ಸಿಂಪಲ್ ಮ್ಯಾಥಮ್ಯಾಟಿಕ್ಸ್, ಬಹಳ ದೊಡ್ಡದಾಗಿ ಇದಕ್ಕೆ ಎಕನಾಮಿಕ್ಸ್ ಓದಬೇಕಾದ ಅವಶ್ಯಕತೆ ಇಲ್ಲ. ಐದು ಕೋಟಿಯಲ್ಲಿ ಇವತ್ತು ಕನಿಷ್ಟ ಒಂದು ಕೋಟಿ ಜನ ಕುಡಿಯುತ್ತಾರೆ. 50 ರೂಪಾಯಿ ರೇಟಿನಲ್ಲಿ ಸುಮಾರು 18 ರಿಂದ 20 ಸಾವಿರ ಕೋಟಿ ರೂಪಾಯಿ ಒಂದು ವರ್ಷಕ್ಕೆ ಟರ್ನ್‌ಓವರ್ ಆಯಿತು. ಕನಿಷ್ಟ 10 ಪರ್ಸೆಂಟ್ ತೆರಿಗೆ ಎಂದರೆ 2 ಸಾವಿರ ಕೋಟಿ ಮೇಲೆ ಬರಬೇಕು. ಎಷ್ಟುಮಟ್ಟಕ್ಕೆ ಕಳ್ಳತನ ಆಗುತ್ತಿದೆ. ಆಮೇಲೆ ಏನು ಹೇಳಿದಿರಿ ? ಹಂತಹಂತವಾಗಿ ಮದ್ಯಪಾನ ನಿಷೇಧ ಮಾಡುತ್ತೇನೆ ಎಂದು ಹೇಳಿದಿರಿ. ಹಂತಹಂತವಾಗಿ ತೆರಿಗೆ ಕಳ್ಳತನ ನಡೆಯುತ್ತಿದೆ. ಯಾವುದೇ ಮದ್ಯಪಾನ ನಿಷೇಧ ಮಾಡತಕ್ಕಂಥ ಕಾರ್ಯಕ್ರಮ ಇಲ್ಲ. ಹೋಗಲಿ ಒಂದು ಕಾರ್ಯಕ್ರಮವಾದರೂ ಮಾಡಿ. ಇದುವರೆಗೆ ಆಲೋಚನೆ ಮಾಡಿದ್ದೀರಿ, ಮದ್ಯಪಾನ ನಿಷೆಧ ಮಾಡುವುದಕ್ಕೆ ಒಂದು ಆಜ್ಞೆಯಾದರೂ ಹೊರಡಿಸಿ. ನೀವು ಅದನ್ನೂ ಮಾಡಲಿಲ್ಲ. ಯಾವುದೇ ಹಳ್ಳಿಯಲ್ಲಿ, ಪಟ್ಟಣದಲ್ಲಿ ನೂರಕ್ಕೆ ಐವತ್ತು ಜನ ಬೇಡ ಎಂದು ಹೇಳಿದರೆ, ಈಗ ನೂರಕ್ಕೆ 51 ಜನ ಓಟು ಕೊಟ್ಟಿರುವುದಕ್ಕೆ ತಾನೇ ನೀವು ಇವತ್ತು ಅಧಿಕಾರಕ್ಕೆ ಬಂದಿರುವುದು ? ನೂರಕ್ಕೆ ಐವತ್ತೊಂದು ಜನ ಬೇಡ ಎಂದರೆ ಅದನ್ನು ನೀವು ನಿಷೇಧ ಮಾಡಬೇಕು. ಜನಾಭಿಪ್ರಾಯ ತಾನೇ ಮುಖ್ಯವಾಗಿ ಬೇಕಾಗಿರುವುದು ? ಪ್ರಜಾಪ್ರಭುತ್ವದಲ್ಲಿ ಯಾವುದೇ ವಿಚಾರಕ್ಕೆ ಜನಭಿಪ್ರಾಯ ಬಹಳ ಮುಖ್ಯ. ಆದರೆ ಆ ದಿಕ್ಕಿನಲ್ಲಿ ಕೆಲಸ ಮಾಡಲಿಲ್ಲ. ನೀವು ಏನು ಹೇಳಿದಿರಿ ? ಮುಂದಿನ ವರ್ಷಕ್ಕೆ ಎಂದು. ಇನ್ನು ಆರು ತಿಂಗಳಲ್ಲಿ ನಮ್ಮ. ಸರ್ಕಾರ ಪರಿಶೀಲನೆ ಮಾಡುತ್ತದೆ, ಇನ್ನು ಆರು ತಿಂಗಳಲ್ಲಿ ನಮ್ಮ ಸರ್ಕಾರ ಆಲೋಚನೆ ಮಾಡುತ್ತದೆ ಎಂದರೆ ಇದು ಪಾನ ನಿಷೇಧವೇ? ಸ್ಯಾಕ್ರಿಫೈಸ್ ಮಾಡುವುದಕ್ಕೆ ಜನರನ್ನೂ ಕೂಡ ಕರೆಯಿರಿ. ಪಾನನಿಷೇಧದಿಂದ ಆಗತಕ್ಕಂಥ ತೆರಿಗೆ ಲಾಸ್ ಬಗ್ಗೆ ಹೆಣ್ಣುಮಕ್ಕಳಿಗೆ ಹೇಳಿ ಅವರು ಹಣವನ್ನು ಸಂಗ್ರಹಿಸಿ ಕೊಡುತ್ತಾರೆ. ಕರ್ನಾಟಕದ ಹೆಣ್ಣುಮಕ್ಕಳಿಗೆ ಈ ತೆರಿಗೆ ಹಣ ಇಷ್ಟು ನಷ್ಟ ಆಗುತ್ತದೆ ಎಂದು ಹೇಳಿದರೆ, ಇಡೀ ಕರ್ನಾಟಕದ ಎರಡು ಕೋಟಿ ಹೆಣ್ಣುಮಕ್ಕಳು, ನಿಮ್ಮ ತೆರಿಗೆ ಹಣವನ್ನು ಅವರೇ ಕೊಡುತ್ತಾರೆ. ಅವರಿಗೆ ಬೇಕಾಗಿರತಕ್ಕಂಥಾದ್ದು ಪಾನನಿಷೇಧದ ಮೂಲಕ ಇಡೀ ಮನೆ, ಕುಟುಂಬ, ಇಡೀ ಗ್ರಾಮದ ಕಲ್ಯಾಣ ಆಗಬೇಕು ಎಂಬುದು. ಇದರ ಬಗ್ಗೆ ಸಾಂಸ್ಕೃತಿಕವಾಗಿ ಏನು ? ಯೋಚನೆ ಮಾಡಿದ್ದೀರಿ? ಸುಮ್ಮನೆ ಪಾನನಿಷೇಧ ಮಾಡುತ್ತೇವೆ ಎಂದು ಹೆಸರಿಗೆ ಮಾಡಿದರೆ ಅದು ಪಾನನಿರೋಧ ಆಗುತ್ತದೆಯೇ ? ಪಾನ ನಿರೋಧ ಎಂದು ಮಾಡಿ ಎಲ್ಲಾ ಕಡೆ ಪಾನ ಜಾಸ್ತಿಮಾಡಿದಿರಿ. "ಈ ಜಾಗದಲಿ ಹೇಸಿಗೆ ಮಾಡುವವರನ್ನು ಶಿಕ್ಷೆಗೆ ಗುರಿಪಡಿಸಲಾಗುವುದು" ಎಂದು ಬೋರ್ಡ ಹಾಕಿಸಿದ ಜಾಗದಲ್ಲಿಯೇ ಹೇಸಿಗೆ ಮಾಡುತ್ತಾರೆ.

4:40 ಪಿ.ಎಂ

ಬೋರ್ಡ್ ಬರೆಯುವದು ಒಂದು , ನಡವಳಿಕೆ ಒಂದು. ಇದನ್ನು ನೀವು ಸರ್ಕಾರ ಎನ್ನುತ್ತೀರೋ? ಸರ್ಕಾರ ಎಂದು ಒಪ್ಪಿಕೊಳ್ಳುವುದಕ್ಕೆ ಸಾಧ್ಯವೇ? ಇದಾದಮೇಲೆ ಕಾಮಗಾರಿ ಪಿ.ಡಬ್ಲ್ಯುಡಿ ಶಾಸಕರಿಗೆಲ್ಲಾ ಹೋದಸಾರಿ 30 ಲಕ್ಷ, ಈ ಸಾರಿ 20 ಲಕ್ಷ. ಜನ, ನಿಮಗೆಲ್ಲಾ 50 ಲಕ್ಷ ಕೊಟ್ಟಿದ್ದಾರಂತೆ ಆ ದುಡ್ಡು ಏನು ಮಾಡಿಕೊಂಡಿರಿ ಎಂದು ಕೇಳುತ್ತಾರೆ. ಒಟ್ಟು 50 ಲಕ್ಷ ರೂಪಾಯಿಗಳನ್ನು ಪಿ.ಡಬ್ಲ್ಯು. ಡಿ. ಡಿಪಾರ್ಟ್‌ಮೆಂಟಿನಿಂದ ಎಂ.ಎಲ್.ಎ.ಗಳ ಹೆಸರಿಗೆ ಜಮಾ ಮಾಡಿದ್ದಾರೆ. ಏನು ಮಾಡಿದ್ದೀರಿ ? ಡಾಂಬರು ಇಲ್ಲ, ರಸ್ತೆಗಳ ಯಾವುದೇ ಕೆಲಸ ನಡೆದಿಲ್ಲ ಹೋಗುತ್ತಾ, ಬರುತ್ತಾ ನಾವು ಉಗಿಸಿಕೊಳ್ಳುವ ಕೆಲಸ ಆಗಿದೆ ನೀವು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟುಬಿಟ್ಟಿರಿ. 30 ಪ್ಲಸ್ 20 ಲಕ್ಷ, ಅದಕ್ಕೆ ತಕ್ಕಂತೆ ಶಾಸಕರು ಪ್ರೋಗ್ರಾಂ ಕಳುಹಿಸಿಬಿಡಿ ಎಂದು ಹೇಳಿದಿರಿ. ನಾವು ಲೆಟರ ಹೆಡ್ ತೆಗೆದುಕೊಂಡು ಬರೆದದ್ದೇ ಬರೆದದ್ದು. ಪಿ.ಡಬ್ಲ್ಯು.ಡಿ. ಯಿಂದ ನಾಳೆಯೇ ಎಲ್ಲಾ ಕೆಲಸಗಳು ಆಗುತ್ತವೆ ಎಂದು. ಪ್ರೋಗ್ರಾಂ ನಿಮ್ಮ ಹತ್ತಿರ ಬಂತು, ಒಬ್ಬ ಪಿ.ಡಬ್ಲ್ಯು.ಡಿ ಮಿನಿಸ್ಟರು ಎಂ.ಪಿ.ಆಗಿ ಹೋದರು, ಈಗ ಇನ್ನೊಬ್ಬರು ಬಂದಿದ್ದಾರೆ. ಏನು ಕಾರ್ಯಕ್ರಮ ಮಾಡಿದ್ದೀರಿ. ಡಾಂಬರು ಇಲ್ಲ, ಮಂಡ್ಯಾದಲ್ಲಿ ಹೋಗಿ ಹೇಳಿದರೆ, ಏನೂ ಆಗಿಲ್ಲ. ಇದರ ಬಗ್ಗೆ ದುಡ್ಡು ಏನಾಯಿತು ಎಂದು ನಮಗೇನಾದರೂ ಹೇಳಿದ್ದೀರೋ ? ನೀವು ಬೋಕ್ಕಸದಲ್ಲಿ ಸುಮ್ಮನೆ ಇಟ್ಟುಕೊಂಡು, ಒಟ್ಟಿಗೆ ಒಂದುದಿವಸ ಕೊನೆಗೆ ಹೋಗುವಂಥ ಟೈಮಿನಲ್ಲಿ ಒಮ್ಮೆಗೆ ರೋಡ್ ಮಾಡಸಿಬಿಡೋಣ ಎಂದು ಯೋಚನೆ ಮಾಡಿದ್ದೀರೋ? ಮಾನ್ಯ ಮಂತ್ರಿಗಳು ನಗುತ್ತಾ ಇದ್ದಾರೆ. ಏನೂ ಮಾಡುವುದಕ್ಕಾಗಿಲ್ಲವೆಂದು ಅವರಿಗೆ ಗೊತ್ತಿದೆ. ಏನೂಮಾಡಿಲ್ಲ. ನೀವು ಹೇಳುತ್ತಿರುವುದು ಸರಿ ಎಂದು ನಗುತ್ತಾ ಕುಳಿತಿದ್ದಾರೆ. ನಾನು ಹೇಳುವುದು ಸರಿ ಎಂದ ಅವರು ಒಪ್ಪಿಕೊಂಡಿದ್ದಾರೆ. ಆಮೇಲೆ ಸಹಕಾರಿ ಇಲಾಖೆ. ಮಾನ್ಯ ಮಂತ್ರಿಗಳು ಸಹಕಾರಿ ಇಲಾಖೆ ಬಗ್ಗೆ ಇಡೀ ರಾಜ್ಯದಲ್ಲಿ ಒಂದು ಕ್ರಾಂತಿ ಮಾಡಬೇಕು, ಸೌದಾರ್ಧಯುತವಾದ ಸಹಕಾರಿ, ಸಹೃದಯದ, ಸಹಕಾರ ತತ್ವಗಳ ಆಧಾರದ ಮೇಲೆ, ಇಡೀ ರಾಜ್ಯದಲ್ಲಿ ಮಹತ್ತರವಾದ ಬದಲಾವಣೆ ಮಾಡಬೇಕೆಂದು ಹೊರಟಿದ್ದಾರೆ. ಆದರೆ, ನೀವು ಮಾಡುತ್ತಿರುವುದು ಏನು ? ಎಲ್ಲಾ ಕಡೆ ನಾಮಕರಣ. ನಾಮಕರಣ ಎಂದರೆ ಯಾರು, ? ಯಾರನ್ನು ನಾಮಕರಣ ಎಂದು ಕರೆಯಬೇಕೆಂದು ನಾನು ಪ್ರಶ್ನೆ ಮಾಡುತ್ತೇನೆ. ನನಗೆ ನಮ್ಮ ಅಪ್ಪ, ಅಮ್ಮ ಯಾರು ಎಂದರೆ ಮತದಾರರು. ಆದರೆ, ಈ ನಾಮಕರಣ ಮಾಯ್ನ ಮಂತ್ರದ ಮಕ್ಕಳು, ಅವು ಹೇಗೆ ಹುಟ್ಟುತ್ತವೆಂಬುದು ನನಗೆ ಗೊತ್ತಿಲ್ಲ. ನಾಮಕರಣ ಪದ್ಧತಿ. ನೀವು , ಸರ್ಕಾರದ ನೀತಿಯನ್ನು ಆತ್ಮಪೂರ್ವಕವಾಗಿ ಒಪ್ಪಿಕೊಳ್ಳುತ್ತೀರಾ ? ಮೊನ್ನೆ ಪಾಂಡವಪುರ ಕ್ಷೇತ್ರದಲ್ಲಿ. ಪಾಂಡವಪುರ ಸಹಕಾರಿ ಕಾರ್ಖಾನೆಯಲ್ಲಿ ತಮ್ಮ ಪಕ್ಷದ ಇಬ್ಬರು ಸೇರಿ, 3 ಜನ ನಾಮಕರಣದ ಮೂಲಕ ಅಧಿಕಾರಕ್ಕೆ ಬಂದರು. ಅದಕ್ಕೆ ಏಕೆ ಚುನಾವಣೆ ನಡೆಸಬೇಕು ? ಏಕೆ ಅಧಿಕಾರ ನಡೆಸಬೇಕು? ತಾವು ಅದನ್ನು ತೆಗೆದುಹಾಕಿಬಿಡಬೇಕು . 5 ನಾಮಕರಣ ಪ್ಲಸ್ 3 ಸರ್ಕಾರಿ ಅಧಿಕಾರಿಗಳು ಸೇರಿ 8 +2 ಒಟ್ಟು 10. ನಾನು ಹೇಳುವುದು, ತಾವು ಒಂದು ಕೆಲಸ ಮಾಡಿ, ಬದಲಾವಣೆ ಮಾಡಬಹುದು. ಇಡೀ ರಾಜ್ಯದಲ್ಲಿ ಒಂದು ಮಹತ್ತರವಾದ ಬದಲಾವಣೆ ಏನು ಮಾಡಬಹುದು

ಯಾವ ಯಾವ ಸರ್ಕಾರ ಬರುತ್ತದೆ ಆಯಾಯಾ ಸರ್ಕಾರದ ಪೂರ್ತಿ ನಾಮಕರಣ ಮಾಡಿಬಿಡಿ, ಚುನಾವಣೆಗೆ ಗೌರವ ಕೊಡಬೇಕು. ಚುನಾವಣೆಗೆ ಗೌರವ ಕೊಡುವುದಕ್ಕೆ ನಮಗೆ ಇಷ್ಟಿಲ್ಲ, ಪ್ರಜಾಪ್ರಭುತ್ವದ ವಿರೋಧಿಗಳು ಎಂಬ ಭಾವನೆ ನಿಮಗಿದ್ದರೆ, ನೀವು ಮಾಡಬೇಕಾದ್ದೇನು? ನೀವು ಮಾಡಬೇಕಾಗಿರುವುದು ಸರ್ಕಾರದಿಂದ 12 ಜನರನ್ನೂ ಸಹಕಾರಿ ಕ್ಷೇತ್ರದ ಮೇಲೆ ನಾಮಕರಣ ಮಾಡಿ, ಇಲ್ಲವೇ ನಾಮವನ್ನಾದರೂ ಹಾಕಿ. ಈ ರಾಜ್ಯದಲ್ಲಿ 100ಕ್ಕೆ 60 ರಿಂದ 70 ಭಾಗ ಸಹಕಾರಿ ಕ್ಷೇತ್ರಗಳು ಏಕೆ ನಾಶ ಆದವು. ಭ್ರಷ್ಟಾಚಾರ ಮಾಡಿರತಕ್ಕಂಥ ಯಾವುದೇ ಅಧ್ಯಕ್ಷ ಆಗಬಹುದು, ಸೆಕ್ರಟರಿ ಆಗಬಹುದು. ನಾವು ಎಷ್ಟು ಜನರನ್ನು ಜೈಲಿಗೆ ಕಳುಹಿಸಿದ್ದೇವೆ? ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಹೇಳಿದರು. ಇಂದಿರಾಗಾಂಧಿಯವರು ಹೇಳಿದರು. "Corruption is a National Phenomenan; AIDS is world Phenomenon" ಎಂದು. ಯಾರೂ ಏನೂ ಮಾಡುವುದೇ ಬೇಡ; ಇಂಟೆನ್ಸೀವ್ ಕೇರ್ ತೆಗೆದುಕೊಳ್ಳುವುದೇ ಬೇಡ. ದಯವಿಟ್ಟು, ಅದು ನ್ಯಾಷನಲ್ ಫೆನಾಮಿನಾ ಅಲ್ಲ. ಗಂಭೀರವಾಗಿ ಅದರ ವಿರುದ್ಧ ಹೋರಾಟ ಯಾವಾಗಲೂ ನಡೆಯುತ್ತಾ ಇರಬೇಕು. ಸರ್ಕಾರ ಚಳುವಳಿ ರೂಪದಲ್ಲಿ ಕೆಲಸ ಮಾಡಬೇಕು, ಅದು ಸರ್ಕಾರ. ಭ್ರಷ್ಟಾಚಾರ ಮಾಡುವವನೇನು ದೇವಲೋಕದಿಂದ ಬಂದಿದ್ದಾನೆಯೇ? ಅವನೂ ಈ ಭೂಮಿಯಲ್ಲೇ ಇರವವನ್ನು. ಭ್ರಷ್ಟಾಚಾರದ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಕ್ರಮ ತೆಗೆದುಕೊಳ್ಳುತ್ತೇವೆಂದು ಯಾವುದಾದರೂ ಹೊಸ ಯೋಜನೆ ಮಾಡಬೇಕು. ಭ್ರಷ್ಟಾಚಾರ ಕಾಮನ್, ಏನು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರೆ, ನಾವು ಅದನ್ನು ಒಪ್ಪಿಕೊಂಡಹಾಗೆ. ಒಂದು ಜವಾಬ್ದಾರಿ ಶಾಸನ ಸಭೆಯಲ್ಲಿ ಕುಳಿತುಕೊಂಡಿದ್ದೇವೆ. ಭ್ರಷ್ಟಾಚಾರ ಸರ್ವೇಸಾಮಾನ್ಯ ಎಂದು ಹೇಳತಕ್ಕಂಥ ಸರ್ಕಾರ ಇರಬೇಕೇ, ಆ ಸರ್ಕಾರ ಇರಬಾರದು. ನಿಜವಾಗಿಯೂ ಹೇಳುತ್ತೇನೆ, ನೀವೇ ಸ್ವಇಚ್ಛೆಯಿಂದ ರಾಜೀನಾಮೆ ಕೊಡಬೇಕು. ಆದ್ದರಿಂದ, ಸಹಕಾರಿ ಕ್ಷೇತ್ರದ ವಿಚಾರದಲ್ಲಿ ಇದುವರೆಗೂ ನೀವು ಒಂದು ಸಭೆಯನ್ನೂ ಮಾಡಲಿಲ್ಲ. ಏಕೆ, ಆ ಮಾತು ಹೇಳುತ್ತೇನೆಂದರೆ, ಸಹಕಾರಿ ಬಗ್ಗೆ ಒಂದು ದೊಡ್ಡ ಕ್ರಾಂತಿ ಮಾಡುತ್ತೇವೆಂದು ಹೇಳಿದಿರಿ. ಹೌದು, ಇವತ್ತು ವಿದೇಶೀಕರಣ , ಖಾಸಗೀಕರಣ. ಇವತ್ತು ಸಹಕಾರಿ ಕ್ಷೇತ್ರ ಇದ್ದಿದ್ದರೆ, ಒಬ್ಬ ಅವಿವೇಕಿಖೋಡೆಸ್‌ಗೆ ನಾವಿಷ್ಟು ಜನ ಹೆದರಿಕೊಳ್ಳಬೇಕಾದ ಅವಶ್ಯಕತೆ ಇರಲಿಲ್ಲ. ರೈತರು 5 ಲಕ್ಷ 20 ಸಾವಿರ ಟನ್ ಕಬ್ಬು ಬೆಳೆದಿರುವುದನ್ನು ತೆಗೆದುಕೊಳ್ಳದೇ, ಮೋಜು ಮಾಡಿಕೊಂಡು ಅವನು ತಿರುಗುತ್ತಿದ್ದಾನೆ. ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ? ಅದೇ ಸಹಕಾರಿ ಕ್ಷೇತ್ರ ಇದ್ದಿದ್ದರೆ, ರೈತರು ಅಂಗಿಪಟ್ಟಿ ಹಿಡಿದುಕೊಳ್ಳುತ್ತಿದ್ದರು. ಅವನ ಅಂಗಿಪಟ್ಟಿ ಹಿಡಿದುಕೊಳ್ಳುವುದಕ್ಕೆ ಅಂಗೀನೆ ಇಲ್ಲದೇ ಹಾಗೇಯೇ ತಿರುಗುತ್ತಿರಬಹುದು, ಅದಕ್ಕೆ ಅವನು ನಮ್ಮ ಕೈಗೆ ಸಿಕ್ಕಿಲ್ಲ. ಹೀಗಿದ್ದರೂ, ಮೊನ್ನೆದಿವಸ ನಾವು ಅಲ್ಲಿಗೆ ಹೋಗಿ ಚಳುವಳಿ, ಗಿಲುವಳಿ ಮಾಡಿದ್ದೇವೆ. ನಿನ್ನೆ ಇಲ್ಲಿ ಮಾಡಿದ್ದಲ್ಲಾ, ಅಲ್ಲಿಯೂ ಮಾಡಿದ್ದರು. ಅದೇನೋ ಹೇಳುತ್ತಿದ್ದರಂತೆ. ನೀವು ಖೋಡೇಸ್‌ನ ವಿರುದ್ಧ ಚಳುವಳಿ ಮಾಡುವುದಿಲ್ಲ, ನಾವು ಮಾಡುತ್ತೇವೆ. ನೀವು ಹೇಳಿದ ಮೇಲೆ ಅಲ್ಲ, ಮೊದಲಿಂದಲೂ ನಾವು ಮಾಡುತ್ತಿದ್ದೇವೆ ಮಾನ್ಯ ಭೈರೇಗೌಡರೇ, ನಿಮಗೆ ಸಿಟ್ಟು ಏಕಿಲ್ಲ. ನಾನು ನೋಡಿಲ್ಲ, ನಾನಂತೂ ಹೊಸಬ., ಇಲ್ಲಿರುವವರು ಹೇಳುತ್ತಾರೆ, ಇಲ್ಲಿ ಕುಳಿತುಕೊಂಡಾಗ ಎಷ್ಟು ಸಿಟ್ಟು ಇತ್ತು ಎಂದು, ಏನಾಯಿತು ಆ ನಿಮ್ಮ ಸಿಟ್ಟು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅವರಿಗೆ ಖೋಡೇಸ್‌ನವರು ಮೇಲೆ ಸಿಟ್ಟಿಲ್ಲ, ಅಧಿಕಾರಿಗಳ ಮೇಲೆ ಸಿಟ್ಟು ಇದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಮುಖ್ಯಮಂತ್ರಿಗಳು ಒಂದು ಆಶ್ವಾಸನೆ ಕೊಟ್ಟರು. ಟಿ.ಸಿ.ಹೆಚ್.ನವರು ಒಂದು ಧರಣೆ, ಚಳುವಳಿ ಮಾಡುತ್ತಿರಬೇಕಾದರೆ, 14ನೇ ತಾರೀಖು ಎಸ್. ಎಸ್.ಎಲ್.ಸಿ. ಟಿ ಸಿ ಹೆಚ್ ನವರಿಗೆ ತರಬೇತಿ ಸೀನಿಯಾರಿಟಿ ಆಧಾರದ ಮೇಲೆ, ಮೆರಿಟ್ ಆಧಾರದ ಮೇಲೆ ಸರ್ಕಾರ ಪುನರ್ ಪರಿಶೀಲನೆ ಮಾಡಿ, ಅವರಿಗೆ ನ್ಯಾಯವನ್ನು ದೊರಕಿಸಿಕೊಡುತ್ತದೆ. ಸುಮಾರು ಅರ್ಧ-ಮುಕ್ಕಾಲು ಗಂಟೆ ಅವರ ನೋವಿನ, ಸಂಕಟದ ಕಡೆಯನ್ನು ಕೇಳಿದರಂತೆ. ಇವರ ಜೊತೆಗೆ ಬಿ.ಎಡ್.ನವರೂ ಸೇರಿದ್ದರು. ಸಾರಾಸಗಟಾಗಿ ತಾವು 25 ಸಾವಿರ ಜನ ಏನಿದ್ದೀರಿ, ಪ್ರೌಢಶಾಲೆ, ಪ್ರಾಥಮಿಕ ಶಾಲೆ ಸಂಬಂಧಪಟ್ಟ ಉಪಾಧ್ಯಾಯರನ್ನು ಸಾರಾಸಗಟಾಗಿ ಈ ವರ್ಷ ಅವರಿಗೆ ಅನುಕೂಲ ಮಾಡಿ ಕೊಡುತ್ತೇವೆಂದು ಒಂದು ಮಾತು ಹೇಳಿದ್ದರು. ಆದರೆ, ಮಾಡಿರುವುದೇನೆಂದರೆ ಪಿ.ಯು.ಸಿ.........

ಶ್ರೀ ಎಸ್.ಆರ್. ಲಕ್ಷ್ಮಯ್ಯ: ಮಾನ್ಯ ಉಪಾಧ್ಯಕ್ಷರೇ.......

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ನಿಮಗೆ ಗೊತ್ತಿಲ್ಲವೇ ಮಧ್ಯದಲ್ಲಿ ಮಾತನಾಡಬಾರದು ನಾನು ಮಾತನಾಡುತ್ತಿದ್ದೇನೆ, ತಡೆಯಿರಿ. ನಾನು ಕುಳಿತುಕೊಳ್ಳುತ್ತೇನೆ, ನೀವು ಮಾತನಾಡಿ.

ಉಪಾಧ್ಯಕ್ಷರು: ಲಕ್ಷಯ್ಯನವರೇ, ದಯಮಾಡಿ ಕುಳಿತುಕೊಳ್ಳಿ. ಪುಟ್ಟಣ್ಣಯ್ಯನವರೇ ಬೇಗ ಮುಗಿಸಿ. ಟೈಮ್ ಬಹಳ ಆಗಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಪಿ.ಯು.ಸಿ. ಮೆರಿಟ್ ಆಧಾರದ ಮೇಲೆ ಅವಕಾಶ ಮಾಡಕೊಟ್ಟಿದ್ದಾರೆ. ಎಸ್ ಎಸ್ ಎಲ್. ಸಿ. ಟಿಸಿಹೆಚ್ ಏಕೆ ತೆಗೆದಿರಿ? ನೀವು ಎಸ್. ಎಸ್ ಎಲ್‌ಸಿ, ಟಿಸಿ ಹೆಚ್ ಏಕೆ ತೆಗೆಯಬೇಕಾಗಿತ್ತು, ಏಕೆ ಓದಿಸಬೇಕಾಗಿತ್ತು? ಅದರ ಜವಾಬ್ದಾರಿ ಸರ್ಕಾರದ್ದು. ಎಸ್ ಎಸ್ ಎಲ್ ಸಿ, ಟಿ ಸಿ ಹೆಚ್ ಗೆ ಸೇರಿಸಿಕೊಳ್ಳಬೇಕಾದರೆ, ನಾವು ನಿಮಗೆ ಯಾವುದೇ ಉದ್ಯೋಗ ಕೊಡುವುದಿಲ್ಲ, ಕೇವಲ ತರಬೇತಿ ದೃಷ್ಟಿಯಿಂದ ತೆಗೆದುಕೊಂಡಿದ್ದೇವೆಂದು ಏನಾದರೂ ಬರೆಸಿ ಸೈನು ಮಾಡಿಸಿಕೊಂಡಿದ್ದೀರಾ? ತಾವು ಹೇಳಿದಿರಿ, ಇವತ್ತು ಧರಣಿ ಮಾಡುವುದರ ಮೂಲಕ ಚಿತ್ರದುರ್ಗದ ಒಬ್ಬ ಹುಡುಗ, ಅವನಿಗೆ ಜ್ಞಾನ ತಪ್ಪಿ ಮಾರ್ಥಾಸ್ ಆಸ್ಪತ್ರೆಗೆ ಸೇರಿದ್ದಾನೆ. ಮಾನ್ಯ ಮುಖ್ಯಮಂತ್ರಿಗಳು ಅವಿಶ್ವಾಸ ನಿರ್ಣಯದ ಬಗ್ಗೆ ಮಾತನಾಡಬೇಕಾದರೆ, ಇದಕ್ಕೆ ಉತ್ತರ ಕೊಡಬೇಕು. ಜೊತೆಗೆ, ತಾವು ಹೇಳಿದ ಮಾತು, ತಾವು ಆಡಿದ ಮಾತು ಏನಾಯಿತು ಎಂಬುದನ್ನು ನಮಗೆ ಹೇಳಬೇಕು. ಆಮೇಲೆ ಇನ್ನೊಂದು ಇದೆ. ಸ್ವಾತಂತ್ರ್ಯ ದಿನಾಚರಣೆಯನ್ನು ನಾವು ಆಚರಣೆ ಮಾಡುತ್ತಾ ಇದ್ದೇವೆ. ಆದರೆ, ನಾವೆಲ್ಲಾ ಗಾಂಧೀಜಿ, ಈ ದೇಶದ ಹೋರಾಟಗಾರರು ಎಲ್ಲರ ಸುದ್ದಿಯನ್ನೂ ನಾವು ಮಾತನಾಡಿದೆವು. ಆದರೆ, ನಾವು

ವಿದೇಶಿ ಕಂಪನಿಗಳೆಲ್ಲರನ್ನೂ ಬರಮಾಡಿಕೊಳ್ಳುತ್ತಿದ್ದೇವೆ. ವಿದೇಶಿ ಕಂಪನಿಗಳ ವಿರುದ್ಧ ಹೋರಾಟ ಮಾಡಿದಂಥ ರೈತಸಂಘವನ್ನು ಕೊಲೆ ಮೊಕದ್ದಮೆಯಲ್ಲಿ ಪದಾಧಿಕಾರಿಗಳನ್ನು, ಕಾರ್ಯಕರ್ತರನ್ನು, ಜೈಲಿಗೆ ಹಾಕತಕ್ಕಂಥ ಕೆಲಸ ಮಾಡಿದರು. ನಾವು ಕೊಲೆ ಮಾಡುವುದಕ್ಕೆ ಹೋಗಿದ್ದೇವೆಯೇ ? ಮಾಂಸದ ದಂಧೆಯಿಂದ ಆಗತಕ್ಕಂಥ ಅಪಾಯದ ವಿರುದ್ಧ ಹೋರಾಟ ಮಾಡಲಿಕ್ಕೆ ಬಂದವರು ನಾವು. ಹೌದು, ನಾವು ದರೋಡೆ ಮಾಡುವುದಕ್ಕೆ ಹೋಗಿದ್ದೆವು. ನೀವು ಸ್ವತಂತ್ರ ಹೋರಾಟದಲ್ಲಿ ಬಹಳ ಪ್ರಾಣ ಕೊಟ್ಟಿದ್ದೀರಿ. ನಿಮ್ಮನ್ನುಕಂಡರೆ ಮಹಾತ್ಮ ಗಾಂಧೀಜಿಯವರೂ ನಾಚಿಕೊಳ್ಳುತ್ತಾರೆ. ಅದಕ್ಕೇ ಮಾಹಾತ್ಮ ಗಾಂಧಿಯವರು ಮರೆಯಾದರು.

(ಗೊಂದಲ)

ಹೌದು, ನಾವು ಅಹಿಂಸಾತ್ಮಕ ಉಗ್ರಗಾಮಿಗಳು . ನಿಜವಾದ ಮಾತು ನಾವು ಒಪ್ಪಿಕೊಳ್ಳುತ್ತೇವೆ. ವಿಚಾರದ ಮೇಲೆ ಹೋರಾಟ ಮಾಡುವಂತಹ ಉಗ್ರಗಾಮಿಗಳು ನಾವು. ನೀವು ಯಾವ ಗಾಮಿಗಳು? ನೀವು ಪುರೋಗಾಮಿಗಳು.

ಶ್ರೀ ವಾಟಾಳ್ ನಾಗರಾಜ್: ದರೋಡೆಕಾರರು ಎನ್ನುವಂತಹ ಶಬ್ದವನ್ನು ಬೇಜವಾಬ್ದಾರಿತನದಿಂದ ಮಾತನಾಡಬಾರದು ಈ ರಾಜ್ಯದಲ್ಲಿ ಚಳುವಳಿ ಮಾಡುವುದು ದರೋಡೆಯೇ ?

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ : ಮಾನ್ಯ ಅಧ್ಯಕ್ಷರೇ, ಇಂತಹ ಪದಗಳನ್ನು ಉಪಯೋಗ ಮಾಡಬಾರದು.

ಉಪಾಧ್ಯಕ್ಷರು : ಅದು ಕಡತಕ್ಕೆ ಹೋಗಿದ್ದರೆ ಅದನ್ನು ತೆಗೆಯೋಣ. ಆ ರೀತಿ ಇದ್ದರೆ ಅದನ್ನು ಕಡತದಿಂದ ತೆಗೆಯೋಣ. ತಾವು ಈಗ ಮುಗಿಸಿಬಿಡಿ.

(ಗೊಂದಲ)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮೊದಲು ಯಾವದಾದರೂ ಒಂದು ವಿಷಯವನ್ನು ಅತ್ಯಂತ ಗಂಭೀರವಾಗಿ ಚರ್ಚೆ ಮಾಡುತ್ತಿರಬೇಕಾದರೆ ಆಡಳಿತ ಪಕ್ಷ ಲಘುವಾಗಿ ತೆಗೆದುಕೊಳ್ಳಬಾರದು ಅಧಿಕಾರ ನಿಮಗೆ ಪರ್ಮನೆಂಟ್ ಆಗಿ ಇರುವುದಿಲ್ಲ. ಇವತ್ತು ಆ ಕಡೆ ಇದ್ದೀರಿ ಇನ್ನೊಂದು ದಿವಸ ಈಕಡೆ ಬರಬಹುದು. ಯಾವುದೇ ವಿಚಾರವನ್ನು ಲಘುವಾಗಿ ತೆಗೆದುಕೊಳ್ಳಬಾರದು. ನಾಳೆ ಅದರಿಂದ ಆಗತಕ್ಕಂಥ ಪರಿಣಾಮವನ್ನು ಯೋಚನೆ ಮಾಡಬೇಕು. ಹೌದು ಹೌದು ಜಯಪ್ರಕಾಶ್ ನಾರಾಯಣರ ಹೆಸರು......

(ಗೊಂದಲ)

ಉಪಾಧ್ಯಕ್ಷರು : ತಾವು ನನ್ನ ಕಡೆ ನೋಡಿ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ನಾವು ಯಾವಾಗಲೂ ತಮ್ಮ ಕಡೆ ನೋಡಿ ಮಾತನಾಡುವುದೇ ನಮ್ಮ ಹಣೆಬರಹ.

(ಗೊಂದಲ)

ಉಪಾಧ್ಯಕ್ಷರು : ನೀವು ಯಾವಾಗಲೂ ಈ ಕಡೆ ನೋಡಿಮಾತನಾಡಬೇಕು.

ಶ್ರೀ ವಾಟಾಳ್‌ನಾಗರಾಜ್ : ಚಳುವಳಿ ಮಾಡುವವರನ್ನು ದರೋಡೆಕೋರರು ಎಂದು ಮಾತನಾಡಬೇಕಾದರೆ ನಾಲಿಗೆ ಎಷ್ಟು ಹದ್ದು ಮೀರಿದೆ ಎಂಬುದನ್ನು ತಾವು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ರಸಗೊಬ್ಬರದ ಬಗ್ಗೆ ಹೋರಾಟ ಮಾಡಿದ್ದಾರೆ ಇಲ್ಲಿರತಕ್ಕಂಥ ಜನ ಅಧಿಕಾರ ಇಲ್ಲದೇ ಇರುವಾಗ ಹೋರಾಟ ಮಾಡಿದವರನ್ನೆಲ್ಲಾ ದರೋಡೆಕೋರರು ಎಂದು ಹೇಳಿಬಿಟ್ಟರೆ ಏನು ಅದರ ಅರ್ಥ ?

ಉಪಾಧ್ಯಕ್ಷರು : ನಾನು ಎಕ್ಸ್‌ಪಂಜ್ ಮಾಡಿದ್ದೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೇ ವಿದೇಶಿಕರಣವನ್ನು ಸ್ವಾಗತ ಮಾಡುತ್ತಾರೆ. ನಾವು ಭಾರತವನ್ನು ಬಿಟ್ಟು ತೊಲಗಿ ಎಂದು ಬ್ರಿಟೀಷ್‌ನವರಿಗೆ ಹೇಳಿ, ಇನ್ನೊಂದು ಮೂಲದಲ್ಲಿ ತುಂಗಾ ಮೂಲದಲ್ಲಿ ನಾವು ಚಿನ್ನದ ಅದಿರುಗಳನ್ನು ಮಾರತಕ್ಕಂಥದ್ದು, ವಿದೇಶಿಕರಣ ಮಾಡುವುದನ್ನು ಸ್ವಾಗತ ಮಾಡುತ್ತಿದ್ದೇವೆ. ಬಾಗಿಲು ತೆರೆದಿದ್ದೇವೆ. ಇದನ್ನು ಸರ್ಕಾರ ಎನ್ನುತಾರೆಯೇ? ಆಮೇಲೆ ನೀರಾವರಿ ಇಲಾಖೆ ನೀರಾವರಿ ಇಲಾಖೆ ಅಂದರೆ ನಾಗೇಗೌಡರು. ಆಲ್‌ಮಟ್ಟಿ ವಿಚಾರದಲ್ಲಿ ಇಬ್ಬರನ್ನೇ ಕರೆದರು ವಿರೋಧ ಪಕ್ಷ ಅಂದರೆ ಯಡಿಯೂರಪ್ಪನವರು ವಿರೋಧ ಪಕ್ಷ ಅಂದರೆ ಖರ್ಗೆಯವರು. ನಾವೆಲ್ಲಾ ವಿರೋಧ ಪಕ್ಷದವರೇ ? ಶ್ರೀರಾಮರೆಡ್ಡಿ ನಾಗರಾಜ್ ನಾವೆಲ್ಲಾ ವಿರೋಧಪಕ್ಷದವರೇ ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅವರು ನೀರು ಬಿಡಲಿಕ್ಕೆ ಬಂಧಾಗ ಮಾತ್ರ ನಮ್ಮನ್ನೆಲ್ಲಾ ಕರೆಯುತ್ತಾರೆ ಅಷ್ಟೇ.

ಉಪಾಧ್ಯಕ್ಷರು : ತಾವು ರೈತ ಪಕ್ಷದವರು, ತಾವು ಮಾತನಾಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ನಾಗೇಗೌಡರಿಗೆ ನಿಜವಾಗಿಯಾ ತಾಕತ್ತು ಇದ್ದರೆ , ನೂರು ಜನ ಇಂಜಿನೀಯರ್‌ಗಳನ್ನು 100 ಜನ ಕಂಟ್ರಾಕ್ಟ್‌ದಾರರನ್ನು ಮೊದಲು ಬ್ಲಾಕ್‌ಲಿಸ್ಟ್ ಮಾಡಿ ಮನೆಗೆ ಕಳುಹಿಸಿ. ಆಗ ನಾನು ಒಪ್ಪಿಕೊಳ್ಳುತ್ತೇನೆ. ಅವರು ಇಬ್ಬರನ್ನೇ ಕರೆದರು.

ನಾವೆಲ್ಲಾ ಏನು ಎಂಬುದನ್ನು ತಾವು ಹೇಳಬೇಕು. ಜವಾಬ್ದಾರಿ ಇದೆ ಯೋಚನೆ ಮಾಡಬೇಕು ನೀವು ?

ಶ್ರೀ ಬಿ.ಎಸ್ ಯಡಿಯೂರಪ್ಪ : ಅದಕ್ಕಾಗಿಯೇ ನಾನು ಹೋಗಲಿಲ್ಲ. ವಿರೋಧ ಪಕ್ಷವನ್ನು ಹೊಡೆಯುವುದಕ್ಕೆ ನಾವು ಒಪ್ಪುವುದಿಲ್ಲ ಒಟ್ಟಿಗೆ ಹೋರಾಟ ಮಾಡುತ್ತೇವೆಂದು ನಾನು ಹೋಗಲಿಲ್ಲ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಯಾರು ಹೋಗಿದ್ದಾರೆ, ಅವರೆಲ್ಲಾ ಹೊಡೆಯುವುದಕ್ಕೆ ಹೋಗಿದ್ದಾರೆಂದು ತಿಳಿದುಕೊಳ್ಳಬೇಕೇ ?

(ಗೊಂದಲ)

ಶ್ರೀ ಜೆ.ಎಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೇ, ನಾನು ಇವತ್ತು ಉತ್ತರ ಕೊಡಬೇಕು ಎಷ್ಟು ಹೊತ್ತಿಗೆ, ಅವರೇ ಕೊನೆಯವರೇ ? ಹಾಗಾದರೆ ಒಂದು ಮಾತು ಮಾನ್ಯ ಪುಟ್ಟಣ್ಣಯ್ಯನವರನ್ನು ವಿರೋಧ ಪಕ್ಷದವರು ಎಂದು ಗಣನೆ ಮಾಡಿಲ್ಲ. ಆದಕೋಸ್ಕರ ನಿಮ್ಮ ಮೇಲೆ ಇರುವಂತಹ ವಿಶ್ವಾಸದಿಂದ ಹೇಗೋ ನಾವು ಮಾಡಿದ್ದನ್ನು ಒಪ್ಪುತ್ತಾರೆ, ರೆಡ್ಡಿಯವರ ಮೇಲೆ ಆಗಲಿ ನಿಮ್ಮ ಮೇಲೆ ಆಗಲಿ ನಾನು ಸುಮ್ಮನೇ ಉತ್ಪ್ರೇಕ್ಷೆಗೆ ಅಲ್ಲ ಹೇಳುವುದು, ನಿಮ್ಮಗಳಲ್ಲಿ ವಿಶ್ವಾಸ ಇದೆ. ಇವರ ಮೇಲೆ ವಿಶ್ವಾಸ ಇಲ್ಲ. ಅದಕೋಸ್ಕರ ನಾವು ಕರೆಯುತ್ತೇವೆ.

ಶ್ರೀ ಜಿ .ವಿ. ಶ್ರೀರಾಮರೆಡ್ಡಿ : ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ನಮ್ಮನ್ನೆಲ್ಲಾ ಕರೆದುಕೊಂಡು ಹೋಗಿದ್ದರು ಆಗ ನಮ್ಮ ಮೇಲೆ ವಿಶ್ವಾಸ ಇರಲಿಲ್ಲ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಎರಡು ಸಂಗತಿಗಳನ್ನು ಮುಖ್ಯಮಂತ್ರಿಗಳಿಗೆ ಹೇಳುವುದು ನಾನು ವಿರೋಧಪಕ್ಷದ ನಾಯಕನಾದ ದಿವಸವೇ ಒಂದು ಮಾತು ಹೇಳಿದಿರಿ ತಾವು ಉಪ ಮುಖ್ಯಮಂತ್ರಿಗಳಾಗಿ, ಏನಾದರೂ ಆಗಿರಬಹುದು ಆದರೆ ಬಿ.ಜೆ.ಪಿ.ಯವರು ವಿರೋಧಪಕ್ಷದ ನಾಯಕರಾಗಿದ್ದು ನನಗೆ ಕುತ್ತು ಎನ್ನುವ ಹಿನ್ನೆಲೆಯಲ್ಲಿ ಆಗ ಹೇಳಿದ್ದಿರಿ. ಇವತ್ತು ತಾವು ಅದನ್ನು ಪ್ರಸ್ತಾಪ ಮಾಡಿದ್ದೀರಿ ? ನಾವು ನಿಜವಾಗಿಯೂ ಸಹ ಜನರ ಹಿತದೃಷ್ಟಿಯಿಂದ ವಿರೋಧಪಕ್ಷವಾಗಿಯೇ ಕೆಲಸ ಮಾಡುತ್ತೇವೆ, ಅಡ್ಜಸ್ಟ್‌ಮೆಂಟ್ ಇಲ್ಲವೇ ಇಲ್ಲ. ಇದು ನಂಬರ್ ಓನ್.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಾಗಾದರೆ ನಮ್ಮದೆಲ್ಲಾ ಅಡ್ಜ್‌ಸ್ಟ್‌ಮೆಂಟ್ ಇದೆಯೇ ? ಇವರದ್ದು ಅಡ್ಜಸ್ಟ್‌ಮೆಂಟ್ ಇಲ್ಲ ಅಂದರೆ ನಾವು ಅಡ್ಜಸ್ಟ್‌ಮೆಂಟ್ ಮಾಡಿಕೊಂಡಿದ್ದೇವೆಯೇ? ಈ ಮಾತನ್ನು ನಾವು ಒಪ್ಪುವುದಿಲ್ಲ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅವರು ಆ ಪದ ವಾಪಸ್ಸು ತೆಗೆದು ಕೊಳ್ಳಬೇಕು. ನಾನು ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಕ್ಲಿಯರ್ ಮಾಡುತ್ತೇನೆ. ನಾನು ಏನು ಹೇಳುತ್ತಿದ್ದೇನೆ ಈ ಪ್ರತಿ ಪಕ್ಷದಲ್ಲಿರುವಂತಹ ಎಲ್ಲರೂ ಸಹ ನಾವು ಒಂದಾಗಿದ್ದೇವೆ. ಹಿಂದಿನಂತೆ ಇಲ್ಲಿರುವಂತಹ ಒಗ್ಗಟ್ಟನ್ನು ಒಡೆಯುವುದಕ್ಕೆ ಮುಖ್ಯಮಂತ್ರಿಗಳು ಈಗ ಪ್ರಯತ್ನ ಮಾಡಿದರು .ಪ್ರತಿಪಕ್ಷದಲ್ಲಿರತಕ್ಕಂಥವರು ನಾವೆಲ್ಲಾ ಒಂದಾಗಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳಾದ ಜೆ.ಎಚ್.ಪಟೇಲ್‌ರು ಏನು ಹೇಳಿದರು ನೀವು ನಮ್ಮವರು ಎಂದು ಕರೆಯಲಿಲ್ಲ ಎಂದು ಹೇಳುವಂಥದ್ದು ಪ್ರತಿಪಕ್ಷಗಳಿಗೆ, ಈ ಮುಖಂಡರಿಗೆ ಒಂದು ರೀತಿ ಅವಹೇಳನ ಅಪಮಾನ ಮಾಡುವಂತಹ ಮಾತು. ನಾವು ಒಳ್ಳೆಯ ಕೆಲಸಕ್ಕೆ ನಿಮ್ಮ ಸರ್ಕಾರದ ಹಿಂದೆ ಇದ್ದೇವೆ. ನೀವು ಅನ್ಯಾಯ ಮಾಡಿದಾಗ ನಾವೆಲ್ಲಾ ಒಂದಾಗಿದ್ದೇವೆ. ಅದಕ್ಕಾಗಿ ನಾವು ಅವಿಶ್ವಾಸ ನಿರ್ಣಯ ತಂದಿದ್ದೇವೆ. ಪ್ರತಿಪಕ್ಷದಲ್ಲಿ ಸಮ್ಮನ್ನು ಖರ್ಗೆಯವರನ್ನು ಕರೆದಾಗ ಪ್ರತಿಪಕ್ಷವನ್ನು ಒಡೆಯುವಂತಹ ಈ ಕುತಂತ್ರದ ರಾಜಕಾರಣಕ್ಕೆ ನಾವು ಬಲಿಯಾಗುವುದಿಲ್ಲ ಎಂದು ತೋರಿಸಲು ನಾವು ಡೆಲ್ಲಿಗೆ ಹೋಗಲಿಲ್ಲ. ನಾವೆಲ್ಲಾ ಒಂದು. ಮಾನ್ಯ ಅಧ್ಯಕ್ಷರೇ, ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ ಅವರು ಇರಲಿಲ್ಲ, ಅನೇಕ ಬೆಳವಣಿಗೆಗಳು ಆಗಿದೆ ದಯಮಾಡಿ ರಾಜ್ಯದ ಜನರ ಹಿತದೃಷ್ಟಿಯಿಂದ ಈ ಅವಿಶ್ವಾಸ ನಿರ್ಣಯಕ್ಕೆ ತಾವು ನಾಳೆ ಉತ್ತರ ಕೊಡಿ, ಕಾವೇರಿ ಮತ್ತು ಕೃಷ್ಣಾ ಬಗ್ಗೆ ಅನೇಕ ಬೆಳವಣಿಗೆಗಳು ಲೋಕಸಭೆಯಲ್ಲಿ ಮತ್ತು ಮದ್ರಾಸ್‌ನಲ್ಲಿ ಆಗಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮೂಲಕ ಏನು ವಿನಂತಿ ಮಾಡುತ್ತಿದ್ದೇನೆ ಅಂದರೆ, ನಾನೇನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆಂದರೆ. ಈ ಕಡೆ ಅನೇಕ ಜನ ಪ್ರಮುಖವಾದ ವಿಷಯಗಳನ್ನು ಈ ಸರ್ಕಾರದ ವೈಫಲ್ಯದ ಬಗ್ಗೆ ನಿಮ್ಮ ಸರ್ಕಾರಕ್ಕೆ ಮುಖ್ಯಮಂತ್ರಿಗಳಿಗೆ ಈ ಅವಿಶ್ವಾಸ ನಿರ್ಣಯದ ಮೂಲಕ ಕನ್‌ವಿನ್ಸ್ ಮಾಡುವವರಿದ್ದಾರೆ, ಇವತ್ತು ಲೋಕಸಭೆಯಲ್ಲಿ ಅನೇಕ ಬೆಳವಣಿಗೆಗಳು ಆಗಿದೆ. ಯಾವ ಮೂಲ ಉದ್ದೇಶ ಇಟ್ಟುಕೊಂಡು ಆಲ್ಮಟ್ಟಿ ವಿಷಯ ಪ್ರಮುಖವಾಗಿತ್ತೋ, ಇವತ್ತು ಕಾವೇರಿ ಬಗ್ಗೆ ಸಹ ತಮಿಳುನಾಡು ಮುಖ್ಯಮಂತ್ರಿಗಳು ಅವರ ವಿಧಾನ

ಸಭೆಯಲ್ಲಿ ಹೇಳಿದ್ದಾರೆ. ಕರ್ನಾಟಕದ ಮುಖ್ಯಮಂತ್ರಿ ಜೆ.ಎಚ್.ಪಟೇಲ್‌ರವರನ್ನು ಮೀಟ್ ಮಾಡುವವನಿದ್ದೇನೆ, ಕಾವೇರಿ ಟ್ರಿಬ್ಯುನಲ್ ಮಧ್ಯಂತರ ಆಜ್ಞೆ ಏನು ಇದೆ, ಆ ಚೌಕಟ್ಟಿನಲ್ಲಿಯೇ ನಾನು ಮಾತನಾಡುವವನಿದ್ದೇನೆ ಎಂದು ಅವರು ರಿಪೀಟ್ ಮಾಡಿದ್ದಾರೆ, ಅವರು ಏನಾದರೂ ಹೇಳಿಕೊಳ್ಳಲಿ ಇವತ್ತು ಏನು ಲೋಕಸಭೆಯಲ್ಲಿ ಬೆಳವಣಿಗೆ ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಆಗಬೇಕೆಂದು ಹೋರಾಟಮಾಡಿದಂತಹವರೇ ಇವತ್ತು ಪ್ರಧಾನಿ ಆಗಿದ್ದಾರೆ, ಅವರೇ ಇವತ್ತು ಈ ತರಹ ಆದೇಶ ಕೊಡುವುದಕ್ಕೆ ಹೊರಟಿದ್ದಾರೆ. ಇದೆಲ್ಲಾ ವಿಷಯಗಳು ಚರ್ಚೆ ಆಗಬೇಕಾಗಿದೆ. ಈ ಸರ್ಕಾರ ಹೋಗುತ್ತದೆಯೋ, ಯಾರು ಹೋಗುತ್ತಾರೋ ಅದು ಮುಖ್ಯವಾದ ವಿಷಯ ಅಲ್ಲ. ಅದಕೋಸ್ಕರ ಮಾನ್ಯ ಉಪಾಧ್ಯಕ್ಷರೇ ದಯಮಾಡಿ ಅವಕಾಶ ಮಾಡಿಕೊಡಿ. ರಾಮನಗರದಲ್ಲಿ ಒಂದು ಸಾವಿರ ಎಕರೆ ಬಗ್ಗೆ ನಾನು ಮಾತನಾಡಿದ್ದೇನೆ. ಅದರ ಬಗ್ಗೆ ತಾವು ಉತ್ತರ ಕೊಡಬೇಕಾಗಿದೆ. ತಮಗೆ ನಂಬಿಕೆ ಇರುವಂತಹ ಒಬ್ಬ ಮಂತ್ರಿಯನ್ನು ಹಾಗೂ ಪತ್ರಕರ್ತರನ್ನು ಕಳುಹಿಸಿಕೊಡಿ. ನಾವು ಹೋಗಿ ಬರುತ್ತೇವೆ. ಯಾವ ರೀತಿ ಗೋಮಾಳ ಲೂಟಿ ಆಗಿದೆ, ಯಾವ ರೀತಿ ಬುಲ್ಡೋಜರ್ ಕೆಲಸಮಾಡುತ್ತಿದೆ ಎನ್ನುವುದನ್ನು ನಾವು ನಿಮಗೆ ಕನ್‌ವಿನ್ಸ್ ಮಾಡಿ ಕೊಡುತ್ತೇವೆ, ಕನ್‌ವಿನ್ಸ್ ಆದ ಮೇಲೆ ತಾವು ರಾಜೀನಾಮೆಯನ್ನು ಕೊಡಿವಿರಂತೆ. ಆದ್ದರಿಂದ ತಮ್ಮ ಒಬ್ಬ ಸಚಿವರು ವಿರೋಧಪಕ್ಷದ ನಾಯಕರು ಮತ್ತು ಪತ್ರಕರ್ತರನ್ನು ಕಳುಹಿಸಿಕೊಡಿ. ಅವರ ಹೋಗಿ ನೋಡಿಕೊಂಡು ಬರಲಿ, ತಾವು ನಾಳೆ ಉತ್ತರ ಕೊಡಿ ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನಮಗೆ ಒಂದು ವಿಷಯವನ್ನು ಕ್ಲಾರಿಫೈ ಮಾಡಬೇಕಾಗಿದೆ.

ಶ್ರೀ ಕೆ.ಎನ್. ನಾಗೇಗೌಡ: ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನೋಡಿರತಕ್ಕಂಥ ಚರ್ಚೆಯನ್ನು ನಾವು ಗಮನಿಸುತ್ತಿದ್ದೇವೆ. ಈಗಲೇ ಉತ್ತರ ಕೊಡಬೇಕೆಂದು ಅವರು ಹೇಳವುದು ಸರಿಯಾದ ಮಾರ್ಗವಲ್ಲ. ಚರ್ಚೆ ಮುಗಿಯಲಿ ತದ ನಂತರ ಉತ್ತರ ಕೊಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಎಲ್ಲೆಲ್ಲಿ ಹೋಗಿ ಏನೇನು ಮಾಡುತ್ತಾರೋ ಎಂದು ಅವರ ತಪ್ಪನ್ನು ಕಂಡು ಹಿಡಿಯಲಿಕ್ಕೇ ನಾವು ಹೊಗಿದ್ದೆವು. ಅವರ ಮೇಲೆ ವಿಶ್ವಾಸ ಇದ್ದಿದ್ದರೆ ನಾವು ಸುಮ್ಮನೆ ಬಿಟ್ಟುಬಿಡುತ್ತಿದ್ದೆವು. ಕೊನೆಗೆ ಮಾನ್ಯ ಯಡಿಯೂರಪ್ಪನವರು ಅವರ ಮೇಲೆ ವಿಶ್ವಾಸ ಇಟ್ಟಿದ್ದಕ್ಕೆ ಈ ತಾಪತ್ರಯ ಬಂತು. ಆದಕ್ಕಾಗಿ ಅವರ ಮೇಲೆ ವಿಶ್ವಾಸವಿಲ್ಲವೆಂದು ನಾನು ಮುಖ್ಯ ಮಂತ್ರಿಯವರಿಗೆ ಹೇಳುತ್ತೇನೆ. ಏಕೆಂದ್ರರೆ , ತಮಿಳುನಾಡಿನಲ್ಲಿ ಏನಾಗಿದೆ ಎಂಬ ಬಗ್ಗೆ ಅಲ್ಲಿನ ಮುಖ್ಯ ಮಂತ್ರಿಯವರಾದ ಮಾನ್ಯ ಕರುಣಾನಿಧಿಯವರು ಈಗಾಗಲೆ ಬಹಿರಂಗಪಡಿಸಿದ್ದಾರೆ. ಪ್ರಧಾನಿಯವರು ಶನಿವಾರ ಮದ್ರಾಸ್‌ಗೆ ಹೋಗಿದ್ದಾಗ, ಮಾನ್ಯ

ಕರುಣಾನಿಧಿಯವರು ಅವರ ಕಿವಿಯಲ್ಲಿ ಏನು ಹೇಳಿದರೆಂದೂ ಬಹಿರಂಗಗೊಂಡಿದೆ. ನಾನು ಈಗಾಗಲೇ ಸರ್ವೋಚ್ಚ ನ್ಯಾಯಾಲಯದ ಚೀಫ್ ಜಸ್ಟೀಸ್‌ರವರಿಗೆ ಪತ್ರ ಬರೆದಿದ್ದೇನೆ. ಅವರು ಫಾರಿನ್ ಟೂರ್‌ನಿಂದ ಬಂದ ನಂತರ ಟ್ರಿಬ್ಯುನಲ್‌ಗೆ ಅಧ್ಯಕ್ಷರನ್ನು ನೇಮಕ ಮಾಡುತ್ತಾರೆ, ಅಲ್ಲಿಯವರೆಗೂ ಏನೂ ಗಲಾಟೆ ಮಾಡಬಾರದೆಂದು ಪ್ರಧಾನಿಯವರು ಇವತ್ತು ಹೌಸ್‌ನಲ್ಲಿ ಅನೌನ್ಸ್ ಮಾಡಿದ್ದಾರೆ. ಆದರೆ, ಮಾನ್ಯ ಮುಖ್ಯ ಮಂತ್ರಿಯವರು, ನಮ್ಮ ಮೇಲೆ ವಿಶ್ವಾಸವಿಡಿ, ನಾವೂ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಔಟ್ ಸೈಡ್ ದಿ ಟ್ರಿಬ್ಯುನಲ್ ಇದನ್ನು ಸೆಟಲ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆಂದು. ಎಲ್ಲಾ ತರಹದ ಸರ್ಕ್‌ಸ್ ಮಾಡಿ ಇಡೀ ದೇಶದ ಫಿಲಾಸಫಿಯನ್ನು ಹೇಳಿದಿರಿ. ನಮ್ಮನ್ನು ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳುವಂತೆ ಮಾಡಲಾಗಿದೆ. ಆದರೆ, ಇವತ್ತು ಏನಾಯಿತು? ಅವರು ಸುಮ್ಮನೆ ಕುಳಿತಿಲ್ಲ, ಅವರು ಪ್ರಯತ್ನ ಮಾಡುವುದನ್ನು ಮಾಡಿ ನಮ್ಮಲ್ಲಿ ಏನು ನೀರು ತೆಗೆದುಕೊಳ್ಳಬೇಕೋ ಅದನ್ನೂ ಮಾಡುತ್ತಿದ್ದಾರೆ. ಕೊನೆಗೆ ಇದು ಏನಾಯಿತು ಅಂದರೆ ಅಗಸರ ನಾಯಿ ಹೊಲವನ್ನು ಕಾಯಲಿಲ್ಲ, ಮನೆಯನ್ನೂ ಕಾಯಲಿಲ್ಲ, ಎನ್ನುವ ಹಾಗೆ ಪರಿಸ್ಥಿತಿ ನಮ್ಮದಾಗಿದೆ. ಆದಕ್ಕಾಗಿಯೇ ವಿಶ್ವಾಸ ಇಲ್ಲದ ಕಾರಣಕ್ಕಾಗಿ ಅವರ ಬೆನ್ನು ಹತ್ತಿ ಇವರು ಏನು ಸರಿ ಮಾಡುತ್ತಾರೋ ತಪ್ಪು ಮಾಡುತ್ತಾರೋ? ಎಂದು ನಾವು ಬಂದಿದ್ದೆವು. ಯಾವಾಗ ನಾವು ನಿಮ್ಮನ್ನು ಬಿಟ್ಟು ಬಂದೆವೋ ಮತ್ತೆ ನೀವು ಮೋಸ ಹೋಗಿ ಮೂರು ನಾಲ್ಕು ದಿವಸ ಕುಳಿತು ಮತ್ತೆ ಅವರು ತಪ್ಪು ಮಾಡಿದ್ದನ್ನು ನೀವು ಒಪ್ಪಿಕೊಂಡು ಬಂದಿದ್ದೀರಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ವಿರೋಧ ಪಕ್ಷದ ನಾಯಕರು, ಆದರೇ ಅಡ್ಜಸ್ಟ್‌ಮೆಂಟ್ ವಿಷಯ ಹೇಳಿರುವುದರಿಂದ , ಏನು ಅಡ್ಜಸ್ಟ್‌ಮೆಂಟ್ ಎನ್ನುವುದು ನಮಗೆ ಗೊತ್ತಾಗಬೇಕು. ಇಲ್ಲಾ ಆ ಪದವನ್ನು ಅವರು ವಾಪಸ್ ಪಡೆಯಬೇಕು. ಇಲ್ಲದ್ದಿರೆ ನಾವು ಬಿಡುವುದಿಲ್ಲ. ನಾವು ಅದಕ್ಕೆ ಒಪ್ಪಲು ತಯಾರಿಲ್ಲ. ನಾವು ಏನು ಅಡ್ಜಸ್ಟ್‌ಮೆಂಟ್ ಮಾಡಿಕೊಂಡಿದ್ದೇವೆ? ನಾವು ಏನಾದರೂ ಅಡ್ಜಸ್ಟ್‌ಮೆಂಟ್ ಮಾಡಿಕೊಂಡಿದ್ದರೆ, ಅದನ್ನಾದರೂ ಅವರು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ: ಅವರು ಹೇಳಿದ್ದು ಏನೆಂದರೆ, ಸೀಟು ಅಡ್ಜಸ್ಟ್‌ಮೆಂಟ್ ಮಾಡಿಕೊಂಡವರು ನಿಮ್ಮ ಜೊತೆ ಇರುತ್ತಾರೆ ಎಂದು, ಅಂದರೆ ಎಲೆಕ್ಷನ್ ಟೈಮ್‌ನಲ್ಲಿ ಸೀಟ್ ಅಡ್ಜಸ್ಟ್ ಮಾಡಿಕೊಂಡು ಗೆದ್ದವರು ನಿಮ್ಮ ಜೊತೆಯಲ್ಲಿ ಇರುತ್ತಾರೆಂದು ಅದರ ಅರ್ಥ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಖರ್ಗೆಯವರ ಬಗ್ಗೆ ನನಗೆ ಬಹಳ ಅನುಕಂಪ ಆಗುತ್ತಿದೆ. ಸೀಟುಗಳನ್ನು ಯಾರು ಯಾರ ಜೊತೆ ಅಡ್ಜಸ್ಟ್ ಮಾಡಿಕೊಳ್ಳಲಾಗಿತ್ತೆಂದು ಮಾನ್ಯ ಖರ್ಗೆಯವರಿಗೆ ಗೊತ್ತಿಲ್ಲ ಎನ್ನುವುದು ದುಃಖಕರವಾದ ವಿಷಯ. ನನ್ನ ಪ್ರಶ್ನೆ ಇಷ್ಟೇ, ಮಾನ್ಯ ವಿರೋಧ-ಪಕ್ಷದ ನಾಯಕರು ಮಾತನಾಡತಕ್ಕಂಥ ಕಾಲದಲ್ಲಿ 'ನಾವು ನಿಮ್ಮ ಜೊತೆಯಲ್ಲಿ ಆಡ್ಜಸ್ಟ್‌ಮೆಂಟ್ ಇಲ್ಲ' ಎಂದು ಹೇಳಿದರು. ಹಾಗಾದರೆ ನಾವೆಲ್ಲಾ ಅಡ್ಜಸ್ಟ್‌ಮೆಂಟ್ ಇದ್ದೀವೆಯೇ? ನಾವು ಏನು ಅಡ್ಜಸ್ಟ್‌ಮೆಂಟ್ ಇದ್ದೇವೆಂದು ಆದನ್ನಾದರೂ ಹೇಳಬೇಕು.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಮಗೆ ಬೇಕಾಗಿರುವುದು, ನಾವು ಏನು ಅಡ್ಜಸ್ಟ್‌ಮೆಂಟ್ ಆಗಿದ್ದೇವೆ? ಅವರು ಏನು ಅಡ್ಜಸ್ಟ್‌ಮೆಂಟ್ ಆಗಿಲ್ಲ? ಎರಡರಲ್ಲಿ ಒಂದು ಹೇಳಬೇಕು. ಇಲ್ಲವೆಂದರೆ ಆ ಪದವನ್ನು ವಾಪಸ್ ಪಡೆಯಬೇಕು.

ಉಪಾಧ್ಯಕ್ಷರು: ಅವರು ಇಲ್ಲ ಎಂದು ಹೇಳಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇಲ್ಲ ಎಂದರೆ, ಆ ಪದವನ್ನು ವಾಪಸ್ ಪಡೆಯಬೇಕು.

ಉಪಾಧ್ಯಕ್ಷರು: ಅದು ಇಲ್ಲವೆಂದು ಕ್ಲಾರಿಫೈ ಮಾಡಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಎಲ್ಲಿ ಕ್ಲಾರಿಫೈ ಮಾಡಿದ್ದಾರೆ? ಮಾನ್ಯ ಉಪಾಧ್ಯಕ್ಷರೆ, ನಾವೂ ಕೂಡ ಒಂದು ರಾಜಕೀಯ ಪಕ್ಷವನ್ನು ಪ್ರತಿನಿಧಿಸತಕ್ಕಂಥವರು, ನಮಗೂ ಪ್ರಾಮಾಣಿಕತೆ ಇದೆ. ಅವರು ತಮ್ಮ ಅಭಿಪ್ರಾಯಗಳನ್ನು ಬೇಕಾದಷ್ಟು ಹೇಳಿಕೊಳ್ಳಲಿ, ಆದಕ್ಕೆ ನಮ್ಮ ಅಭ್ಯಂತರವಿಲ್ಲ. ಅವರು ನಿನ್ನೆಯಿಂದ ಮಾತನಾಡಿದರು, ಆಗ ನಾವು ಒಂದು ಸ್ವಲ್ಪವೂ ತೊಂದರೆ ಮಾಡಿಲ್ಲ. ಅವರು ಬೇರೆ ರಾಜಕೀಯ ಪಕ್ಷಗಳ ಬಗ್ಗೆ ಹಗುರವಾಗಿ ಮಾತನಾಡುವುದನ್ನು ನಾನು ಒಪ್ಪುವುದಿಲ್ಲ.

ಉಪಾಧ್ಯಕ್ಷರು: ಆ ರೀತಿ ಮಾತನಾಡಿಲ್ಲವೆಂದು ಅವರು ಹೇಳಿದ್ದಾರೆ, ತಾವು ಕುಳಿತುಕೊಳ್ಳಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ: ಅವರು ಹೇಳಿದ್ದಾರೋ ಇಲ್ಲವೋ ಎಂದು ಕಡತವನ್ನು ತರಿಸಿ ನೋಡಿ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅವರು ಆ ಪದವನ್ನು ವಾಪಸ್ ತೆಗೆದುಕೊಳ್ಳದಿದ್ದರೆ, ನಾನು ಧರಣಿಯನ್ನು ಮಾಡುತ್ತೇನೆ.

(ಮಾನ್ಯ ಸದಸ್ಯರು ಬಾವಿ ಒಳಗೆ ಬಂದು ಧರಣಿನಿಂತರು)

ಉಪಾಧ್ಯಕ್ಷರು: ಆ ರೀತಿ ತಮ್ಮನ್ನು ಕುರಿತು ಮಾತನಾಡಿಲ್ಲವೆಂದು ವಿರೋಧ ಪಕ್ಷದ ನಾಯಕರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಹೇಳಿರುವ ಪದವನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರಿ ಬಿ.ಎಸ್.ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ವಿರೋಧ ಪಕ್ಷದಲಿರುವ ನಾವುಗಳೆಲ್ಲರೂ ಜನರ ಹಿತದೃಷ್ಟಿಯಿಂದ ಆಡಳಿತ ಪಕ್ಷದವರನ್ನು ಎದುರಿಸುವಂಥ ಕೆಲಸವನ್ನು ಮಾಡುತ್ತಿದ್ದೇವೆ. ನಾನು ವಿರೋಧ ಪಕ್ಷ ನಾಯಕನಾದಾಗ, ಏನಾದರೂ ಆಗಿದ್ದರೂ ಪರವಾಗಿರಲಿಲ್ಲ, ಆದರೆ, ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕನಾಗಿರುವುದು ಸರಿಯಲ್ಲವೆಂದು, ಆಗ ಉಪ ಮುಖ್ಯ-ಮಂತ್ರಿಯಾಗಿದ್ದ ಈಗಿನ ಮುಖ್ಯ ಮಂತ್ರಿಗಳು ಆ ಸಂದರ್ಭದಲ್ಲಿ ಹೇಳಿದ್ದರು. ಆಗ ನಾನು, ಹಿಂದೆ ಯಾರು ಯಾರು ನಿಮ್ಮ ಹತ್ತಿರ ಅಡ್ಜಸ್ಟ್‌ಮೆಂಟ್ ಮಾಡಿಕೊಂಡಿದ್ದರೋ ನನಗೆ ಗೊತ್ತಿಲ್ಲ. ನಾವಂತೂ ಅಂಥವರಲ್ಲವೆಂದು ಈ ಹಿಂದೆಯೇ ಅವರಿಗೆ ಹೇಳಿದ್ದೆ. ಇವತ್ತೂ ಸಹ ನಾವು ಆ ತರಹ ಅಡ್ಜಸ್ಟ್‌ಮೆಂಟ್ ಮಾಡಿಕೊಳ್ಳುವಂಥ ವ್ಯಕ್ತಿಗಳಲ್ಲವೆಂದು ಹೇಳಿದ್ದೇನೇ ಹೊರತು ಖಂಡಿತ ನಾನು ಶ್ರೀರಾಮರೆಡ್ಡಿಯವರನ್ನು ಉದ್ದೇಶಿಸಿ ಹೇಳಿಲ್ಲ.

5: 10 ಪಿ .ಎಂ

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ನೀರಾವರಿ ಸಚಿವರು ತುಂಗಭದ್ರಾನಾಲೆಯಲ್ಲಿ ಒಡೆದು ಹೋಗಿರುವ ಬಗ್ಗೆ ಸಂಭಂಧಪಟ್ಟ ಯಾರ್‍ಯಾರ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೀರಿ ? ಆ ಕುರಿತು ತಾವೇನು ಜವಾಬ್ದಾರಿಯುತವಾಗಿ ಕೆಲಸ ಮಾಡಿದ್ದೀರಿ ? ಇಲಾಖೆಗಳಲ್ಲಿ ಬಹಳ ಕೆಟ್ಟ ಇಲಾಖೆ ಎಂದರೆ ನೀರಾವರಿ ಇಲಾಖೆ. ಇವರಷ್ಟು ಸಿಮೆಂಟ್, ಕಬ್ಬಿಣ ತಿನ್ನುವವರು ಇನ್ನು ಯಾರೂ ಜಗತ್ತಿನಲ್ಲಿ ಹುಟ್ಟಿರಲಾರರು. ಹಿಂದೆ ರಾಕ್ಷಸರು ಎಂದು ಇರುತ್ತಿದ್ದರು. ಇವರುಗಳು ಆ ರಾಕ್ಷಸರ ಚಿಕ್ಕಪ್ಪನ ಮಕ್ಕಳು ಎಂದು ಕಾಣುತ್ತದೆ. ಉದಾಹರಣೆಗೆ ನೀವು ಒಂದು ಲಕ್ಷ ರೂ.ಗಳ ಟೆಂಡರ್‌ನ್ನು ಕರೆದರೆ 35 ಪರ್‌ಸೆಂಟ್ ಲೆಸ್ ಹಾಕುತ್ತಾರೆ ಅಂದರೆ 65 ಸಾವಿರ ರೂಪಾಯಿಗಳಿಗೆ ಕೆಲಸ ಮಾಡುತ್ತಾರೆ ಅಂದರೆ ಎಸ್ ಆರ್ ರೇಟ್‌ನಲ್ಲಿ ಉತ್ತಮವಾಗಿ 1 ಲಕ್ಷರೂಗಳಿಗೆ ಈ ಕೆಲಸವನ್ನು ಮಾಡಬಹುದು ಎಂದು ಇರುತ್ತದೆ. ಆದರೆ ಇವರು 35 ಪರ್‌ಸೆಂಟ್‌ಗೆ ಕಡಿಮೆ ಮಾಡುತ್ತಾರೆಂದರೆ ಅದು ಯಾವರೀತಿಯ ಕಾಮಗಾರಿಯಾಗುತ್ತದೆ? ಆ ತರಹದ ಕಾಮಗಾರಿಗಳನ್ನು ಮಾಡಿದರೆ ಮುಂದೆ ಅದರಲ್ಲಿ ಏನು ಮಾಡುತ್ತೀರಿ ? ಇನ್ನು ಸಣ್ಣ ನೀರಾವರಿಯ ವಿಚಾರ ಹೇಳುವುದಾದರೆ, ನಿಮ್ಮ ಸರಕಾರ ಬಂದು 9 ತಿಂಗಳುಗಳು ಆದುವು, ಈಗಿನ ಮಂತ್ರಿಗಳು ಬಂದು ಮೂರು ತಿಂಗಳು ಆಗಿರ ಬಹುದು. ಬಹಳ ಅತ್ಯುತ್ತಮವಾದ ಒಂದು ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದೀರಿ. ಲಿಫ್ಟಿರಿಗೇಶನ್ ಕಾರ್ಪೊರೇಷನ್ ಎಂದು ಮಾಡಿದ್ದೀರಿ. ಅದು ಈಗಾಗಲೇ ಬ್ಯಾನ್ ಆಗಿದೆ. ಅವರಿಂದ ಯಾವುದೇ ಕಾರ್ಯಕ್ರಮಗಳು ಕಾರ್ಯಗತ ಮಾಡಲಾಗುತ್ತಿಲ್ಲ. ರಾಜ್ಯದಲ್ಲಿ ಅತ್ಯಂತ ಜವಾಬ್ದಾರಿ ಯಿಂದ ಕೆಲಸ ಮಾಡಬೇಕಾದದ್ದು ದೊಡ್ಡ ನೀರಾವರಿಯಲ್ಲ ಸಣ್ಣ ನೀರಾವರಿಕೆಲಸ. ಉದಾಹರಣೆಗೆ ನಮ್ಮ ಕ್ಷೇತ್ರದಲ್ಲಿನ ಒಂದು ಕೆರೆಯ ವಿಚಾರವನ್ನು ಹೇಳಬಯಸುತ್ತೇನೆ. ಅದು ಜಿಲ್ಲಾಪರಿಷತ್‌ಗೆ ಸೇರಿದೆಯೇ, ಸಣ್ಣ ನೀರಾವರಿಗೆ ಸೇರಿದೆಯೇ ಎಂಬುದನ್ನು ಐಡಂಟಿಫೈ

ಮಾಡುವ ಸಾಮರ್ಥವೇ ಇಲ್ಲದ ಇಲಾಖೆಯ ಕಾರ್ಯವ್ಯಾಪ್ತಿಯ ಬಗ್ಗೆ ತಾವು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣ ಏನು? ನಿಮ್ಮಲ್ಲಿ ಕೆರೆಯ ಬಗ್ಗೆ ಕಾನ್‌ಸೆಪ್ಟ್ ಬೇಕಲ್ಲವೆ? ಇಡೀ ರಾಜ್ಯದಲ್ಲಿ ಒಂದು ಲಕ್ಷ ಕೆರೆ-ಕಟ್ಟೆಗಳಿವೆ. ಅದರ ಬಗ್ಗೆ ಏನಾದರೂ ಕಾರ್ಯಕ್ರಮಗಳು ಯೋಜನೆಗಳು ನಿಮ್ಮಲ್ಲಿ ಇವೆಯೇ? ಇಲ್ಲ..ಅದು ನಿಮಗೆ ಬೇಕಾಗಿಯೂ ಇಲ್ಲ. ಬೇಕಾದರೆ ಎಲ್ಲಿ ಬೇಕಾದಲ್ಲಿ ಬೋರ್‌ಗಳನ್ನು ಕೊರೆಯುತ್ತೀರಿ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಗಮನಿಸಬೇಕು. ಭೂಮಿ ಇರುವಲ್ಲೆಲ್ಲಾ ಕೊರೆಯುತ್ತಾ ಇದ್ದೀರಿ, ಮುಂದೆ ನೀರು ಎಲ್ಲಿಂದ ತರುತ್ತೀರಿ? ಪ್ರಪಂಚದಲ್ಲಿಯೇ ಅತೀ ಹೆಚ್ಚು ಮಳೆಯಾಗುವ ಜಾಗವು ನಮ್ಮ ದೇಶ. ಒಂದು ಮೀಟರ್ ಎತ್ತರದಷ್ಟು ಹರಿಯತಕ್ಕಂಥ ಮಳೆಯು ನಮ್ಮಲ್ಲಿಯಾಗುತ್ತದೆ. ಆದರೆ ನಮ್ಮಲ್ಲಿ ಆ ನೀರನ್ನು ತಡೆಹಿಡಿದಿಟ್ಟುಕೊಳ್ಳುವಷ್ಟರ ಸಾಮರ್ಥ್ಯವು ನಮ್ಮಲ್ಲಿಲ್ಲ. ಕಾರಣ ನಮ್ಮಲ್ಲಿರುವ ಕೆರೆ-ಕಟ್ಟೆಗಳ ಬಗ್ಗೆ ನಮ್ಮಲ್ಲಿ ಒಂದು ನೀತಿ ನಿರ್ಧಾರಗಳು, ಬದ್ಧತೆಗಳು ಇಲ್ಲ. ಇವೊತ್ತು ಸುಮಾರು 70 ಸಾವಿರಗಳಷ್ಟು ಗೋ-ಕಟ್ಟೆಗಳು ನಮ್ಮಲ್ಲಿವೆ. ಅವುಗಳು ಏನಾಗಿವೆ ಎಂಬ ಯೋಚನೆಯನ್ನು ನೀವುಗಳು ಯಾರೂ ಮಾಡಿಯೇ ಇಲ್ಲ. ಯಾಕೆಂದರೆ ನಿಮಗೆ ಐಡಿಯಾಲಜಿ ಆ ಕುರಿತಾಗಿ ಇಲ್ಲ. ಇದಕ್ಕೆ ಬೇಕಾಗುವಷ್ಟು ಹಣವನ್ನು ನಬಾರ್ಡ್‌ನವರು ಕೊಡಲು ಸಿದ್ಧರಿದ್ದಾರೆ. ಸರಕಾರದವರು ವಾರ್‌ಫುಟ್ ರೀತಿಯಲ್ಲಿ ಕೆಲಸವನ್ನು ಮಾಡಬೇಕಾಗಿದ್ದರು ಏನೂ ಮಾಡುತ್ತಿಲ್ಲ. ನಮ್ಮಲ್ಲಿ ಹಿಂದೆ ಹತ್ತು ವರ್ಷಗಳ ಹಿಂದೆ ಒಡೆದು ಹೋಗಿರುವ ಒಂದು ಕೆರೆ ಇದೆ. ಪಾಂಡವಪುರದ ಕನಗನಹಳ್ಳಿ ಗ್ರಾಮಕ್ಕೆ ಸಂಬಂಧಪಟ್ಟ ಒಂದು ಕೆರೆ, ಸುಮಾರು 250 ಎಕರೆಗೆ ನೀರಾವರಿಯಾಗುತ್ತಿದ್ದಂಥಾದ್ದು ಇದ್ದು ಆ ಕೆರೆಯ ಅಗಲ 40 ಎಕರೆ ಇದೆ. ಹೇಮಾವತಿ ಅಚ್ಚುಕಟ್ಟು ಪ್ರದೇಶಕ್ಕೆ ಬರುತ್ತದೆ. ಆದರೆ, ಒಡೆದು ಹೋದ ಬಗ್ಗೆ ಯಾವುದೇ ಕಾರ್ಯ ಎತ್ತಿಕೊಂಡಿಲ್ಲ. ಕೆರೆಗಳ ಅಭಿವೃದ್ಧಿಯ ಬಗ್ಗೆ ನಿಮ್ಮಲ್ಲಿ ಒಂದು ನೀತಿ ಇಲ್ಲ. ಏನು ಮಾಡಿದ್ದೀರಿ ನೀವು? ಮಾನ್ಯ ಉಪಾಧ್ಯಕ್ಷರೇ, ನಮ್ಮಲ್ಲಿ ಕಾರ್ಮಿಕರಿಗಾಗಿಯೇ ಒಬ್ಬ ಮಂತ್ರಿ ಇದ್ದಾರೆ. ಸುಮಾರು 80 ಲಕ್ಷ ಜನ ಅಸಂಘಟಿತ ಕಾರ್ಮಿಕರು ನಮ್ಮಲ್ಲಿದ್ದಾರೆ. ಅವರ ಬಗ್ಗೆ ಏನಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ? ಏನು ಕಾರ್ಯಕ್ರಮವನ್ನು ಮಾಡಿದ್ದೀರಿ? ಅವರಿಗೆ ಸಬ್ಸಿಡಿ ಕೊಡುತ್ತಿದ್ದೇವೆ ಎಂದು ಯೋಚನೆ ಮಾಡಬಹುದು. ಆ 80 ಲಕ್ಷದಷ್ಟು ಅಸಂಘಟಿತ ಕಾರ್ಮಿಕರುಗಳಿಗೆ ಕನಿಷ್ಟ ವೇತನ ನಿಗದಿ ಮಾಡುವಲ್ಲಿ ನಿವು ವಿಫಲರಾಗಿದ್ದೀರಿ. ಅವರ ಜೀವನ ಭದ್ರತೆಗೆ ಒಂದು ಆರ್ಥಿಕ ನಿಧಿಯನ್ನು ರೂಪಿಸಿಲ್ಲ. ತಾವುಗಳು ಅಧಿಕಾರಕ್ಕೆ ಬಂದ ಕೂಡಲೇ 100 ಕೋಟಿಗಳ ಒಂದು ನಿಧಿಸಂಗ್ರಹಿಸುವ ಮೂಲಕ ಕೃಷಿಕಾರ್ಮಿಕರ, ಅಸಂಘಟಿತ ಕಾರ್ಮಿಕರ ಆರೋಗ್ಯದ ಬಗ್ಗೆ ಕಾಳಜಿ ಮಾಡುತ್ತೇವೆ ಎಂದು ಹೇಳಿ ರೈಲು ಬಿಟ್ಟದ್ದೇ ಬಿಟ್ಟಿದ್ದು.....ಎಲ್ಲಿ ಆ 100 ಕೋಟಿ. ರೂ.ಗಳು? 100 ಇಲ್ಲ, 15 ಕೋಟಿಯೂ ಇಲ್ಲ, ಏನೂ ಇಲ್ಲ......ಕಾರ್ಮಿಕರಿಗೆ ಆರೋಗ್ಯವು ಇಲ್ಲ, ಏನೂ ಇಲ್ಲ. ಆದರೆ ಕಾರ್ಮಿಕರಿಗಾಗಿ ಒಬ್ಬ ಮಂತ್ರಿ. ಅವರು 9 ಕೋಟಿ ರೂ.ಗಳನ್ನು ಬಜೆಟ್ ಪ್ರಾವಿಷನ್ ಮಾಡಿಕೊಂಡಿದ್ದಾರೆ. ಆದರೆ 80 ಲಕ್ಷ ಅಸಂಘಟಿತ ಕಾರ್ಮಿಕರ ಬಗ್ಗೆ ಯಾವುದೇ ಕಾರ್ಯಕ್ರಮಗಳು ಇಲ್ಲ. ನೀವು ಬಂದು ಒಂದು ವರ್ಷ, 9 ತಿಂಗಳಾದರೂ ಅವರ ಬಗ್ಗೆ ಯಾವುದೇ ಮಾತುಗಳೂ ಇಲ್ಲ. ಆಂತೆಯೇ ಮಾನ್ಯ ಬಚ್ಚೇಗೌಡರು ಸುಮಾರು 11 ಲಕ್ಷ ನಿವೇಶನಗಳನ್ನು ಐಡಂಟಿಫೈ ಮಾಡಿದ್ದೇವೆ. 11 ಲಕ್ಷ ಜನರಿಗೆ ಸೈಟ್ ಕೊಟ್ಟಿದ್ದೀರಿ?

ಕೋಮಾಸ್ಟೇಜ್‌ನಲ್ಲಿರುವ ನಿಮ್ಮ ತಹಶೀಲ್ದಾರರುಗಳು ಎಷ್ಟು ಸೈಟ್‌ಗಳನ್ನು ಐಡಂಟಿಫೈ ಮಾಡಿದ್ದಾರೆ? ಒಂದೂ ಕೂಡ ಐಡಂಟಿಫೈ ಮಾಡಿಲ್ಲ. ಈ ಬಗ್ಗೆ ನೀವು ತಹಶೀಲ್ದಾರರ ಮೇಲೆ ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ ತಹಶೀಲ್ದಾರರು ಇದರ ಬಗ್ಗೆ ಆಲೋಚನೆ ಮಾಡಿಲ್ಲ. ತಹಶೀಲ್ದಾರರೇ ಭೂಮಿ ಆಕ್ವೈಯರ ಮಾಡಿ ಪಂಚಾಯತಿಯವರಿಗೆ ಕೊಡಬೇಕು. ತಾವು 11 ಲಕ್ಷ ಸೈಟ್‌ಗಳನ್ನು ಐಡಂಟಿಫೈಮಾಡಿದ್ದೇವೆಂದು ಹೇಳುವುದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ ಆದರೆ ಸ್ವಾತಂತ್ರ್ಯ ಬಂದಾಗಿನಿಂದಲೂ ನೂರಕ್ಕೆ ನಲವತ್ತು ಗ್ರಾಮಗಳಿಗೆ ಇನ್ನೂ ಒಂದು ಸೈಟ್‌ನ್ನೂ ಐಡಂಟಿಫೈ ಮಾಡಿ ಬಡತನ ರೇಖೆಗಿಂತ ಕೆಳಗಿರತಕ್ಕಂಥವರಿಗೆ ಕೊಡುತ್ತೇವೆಂದು ಹೇಳುವ ಮಾತುಗಳಲ್ಲಿ ಸತ್ಯವಿಲ್ಲ, ತಾವು ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದಿಲ್ಲ. ಬಡವರ ಬಗ್ಗೆ ಬಹಳ ಕಾಳಜಿ ಇದೆ ಎಂದು ಹೇಳುವ ನೀವು ಏನು ಮಾಡಿದ್ದೀರಿ? ನೀವು ಇವೊತ್ತು ಯಾವ ಮಟ್ಟಕ್ಕೆ ಬಂದಿದ್ದೇವೆ? ಮೊನ್ನೆ ನಾನು ಒಂದು ಹಳ್ಳಿಗೆ ಹೋಗಿದ್ದೆ. ಅಲ್ಲಿ ಹಣದ ಫಂಡ್ ಮಾಡಿಸುತ್ತಾ ಇದ್ದೇವೆ. ಎಲ್ಲಾ ಹಳ್ಳಿಗಳಲ್ಲಿಯೂ ಮನೆಗೆ 100 ರೂ.ಗಳಂತೆ ದುಡ್ಡನ್ನು ಕಲೆಕ್ಟ್ ಮಾಡಿ ಇಟ್ಟುಕೊಳ್ಳಿ, ಯಾರಾದರೂ ಸತ್ತಾಗ ಯಾರಿಗೂ ಎತ್ತಿ ಹಾಕಲು ಆಗುತ್ತಾ ಇಲ್ಲ, ಪಕ್ಕದ ಮನೆಯಲ್ಲಿ ಕೂಡ ದುಡ್ಡು ಇಲ್ಲ, ಅದುದರಿಂದ 100 ರೂಗಳ ಹಣದ ಫಂಡ್ ಮಾಡಿ, ಹಣ ಎತ್ತಿಹಾಕುವ ಕೆಲಸ ಮಾಡುತ್ತಿದ್ದೇವೆಂದು ಹೇಳಿದರು. ಹಳ್ಳಿಗಳಲ್ಲಿ ಆ ಪರಿಸ್ಥಿತಿಯು ಬಂದಿದೆ. ಹಳ್ಳಿಗಳಲ್ಲಿನ ಆರ್ಥಿಕ ಪರಿಸ್ಥಿತಿಯು ಆ ಮಟ್ಟಕ್ಕೆ ಹೋಗಿದೆ. ಇನ್ನೂ ಮಹಿಳೆಯರ ಬಗ್ಗೆ ಏನು ಕಾರ್ಯಕ್ರಮಗಳಿವೆ? ಮಹಿಳಾ ಆಯೋಗವನ್ನು ಮಾಡಿ ರಾಜ್ಯದಲ್ಲಿ ಅತ್ಯುತ್ತಮ ಸಾಧನೆ ಮಾಡುತ್ತಾ ಇದ್ದೇವೆ ಎಂದು ಹೇಳಿದ ನೀವು ಏನು ಮಾಡಿದ್ದೀರಿ? ಬೆಂಗಳೂರು ನಗರದ ವಿಚಾರವನ್ನೇ ಮಾಡೋಣ. ಗಾರ್‌ಮೆಂಟ್ಸ್‌ನಲ್ಲಿ ಕೆಲಸ ಮಾಡತಕ್ಕಂಥ ಮಹಿಳೆಯರಿಗೆ ಕನಿಷ್ಟ ವೇತನವನ್ನು ಕೊಡಿಸ ತಕ್ಕಂಥ ಒಂದು ಕೆಲಸಕ್ಕೂ ಆಗಿಲ್ಲ ಹಳ್ಳಿಯಲ್ಲಿರುವ ಮಹಿಳೆಯರನ್ನು ನಿಮ್ಮ ಮಹಿಳಾ ಆಯೋಗದವರು ಐಡಂಟಿಫೈ ಮಾಡುವುದೇ ಇಲ್ಲ. ಹಳ್ಳಿಗಳಲ್ಲಿನ ಹೆಣ್ಣುಮಕ್ಕಳು ಒಂದು ಜೊತೆ ಚಪ್ಪಲಿ ತೆಗೆದುಕೊಳ್ಳುವಷ್ಟು ಕೂಡ ಸಮರ್ಥರು ಅಲ್ಲ. ಬೆಂಗಳೂರು ಮತ್ತಿತರ ನಗರಗಳಲ್ಲಿ ಉದ್ಯೋಗ ಮಾಡುತ್ತಿರತಕ್ಕಂಥ ಹೆಣ್ಣು ಮಕ್ಕಳಿಗೆ ವಿಶೇಷತಃ ಗಾರ್ಮೆಂಟ್ಸ್‌ಗಳಲ್ಲಿ ಕನಿಷ್ಟವೇತನವನ್ನು ಕೂಡ ಕೊಡುತ್ತಾ ಇಲ್ಲ ಇದನ್ನು ಬಿಟ್ಟು ಮಹಿಳಾ ಆಯೋಗ ಮಾಡಿ ಅದರಿಂದ ಏನು ಮಾಡುತ್ತೀರಿ ನಮ್ಮ ಊರಗಳಲ್ಲಿ ಕುಬೇರ ಎಂದು ಹೆಸರು ಇಟ್ಟು ಕೊಂಡಿರುತ್ತಾನೆ ಆದರೆ ನಾಷ್ಟಕ್ಕೆ ಎರಡು ರೂ. ಗಳನ್ನು ಕೊಡಿ ಎಂದು ಹೇಳುತ್ತಾನೆ. ಮಹಿಳಾ ಆಯೋಗ ಮಾಡಿಕೊಂಡು ಅವರ ಸಮಸ್ಯೆಗಳ ಬಗ್ಗೆ ಆಲೋಚನೆ ಮಾಡಬೇಕು. ಒಂದು ಲಕ್ಷ ಮಹಿಳೆಯರಿಗೆ ಅಣಬೆ ಬೆಳೆಯನ್ನು ಆಧುನಿಕ ರೀತಿಯಲ್ಲಿ ಮಾಡಲು ತರಭೇತಿ ನೀಡುವ ಮೂಲಕ ಉದ್ಯೋಗವನ್ನು ಕೊಡಬಹುದು. ಈ ಬಗ್ಗೆ ನಿಮ್ಮ ಮಹಿಳಾ ಆಯೋಗವು ಯೋಚನೆ ಮಾಡಿದೆಯೇ? ಇಲ್ಲ. ನನಗೆ ಹೆಚ್ಚು ಮಾತನಾಡಲು ಕಾಲಾವಾಕಾಶ ಕಡಿಮೆ ಇರುವುದರಿಂದ ಸ್ವಲ್ಪ ಸರಕಾರದ ಆಡಳಿತವೈಖರಿಯ ಬಗ್ಗೆ ಹೇಳಿದ್ದೇನೆ. ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಸರಕಾರ ಇರಬಹುದು, ಉರುಳಿಯೂ ಹೋಗಬಹದುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವುಗಳು ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆಂದು ಬಂದಿದ್ದೇವೆ. ಸಮಾಜಕ್ಕೂ ನಮಗೂ ಬಹಳ ಸಂಬಂಧವಿದೆ. ಸಮಾಜದ ಬದುಕಿಗೂ ನಮ್ಮ ರಾಜಕಾರಣಕ್ಕೂ ಸಂಬಂಧವಿದೆ.

ನಾಳಿನ ದಿನಗಳಲ್ಲಿ ಉಗ್ರಗಾಮಿಗಳೇ ಮತದಾರರು ಆಗುತ್ತಾರೆ. ಹಾಗೆ ಆಗಬಾರದು ಎಂದು ನಾವುಗಳೆಲ್ಲರು ಈ ವ್ಯವಸ್ಥೆಗಳನ್ನು ಸರಿಪಡಿಸುವ ಹೊಣೆಹೊತ್ತು ಇಲ್ಲಿಗೆ ಬಂದ್ದೇವೆ. ಅವ್ಯವಸ್ಥೆಗಳಿಂದ ಅನಾಹುತುಗಳು ಸಂಭವಿಸುತ್ತವೆ ಎಂಬ ಮಾತುನ್ನು ಹೇಳಿ, ಇದೊಂದು ಎಚ್ಚರಿಕೆಯ ಗಂಟೆ ಎಂದು ಎಚ್ಚರಿಕೆಯ ಮಾತುಗಳನ್ನು ಹೇಳುತ್ತಾ , ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಅಶೋಕ ಕಾಟವೆಯವರು 10 ನಿಮಿಷ ಮಾತನಾಡಿದ ನಂತರ ಮುಖ್ಯಮಂತ್ರಿಗಳು ಉತ್ತರಿಸುವರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರಿಗೆ ಕೊಟ್ಟಮೇಲೆ ಬೇರೆಯುವರೂ ಮಾತನಾಡುವರಿದ್ದಾರೆ. ಅವರು ಬೇಕಾದರೆ ನಾಳೆ ಉತ್ತರಿಸಲಿ.

ಶ್ರೀ ಜೆ.ಎಚ್.ಪಟೇಲ್: ಉಪಾಧ್ಯಕ್ಷರೇ, ನಾಳೆ ನಾನು ಅನಿವಾರ್ಯವಾಗಿ ದೆಹಲಿಯಲ್ಲಿ ಇರಲೇಬೇಕಾಗಿರುವುದರಿಂದ ಬೆಳಿಗ್ಗೆ ಹೊರಡಬೇಕಾಗುತ್ತದೆ. ಆದ್ದರಿಂದ ವಿರೋಧಪಕ್ಷದವರು ಒಪ್ಪಿರುವಂತೆ ಇವತ್ತು ಎಷ್ಟೊತ್ತಾದರೂ ಇದನ್ನು ಮುಗಿಸಬೇಕು, 12 ಗಂಟೆಯಾದರೂ ನಾವೂ ಇರುತ್ತೇವೆ ಅವರೂ ಇರಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಾವು 15ನೇ ಆಗಸ್ಟ್‌ಗೆ ಹೋಗಬೇಕೆಂದಿರಿ, ಒಪ್ಪಿಕೊಂಡೆವು ಆಮೇಲೆ ಪ್ರಧಾನಮಂತ್ರಿಯವರ ಪ್ರವಾಸ ಇರುವುದರಿಮದ ಇದನ್ನು 26ನೇ ತಾರೀಖು ಹಾಕಿರಿ ಎಂದಿರಿ ಅದಕ್ಕೂ ನಾವು ಒಪ್ಪಿದೆವು, ಇವತ್ತು ಇನ್ನೂ ಮೂರು ನಾಲ್ಕು ಜನರಿದ್ದಾರೆ ಅವರು ಮಾತನಾಡಲಿ, ನಾಳೆ ಬೆಳಿಗ್ಗೆ ನೀವು ರಿಪ್ಲೈ ನೀಡಿ ಸಂಜೆಫ್ಲೈಟ್‌ಗೆ ಹೋಗಿರಿ.

+ಶ್ರೀ ಅಶೋಕ ಎಸ್. ಕಾಟವೆ (ಹುಬ್ಬಳ್ಳಿ) : ಅಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಮೊದಲಿಗೆ ವಂದಿಸುತ್ತೇನೆ. 1956 ಮುಂಚೆ ಕರ್ನಾಟಕ ಚೂರುಚೂರಾಗಿತ್ತು. ಕರ್ನಾಟಕ ಏಕೀಕರಣ ಸಮಿತಿ ವತಿಯಿಂದ ಕನ್ನಡನಾಡಿನ ಭಾಗಗಳು ಬಾಂಬೆ ಭಾಗ, ಮದ್ರಾಸ್ ಪ್ರಾಂತ್ಯ ಮತ್ತು ಹೈದರಾಬಾದ್‌ನಲ್ಲಿನ ಕನ್ನಡ ಗಡಿಗಳು ಮೈಸೂರು ಪ್ರಾಂತ್ಯದಲ್ಲಿಸೇರಬೇಕು, ಒಟ್ಟಾರೆ ಕರ್ನಾಟಕ ರಾಜ್ಯವಾಗಬೇಕು ಎಂದು ಇಲ್ಲಿ ನಮಗೆ ನ್ಯಾಯಸಿಗಬಹುದೆಂದು ಉತ್ತರ ಕರ್ನಾಟಕದ 8 ಜಿಲ್ಲೆಗಳು ಸೇರಿ ಏಕೀಕರಣವಾದೆವು. 1956ರ ಆ ಹೋರಾಟದಲ್ಲಿ ಉತ್ತರ ಕರ್ನಾಟಕದ ಜನರ ಪಾತ್ರ ಅತಿ ಹೆಚ್ಚಿನದಾಗಿದೆ. ಕನಸು ಕಂಡ ಉತ್ತರ ಕರ್ನಾಟಕದ 8 ಜಿಲ್ಲೆಗಳಿಗೆ ಇವತ್ತು 40 ವರ್ಷ ಕಳೆದರೂ ಸಹಿತ ತಮ್ಮ ನ್ಯಾಯಯುತ ಬೇಡಿಕೆಗಳನ್ನೂ ಸರ್ಕಾರ ಕೊಡಲಿಲ್ಲ.ಇವತ್ತು ಪರಿಸ್ಥಿತಿ ಆ 8 ಜಲ್ಲೆಗಳು ರಾಜ್ಯದಿಂದ ಬೇರೆ ಆಗುವಂತಹ ಪರಿಸ್ಥಿತಿ ಕಣ್ಣಾರೆ ಕಾಣುತ್ತಿದ್ದೇವೆ. 1988ನೇ ಇಸವಿಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ಕೂಡ ಈ 8 ಜಿಲ್ಲೆಗಳು ಬೇರೆ ರಾಜ್ಯವಾಗಬೇಕೆಂದು ಹೇಳಿದ್ದರು, ಆಗ ಹೈದರಾಬಾದ್ ಕರ್ನಾಟಕದ ಅಭಿವೃದ್ಧಿ ಮಂಡಲಿ

ಮಾಡಿ, ಮಲೆನಾಡು ಅಭಿವೃದ್ಧಿ ಮಂಡಲಿ ಮಾಡಿ ಜನರಿಗೆ ಸಾಂತ್ವನ ಮಾಡಿದಿರಿ. ಆದರೂ ಇವತ್ತು ನಮ್ಮ ನ್ಯಾಯಯುತ ಬೇಡಿಕೆಗಳು. ಅಂದರೆ ಹುಬ್ಬಳಿ ಮಹಾನಗರದಲ್ಲಿ ನೈರುತ್ಯರೈಲ್ವೆ ವಲಯ ಆಗಬೇಕೆಂದು ಸತತ 20 ವರ್ಷಗಳಿಂದ ಹೋರಾಟ ನಡೆಯಿತು, ಆ ಹುಬ್ಬಳ್ಳಿಗೆ ರೈಲ್ವೆವರ್ಕ್‌ಶಾಪ್, 100 ವರ್ಷದ ರೈಲ್ವೆ ಇತಿಹಾಸ ಇದೆ. ಹಿಂದೆ ಮಹಾರಾಷ್ಟ್ರ ಆಂಧ್ರ, ಮದ್ರಾಸ್, ಕರ್ನಾಟಕಗಳ ಕೇಂದ್ರವಲಯವಾಗಿತ್ತು ಹುಬ್ಬಳ್ಳಿ, ಅಂಥ ಕೇಂದ್ರವಲಯ 1956 ಆದಮೇಲೆ ಆಂಧ್ರದ ಒತ್ತಾಯದಮೇಲೆ ಸಿಕಂದರಾಬಾದ್‌ಗೆ ವರ್ಗವಾಯಿತು. ಹೈಕೋರ್ಟ್‌ಬೆಂಚೆಗಾಗಿ ಕಳೆದ 20 ವರ್ಷಗಳಿಂದ ಹೋರಾಟ ಮಾಡುತ್ತಾ ಬಂದೆದ್ದೇವೆ. ರೈಲ್ವೆವಲಯದ ಬಗ್ಗೆ ಆಗಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ದೇವೇಗೌಡರು ಆಗಿನ ರೈಲ್ವೆ ಸಚಿವರಿಗೆ ಒಂದು ಪತ್ರ ಬರೆಯುತ್ತಾರೆ 16. 2. 1996ರಲ್ಲಿ:

"There has been persistant demand from people of Karnataka to have a Southern Zonal Office of the Indian Railways opened at Hubli an impartant Commercial Centre in Northern Karnataka. you must have also have been receiving number of representations from different people emphasising the necessity of establishing this office at Hubli. I request you kindly to consider these request favourably and pass orders directing opening of Zonal Office of Sourthern railway at Hubli."

ಅದಕ್ಕೆ ಮತ್ತೆ 8 - 3 -96 ಕ್ಕೆ ರಿಪ್ಲೈ ಮಾಡುತ್ತಾರೆ ಏನೆಂದರೆ ಸದರನ್‌ರೈಲ್ವೆ ಜೊನ್ ಈಗಾಗಲೇ ಮದ್ರಾಸ್‌ನಲ್ಲಿ ಆಗಿದೆ ಎಂದು ಪ್ರೈವೇಟ್‌ಸೆಕ್ರೆಟರಿಗೆ ಈರೀತಿ ಪತ್ರ ಬರೆಯುತ್ತಾರೆ. ಅವರ ಜೊತೆ ಆ ಭಾಗದ ಸಂಸತ್ಸದಸ್ಯರು ಮತ್ತು ರಾಜ್ಯಸಭೆ ಸದಸ್ಯರು ಸೇರಿ 40 ಸದಸ್ಯರನ್ನು ಸೇರಿಸಿಕೊಂಡು, ನೈರುತ್ಯ ವಲಯ ಹುಬ್ಬಳ್ಳಿಯಲ್ಲಿ ಆಗಬೇಕೆಂದು ಪ್ರಧಾನಮಂತ್ರಿಗಳಿಗೆ ಪತ್ರ ಬರೆಯುತ್ತಾರೆ, ಸಹಿಮಾಡಿದ್ದಾರೆ. ಆನಂತರ ವಿಧಾನಸಭೆಯ ಎಂಎಲ್ಎ ಮತ್ತು ಎಂಎಲ್‌ಸಿಗಳು 73 ಜನ ಸೇರಿಕೊಂಡು ಈಗಿನ ಪ್ರಧಾನಮಂತ್ರಿಗಳಿಗೆ ಪತ್ರ ಬರೆಯುತ್ತಾರೆ; ಹುಬ್ಬಳ್ಳಿಗೆ ಹಳೆಯದಾದ ಇತಿಹಾಸ ಇದೆ. 73 ಶಾಸಕರು ಸಹಿ ಮಾಡಿ ಪ್ರಧಾನಮಂತ್ರಿಯವರಿಗೆ ಪತ್ರವನ್ನು ಕೊಡುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ರೈಲ್ವೇ ವಿಚಾರವನ್ನು ಇಲ್ಲಿ ಏತಕ್ಕೆ ಹೇಳುತ್ತಿದ್ದೀರಿ? ಅದು ಸರಿಯಲ್ಲ.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ: ಮಾನ್ಯ ಉಪಾಧ್ಯಕ್ಷರೆ, ಮಿತ್ರರಾಗಿರುವ ಕಾಟ್ವೆಯವರಿಗೆ ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡಲು ಇಷ್ಟವಿಲ್ಲ. ಅವರು ಬೇರೆ ವಿಚಾರವನ್ನು ಮಾತನಾಡುತ್ತಿದ್ದಾರೆ.

ಅವರಿಗೆ ನಿಗದಿಯಾಗಿರುವ ಸಮಯದೊಳಗೆ ಅದನ್ನು ಮಾತನಾಡಲು ಅವಕಾಶ ಕೊಟ್ಟುಬಿಡಿ: ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡುವುದಿಲ್ಲವೆಂದು ಅವರು ತೀರ್ಮಾನ ಮಾಡಿಬಿಟ್ಟಿರುವಂತಿದೆ.

ಉಪಾಧ್ಯಕ್ಷರು : ಮಾನ್ಯ ಅಶೋಕ ಕಾಟ್ವೆಯವರೇ, ತಾವು ಅವಿಶ್ವಾಸ ನಿರ್ಣಯದ ಬಗ್ಗೆ ಸೀಮಿತವಾಗಿ ಮಾತನಾಡಬೇಕು.

ಶ್ರೀ ಅಶೋಕ ಎಸ್. ಕಾಟ್ವೆ: ಮಾನ್ಯ ಉಪಾಧ್ಯಕ್ಷರೇ, ಎಂಭತ್ತರ ದಶಕದಲ್ಲಿ ಯಾವ ಸರಿನ್ ಸಮಿತಿ ವರದಿಯನ್ನು ಕೊಟ್ಟಿತ್ತು ಅದನ್ನು ಆಧಾರವಾಗಿಟ್ಟುಕೊಂಡು ತಮ್ಮ ಪ್ರಧಾನಿಯವರು ಹುಬ್ಬಳ್ಳಿಯಲ್ಲಿ ರೈಲ್ವೆ ನೈರುತ್ಯವಲಯವಾಗುವಂತಿಲ್ಲವೆಂದು ಹೇಳುತ್ತಾರೆ. ಎಂಭತ್ತರ ದಶಕದಲ್ಲಿ ಸಿರನ್ ಸಮಿತಿ ವರದಿಯನ್ನು ಕೊಟ್ಟಿದೆ; ಆಗಿನ ಮುಖ್ಯಮಂತ್ರಿಗಳು 1996ರಲ್ಲಿ ಪತ್ರವನ್ನು ಬರೆಯುತ್ತಾರೆ; ಆಗ ಸರಿನ್ ಸಮಿತಿಯ ಮಾಹಿತಿ ಗೊತ್ತಿತ್ತೋ ಇಲ್ಲವೋ, ಇದರ ಬಗ್ಗೆ ಮಾಜಿ ಮುಖ್ಯಮಂತ್ರಿಗಳಾಗಿದ್ದ ಮತ್ತು ಹಾಲಿ ಪ್ರಧಾನಮಂತ್ರಿಗಳಾಗಿರುವವರು ಉತ್ತರವನ್ನು ಕೊಡಬೇಕು. ನಮ್ಮ ಭಾಗದ ಎಂಟು ಜಿಲ್ಲೆಗಳಲ್ಲಿ ಬಂಗಾರದ ಹೊಗೆ- ಆಗಬಹುದೆಂದು ಅಲ್ಲಿನ ಜನರು ಭಾವಿಸಿಕೊಂಡಿದ್ದರು. ಆದರೆ ನಮ್ಮ ಭಾಗದಲ್ಲಿ ಆಗಬೇಕಿದ್ದ ರೈಲ್ವೆ ನೈರುತ್ಯವಲಯವನ್ನು ಮಾಡುವುದಿಲ್ಲವೆಂದು ಹೇಳಿ ನಮ್ಮನ್ನು ವಾಪಸ್ ಕಳುಹಿಸಿದರು. ಈ ಎರಡನೇಯ ತಾರೀಖು ಪ್ರಧಾನಮಂತ್ರಿಗಳು ಹುಬ್ಬಳ್ಳಿ ಮಾಹಾನಗರಕ್ಕೆ ಬರಬೇಕಾದರೆ ನಾವುಗಳು ಎರಡು ಕನಿಷ್ಟ ಬೇಡಿಕೆಗಳ ಬಗ್ಗೆ ಹೇಳಿದ್ದೆವು. ಒಂದು ಹುಬ್ಬಳ್ಳಿ ನಗರಕ್ಕೆ ನೈರುತ್ಯವಲಯ ತರಬೇಕು. ಎರಡು ಹೈಕೋರ್ಟ ಪೀಠ ಮಾಡಬೇಕು ಎಂದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇವರೇನು ಚುನಾವಣೆಯ ಭಾಷಣ ಮಾಡುತ್ತಿದ್ದಾರೆಯೇ? ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ವಿಚಾರವನ್ನು ಇಲ್ಲಿ ಮಾತನಾಡಬಾರದು.

(ಗೊಂದಲ)

ಶ್ರೀ ಅಶೋಕ ಎಸ್. ಕಾಟ್ವೆ: ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ನಮ್ಮ ಎರಡು ಬೇಡಿಕೆಗಳ ಬಗ್ಗೆ ನ್ಯಾಯಯುತವಾದ ತೀರ್ಮಾನ ತೆಗೆದುಕೊಳ್ಳಲಿಲ್ಲ. ಆ ಭಾಗದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯಾಗಬೇಕು ಎನ್ನತಕ್ಕ ಬೇಡಿಕೆಯೊಂದಿಗೆ ಇಂದು ಧಾರವಾಡ ಸಂಪೂರ್ಣವಾಗಿ ಬಂದ್ ಆಗಿದೆ. ಕೋರ್ಟ್‌ಗಳು ಬಂದ್ ಆಗಿವೆ. ಆ ರೀತಿ ಬಂದನ್ನು ಆಚರಿಸುವಂಥ ಸಂದರ್ಭದಲ್ಲಿ ಪ್ರಧಾನಮಂತ್ರಿಗಳು ಹುಬ್ಬಳ್ಳಿಗೆ ಬಂದಂತ ಸಮಯದಲ್ಲಿ ನಮ್ಮ ಪಕ್ಷದ ನಾಲ್ಕು ಜನ ನ್ಯಾಯಯುತವಾದ ಬೇಡಿಕೆಯನ್ನು ಈಡೇರಿಸಬೇಕೆಂದು ಪ್ರಜಾಪ್ರಭುತ್ವದಲ್ಲಿ ಗೋಡೆಯವೇಲೆ ಬರೆಯಲು ಯಾವ ಅಧಿಕಾರವಿದೆ, ಡೆಮಾನ್‌ಸ್ಟ್ರೇಟ್ ಮಾಡಲು ಎನು ಅಧಿಕಾರವಿದೆ ಆದರಂತೆ ಗೋಡೆಗಳ ಮೇಲೆ ನಮಗೆ ನ್ಯಾಯಯುತವಾಗಿ ನೈರುತ್ಯ ರೈಲ್ವೆ ವಲಯ ಬೇಕು, ನಮ್ಮ ಭಾಗದಲ್ಲಿ

ಹೈಕೋರ್ಟ್ ಪೀಠ ಸ್ಥಾಪನೆ ಮಾಡಬೇಕೆಂದು ಬರೆದಿದ್ದರೆ, * ಜಾತಿಯ ನಮ್ಮ ಪಕ್ಷದ ಕಾರ್ಯಕರ್ತರು ಯಾರಿದ್ದಾರೆ ಅವರಿಗೆ ಜನತಾದಳದ ಕಾರ್ಯಕರ್ತರು....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಯಾವುದೇ ಪಕ್ಷದ ಚಳುವಳಿ ಇರಲಿ, ಅದಕ್ಕೆ ನಮ್ಮ ಪಕ್ಷದ ಕಾರ್ಯಕರ್ತರೆಂದು ಹೇಳಿದರೆ ತೊಂದರೆಯಿಲ್ಲ. ಆದರೆ ಪದೇ ಪದೇ ಪರಿಶಿಷ್ಟ ಜಾತಿಯವರು ಬರೆದಿದ್ದರು ಎಂದು ಜಾತಿಯ ಲೇಪವನ್ನು ಹಚ್ಚುವುದು ಸರಿಯಲ್ಲ. ಬಿ.ಜೆ.ಪಿ. ಕಾರ್ಯಕರ್ತರು ಈ ಕೆಲಸ ಮಾಡಿದರು, ಅವರನ್ನು ಬಂಧಿಸಿದ್ದಾರೆ. ಅದು ತಪ್ಪು ಎನ್ನತಕ್ಕದನ್ನು ಹೇಳಿರಿ. ಆದರೆ ಅದಕ್ಕೆ ಜಾತಿಯ ಬಣ್ಣವನ್ನು ಕೊಡುವುದು ಬೇಡ. ನಾನು ಅನೇಕ ಸಲ ಇದರ ಬಗ್ಗೆ ಹೇಳಿದ್ದೇನೆ. ಆದ್ದರಿಂದ ಯಾವುದೇ ಘಟನೆಗಳಾದಾಗ ಕಾಂಗ್ರೆಸ್, ಜನತಾದಳ, ಬಿ.ಜೆ.ಪಿ. ಕಾರ್ಯಕರ್ತರೆಂದು ಹೇಳಿ, ಆದರೆ ಜಾತಿಯ ಹೆಸರನ್ನು ಹೇಳಬೇಡಿ.

ಉಪಾಧ್ಯಕ್ಷರು: ತಾವು ಆ ರೀತಿ ಮಾತನಾಡಬಾರದು. ಎರಡು ನಿಮಿಷದಲ್ಲಿ ಮಾನ್ಯ ಕಾಟ್ವೆರವರೇ ತಮ್ಮ ಭಾಷಣವನ್ನು ಮುಗಿಸಿಬಿಡಿ.

ಶ್ರೀ ಅಶೋಕ ಎಸ್. ಕಾಟ್ವೆ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿ ಪೋಲೀಸ ಠಾಣೆಗೆ ಕಳುಹಿಸಿ ಅಲ್ಲೂ ಸಹ ಜಾತಿ ಹೆಸರನ್ನು ಹೇಳಿ ಅವರುಗಳ ಮೇಲೆ ಹಲ್ಲೆ ಮಾಡಿದ್ದಾರೆ. ನಮ್ಮ ಪಕ್ಷದ ಕಾರ್ಯಕರ್ತರು ಮಾತ್ರವಲ್ಲ, ಕಾಂಗ್ರೆಸ್ ಪಕ್ಷದ ಬಿ.ಇ., ಎಂ.ಎ, ವ್ಯಾಸಂಗ ಮಾಡಿರತಕ್ಕಂಥ ಕಾರ್ಯಕರ್ತರನ್ನು ಪ್ರಿವೆಂಟಿವ್ ಆರೆಸ್ಟ್ ಮಾಡಿದ್ದಾರೆ. ಪ್ರಧಾನ ಮಂತ್ರಿಯವರು ಹುಬ್ಬಳ್ಳಿ ನಗರಕ್ಕೆ ಬರುತ್ತಾರೆಂದು ನಾವುಗಳೆಲ್ಲರೂ ಶಾಂತಿಯುತವಾಗಿದ್ದಾಗ ನಮ್ಮನ್ನು ಪ್ರಿವೆಂಟಿವ್ ಆರೆಸ್ಟ್ ಮಾಡುತ್ತಾರೆ. ನಮ್ಮ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿದ್ದಾರೆ. ಶಾಸಕರು ಮತ್ತು ಸಂಸತ್ ಸದಸ್ಯರುಗಳು ಸಂಬಂಧಪಟ್ಟ ಪೋಲೀಸ್ ಅಧಿಕಾರಿಗೆ ಏಕೆ ಬಂಧನ ಮಾಡಿದ್ದೀರೆಂದು ಕೇಳಿದರೆ, ಗೋಡೆ ಬರಹವನ್ನು ಬರೆದಿದ್ದರು ಎಂದು ಹೇಳಿದರು. ನಾವು ಬೇಲ್ ಕೊಡುತ್ತೇವೆ ಅವರನ್ನು ಬಿಡುಗಡೆ ಮಾಡಿ ಎಂದು ಕೇಳಿದಾಗ ಇದು ನಾನ್ ಬೇಲಬಲ್ ಅಫೆನ್ಸ್ ಎಂದು ಹೇಳಿದರು. ಗೋಡೆಬರಹ ನಾನ್ ಬೇಲಬಲ್ ಆದರೆ ತಾವು ಯಾವ ಕಾನೂನನ್ನು ಪಾಲನೆ ಮಾಡುತ್ತೀರಿ ? ಈ ದೌರ್ಜನ್ಯವನ್ನು ಪ್ರತಿ ಭಟಿಸಿದರು ಸಂಸ್ ದ್ ಸದಸ್ಯರು ಮತ್ತು ಮೂರು ಜನ ಶಾಸಕರನ್ನು ರಾತ್ರಿ ಎಂಟುಗಂಟೆಯವರೆಗೆ ಪೋಲೀಸ್ ಠಾಣೆಯಲ್ಲಿ ಕೂರಿಸುತ್ತಾರೆ. ಅವರನ್ನು ಅರೆಸ್ಟ್ ಮಾಡಿ ಎಂದು ಹೇಳಿಕೆಯನ್ನು ಕೊಟ್ಟು ಅರೆಸ್ಟ್ ಮಾಡಿಸಿದಿರಿ. ಈ ರೀತಿ ಸರ್ವಾಧಿಕಾರದ ಪ್ರವೃತ್ತಿಯನ್ನು ಸರ್ಕಾರ ಮಾಡುತ್ತಿದೆ. ಅಂಥ ಸರ್ಕಾರ ಅಧಿಕಾರದಲ್ಲಿ ಒಂದು ನಿಮಿಷ ಮುಂದುವರೆಯುವುದು ಸರಿಯಲ್ಲ. ಯಾವ ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾದ ಪಾಟೀಲಪುಟ್ಟಪ್ಪನವರು ಇದ್ದರು ಅವರನ್ನು......

(ಗೊಂದಲ)

* ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ವಿ. ಮುನಿಯಪ್ಪ: ಮಾನ್ಯ ಉಪಾಧ್ಯಕ್ಷರೆ, ಅವಿಶ್ವಾಸ ನಿರ್ಣಯವನ್ನು ತಂದಿರುವ ಬಗ್ಗೆ ಮಾತನಾಡಲು ಹೆಚ್ಚು ಅವಕಾಶ ಮಾಡಿಕೊಡಬೇಕು. ದಯಮಾಡಿ ನಮಗೆ ಮಾತನಾಡಲು ಅವಕಾಶಮಾಡಿಕೊಡಿ.

ಶ್ರೀ ಪಿ. ಜಿ. ಆರ್ .ಸಿಂಧ್ಯ : ಮಾನ್ಯ

(ಗೊಂದಲ)

ಉಪಾಧ್ಯಕ್ಷರು : ತಾವು ಹಿರಿಯ ಸದಸ್ಯರಾಗಿದ್ದೀರಿ, ತಾವು ಅರ್ಥಮಾಡಿಕೊಳ್ಳದಿದ್ದರೆ ಹೇಗೆ ? ತಾವು ದಯಮಾಡಿ ಕುಳಿತುಕೊಳ್ಳಿ ; ತಮಗೆ ಅನುಭವವಿದೆ, ತಾವು ದಯಮಾಡಿ ಕುಳಿತುಕೊಳ್ಳಿ .

ಶ್ರೀ ಬಿ.ಎಸ್. ಯಡಿಯೂರಪ್ಪ: ಸಿಂಧ್ಯರವರ ಮಾತನಾಡಿದ ಮೇಲೆ ಐದು ನಿಮಿಷ ಮಾತನಾಡಲು ಅವಕಾಶ ಕೊಡಿ.

ಶ್ರೀ ಎಂ . ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಪ್ರತಿಪಕ್ಷಕ್ಕೆ ಅವರ ಸ್ಟ್ರೆಂಗ್ತ್ ಮೇಲಾದರೂ ಮಾತನಾಡಲು ಅವಕಾಶ ಕೊಡಿ, ಇಲ್ಲದಿದ್ದರೆ ತಾವೇನು ದಿಸ್ಕ್ರಿಷನ್‌ರಿ ಪವರ ಉಪಯೋಗ ಮಾಡುತ್ತೀರೋ ಅದನ್ನು ಮಾಡಿ. ನಮಗೂ ಅವಕಾಶ ಸಿಗಬೇಕಲ್ಲವೇ? ಬ್ಯಾಲೆನ್ಸ್ ಆಗಿ ಇಲ್ಲಿ ಹೋಗಬೇಕು. ಇಲ್ಲದಿದ್ದರೆ ತಮ್ಮ ಡಿಸ್ಕ್ರಿಷನ್‌ರಿ ಪವರನ್ನು ಉಪಯೋಗ ಮಾಡಿಕೊಂಡು ಅದರ ಪ್ರಕಾರ ಹೋಗಿ. ಇಲ್ಲದಿದ್ದರೆ ಯಾರು ಕೇಳುತ್ತಾರೆ ಅವರಿಗೆ ಅವರಿಗೆ ಕೊಡುವುದು ಇಲ್ಲದಿದ್ದರೆ ಗೌರವವಾಗಿ ಸುಮ್ಮನೆ ಕುಳಿತಿರುವವರಿಗೆ ಅವಕಾಶವನ್ನೇ ಕೊಡುವುದಿಲ್ಲ.

ಶ್ರೀ ವಿ.ಬಿ. ಮುನಿಯಪ್ಪ : ಮಾನ್ಯ ಉಪಾಧ್ಯಾಕ್ಷರೆ..

ಶ್ರೀ ಎಸ್. ಆರ್ ಲಕ್ಮಯ್ಯ : ತಾವು ಸುಮ್ಮನೆ ಕುಳಿತುಕೊಳ್ಳಿ .

ಶ್ರೀ ವಿ.ಬಿ. ಮುನಿಯಪ್ಪ : ನೀವು ಸುಮ್ಮನೆ ಕುಳಿತುಕೊಳ್ಳಿ .ನನಗೆ ಒಂದು ನಿಮಿಷ ದಯಮಾಡಿ ಮಾತನಾಡಲು ಅವಕಾಶ ಮಾಡಿಕೊಡಬೇಕು.

(ಗೊಂದಲ)

5:40 ಪಿ.ಎಂ

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಉಪಾಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಆದ ಯಡಿಯೂರಪ್ಪನವರು ಮತ್ತು ವಿರೋಧ ಪಕ್ಷದ ಇತರ ನಾಯಕರುಗಳು ಇವತ್ತು....

(ಗೊಂದಲ)

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, ಅವರುಗಳು ನೇರವಾಗಿ ಮಂತ್ರಿಗಳ ಹತ್ತಿರ ಕೇಳುವುದು ಮಾಡುವುದು ಅಲ್ಲ, ಉಪಾಧ್ಯಕ್ಷರು ಹೇಳಿದ ಹಾಗೆ ಕೇಳಬೇಕು. ಈ ಸದನಕ್ಕೆ ಯಜಮಾನರು ಅವರು. ಒಬ್ಬರಿಗೊಬ್ಬರು ಬಾಯಿಗೆ ಬಂದಹಾಗೆ ಮಾತನಾಡುವುದು ಎಂದರೆ ಏನರ್ಥ ? ದಯವಿಟ್ಟು ಮಾನ್ಯ ಸದಸ್ಯರುಗಳು ಉಪಾಧ್ಯಕ್ಷರ ಪರ್ಮಿಷನ್ ಇಲ್ಲದೆ ಮಾತನಾಡಬೇಡಿ. ಅದಕ್ಕೆ ನಾವು ಅವರ ಪರ್ಮಿಷನ್ ಕೇಳಿಯೇ ನಿಂತುಕೊಳ್ಳುವುದು. ಯಾವಾಗ ನಿಂತರೂ ಅವರ ಪರ್ಮಿಷನ್ ಕೇಳಿಯೇ ಮಾತನಾಡುವುದು. ಹಾಗೆಯೇ ನಿಂತುಕೊಳ್ಳಬಾರದು. ಸರ್ಕಾರದ ಪರವಾಗಿ ನಾನು ಉತ್ತರ ಕೊಡುವುದು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸಿಂಧ್ಯಾರವರು ಮಾತನಾಡಿದ ಮೇಲೆ, ದಯಮಾಡಿ ಮಾನ್ಯ ಮುನಿಯಪ್ಪನವರಿಗೆ ಹತ್ತು ನಿಮಿಷ, ಶ್ರೀನಿವಾಸ್‌ರವರಿಗೆ ಹತ್ತು ನಿಮಿಷ ಅವಕಾಶ ಕೊಡಿ.

ಉಪಾಧ್ಯಕ್ಷರು: ಎಲ್ಲಾ ಹೇಗೆ ಆಗುತ್ತದೆ ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ: ತಾವು ಹೇಳಿದ್ದಕ್ಕೆಲ್ಲಾ ಕೋ-ಆಪರೇಟ್ ಮಾಡುತ್ತಿದ್ದೇವೆ

ಉಪಾಧ್ಯಕ್ಷರು: ನೋಡಿರಿ, ಯಾರು ಬೇಡ ಎಂದು ಹೇಳಿದ್ದಾರೆ. ನೀವು ಬೆಳಕು ಹರಿಯುವತನಕ ಕೂಡಿರಿ. ಯಾರು ಬೇಡ ಎಂದಿದ್ದಾರೆ. ? ನೀವೇ ಸಮಯವನ್ನು ನಿಗದಿ ಮಾಡಿಕೊಂಡಿದ್ದೀರಿ. ನಾವು ನೀವೋ ಕೂಡಿಯೇ ಸಮಯುವನ್ನು ನಿಗದಿ ಮಾಡಿದ್ದೇವೆ. ನಾಲ್ಕು ಗಂಟೆ ಈಗಾಗಲೇ ತಮ್ಮ ಸಮಯ ಆಗಿಹೋಗಿದೆ. ನಾನೇನು ಮಾಡಲಿ ?

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಪೂರ್ಣ ಸಹಕಾರ ಕೊಟ್ಟಿದ್ದೀರಿ. ನಿಮ್ಮ ಬಗ್ಗೆ ಏನೂ ಇಲ್ಲ.

ಉಪಾಧ್ಯಕ್ಷರು : ದಯಮಾಡಿ ಹೇಳುತ್ತೇನೆ ಕೇಳಿ. ಬಿ.ಜೆ.ಪಿಯವರು 4 :35 ಗಂಟೆ ಮಾತ ನಾಡಿದ್ದಾರೆ. ತಾವು ನಾಲ್ಕುಗಂಟೆಗಿಂತ ಐದು ನಿಮಿಷ, ಇನ್ನು ಹತ್ತು ನಿಮಿಷ ಹೆಚ್ಚು ಮಾತನಾಡಿದ್ದೀರಿ. ಯಾರು ಅರ್ಧಗಂಟೆ ಎಂದು ಹೇಳಿದ್ದಾರೋ ಅವರು ಒಂದು ಗಂಟೆ ಮಾತನಾಡಿದ್ದಾರೆ. ಯಾರು 15 ನಿಮಿಷ ಮಾತನಾಡಬೇಕೆಂದು ಇತ್ತೋ ಅವರು 45 ನಿಮಿಷ ಮಾತನಾಡಿದ್ದಾರೆ. ಯಾರಿಗೆ ಸಮಯದ ಅಭಾವ ಮಾಡಿದ್ದೇನೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇರ್‍ರೆಲವೆಂಟಿ ಮಾತನಾಡಿದ್ದರೆ ಹೇಳಿ. ತಪ್ಪು ಮಾತನಾಡಿದರೆ ಹೇಳಿ.

ಉಪಾಧ್ಯಕ್ಷರು : ತಪ್ಪು ಎನ್ನುವುದಲ್ಲ. ತಾವು ಸಮಯದ ಲೆಕ್ಕ ನೋಡಿಕೊಂಡು ಮಾತನಾಡಬೇಕು. ನಾನೇನು ಮಾಡಲಿ? ಈಗ ಸಿಂಧ್ಯಾರವರನ್ನು ನಾನು ಮಾತನಾಡಲಿಕ್ಕೆ ಕರೆದಿದ್ದೇನೆ. ಅವರು ಮಾತನಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ಅದಾದಮೇಲೆ ಹತ್ತು ನಿಮಿಷ ಅವಕಾಶ ಕೊಡಿ.

ಉಪಾಧ್ಯಕ್ಷರು : ಈಗ ಸಿಂಧ್ಯಾರವರು ಮಾತನಾಡಲಿ. ದಯಮಾಡಿ ಯಾರೂ ನಡುವೆ ಮಾತನಾಡಬೇಡಿ.

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷದ ಮತ್ತು ಇತರೆ ಸದಸ್ಯರುಗಳು ನಿನ್ನೆಯಿಂದ ನಮ್ಮ ಜೆ.ಹೆಚ್. ಪಟೇಲರ ಮತ್ತು ನಮ್ಮ ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯವನ್ನು ಏನು ಮಂಡಿಸಿ ಮಾತನಾಡಿದ್ದಾರೆ, ಈ ಅವಿಶ್ವಾಸ ನಿರ್ಣಯವನ್ನು ವಿರೋಧ ಮಾಡಿ ಮಾನ್ಯ ಗೌರವಾನ್ವಿತ ಎಳೆಂಟು ಜನಸದಸ್ಯರುಗಳು ಏನು ಮಾತನಾಡಿದ್ದಾರೆ, ಆ ಕೆಲವು ವಿಚಾರಗಳ ಬಗ್ಗೆ ಈ ಸಂದರ್ಭದಲ್ಲಿ ನಾನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಕಳೆದ ಸುಮಾರು ಒಂದೂವರೆ ತಿಂಗಳಿಂದ ನಮ್ಮ ವಿಧಾನಸಭಾ ಅಧಿವೇಶನ ನಡೆಯುತ್ತಿದೆ. ಸಾಮಾನ್ಯವಾಗಿ ನಾವು ಹಾಕಿಕೊಂಡು ಬಂದಿರುವ ಸಂಪ್ರದಾಯ ವಿರೋಧಪಕ್ಷದವರು ಸರ್ಕಾದರ ಮೇಲೆ ಅವಿಶ್ವಾಸ ತರತಕ್ಕಂಥದ್ದು ಅಧಿವೇಶನ ಪ್ರಾರಂಭವಾಗುವಂಥ ಸಂದರ್ಭದಲ್ಲಿ ಅಥವಾ ಅಧಿವೇಶನ ನಡೆಯುವ ಸಂದರ್ಭದಲ್ಲಿ ಬಹಳ ತುರ್ತು ಪರಿಸ್ಥಿತಿ ಉದ್ಭವ ವಾಗಿದೆ, ಬಹಳ ದೊಡ್ಡ ಘಟನಾವಳಿಗಳು ನಡೆದು ಹೋಗಿವೆ ಎನ್ನುವ ಸಂದರ್ಭದಲ್ಲಿ ಪ್ರಸ್ತಾಪಮಾಡುತ್ತೇವೆ. ಏಕೆಂದರೆ ಇಲ್ಲಿರುವ ಬಹಳ ಜನ ಹಿರಿಯ ಸದಸ್ಯರುಗಳು ಈ ಕಡೆ ಆ ಕಡೆ ಕುಳಿತು ನಾವು ಹಲವಾರು ವರ್ಷಗಳಿಂದ ಕೆಲಸಗಳನ್ನು ದೂಡಿಕೊಂಡು ಬಂದಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಹರಿತವಾದ ನಾಲಗೆಯನ್ನು ಉಪಯೋಗ ಮಾಡಿ ನಮ್ಮ ನಾಯಕರ ಬಗ್ಗೆ, ನಮ್ಮ ಪಕ್ಷದ ಬಗ್ಗೆ ನಮ್ಮ ಸರ್ಕಾರದ ಬಗ್ಗೆ, ನಮ್ಮ ಹಿಂದಿನ ಮುಖ್ಯಮಂತ್ರಿಗಳ ಬಗ್ಗೆ ಒಂದು ರೀತಿಯಲ್ಲಿ ರಾಜ್ಯಸರ್ಕಾರ ಮತ್ತು ಕೇಂದ್ರಸರ್ಕಾರ ಎರಡೂ ಸರ್ಕಾರಗಳ ಮೇಲೂ ಅವಿಶ್ವಾಸವನ್ನು ತಂದಿರತಕ್ಕಂಥ ಮಾತುಗಳನ್ನೂ ಸಹಿತ ಆಡಿದ್ದಾರೆ. ಯಾವ ಮಟ್ಟಿಗೆ ಹೋಗಿದ್ದಾರೆ ಎಂದು ಹೇಳಿದರೆ ನಿಮಗೆ ಮಾನ ಮರ್ಯಾದೆ ಎನ್ನುವುದು ಏನಾದರೂ ಇದ್ದರೆ, ಒಂದು ಕ್ಷಣವೂ ಸಹಿತ ಇಲ್ಲಿ ಇರಬಾರದು ಎನ್ನುವ ಮಾತನ್ನೂ ಸಹಿತ ಅವರು ಹೇಳಿದ್ದಾರೆ. ನಾನು ಅದರ ಬಗ್ಗೆ ಪ್ರತಿಕ್ರಿಯೇಯನ್ನು ವ್ಯಕ್ತಮಾಡಲಿಕ್ಕೆ ಬಯಸುವುದಿಲ್ಲ. ಏಕೆಂದರೆ ಈ ಸದನದ ಸದಸ್ಯರಾಗಿದ್ದಂಥವರು, ಆಗಿರತಕ್ಕಂಥವರು ನಮ್ಮ ಭಾಷೆಯನ್ನು ಯಾವತ್ತೂ ಸಹಿತ ಯಾವ ರೀತಿ ಉಪಯೋಗಿಸಿಕೊಳ್ಳುತ್ತೇವೆ ಎನ್ನುವುದು

ಮೇಲೆ ನಮ್ಮ ವ್ಯಕ್ತಿತ್ವ ಅವಲಂಬಿಸಿಕೊಂಡಿರುತ್ತದೆ. ಇವತ್ತು ಸರ್ಕಾರದ ನಾಯಕರಾಗಿರುವ ಮಾನ್ಯ ಜೆ.ಹೆಚ್. ಪಟೇಲರು ಅವರು ಅಧಿಕಾರಕ್ಕೆ ಬಂದೂ ಇನ್ನೂ ಮೂರು ತಿಂಗಳು ಸಹಿತ ಆಗಿಲ್ಲ. ಅಥವಾ ಅವರು ಮುಖ್ಯಮಂತ್ರಿಗಳನ್ನಾಗಿ ಮಾಡಿ ಎಂದು ಹೇಳಿ ಬಯಸಿದವರೂ ಅಲ್ಲ. ನಾವು ದೇವೇಗೌಡರನ್ನು ಅಥವಾ ದೇವೇಗೌಡರು ಪ್ರಧಾನಿಗಳಾಗಿಬೇಕು ಎಂದು ಹೇಳಿ ಬಯಸಿದವರೂ ಅಲ್ಲ. ಇವೆಲ್ಲಾ ಆಕಸ್ಮಿಕ ಘಟನೆಗಳು. ಜನತೆಯ ಆಶೀರ್ವಾದ, ರಾಜ್ಯದ ಜನತೆಯ ಬೆಂಬಲ, ಇದರಿಂದಾಗಿ ದೇವೇಗೌಡರಾಗಲಿ ಅಥವಾ ನಮ್ಮ ಪಕ್ಷದ ಯಾರೇ ಆಗಿರಲಿ, ಅವತ್ತಿನ ಉಪಮುಖ್ಯ ಮಂತ್ರಿಗಳಾಗಲಿ, ಊಹೆ ಮಾಡಲಿಕ್ಕೂ ಆಗದೇ ಇರುವ ಘಟನಾವಳಿಗಳು ನಡೆಯಿತು. ದೇವೇಗೌಡರು ಪ್ರಧಾನಿಗಳಾದರು. ಇದಾದಮೇಲೆ ನಾವೆಲ್ಲರೂ ಮಾನ್ಯ ಪಟೇಲ್‌ರನ್ನು ನಮ್ಮ ನಾಯಕರನ್ನಾಗಿ ಆಯ್ಕೆ ಮಾಡಿಕೊಂಡಿದ್ದೇವೆ. ಪಟೇಲ್‌ರು ಹೇಳಿದರು, ದೇವೇಗೌಡರ ಸರ್ಕಾರದಲ್ಲಿ ಏನೇನು ಕಾರ್ಯಕ್ರಮಗಳಿತ್ತೋ ಆ ಕಾರ್ಯಕ್ರಮಗಳೆಲ್ಲಾ ಮುಂದುವರಿಸಿಕೊಂಡು ಹೋಗುತ್ತೇವೆ. ಕೇಂದ್ರದಲ್ಲಿಯೂ ಸಹಿತ ಇದೇ ಕೆಲಸವನ್ನು ಮಾಡಲಿಕ್ಕೆ ದೇವೇಗೌಡರು ಹೊರಟಿದ್ದಾರೆ, ನಾನು ಮಾಡುತ್ತೇನೆ ಎಂದು ಹೇಳಿ. ತಮಗೆ ಗೊತ್ತಿರುವ ಹಾಗೆ ಮಾನ್ಯ ಪಟೇಲರ್‌ರವರು ಸರ್ಕಾರ ರಚನೆ ಮಾಡಿ, ಇನ್ನೂ 90 ದಿನವೂ ಸಹಿತ ಆಗಿಲ್ಲ, ಇವರೇನು ಅಪಾದನೆಮಾಡಿದರು, ನೀವು ನೆಲಗಳ್ಳರ ಜೊತೆಯಲ್ಲಿ ಸೇರಿಕೊಂಡಿದ್ದೀರಿ, ಕಾಡುಗಳ್ಳರ ಜೊತೆಯಲ್ಲಿ ಸೇರಿ ಕೊಂಡಿದ್ದೀರಿ. ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆಯನ್ನು ಕೊಡುತ್ತಿದ್ದೀರಿ. ಎಂದರೆ ಮಾನ್ಯ ಪಟೇಲ್‌ರ 90 ದಿವಸಗಳ ಸರ್ಕಾರದಲ್ಲಿ ಈ ನೆಲಗಳ್ಳರು ಈ ಭ್ರಷ್ಟ ಅಧಿಕಾರಿಗಳು ಸೃಷ್ಟಿಯಾಗಿಬಿಟ್ಟಿದ್ದಾರೆ. ಈ ಕಾಡುಗಳ್ಳರು ಸೃಷ್ಟಿಯಾಗಿಬಿಟ್ಟಿದ್ದಾರೆ. ಇವೆರೆಲ್ಲರನ್ನೂ ನಾವೇ ಉದ್ಭವ ಮಾಡಿ ಪೋಷಣೆ ಮಾಡಿರತಕ್ಕಂಥದ್ದು ಕರ್ನಾಟಕದಲ್ಲಿ ಎನ್ನುವ ಮಾತನ್ನು ಹೇಳುವುದರ ಜೊತೆಗೆ ಈ ರಾಜ್ಯದಲ್ಲಿ ಕೊಲೆಗಳು, ಸುಲಿಗೆಗಳು, ಮಹಿಳೆಯರ ಮಾನಾಪಹರಣ, ಇವರು ಭಾಷಣ ಎಲ್ಲಾ ಕೇಳಿಬಿಟ್ಟರೆ ಇನ್ನೇನು ಸರ್ಕಾರ ಹೊರಟೇ ಹೋಯಿತು, ಬಹಳ ದುಷ್ಟರ ಸರ್ಕಾರ ಎನ್ನುವ ಮಟ್ಟದಲ್ಲಿ ಮಾತನಾಡಿದರು. ನಾಳೆ ಸಾಯಂಕಾಲ ಈ ಸರ್ಕಾರ ಇರುವುದಿಲ್ಲ ಎಂದರು. ಇಲ್ಲಿ ಯಾರದೋ ಅನುಯಾಯಿಗಳು ಇದ್ದಾರೆ, ಅವರೆಲ್ಲಾ ನಮ್ಮ ಪರವಾಗಿ ಓಟು ಹಾಕಿಬಿಡುತ್ತಾರೆ. ನಾಳೆ ಸಾಯಂಕಾಲ ನೀವು ರಾಜೀನಾಮೆ ಕೊಟ್ಟುಹೋಗಬೇಕಾಗುತ್ತದೆ ಎನ್ನುವುದನ್ನು ಪ್ರಾರಂಭ ಮಾಡಿ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಪೋಲೀಸ್ ಕಮಿಷನರ ಆಗಿದ್ದಂಥವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯನ್ನು ನೀವು ವಿಧಾನಸಭೆಯಲ್ಲಿಡಬೇಕು, ಅದರ ಆಧಾರದಮೇಲೆ ಏನೇ ಗಲಭೆಯಾಗಿದೆ ಎನ್ನುವ ಮಾತನ್ನು ಸಹಿತ ಹೇಳಿದ್ದಾರೆ. ಸರ್ಕಾರದಲ್ಲಿ ವರದಿ ಇದೆ. ತಾವು ಹೇಳಿದ ಹಾಗೆ ಯಾವುದನ್ನೂ ಕೋದಂಡರಾಮಯ್ಯ ನವರು ವರದಿಯಲ್ಲಿ ಕೊಟ್ಟಿಲ್ಲ . ನಾನು ಆವತ್ತು ಗೃಹಮಂತ್ರಿಯಾಗಿದ್ದಂಥವನು. ಎಲ್ಲಾ ವಿಚಾರಗಳು ಸಹಿತ ನನಗೆ ಗೊತ್ತಿದೆ. ತಾವು ತಿಳಿದುಕೊಂಡಿರುವ ಹಾಗೆ ಯಾವುದೇ ವಿಚಾರಗಳೂ ಸಹಿತ ಆಗಿಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಿ ತಾವು ಏನು ಹೇಳಿದಿರಿ ಎಂದರೆ ಬಹಳ ಮುಖ್ಯವಾಗಿ ಈ ಅವಿಶ್ವಾಸ ನಿರ್ಣಯವನ್ನು ವ್ಯಕ್ತ ಮಾಡಲಿಕ್ಕೆ ಅವತ್ತು ಉದ್ಭವವಾದಂಥ ಸಂದರ್ಭ ಏನು ? ಆಲಮಟ್ಟಿ ಜಲಾಶಯದ ಬಗ್ಗೆ ಆಂಧ್ರದ ಮುಖ್ಯಮಂತ್ರಿಗಳು ಮಾಡಿರುವ ಕೆಲಸ, ಏನೋ ಕಾವೇರಿಗೆ ನೀರನ್ನು ನಾವೇ ಕದ್ದು ಯಾರೂ ಇದುವರೆಗೂ ಬಿಟ್ಟಿರಲಿಲ್ಲ ಅಧಿಕಾರ ನಡೆಸಿದವರು, ಪಟೇಲರೇ

ನೀವು ಬಿಟ್ಟುಬಿಟ್ಟರು. ವ್ಯವಹಾರ ಮಾಡಿಕೊಂಡು ಬಂದುಬಿಟ್ಟರು. ಕರ್ನಾಟಕ ರೈತರ ಹಕ್ಕನ್ನು ಮಾರಾಟ ಮಾಡಿ ಬಿಟ್ಟರು ಎನ್ನುವ ದೃಷ್ಟಿಯಲ್ಲಿ, ಇದು ಪ್ರಾರಂಭವಾದ ಹಿನ್ನೆಲೆ. ಆದರೆ ಇವತ್ತು ಮತ್ತು ನಿನ್ನೆ ನಡೆದಿರುವ ಚರ್ಚೆಯಲ್ಲಿ ಎಷ್ಟರಮಟ್ಟಿಗೆ ಕಾವೇರಿ, ಕೃಷ್ಣಾ ಆಲಮಟ್ಟಿ ವಿಚಾರದಲ್ಲಿ ನಾವು ಮಾತನಾಡಿದ್ದೇವೆ. ಇದನ್ನು ಇವತ್ತು ನಾವು ರಾಜ್ಯದ ಜನ ವಿಚಾರವನ್ನು ಮಾಡಬೇಕಾಗುತ್ತದೆ. ನೀರಿನ ವಿಚಾರ ಇಲ್ಲಿ ಚರ್ಚೆ ಯಾಗಲಿಲ್ಲ. ಇವತ್ತು ಕೃಷ್ಣಾ ಬಗ್ಗೆ ಯಾಗಲೀ, ಮಾನ್ಯ ಖರ್ಗೆಯವರೇ, ದಯವಿಟ್ಟು ತಮಗೆ ನಾನು ಈ ಸಂದರ್ಭದಲ್ಲಿ ಪ್ರಶ್ನೆ ಮಾಡಲಿಕ್ಕೆ ಬಯಸುತ್ತೇನೆ. ನಮ್ಮ ಉಪಮುಖ್ಯಮಂತ್ರಿಗಳು ಇವತ್ತಿನ ಮುಖ್ಯಮಂತ್ರಿಗಳು ಅಥವಾ ಹಿಂದಿನ ಮುಖ್ಯಮಂತ್ರಿಗಳು, ನಿಜ, ನೀರಾವರಿ ಬಾಂಡಿನ ವಿಚಾರದಲ್ಲಿ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ತಾವೊಂದು ಇನಿಷಿಯೇಟಿವ್‌ನ್ನು ತೆಗೆದುಕೊಂಡಿದ್ದೀರಿ. ನಾನು ಇಲ್ಲ ಎಂದು ಹೇಳುವುದಿಲ್ಲ. ಏಕೆಂದರೆ ಇವು ಸತ್ಯಾಂಶ. ಆದರೆ ಇನಿಷಿಯೇಟಿವ್‌ನಿಂದ ರಿಸಲ್ಟ್ ಏನು ಆಗಿತ್ತು; ಏನೂ ರಿಸಲ್ಟ್ ಬಂದಿರಲಿಲ್ಲ. ಇವತ್ತು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ ನಾವು, ನಮ್ಮ ಹಣಕಾಸಿನ ಮಂತ್ರಿಗಳು ಎಷ್ಟೋ ಕೋಟಿ ರೂಪಾಯಿಗಳನ್ನು ಕೃಷ್ಣಾ ಯೋಜನೆ ಪ್ರಾರಂಭವಾದ ಮೇಲೆ ಖರ್ಚು ಮಾಡಿದ್ದಾರೆ. ನೀರಾವರಿ ಬಾಂಡ್‌ನ್ನು ಯಾರು ಪ್ರಾರಂಭ ಮಾಡಿದ್ದು ? ಕಾವೇರಿ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಹೇಳಿದ್ದುದು ನಿಜ, ವಿಪಿಸಿಂಗ್‌ರವರು ಪ್ರಧಾನಿಗಳಾಗಿದ್ದಂಥ ಸಂದರ್ಭದಲ್ಲಿ ಸುಪ್ರೀಂಕೋರ್ಟಿನ ಆದೇಶದ ಮೇರೆಗೆ ಈ ಟ್ರಿಬ್ಯೂನಲ್‌ನ ರಚನೆ ಮಾಡುವ ಸಂದರ್ಭ ಬಂತು. ಸಂದರ್ಭ ಬಂದಿದ್ದು ನಿಜ. ಈ ಟ್ರಿಬ್ಯೂನಲ್‌ನ ಒಳಗಡೆ ಮಾಡುವುದಾದರೆ ಸೌಹಾರ್ದಯುತವಾಗಿ ಮಾತುಕತೆ ಮಾಡುವುದಕ್ಕೆ ಮುಖ್ಯಮಂತ್ರಿಗಳು ತಮಿಳುನಾಡು ರೈತರ ಹಿತದೃಷ್ಟಿ, ಕರ್ನಾಟಕದ ರೈತರ ಹಿತದೃಷ್ಟಿ, ಇವೆರಡನ್ನೂ ಸಹಿತ ಇಟ್ಟುಕೊಂಡು ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ, ಈ ಸಂದರ್ಭದಲ್ಲಿ ಮೂರು ನಾಲ್ಕು ಸಾರಿ ಅಸೆಂಬ್ಲಿಗೆ ಕಾವೇರಿ ಪ್ರದೇಶದಿಂದ ಗೆದ್ದುಬಂದಿದೇ. ಕಾವೇರಿ ನೀರು ನಮ್ಮ ಜೀವ. ಅದರಲ್ಲೇನೂ ಸಂಶಯವಿಲ್ಲ. ನಮಗೂ ನಮ್ಮ ಜನರ ಹಿತಾಸಕ್ತಿ ಇದೆ; ರಾಜ್ಯದ ಹಿತವನ್ನು ದಮನ ಮಾಡುವ ರೀತಿಯಲ್ಲಿ ಆ ನೀಚ ಕೆಲಸವನ್ನು ನಾವ್ಯಾರೂ ಸಹಿತ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಪಟೇಲರು ಹೋರಾಟಗಾರರಿದ್ದಾರೆ. ಹಲವಾರು ವರ್ಷಗಳ ಕಾಲ ಹೋರಾಟವನ್ನು ಮಾಡಿಕೊಂಡು ಬಂದಿದ್ದಾರೆ. ನಮ್ಮ ರೈತರ ಹಿತವನ್ನು ಕಾಪಾಡಿಯೇ ಕಾಪಾಡುತ್ತೇವೆ. ಎಲ್ಲಾ ಚರ್ಚೆಗೂ ಸಹ ವ್ಯಕ್ತಿಗತವಾದಂತಹ ದೋಷಾರೋಪಗಳನ್ನು ಮಾಡಿದ್ದಾರೆ ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ಅಪಾದನೆಗಳನ್ನು ಮಾಡಿದ್ದಾರೆ ಇವತ್ತಿನ ಪತ್ರಿಕೆಯಲ್ಲಿ ಕೂಡ ಬಂದಿದೆ. ವಿಧಾನ ಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರತಕ್ಕಂತಹ ಮಾನ್ಯ ಯಡಿಯೂರಪ್ಪನವರು ಸೋಮವಾರ ಮಾಡಿದ ಆರೋಪಕ್ಕೆ ಸಂಬಂಧಿಸಿದ ಜಮೀನಿನ ಚಿತ್ರ. ಈ ಚಿತ್ರದಲ್ಲಿ ಪ್ರಧಾನ ಮಂತ್ರಿ ದೇವೇಗೌಡರವರ ಮಗ ರಮೇಶ್ ಅವರ ಪತ್ನಿ ಸಂಗೀತ, ಅವರು, ಅವರು ಕೆಂಗೇರಿ ಸರ್ವೆ ನಂ 39. ರಲ್ಲಿ 36 ಗುಂಟೆ ಜಮೀನು, ಸರ್ವೆ ನಂ. 38 ರಲ್ಲಿ 38 ಗುಂಟೆ ಜಮೀನಿನಲ್ಲಿ ಪೆಟ್ರೋಲ್ ಬಂಕ್ ನಿರ್ಮಿಸುತ್ತಿದ್ದಾರೆಂದು ಮಾನ್ಯ ಯಡಿಯೂರಪ್ಪನವರು ಆರೋಪಿಸಿದ್ದಾರೆ. ಈ ಪೆಟ್ರೋಲ್ ಬಂಕನ್ನು ಮಂಜೂರಾತಿ ಮಾಡಿರತಕ್ಕಂಥಾದ್ದು ದೇವೇಗೌಡರು ಪ್ರಧಾನಿಯಾದ ಮೇಲೆ ಅಲ್ಲ. ಹಿಂದಿನ ಸರಕಾರದಲ್ಲಿ: ಮತ್ತೆ ಈ ಕುಮಾರಿ ಸಂಗೀತಾ ಅವರಿಗೂ, ದೇವೇಗೌಡರಿಗೂ ಇರತಕ್ಕಂತಹ

ಸಂಬಂಧ ಏನು? ಮಾನ್ಯ ದೇವೇಗೌಡರ ಬೀಗರು ತಮ್ಮಣ್ಣನವರು, ಒಬ್ಬ ಸರಕಾರಿ ಅಧಿಕಾರಿ, ಅವರ ಮಗಳನ್ನು ದೇವೇಗೌಡರ ಮಗ ಮದುವೆಯಾಗಿದ್ದಾರೆ. ಸಂಗೀತಾ ಅವರನ್ನು ಅಲ್ಲ. 37 ಗುಂಟೆ ಜಮೀನನ್ನು ಇವರೇನು ಹೇಳುತ್ತಿದ್ದಾರೆ, ಇವರು ಹೇಳಿದ ಹಾಗೆ, ಸರ್ವೆ ನಂ. 38 ರಲ್ಲಿ ಇರತಕ್ಕಂತಹ ಏನು ಸಾವಿರಾರು ಎಕರೆ ಜಮೀನು ಅಲ್ಲ. 38 ಗುಂಟೆ ಜಮೀನು ಈ 38 ಗುಂಟೆ ಜಮೀನು ಯಾರಿಗೆ ಸೇರಿರತಕ್ಕಂಥಾದ್ದು ಸರ್ವೆ ನಂ. 38 ಏನು ಇದೆ ಇದು ವಕ್ಫ್ ಪ್ರಾಪರ್ಟಿ, ಆದಕ್ಕೆ ದಾಖಲಾತಿಗಳನ್ನು ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕಳುಹಿಸಿಕೊಡುತ್ತೇನೆ. ವಕ್ಫ್ ಪ್ರಾಪರ್ಟಿಯವರು ಲೀಸ್ ಆಧಾರದ ಮೇಲೆ ಸಂಗೀತಾ ಎನ್ನುವವರಿಗೆ ಆಯಿಲ್ ಕಂಪನಿಗೆ ಕೊಟ್ಟಿರತಕ್ಕಂಥಾದ್ದು. ಸರಕಾರದ ಪ್ರಾಪರ್ಟಿ ಅಲ್ಲ. ಇದರಲ್ಲಿ ಪ್ರಧಾನಿಗಳ ಪ್ರಭಾವ ಎಲ್ಲಿ ಬರುತ್ತದೆ? ಇದು ಒಂದಾಯಿತು. ಇನ್ನೊಂದು ಸೀತಾರಾಮ ಟ್ರಸ್ಟ್ ಎಂದು ಇದೆ, ಅದಕ್ಕೆ ಸೇರಿತಕ್ಕಂತಹ 39 ಗುಂಟೆ ಜಮೀನಿನನ್ನು, ಅಂದರೆ ದೇವೇಗೌಡರ ಯಾವ ಸಂಬಂಧೀಕರು ಯಾವ ವ್ಯವಹಾರವನ್ನು ಅವರು ಪ್ರಧಾನಿಗಳಾಗಿದ್ದಾರೆ ಎಂದು ಅವರು ಮಾಡಬಾರದು. ಪೆಟ್ರೋಲ್ ಬಂಕ್ ಮಂಜೂರಾಗಿರುವುದು ಎರಡು ವರ್ಷಗಳ ಹಿಂದೆ. ಇದನ್ನೇನೂ ಅವರು ಪುಗಸಟ್ಟೆ ಕೊಟ್ಟಿಲ್ಲ. ಗುತ್ತಿಗೆ ಆಧಾರದ ಮೇಲೆ ಸೀತಾರಾಮ ಟ್ರಸ್ಟಿನವರು ಕೊಟ್ಟಿದ್ದಾರೆ. ವಕ್ಫ್ ಬೋರ್ಡಿವರು ಅಡ್ವರೆಟೈಸ್ ಮಾಡಿದ್ದಾರೆ. ಇವರಿಗೆ ಕೊಟ್ಟಿದ್ದಾರೆ. ಅದಕ್ಕೋಸ್ಕರ ಹಣ ತೆಗೆದುಕೊಳ್ಳುತ್ತಿದ್ದಾರೆ. ತಾವು ಅಪಾದನೆ ಮಾಡತಕ್ಕಂತಹ ಸಂದರ್ಭದಲ್ಲಿ ಇದರ ಸತ್ಯಾಸತ್ಯತೆಯನ್ನು ಅರಿತಿರಬೇಕಾಗಿತ್ತು ಎನ್ನುವುದೇ ನನಗೆ ಬರತಕ್ಕ ನೋವು, ಇವತ್ತು ಸಭೆಯಲ್ಲಿ ಸದಸ್ಯರಾಗಿರತಕ್ಕ ಮಾನ್ಯ ರೇವಣ್ಣನವರ ಬಗ್ಗೆ ತಾವು ಆಪಾದನೆ ಮಾಡಿದಿರಿ ಆದರೆ ಆವರು ಸದಸ್ಯರಿಗಿದ್ದಾರೆ ಅವರು ಡಿಫೆಂಡ್ ಮಾಡಿಕೊಳ್ಳುತ್ತಾರೆ. ನನ್ನ ಬಗ್ಗೆ ಅಪಾದನೆ ಮಾಡಿ. ನಾನು ಡಿಫೆಂಡ್ ಮಾಡಿಕೊಳ್ಳ ಬಹುದು. ಇವತ್ತು ಅವರ ಮನೆಯಲ್ಲಿರುವ ಆ ಹೆಣ್ಣು ಮಕ್ಕಳು ಬದುಕಬೇಕೋ ಇಲ್ಲವೋ, ಅವರು ಊಟ ಮಾಡಬೇಕೋ ಇಲ್ಲವೋ, ನಾಲ್ಕೂವರೆ ಕೋಟಿ ಜನತೆಯ ಮುಂದೆ ನೀವು ಕೇವಲ ವ್ಯಕ್ತಿಗತವಾದ, ತಮ್ಮ ರಾಜಕೀಯದ ಬೇಳೆಯನ್ನು ಬೇಯಿಸಿಕೊಳ್ಳುವುದಕ್ಕೆ ಹೇಳುವುದು ಸರಿಯೇ? ಇದರ ಬಗ್ಗೆ ಪಾರ್ಲಿಮೆಂಟಿನಲ್ಲಿ ಚರ್ಚೆಯಾಯಿತು, ಇಂಟರ್‌ನ್ಯಾಷನಲ್ ಮಟ್ಟದಲ್ಲಿ ಪ್ರಚಾರ ತೆಗೆದುಕೊಳ್ಳಬೇಕು ಎಲ್ಲಾ ಟಿ.ವಿ. ಗಳಲ್ಲೂ ಬರಬೇಕು, ಪ್ರಚಾರಕ್ಕೋಸ್ಕರ ಅಸತ್ಯವನ್ನು ಸತ್ಯ ಮಾಡತಕ್ಕಂತಹ ಕೆಲಸ ಮಾಡಲಿಕ್ಕೆ ನೀವು ಹೊರಟಿದ್ದೀರಿ. ತಮ್ಮಣ್ಣನವರು ಸರಕಾರೀ ಅಧಿಕಾರಿಗಳು ನಿಜ. ಅವರ ಮಗಳನ್ನು ಮಾನ್ಯ ದೇವೇಗೌಡರ ಮಗನಿಗೆ ಕೊಟ್ಟಿದ್ದಾರೆ. ಸಂಗೀತ ಅಲ್ಲ. ಈ ಸಂಗೀತ ದೇವೇಗೌಡರ ಸೊಸೆಯ ತಂಗಿ. ಅಂದರೆ ಎಲ್ಲೋ ಬಾದರಾಯಣ ಸಂಬಂಧ ಇನ್ನೇನೂ ಅವರು ಮಾಡುವುದಕ್ಕೆ ಹೋಗಿರಲಿಲ್ಲ. ವಕ್ಫ್ ಬೋರ್ಡಿನಿಂದ 36 ಗುಂಟೆ ಜಮೀನನ್ನು ಅದೂ ಕಾನೂನು ಬದ್ಧವಾಗಿ ಲೀಸಿಗೆ ತೆಗೆದುಕೊಂಡಿದ್ದು, ಅಲ್ಲಿ ಒಂದು ಪೆಟ್ರೋಲ್ ಬಂಕ್ ಅನ್ನು ಮಾಡಿದ್ದು, ಈ ದೇಶದಲ್ಲಿ ದೊಡ್ಡ ಅಪರಾಧ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮುಜರಾಯಿ ಜಮೀನನ್ನು ಕೊಡುವುದಕ್ಕೆ ಅವನಿಗೆಲ್ಲಿ ಅಧಿಕಾರ ಇದೆ? ಯಾವ ಕಾನೂನಿನಲ್ಲಿ ಇದೆ? ವಕ್ಫ್ ಬೋರ್ಡಿಗೆ ಸೇರಿದಂಥ ಜಮೀನನ್ನು ಕೊಡುವುದಕ್ಕೆ ಅವನಿಗೆ ಎಲ್ಲಿ ಅಧಿಕಾರ ಇದೆ, ಅದನ್ನು ಯಾರು ಕೊಟ್ಟರು? ಯಾವತ್ತು

ಕೊಟ್ಟ? ಅದರ ವಿವರ ಕೊಡಿ. ಕಟ್ಟಡ ಕಟ್ಟುವುದಕ್ಕೆ ಕೊಟ್ಟರು? ಯಾವತ್ತು ಕೊಟ್ಟ? ಆದರ ವಿವರ ಕೊಡಿ. ಕಟ್ಟಡ ಕಟ್ಟುವುದಕ್ಕೆ ನಗರಸಭೆಯ ಅನುಮತಿ ಆಗಿದೆಯೇ ಎಂಬುದರ ವಿವರ ಕೊಡಿ.

ಶ್ರೀ ಪಿ.ಜಿ.ಆರ್ ಸಿಂಧ್ಯಾ: ಪೆಟ್ರೋಲ್ ಬಂಕನ್ನು ಇವರು ಪ್ರಾರಂಭ ಮಾಡತಕ್ಕಂಥಾದ್ದು ಒಂದು ಮಹಾಪರಾಧವಾಯಿತು. ಡೀ ನೋಟಿಫಿಕೇಷನ್ ಬಗ್ಗೆ ಇವರು ಮಾತನಾಡಿದರು. ದೇವೇಗೌಡರು ರಾತ್ರೋ ರಾತ್ರಿ ಕುಳಿತುಕೊಂಡು, ಅವರು ಪ್ರಧಾನಿಗಳೆಂದು ಹೇಳಿದ ಮೇಲೆ ಬೆಳಗಿನ ಜಾವ 3 ಗಂಟೆಯವರೆಗೆ ಕುಳಿತು ಸಾವಿರಾರು ಎಕರೆ ಜಮೀನನ್ನು ಡೀ ನೋಟಿಫೈ ಮಾಡಿದರು ಎಂದು. ಎದು ದೇಶದಲ್ಲಿ ಪತ್ರಿಕೆಗಳೆಲ್ಲಿಲ್ಲಾ ಬಂದಿದೆ. ಇವತ್ತು ಪ್ರಧಾನಿಗಳು ಸಾವಿರಾರು ಎಕರೆ ಜಮೀನನ್ನು ಕಬಳಿಸಿದ್ದಾರೆ, ಅವರ ಮಕ್ಕಳು ಅವರ ಸಂಬಂಧಿಕರು ಎಲ್ಲಾ ದರೋಡೆಕೋರರು ಲೂಟಿ ಕೋರರು ಎಂದು ಹೇಳಿ ಪ್ರಚಾರ ತೆಗೆದು ಕೊಂಡಿದ್ದೀರಿ. ವಾಸ್ತವಾಂಶವೇನು ಅದನ್ನು ಸದನದ ಮೂಲಕ ರಾಜ್ಯದ ಜನರಿಗೆ ದೇಶದ ಜನರಿಗೆ ತಿಳಿಸಬೇಕಾಗುತ್ತದೆ. ದೇವೇಗೌಡರು ಮುಖ್ಯ ಮಂತ್ರಿಗಳಾಗಿದ್ದಂತಹ ಕಾಲದಲ್ಲಿ ನಮ್ಮ ಸರಕಾರದಲ್ಲಿ ಒಟ್ಟು ಡೀ ನೋಟಿಫೈ ಮಾಡಿರತಕ್ಕಂಥಾದ್ದು 103 ಎಕರೆ 4 ಗುಂಟೆ ಜಮೀನು. ನಮ್ಮ ಸರಕಾರದ 16 ತಿಂಗಳ ಅವಧಿಯಲ್ಲಿ ಡೀನೋಟಿಫೈ ಆಗಿರತಕ್ಕಂಥಾದ್ದು ಒಟ್ಟು 103 ಎಕರೆ. ಡೀ ನೋಟಿಫೈ ಮಾಡಬಾರದೆಂದೇನೂ ಇಲ್ಲ. ನೂರಾರು ಎಕರೆ ಡೀ ನೋಟಿಫೈ ಆಗಿರತಕ್ಕಂತಹ ಹಿಂದಿನ ಉದಾಹರಣೆಗಳನ್ನೆಲ್ಲಾ ನಾನು ಹೇಳುವದಕ್ಕೆ ಹೋಗಿ, ಅವರು ಮಾಡಿದರು ಅದಕ್ಕೋಸ್ಕರ ನೀವು ಮಾಡುವುದಕ್ಕೆ ಹೋದಿರಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. 103 ಎಕರೆ ನಾವು ಯಾವುದು ಡೀ ನೋಟಿಫೈ ಮಾಡಿರತಕ್ಕಂಥಾದ್ದು ಎಂದರೆ, 37 ಎಕರೆ 5 ಗುಂಟೆಯನ್ನು ಕೆ.ಎಂ.ಎಫ್.ನವರು ಹಾಗೂ ಬಿ.ಡಿ. ಎ. ನವರು ಜಮೀನನ್ನು ಅಕ್ವೈರ್ ಮಾಡಲಿಕ್ಕೆ ಹೊರಟಿದ್ದರು. ಕೆ.ಎಂ.ಎಫ್ ಅದು ಒಂದು ಸಾರ್ವಜನಿಕ ಸಂಸ್ಥೆ, ಬಿ.ಡಿ.ಎ. ಹಾಗೆ ಸಾರ್ವಜನಿಕ ಸರಕಾರೀ ಸಂಸ್ಥೆ, ಸಹಕಾರಿ ಸಂಸ್ಥೆ ಕೆ.ಎಂ.ಎಫ್ ನವರು ತಮ್ಮ ಚಟುವಟಿಕೆಗಳಿಗೋಸ್ಕರವೆಂದು ಈ 37 ಎಕರೆ 5 ಗುಂಟೆ ಜಮೀನನ್ನು ಆಕ್ವೈರ್ ಮಾಡಲಿಕ್ಕೆ ಹೊರಟಿದ್ದರು. ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಯಾಗಿದ್ದಾಗ Infavour of K.M.F. ಆ ಜಮೀನನ್ನು ಡೀ ನೋಟಿಫೈ ಮಾಡಿರತಕ್ಕಂಥಾದ್ದು ಸತ್ಯವಾದ ಮಾತು. ಅದಾದ ಮೇಲೆ ಎರಡು ಸೊಸೈಟಿಗಳಿಗೆ ಒಂದು ಸೆಕ್ರೆಟೇರಿಯೆಟ್ ಸೊಸೈಟಿ ಇನ್ನೊಂದು ಲೆಜಿಸ್ಲೇಚರ್ ಸೊಸೈಟಿ, ಇವೆರಡೂ ಸೊಸೈಟಿಗಳಿಗೆ ಒಂದು ಸೆಕ್ರೆಟೇರಿಯೇಟ್ ಸೊಸೈಟಿ ಇನ್ನೊಂದು ಲೆಜಿಸ್ಲೇಚರ್ ಸೊಸೈಟಿ, ಇವೆರಡೂ ಸೊಸೈಟಿಗಳಿಗೂ ಸಹ 43 ಎಕರೆ 31 ಗುಂಟೆ ಜಮೀನನ್ನು ನಮ್ಮ ಸರಕಾರ ಡೀ ನೋಟಿಫೈ ಮಾಡಿರತಕ್ಕಂಥದ್ದು ನಿಜ. ಇದಲ್ಲದೆ ಮೈಕೋ ಲೇಔಟಿನಲ್ಲಿ, ಕೋರಮಂಗಲದಲ್ಲಿ ಫ್ಯಾಕ್ಟರಿಯನ್ನು ಕೋಟ್ಯಾಂತರ ರೂಪಾಯಿ ಹಣ ಖರ್ಚು ಮಾಡಿ ಕಟ್ಟಿಬಿಟ್ಟಿದ್ದರು. ಪಬ್ಲಿಕ ಇಂಟರೆಸ್ಟ್, ಅದು ಮುಖ್ಯ ಮಂತ್ರಿಗಳು ಮಾಡಿರತಕ್ಕಂಥಾದ್ದು ಅಲ್ಲ. ಅದಕ್ಕೋಸ್ಕರ ಸಮಿತಿ ಮಾಡಿದ್ದಾರೆ ಅದರಲ್ಲಿ ಕಂದಾಯ ಕಾರ್ಯದರ್ಶಿ ಇದ್ದಾರೆ ಲಾ ಕಾರ್ಯದರ್ಶಿ ಇದ್ದಾರೆ ಹೆಚ್ ಯುಡಿ ಕಾರ್ಯದರ್ಶಿ ಇದ್ದಾರೆ ಇವರುಗಳು ಸೇರಿಕೊಂಡು ಡೀನೋಟಿಫೈ ಮಾಡಬೇಕೆಂದು ರೆಕಮೆಂಡ್ ಮಾಡಿದ್ದಾರೆ.

ಅದರಲ್ಲಿ ಎರಡು ಕಾರ್ಖಾನೆಗಳನ್ನು ಕಟ್ಟಿರತಕ್ಕಂಥಾದ್ದು ಇದೆ. ಒಂದು ಬನಶಂಕರಿ 5ನೇ ಹಂತ ಇನ್ನೊಂದು ಕೋರಮಂಗಲ ಲೇಔಟ್‌ನಲ್ಲಿ ಮೂರನೆಯದಾಗಿ 4 ಎಕರೆ ಜಮೀನು, ಹೈಕೋರ್ಟಿನವರು ಡೀ ಸೋಟಿಫೈ ಮಾಡಿ ಎಂದು ಆದೇಶ ಮಾಡಿದ್ದಾರೆ. ಇದಾದ ಮೇಲೆ ಎಸ್. ಆರ್. ನಾರಾಯಣರೆಡ್ಡಿ ಎನ್ನುವವರಿಗೆ 39 ಗುಂಟೆ ಡೀ ನೋಟಿಫೈ ಮಾಡಿದ್ದಾರೆ. ಏಕೆ ಮಾಡಿದ್ದಾರೆ. ಅದಕ್ಕೋಸ್ಕರ ಇದನ್ನು ದೇವೇಗೌಡರು ಡೀ ನೋಟಿಫೈ ಮಾಡಿದ್ದಾರೆ. ನಾವು ಮಾಡಿತರಕ್ಕಂಥಾದ್ದು ನಿಜ. ಇದಾದ ಮೇಲೆ ಕೆ.ಎಂ.ಎಫ್.ದು. ಇದಾದ ಮೇಲೆ, ಇದನ್ನು ಬಿಟ್ಟು ನಮ್ಮ ಸರಕಾರದ ಅವಧಿಯಲ್ಲಿ ಒಂದು ಗುಂಟೆ ಜಮೀನನ್ನು ಸಹ ಡೀನೋಟಿಫೈ ಮಾಡಿಲ್ಲ. ಆದರೆ ಇವತ್ತು ಪತ್ರಿಕೆಗಳಲ್ಲಿ ಬಂದಿರತಕ್ಕಂಥದ್ದು ಏನು, ಇಡೀ ಪತ್ರಿಕೆಗಳ ತುಂಬಾ ದೇಶದ ತುಂಬಾ ಪ್ರಚಾರ ಏನೆಂದು ಬಂದಿದೆ, ದೇವೇಗೌಡರು ಸಿಕ್ಕಾಪಟ್ಟೆ ಜಮೀನನ್ನು ಇದಕ್ಕೋಸ್ಕರ ಮಾಡಿದ್ದಾರೆ ಬಂದಿದೆ. ಇದಾದ ಮೇಲೆ ಯೂನಿವರ್ಷಲ್ ರಿಸಾರ್ಟ್ಸ್ ಎನ್ನುವವರಿಗೆ ಕರ್ನಾಟಕ ರಾಜ್ಯ ಟೂರಿಸ್ಂ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಜಮೀನನ್ನು ಕೊಟ್ಟಿದ್ದೇವೆನ್ನುವ ಮಾತನ್ನು ಹೇಳಿದ್ದಾರೆ. ಈ ವಿಚಾರದಲ್ಲಿ ಲವಲೇಷವೂ ಸತ್ಯವಿಲ್ಲ. ಕೊನೇ ಪಕ್ಷ ಇವರಿಗೆ ಅಧಿಕಾರಿಗಳೋ ಯರೋ ತಪ್ಪು ಮಾಹಿತಿ ಕೊಟ್ಟಿರಬಹುದು. ವಿರೋಧ ಪಕ್ಷದ ನಾಯಕರಿಗೆ ಹಕ್ಕು ಇದೆ ನಾನು ಅದನ್ನು ತಪ್ಪು ತಿಳಿಯಲಿಕ್ಕೆ ಹೋಗುವುದಿಲ್ಲ, ಅದಕ್ಕೆ ನಾನು ಬೇರೆ ಅರ್ಥ ಕೊಡುವುದಕ್ಕೂ ಹೋಗುವುದಿಲ್ಲ. ಕೆ.ಎಸ್.ಟಿ.ಡಿ.ಸಿ .ವಿಚಾರವೇನು ಇದೆ, 4 ಎಕರೆ ಜಮೀನನ್ನು ಕೊಟ್ಟಿರುವುದು ಇತರ ಬಗ್ಗೆ ಯಾವುದೇ ರೀತಿಯ ವಿಚಾರಣೆಗೂ ನಮ್ಮ ಸರಕಾರ ಸಿದ್ಧ ಇದೆ. ಪಬ್ಲಿಕ್ ಇಂಟರೆಸ್ಟಿನಿಂದ ಕೊಟ್ಟಿದ್ದೇವೆಯೇ ಹೊರತು, ಬೇರೆ ಏನೂ ಇಲ್ಲ. ಬಿಡದಿ ರಾಮನಗರದ ಹತ್ತಿರ ಕೆ.ಐ.ಎ.ಡಿ.ಬಿ. ಜಮೀನನ್ನು ಸಾವಿರಾರು ಎಕರೆ 4-10 30 ಸಾವಿರ ಎಕರೆ ತೆಗೆದುಕೊಂಡಿದ್ದೇವೆಂದು ಶ್ರೀಮತಿ ಪ್ರಮೀಳಾ ಅವರು ಬಹಳ ಅಪಾದನೆಗಳನ್ನು ಮಾಡಿದರು. ಲೂಟಿ ನಡೆದಿದೆ ಎಂದು ಹೇಳಿದರು. 16 ತಿಂಗಳಲ್ಲಿ ಕರ್ನಾಟಕದ ಎಲ್ಲಾ ಜಮಿನನ್ನು ನಾವು ಬೇರೆ ದೇಶದವರಿಗೆ ಮಾಡಿದ್ದೇವೆನ್ನುವ ಅರ್ಥದಲ್ಲಿ ಇವರು ಮಾತನಾಡುತ್ತಾರೆ. ನಾವೇನಾದರೂ ಕಾನೂನನ್ನು ಮೀರಿ ಮಾಡಿರುವುದರ ಬಗ್ಗೆ ಇವರು ಹೇಳಿದರೆ ನಾವು ಯಾವುದೇ ಶಿಕ್ಷೆ ಎದುರಿಸಲು ತಯಾರಾಗಿದ್ದೇವೆ. ಇವರು ದೇವೇಗೌಡರ ಚಾರಿತ್ರ್ಯ ವಧೆ ಮಾಡುವುದಕ್ಕೆ ಹೊರಟಿದ್ದಾರೆಂದು ಈ ಸಂದರ್ಭದಲ್ಲಿ ನಾನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇದೊಂದು ರಾಜಕೀಯ ಪಿತೂರಿ. ಇವರಿಗೆ ಪ್ರಧಾನಿಯವರ ವರ್ಚಸ್ಸನ್ನು ತಡೆದುಕೊಳ್ಳುವುದಕ್ಕಾಗುತ್ತಿಲ್ಲ, ಸಹಿಸುವುದಕ್ಕಾಗುತ್ತಿಲ್ಲ. ಅವರ ಕುಟುಂಬ ವರ್ಗದವರ ಬಗ್ಗೆ ಕೀಳು ರಾಜಕೀಯ ಮಾಡಿ ಅವರ ಬಗ್ಗೆ ಅಪಪ್ರಚಾರ ಮಾಡುವುದಕ್ಕೆ ಹೊರಟಿದ್ದು, ಕೇವಲ ಇದು ಪ್ರಚಾರ ಗಿಟ್ಟಿಸಿಕೊಳ್ಳಲು ಮಾಡುವ ಒಂದು ತಂತ್ರವೆಂದು ನಾನು ಹೇಳಬಯಸುತ್ತೇನೆ. ಸುಮಾರು ನಲವತ್ತು ವರ್ಷಗಳಿಂದಲೂ ದೇವೇಗೌಡರು ರಾಜಕೀಯ ರಂಗದಲ್ಲಿದ್ದು, ನಾನೂ ಕೂಡ ಚುನಾವಣಾ ಸಂದರ್ಭದಲ್ಲಿ ಅವರ ಎದುರು ನಿಂತಿದ್ದೇನೆ. ದೇವೇಗೌಡರು ಸೋಲು, ಗೆಲುವು ಎರಡನ್ನೂ ಕೂಡ ಅನುಭವಿಸಿದ್ದಾರೆ. ಅವರು ಯಾರಿಗೋ ಹೆದರಿಕೊಂಡು, ಯಾರದೋ ಕೈ-ಕಾಲು ಹಿಡಿದುಕೊಂಡು ಇವೊತ್ತು ಪ್ರಧಾನಿಯಾಗಲಿಲ್ಲ. ತಮಗೆ ಹೇಳಬೇಕೆಂದರೆ,, ಈ ದೇಶದ ಹನ್ನೆರಡು ರಾಜಕೀಯ ಪಕ್ಷಗಳು ಮತ್ತು ಅಖಿಲ ಭಾರತ ಕಾಂಗ್ರೆಸ್ ಪಕ್ಷವೂ ಒಟ್ಟಾಗಿ ಸೇರಿ

ಕೊಂಡು ದೇವೇಗೌಡರವರೇ ರಾಷ್ಟ್ರದ ಪ್ರಧಾನಮಂತ್ರಿಗಳಾಗಬೇಕೆಂದು ತಿಳಿಸಿದ್ದರಿಂದ ಅವರು ಪ್ರಧಾನಿಗಳಾದರೇ ಹೊರತು, ಬೇರೇನೂ ಅಲ್ಲ; ಅವರು ಹಿಂದೆ ಎರಡು ವರ್ಷಗಳ ಕಾಲ ಜೈಲು ವಾಸ ಅನುಭವಿಸಿದವರು. ಇಷ್ಟೆಲ್ಲಾ ಚರ್ಚೆಯಾಗತಕ್ಕಂಥಾದ್ದು ಏಕೆ? ಎಲ್ಲಿ ಹೋದರೂ ದೇವೇಗೌಡರ ಹೆಸರನ್ನು ಹೇಳುವುದು. ಮಾನ್ಯ ಸದಸ್ಯರಾದ ಅಶೋಕ ಕಾಟ್ವೆಯವರು ಸಹ ಅದನ್ನೇ ಹೇಳಿದರು. ದೇವೇಗೌಡರ ಭೂತ ಇವರಿಲ್ಲರಿಗೂ ಹಿಡಿದುಕೊಂಡು ಬಿಟ್ಟಿದೆ. ತಾವು ದೇವೇಗೌಡರ ಬಗ್ಗೆ ಹೇಳುವುದು ನಮಗೆಲ್ಲಾ ಅಥವಾಗುತ್ತದೆ. ಇವರು ಮಾತನಾಡುತ್ತಿರತಕ್ಕಂಥಾದ್ದು ಏನೆಂದರೆ, ಇವೊತ್ತು ಒಬ್ಬ ರೈತನ ಮಗ ಪ್ರಧಾನಿಯಾಗಿದ್ದು ಅವರ ಸರ್ಕಾರಕ್ಕೆ ಮೂರು ತಿಂಗಳುಗಳ ಕಾಲ ಕೊಟ್ಟಿದ್ದ ಬೆಂಬಲ ಹೊರಟುಹೋಯಿತಂತೆ, ರಾಜ್ಯದಲ್ಲಿ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಗಳಾದ ತಕ್ಷಣ ಸರ್ಕಾರಕ್ಕೆ ಕೊಟ್ಟಿದ್ದ ಬೆಂಬಲ ಹೊರಟು ಹೋಯಿತು! ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ನಾವು ಹೀನಾಯವಾಗಿ ಸೋಲು ಅನುಭವಿಸಿದ್ದೇವೆ! ಪುರಸಭೆ ಚುನಾವಣೆಗಳಲ್ಲಿ ಠೇವಣಿ ಕಳೆದುಕೊಂಡಿದ್ದೇವೆ, ಈ ಚುನಾವಣೆಯಲ್ಲಿ ನಾವು ಗೆಲ್ಲಲಿಲ್ಲ, ಲೋಕಸಭಾ ಚುನಾವಣೆಯಲ್ಲಿ ಒಂದೂ ಸ್ಥಾನವನ್ನು ಗೆಲ್ಲಲೇ ಇಲ್ಲ! ಕರ್ನಾಟಕ ರಾಜ್ಯದ ಜನರು ಜನತಾ ದಳಕ್ಕೆ ಸಂಪೂರ್ಣವಾಗಿ ಧಿಕ್ಕಾರ ಹಾಕಿರುವುದರಿಂದ, ಅದಕ್ಕೋಸ್ಕರ ಇವೊತ್ತು ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ್ದು ನಾವೆಲ್ಲರೂ ರಾಜೀನಾಮೆ ಕೊಟ್ಟು ಹೋಗಬೇಕೆಂದರು. ಇದು ನಮಗೆ ಅರ್ಥವಾಗುತ್ತದೆ. ಮಾನ್ಯ ಹಿರಿಯ ಸದಸ್ಯರಾದ ಮಲ್ಲಿಕಾರ್ಜನ ಖರ್ಗೆಯವರ ಮಾತಿನಲ್ಲಿರುವ ನೋವನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಅನೇಕ ಸಂದರ್ಭಗಳಲ್ಲಿ ಅವರು ತಮಗಾಗಿರುವ ನೋವನ್ನು ವ್ಯಕ್ತಪಡಿಸುತ್ತಾರೆ. ಇವೊತ್ತು ದೇವೇಗೌಡರು ಹಿಂದುಳಿದ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ ಕೊಡುವ ರಕ್ಷಣೆ ಮತ್ತು ರೈತರ ಪರವಾಗಿ, ಮಾಡಬೇಕಾಗಿರುವ ಕೆಲಸವನ್ನು ನಾವು ಸವಾಲಾಗಿ ಸ್ವೀಕರಿಸುತ್ತೇವೆ, ಇದರಿಂದ ಓಡಿ ಹೋಗಬೇಕೆಂಬ ಪ್ರಶ್ನೆಯಲ್ಲ. ಇದರ ಬಗ್ಗೆ ಸ್ಪಷ್ಟವಾದ ವಿಚಾರ ಹೇಳಲು ಹೊರಟಿದ್ದೇವೆ. ರಾಜಕೀಯವಾಗಿ ಸಂಘರ್ಷವಾಗಬೇಕು, ಮತ್ತು ರಾಜಕೀಯ ಮಂಥನ ನಡೆಯಬೇಕು. ಜನತಾದಳ ಈ ವರ್ಗದವರ ಪರವಾಗಿಯೇ ಕೆಲಸ ಮಾಡುತ್ತದೆಂದು ನಾವು ನೂರು ಸಾರಿ ಹೇಳುತ್ತೇವೆ. ಆದರೆ, ಕಾನೂನು ಬದ್ಧವಾಗಿ ನಾವು ಕೆಲಸ ಮಾಡುತ್ತೇವೆ. ಕರ್ನಾಟಕದಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಾತಿ ಇಟ್ಟಿದ್ದೇವೆ. ರೈತ ಸಮುದಾಯಕ್ಕೆ ಸೇರಿದ ಒಬ್ಬರು ಇವೊತ್ತಿನ ದಿವಸ ಪ್ರಧಾನಿಯಾಗಿದ್ದು ದೆಹಲಿಯ ಕೆಂಪುಕೋಟೆ ಮೇಲೆ ರಾಷ್ಟ್ರಧ್ವಜ ಹಾರಿಸಿ, ಇಡೀ ರಾಷ್ಟ್ರವನ್ನು ಉದ್ದೇಶಿಸಿ ಭಾಷಣ ಮಾಡುತ್ತಿರುವಾಗ ಪರವಾಗಿಲ್ಲ, ಕರ್ನಾಟಕದ ಒಬ್ಬ ರೈತ ಲುಂಗಿ ಉಟ್ಟು ಪ್ರಧಾನಿಯಾಗಿ ರೈತರ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಎಂದು ಇಡೀ ದೇಶದ ರೈತರು ಇವೊತ್ತು ಹೆಮ್ಮೆ ಪಟ್ಟಿದ್ದಾರೆ.

ಕನ್ನಡಿಗನೊಬ್ಬ ಪ್ರಧಾನಿಯಾಗಿ ಕೆಂಪುಕೋಟೆ ಮೇಲೆ ರಾಷ್ಟ್ರಧ್ವಜ ಹಾರಿಸಿ ರಾಷ್ಟ್ರವನ್ನು ಉದ್ದೇಶಿಸಿ ಮಾಡಿದ ಭಾಷಣದ ಸಂದರ್ಭವನ್ನು ಇವರು ಸಂತೆ ಎಂದು ಏನು ಹೇಳಿದ್ದರೆ, ಮತ್ತು ರಾಜ್ಯದ ಮುಖ್ಯಮಂತ್ರಿಗಳಾಗಿರುವ ಪಟೇಲರು ಸುಮ್ಮನಿದ್ದಾರೆ, ಆಡಳಿತ ಯಂತ್ರ ಕುಸಿದಿದೆ, ಪೋಲೀಸರು ಯಾರಿಗೂ ರಕ್ಷಣೆ ಕೊಡುತ್ತಿಲ್ಲವೆಂದು ಹೇಳಿದರು. ನಿಮಗೆ ಹೇಳುವುದಾದರೆ,

ನಾನು ಗೃಹ ಮಂತ್ರಿಯಾಗಿ ಹಿಂದೆ ಸ್ವಲ್ಪ ದಿವಸಗಳ ಕಾಲ ಕೆಲಸ ಮಾಡಿದ್ದೇನೆ. ನನಗೆ ಗೊತ್ತಿರುವಂತೆ ನಮ್ಮ ಕರ್ನಾಟಕದ ಪೋಲೀಸರು ಯಾವುದೇ ರಾಜಕಾರಣಿಗಳ ಮಾತನ್ನೂ ಸಹ ಕೇಳುವುದಿಲ್ಲ. ಅದರಲ್ಲೂ ಮೇಲ್ಮಟ್ಟದ ಅಧಿಕಾರಿಗಳ ಬಗ್ಗೆ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವೊತ್ತು ಸಭೆಗಳಲ್ಲಿ ಯಾರು ಭಾಷಣಗಳಿಗೆ ಅಡ್ಡಿಪಡಿಸುತ್ತಿದ್ದಾರೆ, ಕಲ್ಲು ಹೊಡೆಸುತ್ತಿದ್ದಾರೆ, ಮತ್ತೊಂದು ಕೆಲಸಗಳನ್ನು ಮಾಡಿಸುತ್ತಿದ್ದಾರೆ ಮತ್ತು ಬೀದಿಯಲ್ಲಿ ಪಾಠ ಕಲಿಸಿ ಎಂದೂ ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಕೂಡ ಹೇಳಿದರು ರಾಷ್ಟ್ರದ ಪ್ರಧಾನಮಂತ್ರಿಗಳಾದ ನಂತರ ಅವರ ಬಗ್ಗೆ ಕೆಲವರು ಮಾತನಾಡಿರತಕ್ಕ ಮಾತುಗಳು.......

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಇದನ್ನು ಲೋಕಸಭೆಯೆಂದು ತಿಳಿದು ಮಾತನಾಡುತ್ತಿದ್ದೀರೋ ?

ಶ್ರೀ ಪಿ.ಜಿ.ಆರ್.ಸಿಂಧ್ಯ : ನಾನು ಇದನ್ನು ಲೋಕಸಭೆಯೆಂದು ತಿಳಿದು ಮಾತನಾಡುತ್ತಿಲ್ಲ, ನಾನಿನ್ನೂ ಆ ಮಟ್ಟಕ್ಕೆ ಹೋಗಿಲ್ಲ. ಲೋಕಸಭೆಗೆ ಎರಡು ಸಾರಿ ಹೋಗಲು ಪ್ರಯತ್ನ ಮಾಡಿದೆ, ಶ್ರೀನಿವಾಸ್‌ರವರು ಸಹಾಯ ಮಾಡಿದರು, ಆದರೆ, ಹೋಗುವುದಕ್ಕಾಗಲಿಲ್ಲ. ಮುಂದೆ ನೋಡೋಣ. ಈಗ ನಾನು ಇದನ್ನು ವಿಧಾನಸಭೆಯೆಂದು ತಿಳಿದುಕೊಂಡೇ ಮಾತನಾಡುತ್ತಿದ್ದೇನೆ. ದೇವೇಗೌಡರಿಗೆ ಪ್ರಧಾನಿಯಾಗಲು ಅವರಿಗೆ ಯೋಗ್ಯತೆಯಿಲ್ಲವೆಂದು ಹೇಳಿರುವುದು ಇವೆಲ್ಲವೂ ಹೊಟ್ಟೆಕಿಚ್ಚಿನ ಮಾತುಗಳೆಂದು ಹೇಳಬಯಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಹಾಗೆಂದು ಯಾರು ಹೇಳಿದರು ಎಂಬುದನ್ನು ಹೇಳಿ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಇವೆಲ್ಲವನ್ನೂ ಹೊಟ್ಟೆಕಿಚ್ಚಿನಿಂದ ಹೇಳುತ್ತಿರತಕ್ಕಂಥಾದ್ದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಯಾರು ಹೇಳಿದರೆಂಬುದನ್ನು ಹೇಳಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಯಾರು ಆ ರೀತಿ ಹೇಳಿದ್ದಾರೋ ಅವರಿಗೆ ನಾನು ಹೇಳುತ್ತಿದ್ದೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ''ಕಳ್ಳನ ಮನಸ್ಸು ಹುಳ್ಳಳ್ಳಗೆ'' ಎಂಬುದೊಂದು ಗಾದೆ ಇದೆ.

ಶ್ರೀ ವಾಟಾಳ್ ನಾಗರಾಜ್ : ಹಾಗೆಂದು ಹೆಗಡೆಯವರು ಹೇಳಿದ್ದಾರೆಯೇ ? ಯಾರು ಹೇಳಿದ್ದಾರೆ ಎಂಬುದನ್ನಾದರೂ ಹೇಳಬೇಕು. ಸುಮ್ಮನೆ ಯಾರೋ ಹೇಳಿದ್ದರೆಂದರೆ ಇದು ಗಾಳಿ ಸುದ್ದಿಯೇ ?

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ದೇವೇಗೌಡರು ಸಿದ್ದರಾಮಯ್ಯನವರ ಪರವಾಗಿದ್ದಾರೆ; ಅವರು ಪಟೇಲರ ಪರವಾಗಿಲ್ಲ.

ಶ್ರೀ ಪಿ.ಜಿ.ಆರ್ .ಸಿಂಧ್ಯ : ದೇವೇಗೌಡರು ಸಿದ್ದರಾಮಯ್ಯನವರ ಪರವಾಗಿ, ಪಟೇಲರ ಪರವಾಗಿ ಮತ್ತು ಜನತಾ ದಳದ ಪರವಾಗಿದ್ದಾರೆ. ನೀವು ರಾಜಕೀಯವಾಗಿ ಏನು ಹೇಳುತ್ತಿದ್ದೀರಿ, ಅವೆಲ್ಲಾ ಸುಳ್ಳು.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಸದಸ್ಯರಾದ ಈಶ್ವರಪ್ಪನವರು ಏನು ಹೇಳುವುದಕ್ಕೆ ಹೊರಟಿದ್ದಾರೆಂದರೆ, ನಿಜವಾಗಿಯೂ ಈ ಪಾತ್ರವನ್ನು ಸಿದ್ದರಾಮಯ್ಯನವರು ಮಾಡುತ್ತಾರೆಂದು ಅಂದುಕೊಂಡಿದ್ದೆವು: ಆದರೆ, ಈಗ ನೀವು ಏಕಪಾತ್ರಾಭಿನಯ ಮಾಡುತ್ತಿದ್ದೀರಿ. ಅದುದರಿಂದ, ದೇವೇಗೌಡರಿಗೆ ಈಗ ನಿಮ್ಮ ಬಗ್ಗೆ ವಿಶ್ವಾಸ ಕಡಿಮೆಯಾಗಿ ನಿಮ್ಮನ್ನು ಪಕ್ಕಕ್ಕೆ ಸರಿಸಿದ್ದಾರೋ ಏನೋ ನಮಗೆ ಗೊತ್ತಿಲ್ಲ. ಇದರ ಬಗ್ಗೆ ಎರಡು-ಮೂರು ದಿವಸಗಳಲ್ಲಿ ಎಲ್ಲವೂ ಗೊತ್ತಾಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಈಶ್ವರಪ್ಪನವರಿಗೆ ಕೆಲವು ವಿಚಾರಗಳು ಅರ್ಥವಾಗುವುದಿಲ್ಲ, ಆದರೆ, ಯಡಿಯೂರಪ್ಪನವರು ಬಹಳ ಬುದ್ದಿವಂತರು.

ಶ್ರೀ ಕೆ.ಎಸ್.ಈಶ್ವರಪ್ಪ : ಹೌದೌದು, ಈ ಗುಂಪುಗಾರಿಕೆ ನನಗೆ ಸತ್ಯವಾಗಿಯೂ ಅರ್ಥವಾಗುವುದಿಲ್ಲ.

ಶ್ರೀ ಪಿ.ಜಿ..ಆರ್.ಸಿಂಧ್ಯ : ಈಗ ಗುಜರಾತ್‌ನಲ್ಲಿ ಏನಾಗುತ್ತಿದೆಯೆಂದು ಗೊತ್ತಾಗುತ್ತಿದೆ. ಗುಂಪುಗಾರಿಕೆ ಎಂದರೆ ಏನು ಎನ್ನುವುದನ್ನು ವಘೇಲಾರವರು ಅಲ್ಲಿ ತಿಳಿಸುತ್ತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಯಾವುದೋ ಒಂದೊಂದು ರಾಜ್ಯದಲ್ಲಿ ಸರ್ಕಾರ ನಡೆಸುತ್ತಿದ್ದೀರಿ, ನಾವು ನಾಲ್ಕು ರಾಜ್ಯಗಳಲ್ಲಿ ಆಡಳಿತ ನಡೆಸಿದ್ದೇವೆ, ಗುಂಪುಗಾರಿಕೆ ಇರಲಿಲ್ಲ. ನಿಮ್ಮಲ್ಲಿರುವುದನ್ನು ನಮ್ಮ ಮೇಲೆ ಹಾಕುತ್ತಿದ್ದೀರಲ್ಲಾ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಸಚಿವರಾದ ಸಿಂಧ್ಯರವರು ಉತ್ತರ ಕೊಡುತ್ತಿರುವುದು ಬಹಳ ಚೆನ್ನಾಗಿದೆ. ಅದು ಎಷ್ಟು ಚೆನ್ನಾಗಿದೆಯೆಂದರೆ, 1979ನೇ ಇಸವಿಯಲ್ಲಿ ಜನತಾ ಪಾರ್ಟಿಯನ್ನು ಡಿಫೆಂಡ್ ಮಾಡಿದ ಜಾರ್ಜ್ ಫರ್ನಾಂಡಿಸ್‌ರವರ ಜ್ಞಾಪಕ ಬರುತ್ತಿದೆ. ಅವರು ಮಾರನೇ ದಿವಸ ಏನು ಮಾಡಿದಿರೆಂಬುದೂ ಜ್ಞಾಪಕವಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಧನ್ಯವಾದಗಳು. ನಿಜ, ಕೆಲವು ಸಂದರ್ಭಗಳಲ್ಲಿ ಹಾಗೆ ಆಗಿಬಿಡುತ್ತದೆ. ಮಾನ್ಯ ಉಪಾಧ್ಯಕ್ಷರೇ, ಇವರಿಗೆಲ್ಲಾ ಏನಾಗಿದೆಯೆಂದರೆ, ಹೊಟ್ಟೆಕಿಚ್ಚು ಬಂದಿರುವುದು ಇಲ್ಲೇ. ಗುಜರಾತ್‌ನಲ್ಲಿ ವಘೇಲಾ, ಉತ್ತರ ಪ್ರದೇಶದ ಚುನಾವಣೆ, ಆದರ ದೆವ್ವ ಇವರಿಗೆ ಹಿಡಿದುಕೊಂಡಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮಿಂದಲೇ ನಿಮ್ಮವರು ಪ್ರಧಾನಿಗಳಾದರು. ನಿಮ್ಮ ಒಗ್ಗಟ್ಟಿಗೆ ಬಿ.ಜೆ.ಪಿ. ಮುಖ್ಯವಾಯಿತು. ಆದುದರಿಂದ, ತಾವು ಮೊದಲು ಧನ್ಯವಾದ ತಿಳಿಸಿ, ಮಾತನ್ನು ಪ್ರಾರಂಭಿಸಬೇಕಾಗಿತ್ತು.

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ಈ ಸದನದಲ್ಲಿರುವ ಪಟೇಲ್ ಸಾಹೇಬರು, ಭಾರತದ ಮಾಜಿ ಪ್ರಧಾನಿ, ನಮ್ಮ ನಾಯಕರ ಬಗ್ಗೆ ನಮಗೆ ವೈಯಕ್ತಿಕವಾಗಿ ಬಹಳ ಗೌರವವಿದೆ. ಅಟಲ್ ಬಿಹಾರಿ ವಾಜಪೇಯಿಯವರ ಜೊತೆ ನಾವೆಲ್ಲರೂ ಸ್ವಲ್ಪ ದಿವಸಗಳ ಕಾಲ ಬೆಂಗಳೂರಿನ ಜೈಲಿನಲ್ಲಿದ್ದೆವು, ಆಗ ಸದಸ್ಯರಾದ ರುಕ್ಮಯ್ಯ ಪೂಜಾರಿಯವರೂ ಸಹ ಇದ್ದರೆಂದು ಕಾಣುತ್ತದೆ. We really thank him. ನಾನು ಕೊನೆಯದಾಗಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಏಕೆಂದರೆ, ನೀರಾವರಿ ಸಚಿವರು, ಹಣಕಾಸು ಸಚಿವರು ಹಾಗೆಯೇ ಗ್ರಾಮೀಣಾಬಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು ಚರ್ಚೆಯಲ್ಲಿ ಭಾಗವಹಿಸಿ, ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗಿದೆ. ಇವರಿಗೆ ಏನಾಗಿದೆಯೆಂದರೆ, ಕೇಂದ್ರದಲ್ಲಿ ಹನ್ನೊಂದು ದಿವಸಗಳವರೆಗೆ ಸರ್ಕಾರ ಅಸ್ತಿತ್ವದಲ್ಲಿದ್ದು ಹೊರಟುಹೋಯಿತಲ್ಲಾ, ಕೇಂದ್ರದಲ್ಲಿ ಹನ್ನೊಂದು ದಿವಸಗಳವರೆಗೆ ಸರ್ಕಾರ ಅಸ್ತಿತ್ವದಲ್ಲಿದ್ದು ಹೊರಟುಹೋಯಿತಲ್ಲಾ, ನಂತರ ಪ್ರಧಾನಿ ಸ್ಥಾನಕ್ಕೆ ದೇವೇಗೌಡರು ಬಂದು ಕುಳಿತು ಕೊಂಡರಲ್ಲಾ, ಒಬ್ಬ ರೈತನ ಮಗ, ಕನ್ನಡಿಗ ಪ್ರಧಾನಿಯಾಗಬಾರದೆಂದು ಹೇಳಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಹೇಳಿದ ಮಾತಿಗೆ ಹೆಚ್ಚಿನ ಬೆಂಬಲ ಆ ಕಡೆ ಅಂದರೆ ಆಡಳಿತ (ಪಕ್ಷದ ಕಡೆಯಿಂದ ಬರುತ್ತಿದೆಯೇ ವಿನಾ) ಎರಡೂ ಕಡೆಗಳಿಂದ ಬರುತ್ತಿಲ್ಲ. ಇದರ ಬಗ್ಗೆ ತಾವು ಸ್ವಲ್ಪ ನೋಡಿ ಎಂದು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಆ ಶಬ್ದವೇ ನಿರ್ಧಾರ ಕೊಡುತ್ತಿದೆ, ಭಾರೀ ಶಬ್ದ, ಮಂದ ಶಬ್ದ, ಅಲ್ಪ ಶಬ್ದ........

ಶ್ರೀ ಪಿ.ಜಿ.ಆರ್. ಸಿಂಧ್ಯ : ದೇವೇಗೌಡರ ಕುಟುಂಬ ವರ್ಗದವರ ಬಗ್ಗೆ ಹೇಳಿದರು ಮತ್ತು ರೇವಣ್ಣನವರ ಬಗ್ಗೆ ಹೇಳುವುದಾದರ ಅವರು ಹೌಸಿಂಗ್ ಬೋರ್ಡಿನಿಂದ ಮನೆಗಳನ್ನು ಅಲಾಟ್ ಮಾಡಲಿಲ್ಲ. ಅವರು ಹೇಳಿರುವುದೇನೆಂದರೆ, ಅರ್ಹತೆ ಇದ್ದರೆ ಎಂದು ಹೇಳಿದ್ದಾರೆ. ಹಾಗಾದರೆ ಸ್ಟ್ರೀ ಸೈಟ್ ಎಂದು ಇಟ್ಟುಕೊಂಡಿರುವುದೇಕೆ? ಹೌಸಿಂಗ್ ಬೋರ್ಡ್ ಹುಟ್ಟಿದಾಗಿ ನಿಂದಲೂ ಸ್ಟ್ರೀ ಸೈಟ್, ಸ್ಟ್ರೀ ಹೌಸಸ್, ಮಿನಿಸ್ಟರ್ ಕೋಟಾ, ಎಂ. ಎಲ್.ಎ. ಕೋಟಾ, ಐ.ಎ.ಎಸ್.ಆಫೀಸರ್, ಕೆ.ಎ.ಎಸ್. ಆಫೀಸರ್, ಎಲ್ಲರಿಗೂ ಕೊಟ್ಟುಕೊಂಡು ಬರಲಾಗಿದೆ. ಮತ್ತು ಇದನ್ನು ಅವರು ಮಾಡಿರುವುದಲ್ಲ. ಹಿಂದೆ ಬಸವರಾಜ ರಾಯರೆಡ್ಡಿಯವರು ವಸತಿ ಸಚಿವರಾಗಿದ್ದಾಗ ಮಾಡಿರುವುದು. ಪಾಪ ಆ ಹುಡುಗ, ರೇವಣ್ಣನವರ ಮೇಲೆ .. ಅವರು ದೇವೇಗೌಡರ ಮಗನೆಂಬ ಕಾರಣಕ್ಕಾಗಿ...

6:10 p.m

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಪಾಪ ಹುಡುಗ ಎಂದು ಹೇಳಬೇಡಿ He is an hon. member of this House. He is a legislator.

ಶ್ರೀ ಪಿ.ಜಿ.ಆರ್. ಸಿಂಧ್ಯ : ಬೇರೆ ಇನ್ನೇನೋ ಸತ್ಯ ಇಲ್ಲ. ಕೊನೆಯದಾಗಿ ಇವರೇನು ದೋಷಾರೋಪಗಳನ್ನು ಮಾಡಿದ್ದಾರೆ, ಅದನ್ನು ಕೇವಲ ವೈಯಕ್ತಿಕವಾಗಿ ಅಸೂಯೆಯಿಂದ ಹೊಟ್ಟೆಕಿಚ್ಚಿನಿಂದ ಮಾಡಿದ್ದಾರೆ, ಇದರಲ್ಲಿ ಏನೂ ಅರ್ಥ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದನ್ನು ಟಿ.ವಿ.ಯವರು ರೆಕಾರ್ಡ್ ಮಾಡಿ ದೆಹಲಿಯಲ್ಲಿ ಹಾಕಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ದೆಹಲಿಯಲ್ಲಿ ಹಾಕುತ್ತೇವೆ. ದೆಹಲಿ ದೂರದರ್ಶನಕ್ಕೆ ಆಡಳಿತ ಪಕ್ಷದವರು ಕೊಟ್ಟೇ ಕೊಡುತ್ತಾರೆ. ಅದರಲ್ಲಿ ಹೇಳಿಕೊಳ್ಳುವುದು ಏನು ? ಅದರಲ್ಲೇನೂ ಮುಚ್ಚುಮರೆ ಇಲ್ಲ. ಹಿಂದು ಮುಂದು ಹೇಳುವುದಿಲ್ಲ. ತಮಗೆ ಮುಂಚಿತವಾಗಿ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಏಕೆಂದರೆ ನನಗೆ ಅವಕಾಶ ಕೊಟ್ಟಿದ್ದೀರಿ. ಮಾನ್ಯ ಖರ್ಗೆಯವರು ಆಕಸ್ಮಿಕವಾಗಿ ವಿರೋಧ ಪಕ್ಷದಲ್ಲಿದ್ದಾರೆ, ಅವರ ವ್ಯಕ್ತಿತ್ವ ಅವರು ಬೆಂಬಲ ಕೊಟ್ಟಿದ್ದಾರೆಯೇ ಹೊರತು, ನಮ್ಮ ಶ್ರೀರಾಮರೆಡ್ಡಿಯವರ ಹಾಗೇ ನಮ್ಮ ಜೊತೆಯಲ್ಲೇ ಇದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಏನೂ ಡಿಫೆಂಡ್ ಮಾಡುವುದಕ್ಕೆ ಇಲ್ಲದೇ ಇದ್ದಾಗ ಅವರಿಗೇನು ಬೇಕು ಅದನ್ನು ಹೇಳಿದರು. ಲ್ಯಾಂಡ್ ಬಗ್ಗೆ ಹೇಳಿದರು. ಏಕೆಂದರೆ ಇವೆಲ್ಲಾ ಕೂಡ ಅವರು ಮಾಡಿದಂತಹ ಅಲಿಗೇಷನ್ಸ್ ನೇರವಾಗಿ ಪ್ರಧಾನ ಮಂತ್ರಿಗಳಿಗೆ ಸಂಬಂಧಪಟ್ಟಂತೆ ಇದೆ ಎಂದು ಹೇಳಿ ಇದೆಲ್ಲಾ ರೆಕಾರ್ಡಿನಲ್ಲಿ ಹೋಗಿ ಅದರ ಕಾಪಿ ಗೀಪಿ ಫ್ಯಾಕ್ಸ್ ಎಲ್ಲಾ ದೆಹಲಿಗೆ ಹೋಗುತ್ತವೆ. ಏಕೆಂದರೆ ಅವರಿಗೆ ಹೋಗಿ ಗೊತ್ತಾಗಬೇಕಲ್ಲಾ. ಅಲ್ಲಿ ಗೊತ್ತಾಗಲೀ ಎಂದು ಹೇಳಿ ಮಾಡುತ್ತಿದ್ದಾರೆ. ದೇವೇಗೌಡರ ಫಾಲೋಯರ್ಸ್‌ನಲ್ಲಿ Stanch ಫಾಲೋಯರ್ಸ್ ಅವರೂ ಒಬ್ಬರು. ಅದಕ್ಕಾಗಿ ಒಳ್ಳೆಯ ರೀತಿಯಲ್ಲಿ ಡಿಫೆಂಡ್ ಮಾಡಿದ್ದಾರೆ ಅದರಲ್ಲಿ ತಪ್ಪೇನೂ ಇಲ್ಲ. ಅವರ ಇಂಟರ್‌ಸ್ಟ್ ಅನ್ನು ಕಾಪಾಡಿದ್ದಾರೆ. ನಾವು ಇನ್ನು 2-3 ವಿಷಯಗಳನ್ನು ಹೇಳಿದ್ದೇವೆ, ಅದರ ಬಗ್ಗೆ ಹೇಳಲಿಲ್ಲ. ನೀರಾವರಿ ಬಗ್ಗೆ ಮಾತೇ ಆಡಲಿಲ್ಲವೆಂದು ಹೇಳಿದಿರಿ, ಒಂದೂವರೆ ತಾಸು ನಾನೇ ಮಾತನಾಡಿದ್ದೇನೆ. ಆಮೇಲೆ ಅವರು ಕಾನ್‌ಸ್ಟಿಟ್ಯೂಷನಲ್ ವಯೊಲೇಟ್ ಮಾಡಿ ರೆಕ್ರೂಟ್‌ಮೆಂಟ್ ಮಾಡಿದ್ದಾರೆಂದು ಹೇಳಿದೆ. ಅದಕ್ಕೆ ಉತ್ತರ ಹೇಳಲಿಲ್ಲ.

ಶ್ರೀ ಪಿ. ಜಿ.ಆರ್ . ಸಿಂಧ್ಯ : ನಾನು ಇನ್ನೂ ಮುಗಿಸಿಲ್ಲ. ಕೊನೆಯಲ್ಲಿ ನಾನು ಒಂದೇ ಒಂದು ವಾಕ್ಯವನ್ನು ಹೇಳುತ್ತೇನೆ. ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ, ನಾನು ಚರ್ಚೆಯಲ್ಲಿ ಭಾಗವಹಿಸಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಪ್ರಾಸಿಕ್ಯೂಷನ್‌ಗೆ ಪರ್ಮಿಷನ್ ಕೇಳಿದ್ದರಲ್ಲ. 4 ಜನರಿಗೆ ಕೋದಂಡರಾಮಯ್ಯನವರು ನೀಡಿದಂತಹ ವರದಿಯನ್ನು ಇಲ್ಲಿ ಟೇಬಲ್ ಮಾಡಿ ಗೊತ್ತಾಗುತ್ತದೆ. ಯಾರು ಅಪರಾಧಿಗಳೆಂದು ಹೇಳಿದರು ಅವರು ಮಂತ್ರಿಗಳಾಗಿದ್ದಾರೆ. ಅದಕ್ಕೇ ನಾನು ಹೇಳುತ್ತಿರುವುದು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಇವರೇನು ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದಾರೆ, ಇದನ್ನು ನಾನು ವಿರೋಧ ಮಾಡುತ್ತೇನೆ. ಬೆಟ್ಟವನ್ನು ಅಗೆದು ಇವರ ಕೈಯ್ಯಲ್ಲಿ ಇಲಿಯನ್ನೂ ಹಿಡಿಯುವುದಕ್ಕೆ ಆಗಲಿಲ್ಲ. ಪಾರ್ಲಿಮೆಂಟಿನಲ್ಲಿ ಪಾಪ ವಾಜಪೇಯಿಯವರಿಗೆ ಗೊತ್ತಿತ್ತು. ಅವರು ನಿಜವಾಗಿಯೂ ಬಹಳ ಒಳ್ಳೆಯ ಮನುಷ್ಯರು. ಇವರ ಪಾರ್ಟಿಯಲ್ಲಿ ಇಲ್ಲದೇ ಹೋಗಿದ್ದಿದ್ದರೆ ಅವರು ಯಾವತ್ತೋ ಮಾಜಿ ಪ್ರಧಾನಿಗಳಾಗುತ್ತಿದ್ದರು. ಪ್ರಧಾನಿಗಳಾಗಿಯೂ ಬಹಳ ದಿವಸ ಇರುತ್ತಿದ್ದರು. ಅವರನ್ನು ಇವರು ಎಂತಹ ಸ್ಥಿತಿಗೆ ತಂದರು ಎಂದರೆ, 11ನೇ ದಿವಸಕ್ಕೆ ಪಾರ್ಲಿಮೆಂಟಿನಲ್ಲಿ ಓಟ್‌ಗೆ ನಾನು ರಾಷ್ಟ್ರಪತಿಗಳ ಹತ್ತಿರ ಹೋಗುತ್ತೇನೆಂದು ಹೋದರು. ಹಾಗೇ ಇವರು ಓಟಿಗೆ ಹಾಕಿಸದೆ ಹೊರಗಡೆ ಹೋಗುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅವರು ನಮ್ಮ ಬಗ್ಗೆ ಒಂದು ವಿಷಯ ಹೇಳಿದ್ದಾರೆ. ಇವರು ಕೂಗಾಡುತ್ತಿದ್ದಾರೆ. ನಾನು ಹೇಳುತ್ತೇನೆ. ಯಾರು ಯಾರ ಜೊತೆ ಅಡ್ಜಸ್ಟಮೆಂಟ್ ಮಾಡಿಕೊಂಡು ಬಿ.ಎಡ್. ಕಾಲೇಜು ತೆಗೆದುಕೊಂಡಿದ್ದಾರೆ ಯಾರ್‍ಯಾರು ಅಡ್ಜಸ್ಟಮೆಂಟ್ ಮಾಡಿಕೊಂಡು ಎನು ಕಾಲೇಜುಗಳನ್ನು ತೆಗೆದುಕೊಂಡಿದ್ದಾರೆ ಅದು ನಮ್ಮ ಹತ್ತಿರ ಇದೆ, ಅದನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಆ ಮಟ್ಟದ ಅಡ್ಜಸ್ಟಮೆಂಟ್ ನಮ್ಮ ಹತ್ತಿರ ಇಲ್ಲ. ಸರಕಾರ ಒಳ್ಳೆಯ ಕೆಲಸ ಮಾಡಿದರೆ ಬೆಂಬಲ ಕೊಡುತ್ತೇವೆ, ತಪ್ಪು ಕೆಲಸ ಮಾಡಿದರೆ ಅದನ್ನು ವಿರೋಧ ಮಾಡುತ್ತೇನೆ. ನಾನು ಅವರ ಜೊತೆಯಲ್ಲೂ ಇಲ್ಲ. ಇವರ ಜೊತೆಯಲ್ಲೂ ಇಲ್ಲ. ನಾನು ವಿರೋಧ ಪಕ್ಷದ ಸಾಲಿನಲ್ಲಿ ಕುಳಿತಿದ್ದೇನೆ.

+ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಉಪಾಧ್ಯಕ್ಷರೆ, ವಿರೋದ ಪಕ್ಷಗಳು ತಂದಿರತಕ್ಕಂತಹ ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಂತಹ ತಮಗೆ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕೋಲಾರ ಜಿಲ್ಲೆ, ಬೆಂಗಳೂರು ಜಿಲ್ಲೆ ಪ್ರದೇಶಕ್ಕೆ ಈ ಸರಕಾರದ ಅವಧಿಯಲ್ಲಿ ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿ ನಡೆಯುತ್ತಿರತಕ್ಕಂತಹ ಕೆಲವು ವಿಚಾರಗಳು ಮತ್ತು ಸಾರ್ವಜನಿಕ ಅಭಿವೃದ್ಧಿ ಕೆಲಸಗಳು ಯಾವ ರೀತಿ ನಮ್ಮ ಪ್ರದೇಶಕ್ಕೆ ಅನ್ಯಾಯವಾಗುತ್ತಿದೆ ಎಂಬ ಬಗ್ಗೆ ಪ್ರಮುಖವಾಗಿ ಪ್ರಸ್ತಾಪ ಮಾಡುತ್ತೇನೆ. ಜಿಲ್ಲಾ ಆಡಳಿತದಲ್ಲಿ ಆಗತಕ್ಕಂತಹ ಒಂದು ಆಡಳಿತದ ಧೋರಣೆ ಬಗ್ಗೆ ಸರಕಾರದ ಗಮನ ಸೆಳೆಯಬೇಕೆಂದು ಇದ್ದೇನೆ. ಯಾವ ರೀತಿ ಜನತೆಯ ವಿಶ್ವಾಸವನ್ನು ಈ ಸರಕಾರ ಕಳೆದುಕೊಂಡಿದೆ ಎನ್ನುವ ವಿಚಾರವನ್ನು ನಾನು ಈ ಅವಿಶ್ವಾಸ ನಿರ್ಣಯದ ಮುಖೇನ ಸರಕಾರದ ಗಮನ ಸೆಳೆಯುತ್ತೇನೆ. ನಾನು ತಮ್ಮನ್ನು ಬೇಡಿಕೊಂಡಿದ್ದಕ್ಕೆ ನನಗೆ ಮಾತನಾಡಲು ತಾವು ಅವಕಾಶ

ಕೊಟ್ಟಿದ್ದೀರಿ ಅದಕ್ಕಾಗಿ ತಮಗೆ ವಂದಿಸುತ್ತೇನೆ. ಎಲ್ಲಾ ವಿಚಾರಗಳನ್ನು ನಮ್ಮ ವಿರೋಧ ಪಕ್ಷದ ಇತರೇಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ . ಪ್ರಾಮುಖ್ಯವಾಗಿ ನಮ್ಮ ಸರಕಾರ ಈ ಬದಲಾವಣೆಯಾದ ನಂತರ 3 ತಿಂಗಳಿನಿಂದ ಅಥವಾ ಒಂದೂವರೆ ವರ್ಷದಿಂದ ಬರೀ ಚುನಾವಣೆ ಕಡೆಗೆ ಹೆಚ್ಚಿನ ಗಮನ ಕೊಟ್ಟಿದೆ. ರಾಜಕೀಯ ವಿಚಾರಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದೆ. ಈ ರಾಜ್ಯದಲ್ಲಿರತಕ್ಕಂತಹ ಅಭಿವೃದ್ಧಿ ಕೆಲಸಗಳಾಗಲೀ ಈ ರಾಜ್ಯದಲ್ಲಿ ಆಗತಕ್ಕಂತಹ ಸರಕಾರೀ ಕೆಲಸಗಳು ಏನು ಇದ್ದವು ಅವು ಪೂರ್ತಿಯಾಗಿ ಸ್ಥಗಿತವಾಗಿದೆ ಎಂಬುದು ನಿರ್ಣಯವಾದ. ಅದಕ್ಕೆ ಕಾರಣ ಹಿಂದೆ ಬಂದಂತಹ ಚುನಾವಣೆಗಳು ಇವೆ ಹಾಗೇ ದುರಾದೃಷ್ಟ ಆಡಳಿತ ನಡೆಸತಕ್ಕಂತಹ ಈ ಸರಕಾರ ಕರ್ನಾಟಕದ ಇತಿಹಾಸದಲ್ಲೇ ಈ ಚುನಾವಣೆಗಳಿಗೆ ಅಧಿಕಾರ ಮತ್ತು ಹಣದ ಪ್ರಭಾವ ಮತ್ತು ಇತರೇ ಲಿಕ್ಕರ್ ಲಾಬಿ ಇವು ಪ್ರಭಾವಗಳನ್ನು ಬಳಸಿ ಸರಕಾರದ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಿರ್ಲಕ್ಷ್ಯ ಮಾಡಿರತಕ್ಕಂಥಾದ್ದು ಇವತ್ತು ಸಾರ್ವಜನಿಕರ ವೇದಿಕೆಯಲ್ಲಿ ಮಾತನಾಡತಕ್ಕಂತಹ ಪರಿಸ್ಥಿತಿ ಇದೆ. ಸಾರ್ವಜನಿಕರೂ ಕೂಡ ಈ ವಿಚಾರವನ್ನು ಯೋಚನೆ ಮಾಡುತ್ತಿದ್ದಾರೆ. ಕರ್ನಾಟಕದ ಇತಿಹಾಸದಲ್ಲಿ ಬಹುಶಃ ಜನತೆ ಕಂಗಾಲಾಗುತಕ್ಕಂತಹ ಪರಿಸ್ಥಿತಿ ಬಂದಿದೆ. ಕನಿಷ್ಠ ಪ್ರಜಾಪ್ರಭುತ್ವದ ಅಡಿಯಲ್ಲಿ ತಮ್ಮ ಮತವನ್ನು ತಾವು ನಿರ್ಭಯವಾಗಿ ಚಲಾವಣೆ ಮಾಡತಕ್ಕಂತಹ ವಾತಾವರಣವನ್ನೂ ಸಹ ಕಳೆದುಕೊಂಡು ಪ್ರಜಾಪ್ರಭುತ್ವಕ್ಕೆ ದ್ರೋಹ ಮಾಡಿರತಕ್ಕಂತಹ ವಾತಾವರಣವನ್ನು ನಾವು ಕಳೆದ ಚುನಾವಣೆಯಲ್ಲಿ ಕಂಡಿದ್ದೇವೆ. ವಿಶೇಷವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ಒಂದೊಂದು ಡಿವಿಜನ್‌ನಲ್ಲಿ 3-4 ಕೋಟಿ ರೂಪಾಯಿ 5-6 ತಿಂಗಳಿನಿಂದ ಬಾಕಿ ಇದೆ. ನೀವು ಯಾವುದೇ ಡಿವಿಜನ್‌ಗೆ ಹೋಗಿ. ಡೆವಲಪ್‌ಮೆಂಟ್ಸ್ ಕಾರ್ಯಕ್ರಮಗಳು ಸ್ಥಗಿತವಾಗಿವೆ. ಬಿಲ್ಡಿಂಗ್ಸ್, ಇರಬಹುದು, ರಸ್ತೆ ಇರಬಹುದು ಯಾವುದೇ. ಕಂಟ್ರಾಕ್ಟರ್ ಅನ್ನು ವಿಚಾರ ಮಾಡಿದರೆ, ನಮ್ಮ ಬಿಲ್ ಹೋಗಿ 6 ತಿಂಗಳಾಗಿದೆ ಹಣ ಕೊಡುತ್ತಿಲ್ಲವೆಂದು ಹೇಳುತ್ತಾರೆ. ಜಿಲ್ಲಾ ಪಂಚಾಯತಿಯಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು ಅಂದರೆ ಅದು ನಾನ್ ಪ್ಲಾನ್ ಇರಬಹುದು ಪ್ಲಾನ್ ಇರಬಹುದು ಅದಕ್ಕೆ ಬಡ್ಜೆಟ್ಟಿನಲ್ಲಿ ಇಯರ ಮಾರ್ಕ್ ಮಾಡಿದಂತಹ ಹಣವನ್ನು ಕೊಡುತ್ತಿಲ್ಲ. ಕೇಂದ್ರ ಸರಕಾರದಿಂದ ಏನು ಸ್ಪಾನ್ಸರ್ಡ್ ಸ್ಕೀಮ್ ಇವೆ, ಜೆ.ಆರ್.ವೈ ಎಸ್ ಇಪಿ ಇರಬಹುದು ಅವುಗಳಿಗೆ ಮಾತ್ರ ಹಣ ಬರುತ್ತಿದೆ, ಅದು ವಿತರಣೆಯಾಗಿ ಕೆಲಸವಾಗುತ್ತಿದೆ. ಬೇರೆ ಸರಕಾರದವತಿಯಿಂದ ನಮ್ಮ ಪ್ಲಾನ್, ನಾನ್ ಪ್ಲಾನ್ ಬಡ್ಜೆಟ್ ಇವು ಯಾವುದೇ ಕೆಲಸ ಸರಿಯಾದ ರೀತಿಯಲ್ಲಿ ಅವರ ಟಾರ್ಗೆಟ್ ಏನು, ರೀಚ್ ಆಗಬೇಕೋ ಅದಕ್ಕೆ ತಕ್ಕಂತೆ ಅಚೀವ್‌ಮೆಂಟ್ ಆಗುತ್ತಿಲ್ಲವೆನ್ನುವ ವಿಚಾರ ನಿರ್ಣಯವಾದ . ಒಂದೊಂದು ಡಿವಿಜನ್‌ನಲ್ಲೂ ಕನಿಷ್ಠ 3-4 , 10-10 ಕೋಟಿ ಬಾಕಿ ಹಣ ಕೊಡುವುದು ಇದೆ. ಬಿಲ್ಸ್‌ಗಳು ಬಾಕಿ ಇವೆ ಸರಕಾರ ಹಣ ಬಿಡುಗಡೆ ಮಾಡುತ್ತಿಲ್ಲ. ಹೀಗಾದರೆ ನಾವು ಯಾವ ರೀತಿ ಅಭಿವೃದ್ಧಿ ಮಾಡುವುದು? ನಮಗೆ ಸರಕಾರೀ ಕೆಲಸವೇ ಬೇಡವೆಂದು ಕಂಟ್ರಾಕ್ಟರ್ ಹೇಳತಕ್ಕಂತಹ ಪರಿಸ್ಥಿತಿ ಬಂದಿದೆ. ಜನತೆ ಈ ಸರಕಾರದ ಬಗ್ಗೆ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಅಭಿವೃದ್ಧಿ ಕೆಲಸ ಮಾಡಿದರೆ ಕನಿಷ್ಠ ನಾವು ಮಾಡಿದಂತಹ ಕೆಲಸಕ್ಕೆ ನಮಗೆ ಹಣ ಬರುವುದಿಲ್ಲವೆಂಬ ವಿಶ್ವಾಸವನ್ನು ಸಹ ಸರಕಾರ ಕಳೆದುಕೊಂಡಿದೆ. ಇನ್ನು ನಮ್ಮ ಕೋಲಾರ ಜಿಲ್ಲೆ 3650 ಕೆರೆಗಳನ್ನು ಹೊಂದಿದೆ. ಇಡೀ ರಾಜ್ಯದಲ್ಲಿ ಜಾಸ್ತಿ ಕೆರೆ ಹೊಂದಿರುವ ಪ್ರಪ್ರಥಮ ಜಿಲ್ಲೆಯಾಗಿದೆ. ಇವತ್ತು ಜಿಲ್ಲೆಯಲ್ಲಿರತಕ್ಕವರು

ಸಂಪೂರ್ಣವಾಗಿ ನೇರವಾಗಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಆ ಕೆರೆಗಳಲ್ಲಿ ಬರತಕ್ಕಂತಹ ನೀರಿನ ಆಧಾರದ ಮೇಲೆ ಜೀವನ ಮಾಡತಕ್ಕಂತಹವರು ಇದ್ದಾರೆ, ಅದನ್ನೇ ಅವಲಂಬಿಸಿರತಕ್ಕಂತಹ ರೈತರು ಇದ್ದಾರೆ, ಆದರೆ ಆ ಕೆರೆಗಳಗತಿ ಏನಾಗಿದೆ ಇವತ್ತು ಎಂದರೆ ನೂರಕ್ಕೆ 75 ಭಾಗ ಕೆರೆಗಳು ಸಂಪೂರ್ಣವಾಗಿ ಹೋಳು ತುಂಬಿ ಹೋಗಿವೆ. ಆ ಕೆರೆಗಾಳ ಜೀರ್ಣೋದ್ಧಾರ ಆಗಬೇಕಾಗಿತ್ತು, ಆ ಜೀರ್ಣೋದ್ಧಾರಕ್ಕೆ ಇಂದಿನ ಸರಕಾರ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಹಿಂದೆ ನಮ್ಮ ಸರಕಾರವಿದ್ದಂತಹ ಸಂದರ್ಭದಲ್ಲಿ ಜಿಲ್ಲಾ ಆಡಳಿತದ ವ್ಯಾಪ್ತಿಯಲ್ಲೇ ಒಂದು ಯೋಜನೆ ಮಾಡಿದ್ದರು. ಇವತ್ತಿನ ಮಂತ್ರಿಗಳಾಗಿರುವ ಶ್ರೀ ಬೈರೇಗೌಡರೂ ಸಹ ಅದಕ್ಕೆ ಬಹಳಷ್ಟು ಸಹಕಾರ ಕೊಟ್ಟರು. ಅವರ ಸಹಕಾರದಿಂದ ನಾವು ಈಗಾಗಲೇ ಹೂಳೆತ್ತುವ ಕೆಲಸ ಪ್ರಾರಂಭ ಮಾಡಿದ್ದೇವೆ. ಒಂದು ಕ್ರಿಯಾ ಯೋಜನೆಯನ್ನು ಮಾಡಿದ್ದೇವೆ. ಅದನ್ನು ರಾಜ್ಯ ಸರಕಾರದ ಮುಖಾಂತರ [illegible]ಸಿಕೊಟ್ಟೆವು. ಇವತ್ತು ಈ ಪ್ರದೇಶದಲ್ಲಿರತಕ್ಕಂತಹ ಕೆರೆಗಳನ್ನು ಜೀರ್ಣೋದ್ಧಾರ ಮಾಡಬೇಕೆಂದು ಹೇಳಿದ್ದೇವೆ. ಆದರೆ ಈ ಸ್ಕೀಮ್ ಇವತ್ತು ಸಂಪೂರ್ಣವಾಗಿ ಸ್ಥಗಿತವಾಯಿತು. ಆ ಜಿಲ್ಲೆಯಲ್ಲಿ ಕೆರೆಗಳ ಜೀರ್ಣೋದ್ಧಾರದ ಬಗ್ಗೆ ಕೇಳುವವರು ಇಲ್ಲ. ಯಾವ ಮಟ್ಟಕ್ಕೆ ಬಂದಿದೆ ಎಂದರೆ ಕನಿಷ್ಠ ಒಂದು ತೂಬು ರಿಪೇರಿ ಮಾಡಬೇಕೆಂದರೂ ಆಗುತ್ತಿಲ್ಲ. ಅಲ್ಪಸ್ವಲ್ಪ ಮಳೆ ಬಂದಿದ್ದು ಇರತಕ್ಕಂತಹ ನೀರನ್ನು ಉಳಿಸಿಕೊಳ್ಳುವ ಪರಿಸ್ಥಿತಿ ನಮ್ಮಲ್ಲಿ ಇಲ್ಲ. ಮೈನರ್ ಇರಿಗೇಷನ್ ಬಗ್ಗೆ ಜಿಲ್ಲಾ ಪಂಚಾಯತಿ ಅಧಿಕಾರಿಗಳನ್ನು ಕೇಳಿದರೆ ರಿಪೇರಿಗೆ ನಮ್ಮ ಹತ್ತಿರ ಹಣ ಇಲ್ಲ ಇದು ನಮ್ಮ ಯೋಜನೆಯಲ್ಲೂ ಇಲ್ಲ ಪ್ಲಾನ್‌ನಲ್ಲೂ ಇಲ್ಲ ಎಂದು ಹೇಳುತ್ತಾರೆ. ನಮ್ಮ ಜಿಲ್ಲೆಗಳಿಗೆ ಬರಬೇಕಾದಂತಹ ಮೈನರ್ ಇರಿಗೇಷನ್ ಆಗಲೀ ಅಥವಾ ನಾನ್ ಪ್ಲಾನ್ ನಿಂದ ಬರಬೇಕಾದಂತಹ ಹಣ ಸಂಪೂರ್ಣವಾಗಿ ಅಂದರೆ ಅಲೋಕೇಷನ್ ಪ್ರಕಾರ ಬರುತ್ತಿಲ್ಲ. ಇಂತಹ ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿ ಇದೆ. ಇದರಿಂದ ವಿಶೇಷವಾಗಿ ನಮ್ಮ ಜಿಲ್ಲೆಯ ರೈತರಿಗೆ ಆಗಿರತಕ್ಕಂತಹ ಅನ್ಯಾಯ ಬಹಳ ಅಪಾರ. ನಮ್ಮ ಜಿಲ್ಲೆಯ ಜನತೆಯ ವಿಶ್ವಾಸವನ್ನು ಈ ಸರಕಾರ ಕಳೆದುಕೊಂಡಿದೆ ಎಂಬ ಮಾತನ್ನು ಹೇಳುತ್ತೇನೆ. ಇವತ್ತು ಎಕ್ಸೈಸ್ ಬಗ್ಗೆ ತಮಗೆ ಗೊತ್ತಿದೆ. ಜಿಲ್ಲಾ ಮಂತ್ರಿಗಳಾಗಿರುವಂತಹ ಮಾನ್ಯ ಬೈರೇಗೌಡರು, ಅವರ ಕಾಲದಲ್ಲಿ ಎಕ್ಸೈಸ್ ಅಂದರೆ ಮೈ ಎಲ್ಲಾ ಪರಚಿಕೊಳ್ಳುತ್ತಿದ್ದರು. ಎಕ್ಸೈಸ್ ಅಂದರೆ ಸಾಕು, ಅಷ್ಟೊಂದು ಅವರು ವಿರೋಧ ಮಾಡುತ್ತಿದ್ದರು. ಇವತ್ತು ಅವರ ಕಣ್ಣ ಮುಂದೆ, ಅವರ ಮನೆಯ ಮುಂದೆ, ಅಷ್ಟೇ ಅಲ್ಲ ಅವರ ಸುತ್ತಲೂ ನೂರಾರು ಲೋಡ್ ಪ್ರತಿದಿನ ಆಂಧ್ರಪ್ರದೇಶಕ್ಕೆ ಹೋಗುತ್ತಿದೆ, ಸೆಕೆಂಡ್ಸ್ ಹೋಗುತ್ತಿದೆ, ಅದಕ್ಕೆ ಟ್ಯಾಕ್ಸ್ ಇಲ್ಲ, ಎಕ್ಸೈಸ್ ಡ್ಯೂಟಿ ಇಲ್ಲ, ಯಾವುದೇ ರೀತಿಯ ಟ್ಯಾಕ್ಸ್ ಅದಕ್ಕೆ ಇಲ್ಲ. ಅದು ಪ್ರತಿದಿನ ಹೋಗುತ್ತಿದೆ. ಆದರಲ್ಲಿ ಪ್ರಮುಖವಾಗಿ ಅಲ್ಲಿಯ ಸ್ಥಳೀಯ ರಾಜಕಾರಣಗಳು ಸೇರಿಕೊಂಡಿದ್ದಾರೆ. ಶ್ರೀನಿವಾಸಪುರ ಇರಬಹುದು, ನಮ್ಮ ಬಾರ್ಡ್‌ರ್‌ನಲ್ಲಿ ಇರತಕ್ಕಂತಹ ಬಾಗೇಪಲ್ಲಿ ಇರಬಹುದು, ಮುಳಬಾಗಿಲು ಇರಬಹುದು, ಎಲ್ಲಾ ಕಡೆಯೂ ಸ್ಥಳೀಯ ಮುಖಂಡರುಗಳು ಸ್ಥಳೀಯ ಎಕ್ಸೈಸ್ ಮತ್ತು ಪೊಲೀಸ್ ಅಧಿಕಾರಿಗಳ ಜೊತೆಯಲ್ಲಿ ಶಾಮೀಲಾಗಿ ದಿನವೂ ನೂರಾರು ಲೋಡ್ ಆಂಧ್ರ ಪ್ರದೇಶಕ್ಕೆ ಮಾರಾಟ ಮಾಡುತ್ತಾ ಇರತಕ್ಕಂಥಾದ್ದು ಇವತ್ತು ನಡೆಯುತ್ತಿದೆ. ಈ ರಾಜ್ಯದಲ್ಲಿ ಒಂದು ಎಕ್ಸೈಸ್ ಪಾಲಿಸಿ ಅನ್ನತಕ್ಕಂಥದ್ದನ್ನು ಸರ್ಕಾರ ತೀರ್ಮಾನ ಮಾಡಿಲ್ಲ. ಇವತ್ತು ಸಾರಾಯಿಯನ್ನು ರದ್ದು ಮಾಡುತ್ತೇವೆ

ಎಂದು ಸರ್ಕಾರದವರು ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದರೆ ದುರಾದೃಷ್ಟ, ಇವತ್ತು ಆ ಅಶ್ವಾಸನೆಗೆ ವಿರುದ್ಧವಾಗಿ, ಏನು ನಾವು 'ಸಾರಾಯಿ ದೊರೆಗಳು' ಎಂದು ಹೇಳುತ್ತೇವೆಯೋ ಅವರ ಜೊತೆಯಲ್ಲಿ ನೀವು ಶಾಮೀಲಾಗಿದ್ದಿರಿ, ಶಾಮೀಲಾಗಿ ಅವರೊಡನೆ ಸಂಧಾನ ಮಾಡಿಕೊಂಡಿದ್ದೀರಿ. ಎಲ್ಲಿ ಲಾಭ ಬರುತ್ತದೋ ಅಲ್ಲಿ 6-7 ಪರ್ಸೆಂಟ್ ಅವರಿಗೆ ಲಾಭ ಕೊಟ್ಟು, ಅವರಿಗೇ ಕೊಡತಕ್ಕಂಥಾದ್ದು, ಎಲ್ಲಿ ಲಾಭ ಬರುವುದಿಲ್ಲವೋ ಅಲ್ಲಿ ಅವರನ್ನು ಕೈಬಿಡತಕ್ಕಂತಹ ಒಂದು ಸಂಧಾನವನ್ನು ಇವತ್ತು ಮಾಡಿಕೊಂಡು, ಅರ್‍ಯಾಕ್ ಮಾರಾಟವನ್ನು ಮುಂದುವರೆಸತಕ್ಕಂತಹ ಕೆಲಸವನ್ನು ಇವತ್ತು ನೀವು ಮಾಡುತ್ತಿದ್ದೀರಿ.

ಉಪಾಧ್ಯಕ್ಷರು: ತಾವು ತಮ್ಮ ಭಾಷಣವನ್ನು ಬೇಗ ಮುಗಿಸಬೇಕು.

ಶ್ರೀ ವಿ. ಮುನಿಯಪ್ಪ: ಇವತ್ತು ಬಹಳ ಗಂಭೀರವಾದಂತಹ ಒಂದು ವಿಚಾರವನ್ನು ನಾನಿಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಇವತ್ತು ಈ ರಾಜ್ಯದಲ್ಲಿ, ಈ ಸರ್ಕಾರ ಬಂದ ಮೇಲೆ ಈ ಆಹಾರ ಧಾನ್ಯಗಳಿಗೆ ಅದರಲ್ಲೂ ವಿಶೇಷವಾಗಿ ಅಕ್ಕಿಗೆ ಸಬ್ಸಿಡಿ ಕೊಡುವುದನ್ನು ಜಾರಿಗೆ ತಂದರು. ಇದು ಬಹಳ ಸ್ವಾಗತಾರ್ಹವಾದ ವಿಚಾರ. ಬಡವರಿಗೆ ಅಕ್ಕಿಯನ್ನು ಸಬ್ಸಿಡಿ ದರದಲ್ಲಿ ವಿತರಣೆ ಮಾಡತಕ್ಕಂತಹ ಕಾರ್ಯಕ್ರಮವೊಂದನ್ನು ಜಾರಿಗೆ ತಂದಿರಿ. ಆದರೆ ನೂರಕ್ಕೆ ಶೇಕಡ 75ರಷ್ಟು ಭಾಗ ಅಕ್ಕಿ ಆ ಬಡವರಿಗೆ ಸೇರುತ್ತಿಲ್ಲ. ಫೇರ್ ಪ್ರೈಸ್ ಡಿಪೋ ಹೋಲ್ಡರ್ಸ್ ಏನಿದ್ದಾರೆ, ಅವರು ಪ್ರತಿ ತಿಂಗಳು ನೂರಕ್ಕೆ 75ರಷ್ಟು ಭಾಗ ಬ್ಲಾಕ್ ಮಾರ್ಕೆಟ್‌ನಲ್ಲಿ ಅಕ್ಕಿ ಮಾರಾಟ ಮಾಡಿಕೊಳ್ಳುತ್ತಿದ್ದಾರೆ. ಬಡವರಿಗೆ ಕೊಡತಕ್ಕಂತಹ ಅಕ್ಕಿ ನೂರಕ್ಕೆ 75 ಭಾಗ ಬ್ಲಾಕ್‌ನಲ್ಲಿ ಮಾರಾಟ ಆಗುತ್ತಿದೆ. ವಿಶೇಷವಾಗಿ ಗ್ರಾಮಾಂತರ ಪ್ರದೇಶದಲ್ಲಂತೂ ಅಕ್ಕಿಯ ಸುಳಿವೆ ಇಲ್ಲ. ಬೇಕಾದರೆ ಸರ್ಕಾರ ಅದರ ಬಗ್ಗೆ ಒಂದು ವಿಶೇಷವಾದಂತಹ ತನಿಖೆ ಮಾಡಲಿ., ಸರ್ಕಾರಕ್ಕೂ ವಾಸ್ತವಾಂಶ ಗೊತ್ತಾಗುತ್ತದೆ. ಇಂತಹ ಒಂದು ವಿಚಾರದಲ್ಲಿ ಇವತ್ತು ನಮ್ಮ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಒಂದು ತಾಲ್ಲೂಕು ಅಗ್ರಿಕಲ್ಚರಲ್ ಮಾರ್ಕೇಟಿಂಗ್ ಸೊಸೈಟಿ ಇದೆ. ಅದರಲ್ಲಿ ಹಣವೇ ಇಲ್ಲ. ಅದು ಸಂಪೂರ್ಣವಾಗಿ ಯಾರು ; ಈ ಫೇರ್ ಪ್ರೈಸ್ ಡಿಪೋ ಹೋಲ್ಡರ್ಸ್ ಇದ್ದಾರೋ, ಅವರಿಂದ ಅಡ್ವಾನ್ಸ್ ತೆಗೆದುಕೊಳ್ಳತಕ್ಕಂಥದ್ದು ಅದರ ಮುಖಾಂತರ ಆಹಾರ ಧಾನ್ಯಗಳನ್ನು ತರತಕ್ಕಂಥದ್ದು, ತರತಕ್ಕಂತಹ ಆಹಾರ ಧಾನ್ಯಗಳಲ್ಲಿ ಅರ್ಧಕ್ಕೂ ಮೇಲ್ಪಟ್ಟು ಮಾಧ್ಯಾಹ್ನವೇ ಮಾರಾಟ ಮಾಡುತ್ತಾರೆ. ಆ ಆಹಾರ ಧಾನ್ಯವನ್ನು ಮಾರುವಲ್ಲಿ ಫೇರ್ ಪ್ರೈಸ್ ಷಾಪ್ ಹೋಲ್ಡರ್ಸ್. ಈ ಸೊಸೈಟಿಯವರು ಎಲ್ಲಾ ಶಾಮೀಲಾಗಿದ್ದಾರೆ. ಇದರ ಬಗ್ಗೆ ನಾವು ಜಿಲ್ಲಾಧಿಕಾರಿಗಳಿಗೆ ದೂರು ಕೊಟ್ಟೆವು. ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಕೂಲಂಕುಷವಾಗಿ ಅದನ್ನು ವಿಚಾರ ಮಾಡಿದರು. ವಿಚಾರ ಮಾಡಿ ಅದರಲ್ಲಿ ಹಣಕಾಸಿನ ವ್ಯವಸ್ಥೆ ಇಲ್ಲ, ಮತ್ತೆ ಬೇರೆಯವರಿಂದ ಹಣ ಪಡೆದು ಒಂದು ತಿಂಗಳಿಗೂ ಮೇಲ್ಪಟ್ಟು ಈ ಆಹಾರ ಧಾನ್ಯ ವಿತರಣೆ ಮಾಡುವುದಿಲ್ಲವಾದ್ದರಿಂದ ಇದನ್ನು ರದ್ದು ಮಾಡಿ ಫುಡ್ ಕಾರ್ಪೋರೇಷನ್‌ಗೆ ವಹಿಸಿ ಕೊಡಬೇಕೆಂದು ಅವರು ಆದೇಶ ಮಾಡಿದರು. ಆ ಆದೇಶದ ಪ್ರಕಾರ ಫುಡ್ ಕಾರ್ಪೋರೇಷನ್‌ನವರು ಬಂದರು, ಸುಮಾರು ಒಂದು ಲಕ್ಷ ರೂ. ಗಳಿಗೂ ಮೇಲೆ ಗೋಡೌನ್‌ಅನ್ನು ಬಾಡಿಗೆಗೆ ತೆಗೆದುಕೊಂಡರು., ಒಂದು ಕೋಟಾವನ್ನೂ ಹಾಕಿದರು.

ಸ್ವಾಮಿ, ರಾಜಕೀಯ ಒತ್ತಡ ತಕ್ಷಣ ನಿಲ್ಲಿಸಿದರು : ಆ ಫುಡ್ ಕಾರ್ಪೋರೇಷನ್ ನಿಲ್ಲಿಸಬೇಕು, ಬಂದು ನೋಡಿ, ಸರ್ಕಾರದ ಮಟ್ಟದಲ್ಲಿ ಸ್ಟೇ ಕೊಟ್ಟು, ಜಿಲ್ಲಾಧಿಕಾರಿಗಳು ಏನು ತನಿಖೆ ಮಾಡಿ, ಏನು ಅನ್ಯಾಯ ಆಗುತ್ತಿತ್ತೊ, ಅದನ್ನು ರದ್ದು ಮಾಡಬೇಕು ಎಂದು ಹೇಳಿ.......

ಉಪಾಧ್ಯಕ್ಷರು: ತಾವು ಬೇಗ ಮುಗಿಸಿ.

ಶ್ರೀ ವಿ. ಮಿನಿಯಪ್ಪ: ದಯವಿಟ್ಟು ಇನ್ನೂ ಐದು ನಿಮಿಷಗಳ ಕಾಲ ಮಾತನಾಡಲು ನನಗೆ ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು : ಮಾನ್ಯ ಮುನಿಯಪ್ಪನವರೇ, ತಾವು ಬೇಗ ತಮ್ಮ ಭಾಷಣ ಮುಗಿಸಿ .

ಶ್ರೀ ವಿ. ಮುನಿಯಪ್ಪ: ಅದರೆ, ಆ ಜಿಲ್ಲಾಧಿಕಾರಿಗಳು ವಿರುದ್ಧವಾಗಿ, ಇವತ್ತು ಆಹಾರ ಧಾನ್ಯ ಅಲ್ಲಿ ವಿತರಣೆಯಾಗುತ್ತಿದೆ. ನೂರಕ್ಕೆ ಐವತ್ತು ಭಾಗ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಾಟವಾಗುತ್ತಿದೆ. ಇದನ್ನು ಎಷ್ಟೋ ಜನ ಅಧಿಕಾರಿಗಳಿಗೆ ನಾವು ಹೇಳಿದರೂ, ಸಂಬಂಧಪಟ್ಟ ಮಂತ್ರಿಗಳಿಗೆ ಹೊಗಿ ನಾವು ವಿಚಾರ ಮಾಡಿದರೂ, ಯಾರೂ ಇದರ ಬಗ್ಗೆ ವಿಚಾರ ಮಾಡುತ್ತಿಲ್ಲ. ಇವತ್ತು ಸಾರ್ವಜನಿಕರ ಹಿತಾಸಕ್ತಿಗೆ ವಿರುದ್ಧವಾಗಿ, ಸಾರ್ವಜನಿಕರ ವಿಶ್ವಾಸಕ್ಕೆ ವಿರುದ್ಧವಾಗಿ, ಈ ಸರ್ಕಾರ ಕೆಲಸ ಮಾಡುತ್ತಿದೆ......

ಶ್ರೀ ಕೆ. ಶ್ರೀನಿವಾಸಗೌಡ: ಉಪಾಧ್ಯಕ್ಷರೇ, ನನ್ನದೊಂದು ಕ್ರಿಯಾ ಲೋಪ ಇದೆ.

ಉಪಾಧ್ಯಕ್ಷರು : ಮಾನ್ಯ ಮುನಿಯಪ್ಪನವರೇ, ಮಾನ್ಯ ಸದಸ್ಯರಾದ ಶ್ರೀನಿವಾಸಗೌಡರು ಒಂದು ಕ್ರಿಯಾಲೋಪ ಎತ್ತಿದ್ದಾರೆ. ಅವರು ಏನು ಹೇಳುತ್ತಾರೆಂದು ತಾವು ದಯವಿಟ್ಟು ಕೇಳಿ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಉಪಾಧ್ಯಕ್ಷರೇ, ಇವರು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಿಂದ ಫುಡ್ ಏನು ತೆಗೆದುಕೊಂಡು ಬರುವುದಿಲ್ಲ ಅನ್ನುವಂತಹ ಒಂದೇ ಒಂದು ಕಾರಣದಿಂದ ಇವರು, ಇಲ್ಲಿ ನಮ್ಮ ಪಕ್ಷದವರು ಇರುವುದರಿಂದ ಅದನ್ನು ಆರೋಪ ಮಾಡುತ್ತಿದ್ದಾರೆ. ಹಿಂದೆ ಇವರೇ ಐದು ವರ್ಷ ಇದ್ದರು, ಅವತ್ತು ಮಾಡಲಿಲ್ಲ. ಇವತ್ತು ನಮ್ಮ ಸರ್ಕಾರ ಬಂದಾಗ ನಮ್ಮ ಪಕ್ಷದವರು ಇದ್ದಾಗ ಇವರು ಹಾಗೆ ಆರೋಪ ಮಾಡುವುದು ತಪ್ಪು. ಅದನ್ನು ದಯವಿಟ್ಟು ವಾಪಸ್ಸು ತೆಗೆಯಬೇಕೆಂದು ನಾನು ಹೇಳುತ್ತೇನೆ. ಸ್ವಾಮಿ ಇವತ್ತು ಇವರು ಹೇಳುತ್ತಿರುವುದು ನನಗೂ ಗೊತ್ತಿದೆ........

ಶ್ರೀ ವಿ. ಮುನಿಯಪ್ಪ: ಹಿತಾಸಕ್ತಿ ಮೇಲೆ ಒಳಗೊಂಡಿದೆ, ದಯವಿಟ್ಟು ಇದರ ಬಗ್ಗೆ ವಿಚಾರ ಮಾಡಿ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಉಪಾಧ್ಯಕ್ಷರೇ, ನಾನು ಕ್ರಿಯಾ ಲೋಪ ಎತ್ತಿದ್ದೇನೆ. ನನ್ನ ಮಾತು ಪೂರ್ತಿ ಆಗುವವರೆಗೂ ಅವರು ಯೀಲ್ಡ್ ಆಗಲೇಬೇಕು.

(ಗೊಂದಲ)

ಶ್ರೀ ವಿ. ಮುನಿಯಪ್ಪ: ......ಇದು ಬಹಳ ಜಾಸ್ತಿಯಾಯಿತು........

(ಗೊಂದಲ)

ಶ್ರೀ ಕೆ. ಶ್ರೀನಿವಾಸ ಗೌಡ: ನಾನು ಕ್ರಿಯಾಲೋಪ ಎತ್ತಿದ್ದೇನೆ. ದಯವಿಟ್ಟು ನಾನು ಮುಗಿಸಿ ಆದಮೇಲೆ ಅವರು ಮಾತನಾಡಲಿ. ನನದೇನೂ ಅಭ್ಯಂತರವಿಲ್ಲ. ಮಾನ್ಯ ಉಪಾಧ್ಯಕ್ಷರೇ, ತಾವು ಇದರ ಬಗ್ಗೆ ರೂಲಿಂಗ್ ಕೊಡಿ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಕೃಷ್ಣಮೂರ್ತಿಯವರೇ ಮತ್ತು ಸಗೀರ್ ಅಹಮದ್‌ರವರೇ, ತಾವು ದಯವಿಟ್ಟು ತಮ್ಮ ಆಸನದಲ್ಲಿ ಕುಳಿತುಕೊಳ್ಳಿ. ನಾನು ತಮ್ಮನ್ನು ಕರೆದಿಲ್ಲ. ಶ್ರೀನಿವಾಸಗೌಡರೇ, ತಾವು ಮಾತು ಮುಂದುವರಿಸಿ.

ಶ್ರೀ ಕೆ. ಶ್ರೀನಿವಾಸಗೌಡ: ಸ್ವಾಮಿ ನಾನು ಆಗಲೇ ಹೇಳಿದಂತೆ, ಹಿಂದೆ ಐದು ವರ್ಷ ಪೂರ್ತಿ ಆಡಳಿತ ಮಂಡಳಿ ಅವರ ಕೈಯಲ್ಲೇ ಇತ್ತು. ಆವತ್ತು ಇದೇ ಪರಿಸ್ಥಿತಿ ಇತ್ತು. ಇವತ್ತು ರಾಜ್ಯದಲ್ಲಿ ಎಷ್ಟು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳು, ಸಹಕಾರ ಸಂಘಗಳು ಸರಿಯಾಗಿ ನಡೆಯುತ್ತಿವೆ ಎಂಬುದನ್ನು ಮಾನ್ಯ ಸಹಕಾರ ಮಂತ್ರಿಗಳೇ ಹೇಳುತ್ತಾರೆ. ಆದರೆ ಮುಖ್ಯವಾಗಿ ಕ್ರಿಯಾ-ಲೋಪ ಎತ್ತಿರುವುದು ಏನೆಂದರೆ....ಶಿಡ್ಲಘಟ್ಟ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಲ್ಲಿ ಇವರ ಪಕ್ಷದವರ್‍ಯಾರೋ ಗೆಲ್ಲಲಿಲ್ಲ ಎನ್ನುವ ಕಾರಣದಿಂದ ಇವತ್ತು ಇಲ್ಲಿ ಆರೋಪ ಮಾಡಲಿಕ್ಕೆ ಹೊರಟಿದ್ದಾರೆ. ದಯವಿಟ್ಟು ರಾಜಕೀಯ ಮಾಡಬೇಡಿ ಎಂದು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು: ಮಾನ್ಯ ಶ್ರೀನಿವಾಸಗೌಡರೇ, ತಾವು ಮಾತನಾಡಿದ್ದುದು ಸಾಕು, ಮಾನ್ಯ ಮುನಿಯಪ್ಪನವರೇ, ತಾವು ಮುಕ್ತಾಯ ಮಾಡಿ.

ಶ್ರೀ ವಿ. ಮುನಿಯಪ್ಪ: ಸ್ವಾಮಿ, ನಾನು ಒಂದು ನಿರೀಕ್ಷಣೆ ಮಾಡಿದ್ದೆ, ಬಹುಶಃ ಈ ವ್ಯವಸಾಯ ಕ್ಷೇತ್ರ, ವ್ಯವಸಾಯ ಕ್ಷೇತ್ರದ ಬಗ್ಗೆ ನಮ್ಮಲ್ಲಿ ಒಂದು ಗಾದೆ ಇದೆ, 'ನೀನು ಸಾಯಿ ನಿಮ್ಮ ಮಕ್ಕಳು ಸಾಯಿ, ಎಲ್ಲಾ ಸಾಯಿ ಅಂತ. ಅದೇ ರೀತಿ ಬಹುಶಃ ಈ ಒಂದು ರಾಜ್ಯದಲ್ಲಿ

ಅದನ್ನೆ ಹೆಸರು ಹೇಳಿಕೊಂಡು ನಮ್ಮ ಜಿಲ್ಲೆಯವರೇ ಮಂತ್ರಿಗಳಾಗಿ ಬಂದರು. ಇವರಿಗೆ ಅಗ್ರಿಕಲ್ಚರ್ ಬಗ್ಗೆ ಬಹಳ ಆಸಕ್ತಿ ಇದೆ, ಬಹಳ ಪ್ರಗತಿಪರವಾದಂತಹ, ಕ್ರಾಂತಿಕಾರಕವಾದಂತಹ ಬದಲಾವಣೆ ಮಾಡಿ ಬಿಡುತ್ತಾರೆ ಎಂದು ನಾನು ಅಂದುಕೊಂಡಿದ್ದೆ. ಸ್ವಾಮಿ, ಒಂದು ಸಾರಿ ಅಗ್ರಿ ಕಲ್ಚರ್ ಪಾಲಿಸಿ ಬಗ್ಗೆ ಕ್ಯಾಬಿನೆಟ್‌ನಲ್ಲಿ ಏನೋ ಒಂದು ನಿರ್ಣಯ ಮಾಡಿಕೊಂಡರು. ಎಂತದ್ದೋ ಒಂದು ಪಾಲಿಸಿ ಎಂದು ಮಾಡಿದರು. ಇವತ್ತು ಒಂದು ಸಾವಿರ ಕೋಟಿ ಇನ್‌ಫ್ರಾಸ್ಟ್ರಕ್ಚರ್, ಒಂದು ಸಾವಿರ ಕೋಟಿ, ಹೊಸ ಹೊಸ ಬ್ಯಾಂಕುಗಳು, ಅದು ಏನೇನೋ ಹೇಳಿ ಬಿಟ್ಟರು. ಜೊತೆಗೆ ಪ್ರೆಸ್ ಮುಂದೆ ನಮ್ಮ ಮಂತ್ರಿಗಳು ಕುಣಿದಾಡಿಬಿಟ್ಟರು ಎಂದು ಹೇಳಿ ಪತ್ರಿಕೆಯಲ್ಲಿ ಬಂದಿದ್ದನ್ನು ನಾನು ಓದಿದೆ. ನನಗೆ ಇವತ್ತು ನನ್ನ ಜೀವಮಾನದಲ್ಲೇ ಬಹಳ ದೊಡ್ಡ ಅನಾಹುತ ಆಗಿ ಬಿಟ್ಟಿದ್ದೆ ನಾನು ಇಂತಹ ಪಾಲಿಸಿ. ಮಾಡಿ ಬಿಟ್ಟಿದ್ದೇನೆ ರಾಜ್ಯಕ್ಕೆ, ರೈತರು ಇನ್ನುಮೇಲೆ ಕಷ್ಟ ಬೀಳುವಷ್ಟು ಇಲ್ಲ, ರೈತರಿಗೆ ತನ್ನ ಮನೆಯ ಬಾಗಿಲಿಗೇ ಎಲ್ಲವನ್ನೂ ಮುಟ್ಟಿಸುತ್ತೇವೆ, ಸಂಪೂರ್ಣವಾಗಿ ಟೆಕ್ನಾಲಜಿ ಸಮೇತವಾಗಿ, ಸೀಡ್ ಸಮೇತ ಎಲ್ಲಾ.........

ಉಪಾಧ್ಯಕ್ಷರು: ತಾವು ಬೇಗ ಮುಕ್ತಾಯ ಮಾಡಿ. ಈಗಾಗಲೇ ತಾವು ಹೆಚ್ಚಿನ ಸಮಯ ತೆಗೆದುಕೊಂಡಿದ್ದೀರಿ.

ಶ್ರೀ ವಿ. ಮುನಿಯಪ್ಪ: ......ಸಾವಿರ ಕೋಟಿಯಲ್ಲಿ ಒಂದು ಬಿಡಿಗಾಸೂ ಕೂಡ ಇಟ್ಟಿಲ್ಲ. ಆ ಸಾವಿರ ಕೋಟಿಯಲ್ಲಿ ಒಂದು ಬಿಡಿಗಾಸಿನ ಕೆಲಸ ಸರಿಯಾಗಿ ಮಾಡಿಲ್ಲ.

ಉಪಾಧ್ಯಕ್ಷರು : ತಾವು ಬೇಗ ಮುಕ್ತಾಯ ಮಾಡಿ. ಐದು ನಿಮಿಷ ಎಂದು ಈಗಾಗಲೇ 30 ನಿಮಿಷ ಮಾತನಾಡಿದ್ದೀರಿ. ತಾವು ಬೇಗ ಮುಕ್ತಾಯ ಮಾಡಿ.

ಶ್ರೀ ವಿ. ಮುನಿಯಪ್ಪ : ಮಾನ್ಯ ಉಪಾಧ್ಯಕ್ಷರೇ, ತಾವೇ ಈ ರೀತಿ ನಮಗೆ ಡಿಸ್ಟರ್ಬ್ ಮಾಡಿದರೆ ನಾವು ಯಾರ ಹತ್ತಿರ ರಕ್ಷಣೆಗೆ ಹೋಗಬೇಕು., ತಾವೇ ಹೇಳಿ. ಉಪಾಧ್ಯಕ್ಷರೇ, ನಾನು ಇನ್ನು ಮೂರು ನಿಮಿಷದಲ್ಲಿ ನನ್ನ ಭಾಷಣವನ್ನು ಮುಗಿಸುತ್ತೇನೆ. ನಾನು ಅದಕ್ಕಿಂತ ಹೆಚ್ಚಿಗೆ ಮಾತನಾಡುವುದಿಲ್ಲ. ಇವತ್ತು ಅಗ್ರಿಕಲ್ಚರ್ ಪಾಲಿಸಿ ಎಂದು ಹೇಳಿ ಒಂದು ಸಾವಿರ ಕೋಟಿ ಕೊಡುತ್ತೇವೆಂದು ಹೇಳಿದರು, ಸಾವಿರ ಕೋಟಿಗೆ ಕೊನೆಯ ಪಕ್ಷ ಸಾವಿರ ರೂಪಾಯಿಗಳನ್ನಾದರೂ ಕೂಡ ಅದರಲ್ಲಿ ಇಟ್ಟಿಲ್ಲ. ಇಲಾಖೆಯಲ್ಲಿ ರತಕ್ಕ ಹಣ ಇವತ್ತು ಏನಾಗಿದೆ ಅಂದರೆ ಬರೀ ಪ್ರಚಾರಕ್ಕೆ ವೆಚ್ಚವಾಗುತ್ತಿದೆ.

ಉಪಾಧ್ಯಕ್ಷರು : ತಾವು ಬೇಗ ಮುಗಿಸಿ.

ಶ್ರೀ ವಿ. ಮುನಿಯಪ್ಪ: ನನಗೂ ಅಗ್ರಿಕಲ್ಚರ್ ಬಗ್ಗೆ ನಾಲೆಡ್ಜ್ ಇದೆ. ನಾನೂ ಸಾಕಷ್ಟು ಓದಿ ತಿಳಿದುಕೊಂಡಿದ್ದೇನೆ. ನಾನು ದಿನ ಅಗ್ರಿಕಲ್ಚರ್‌ನಲ್ಲೇ ಇರುತ್ತೇನೆ. ಒಂದು ಮಾತನ್ನು

ನಾನು ಇಲ್ಲಿ ಪ್ರಸ್ತಾಪ ಮಾಡಲೇಬೇಕಾಗುತ್ತದೆ. ನಮ್ಮ ರಾಜ್ಯಕ್ಕೆ ಹೋದ ಸಾರಿ ಅಂದರೆ 1995-96ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಫರ್ಟಿಲೈಸರ್ಸ್‌ಗೆ ಸಬ್ಸಿಡಿ ಕೊಟ್ಟಿದೆ. ಆದರೆ ಈ ರಾಜ್ಯದ ರೈತರಿಗೆ ಬರಬೇಕಾದಂತಹ ಹಣ, ಸತ್ಯವಾಗಲೂ ಹೇಳುತ್ತೇನೆ, ಲಪಟಾಯಿಸದ ಹಾಗೆ ಆಗಿದೆ. ಇವರು ಸರಿಯಾಗಿ ಸೌಹಾರ್ದತೆಯಿಂದ, ಆ ಸಂಬಂಧಪಟ್ಟ ಫರ್ಟಿಲೈಸರ್ ಫ್ಯಾಕ್ಟರಿಯವರ ಜೊತೆಯಲ್ಲಿ ಸಂಧಾನ ಮಾಡಿದ್ದರೆ, ನಮ್ಮ ರೈತರಿಗೆ ಬರುತ್ತಾ ಇರತಕ್ಕಂತಹ ಸಬ್ಸಿಡಿ ನಮ್ಮ ರೈತರಿಗೇ ಸಿಗುತ್ತಿತ್ತು.....

ಉಪಾಧ್ಯಕ್ಷರು : ತಾವು ಬೇಗ ತಮ್ಮ ಭಾಷಣ ಮುಗಿಸಿ.

ಶ್ರೀ ವಿ. ಮುನಿಯಪ್ಪ: ಇವತ್ತು ನಮ್ಮ ರಾಜ್ಯಕ್ಕೆ ಬರತಕ್ಕಂತಹ ನೂರಾರು ಕೋಟಿ ಸಬ್ಸಿಡಿ ಹಣ ಹೋಯಿತು. ಇವರ ಒಂದು ಹಠಮಾರಿತನದಿಂದ.........

ಉಪಾಧ್ಯಕ್ಷರು: ಬೇಗ ಮುಗಿಸಿ.

ಶ್ರೀ ವಿ. ಮುನಿಯಪ್ಪ: ಎರಡು ನಿಮಿಷದಲ್ಲೇ ಮುಗಿಸುತ್ತೇನೆ.

ಶ್ರೀ ಕೆ.ಎಸ್. ನಾಗೇಗೌಡ : ಈ ರಸಗೊಬ್ಬರದ ವಿಚಾರದಲ್ಲಿ ಗೊಬ್ಬರದ ಡೀಲರ್ಸ್ ಜೊತೆಯಲ್ಲಿ ಎಷ್ಟು ಪ್ರಾಮಾಣಿಕವಾಗಿ ಮಾಡಿದರು ಎನ್ನತಕ್ಕಂಥಾದ್ದು ಮಾತ್ರ ಮಾತನಾಡಬೇಕು. ತಾವೂ ಕೂಡ ಮಂತ್ರಿಗಳಾಗಿ ಕೆಲಸ ಮಾಡಿದವರು. ಮಾನ್ಯ ಬೈರೇಗೌಡರು ಎಷ್ಟು ಪ್ರಾಮಾಣಿಕನಾಗಿ ಅಲ್ಲಿ ಕೆಲಸ ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ಮೆಚ್ಚುತ್ತೇನೆ ಹಠಮಾರಿನತನ ಎಂದು ಹೇಳತಕ್ಕಂಥದ್ದು ಸರಿಯಲ್ಲ........

ಶ್ರೀ ವಿ. ಮುನಿಯಪ್ಪ: ಮಾನ್ಯ ಉಪಾಧ್ಯಕ್ಷರೇ....

ಉಪಾಧ್ಯಕ್ಷರು : ಮಾನ್ಯ ಮುನಿಯಪ್ಪನವರೇ, ತಾವು ಐದು ನಿಮಿಷ ಮಾತನಾಡುತ್ತೇನೆ ಎಂದು ಹೇಳಿ, ಈಗಾಗಲೇ ತಾವು ಮಾತನಾಡಲು ಪ್ರಾರಂಭಿಸಿ 30 ನಿಮಿಷಗಳಾಯಿತು. ಬೇಗ ಮುಗಿಸಿ.

ಶ್ರೀ ವಿ. ಮುನಿಯಪ್ಪ: ಇನ್ನು ನಮ್ಮ ಜಿಲ್ಲೆಯಲ್ಲಿ ಜಿಲ್ಲಾ ಆಡಳಿತ ಏನಾಗಿದೆ ಎಂದರೆ, ತುರ್ತುಪರಿಸ್ಥಿತಿಯಾಗಿದೆ. ಶಾಸಕನಾಗಿ ಹೇಳಿದರೂ, ನಮ್ಮ ಜನತೆ ಪ್ರತಿನಿಧಿಯಾಗಿ ಹೇಳಿದರೂ ಇವತ್ತು ಅಧಿಕಾರಿಗಳು ಕಾನೂನು ವಿರುದ್ಧವಾಗಿ ಕೆಲಸ ಮಾಡುತ್ತಿದ್ದಾರೆ. ಸಾರ್ವಜನಿಕರ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿದ್ದಾರೆ. ಜಿಲ್ಲೆಯಲ್ಲಿ ತುರ್ತು ಪರಿಸ್ಥಿತಿ ಬಂದಿದೆ. ಬಹುಶಃ ಅವರು ಮಾತಿನಲ್ಲಿ ಮಾತನಾಡುವುದಿಲ್ಲ, ದೊಣ್ಣೆಯಲ್ಲಿ ಮಾತನಾಡತಕ್ಕಂತಹ ಪರಿಸ್ಥಿತಿ ಬಂದಿದೆ.

ಅಧಿಕಾರಿಗಳು ನಾವು ಏನಾದರೂ ಹೇಳಿದರೂ ಶೇರ್ ಆಗುತ್ತಾರೆ. ನಾವು ಕಾನೂನು ವಿರುದ್ಧವಾಗಿ ಕೆಲಸ ಮಾಡುತ್ತಿಲ್ಲ, ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಅಧಿಕಾರಿಗಳು ಇವತ್ತು ನಿಷ್ಪಕ್ಷಪಾತವಾಗಿ ಕೆಲಸ ಮಾಡಬೇಕು......

(ಗೊಂದಲ)

ಉಪಸಭಾಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ.

+ಶ್ರೀ ಕೆ. ಎನ್. ನಾಗೇಗೌಡ: (ಭಾರಿ ನೀರಾವರಿ ಸಚಿವರು) :ಮಾನ್ಯ ಉಪಾಧ್ಯಕ್ಷರೆ, ನಿನ್ನೆ ದಿವಸ ಮತ್ತು ಇವತ್ತು ಎರಡು ದಿವಸದ ಕಾಲ ವಿರೋಧ ಪಕ್ಷದ ಮುಖಂಡರು ತಂದಿರತಕ್ಕಂತಹ ನಿರ್ಣಯದ ಮೇಲೆ ಬಹಳ ಚರ್ಚೆಯನ್ನು ನಡೆಸಿದ್ದೇನೆ. ನಾನು ಆ ಅವಿಶ್ವಾಸ ನಿರ್ಣಯವನ್ನು ವಿರೋಧ ಮಾಡುತ್ತಾ ತಮ್ಮ ಗಮನಕ್ಕೆ ಮತ್ತು ಸದನದ ಗಮನಕ್ಕೆ ಕೆಲವಾರು ವಿಚಾರಗಳನ್ನು ತರಬೇಕೆಂದು ಬಯಸುತ್ತೇನೆ. ನಮ್ಮ ವಿಧಾನ ಸಭೆಯ ನಡವಳಿಕೆಯಲ್ಲಿ, ಎರಡು ಬಹಳ ಮಹತ್ತರವಾದ ನಿಯಮಗಳನ್ನು , ನಾವೇ ರೂಪಿಸಿಕೊಂಡಿದ್ದೇವೆ. ಒಂದು ವಿರೋಧ ಪಕ್ಷಕ್ಕೆ ಅಥವಾ ರಾಜಕೀಯ ಪಕ್ಷಗಳಿಗೆ ಅತ್ಯಂತ ಪ್ರಬಲವಾದ ಅಸ್ತ್ರ ನಿರ್ಣಯ ಅಥವಾ ನಿಯಮ ಯಾವುದೆಂದರೆ ಅವಿಶ್ವಾಸ ತರತಕ್ಕಂತಹ ನಿಯಮ. ಅತ್ಯಂತ ಪ್ರಮುಖವಾದುದು, ಅತ್ಯಂತ ಹರಿತವಾದುದು, ಅದು ಕೊನೆಯ ಘಟ್ಟ, ರಾಜ್ಯದಲ್ಲಿ ಎಲ್ಲವೂ ಕುಸಿತವಾಗಿ ಈ ಸರ್ಕಾರ ದಿಕ್ಕು ತಪ್ಪಿ ಹೋಗಿದೆ ಎನ್ನತಕ್ಕಂತಹ ನಿರ್ಧಾರಕ್ಕೆ ಬಂದಂತಹ ಕಾಲದಲ್ಲಿ ವಿರೋಧ ಪಕ್ಷಗಳಾಗಲಿ, ಯಾವುದೇ ರಾಜಕೀಯ ಪಕ್ಷವಾಗಲಿ ಒಂದು ಸರ್ಕಾರದ ಮೇಲೆ ಕೊನೆಯದಾಗಿ ತರತಕ್ಕಂತಹ ಮಹಾ ಪ್ರಬಲವಾದ ನಿರ್ಣಯ ಅಥವಾ ಮಹಾ ಪ್ರಬಲವಾಗಿ ಇರತಕ್ಕಂತಹ ನಿಯಮ ಈ ಅವಿಶ್ವಾಸ ನಿರ್ಣಯ. , ಇದು ಒಂದು. ಒಬ್ಬ ವ್ಯಕ್ತಿಗೆ ಒಬ್ಬ ಸದಸ್ಯನಿಗೆ ಅತ್ಯಂತ ಪ್ರಬಲವಾದ ನಿಯಮ ನಮ್ಮ ರಾಜಕೀಯ ವಿಧಾನ ಸಭೆಯ ನಡವಳಿಕೆಯಲ್ಲಿ ಪ್ರಿವಿಲೇಜ್. ಒಬ್ಬ ಮೆಂಬರ್‌ಗೆ ಪ್ರಿವಿಲೇಜ್ ಬಹಳ ಪ್ರಾಮುಖ್ಯ. ಒಂದು ರಾಜಕೀಯ ಪಕ್ಷಕ್ಕೆ ಅತ್ಯಂತ ಪ್ರಬಲವಾದುದು ಅವಿಶ್ವಾಸ ನಿರ್ಣಯ ಆದರೆ ಇದನ್ನು ಯಾವ ರೀತಿ ನಮ್ಮ ವಿರೋಧ ಪಕ್ಷದವರು ಬಳಸಿದ್ದಾರೆ ಎನ್ನತಕ್ಕಂಥಹದ್ದನ್ನು ಉಪಾಧ್ಯಕ್ಷರ ಮತ್ತು ಸದನದ ಗಮನಕ್ಕೆ ತರತಕ್ಕಂಥದ್ದು ಅತ್ಯಂತ ಅವಶ್ಯಕ. ಅದನ್ನೇ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಫ್ಯೂಟೈಲ್ ಎಕ್ಸರ್‌ಸೈಸ್ ಆಗಿದೆ ಎಂದು ಹೇಳಿರುವುದನ್ನು ಮಲ್ಲಿಕಾರ್ಜುನ ಖರ್ಗೆಯವರು ಬಹಳ ಕಟುವಾಗಿ ಟೀಕೆ ಮಾಡಿ ಆ ಮಾತುನ್ನು ಅವರು ಹೇಳಬಾರದಾಗಿತ್ತು ಎಂದು ಹೇಳಿದ್ದಾರೆ. ಅವಿಶ್ವಾಸ ನಿರ್ಣಯವನ್ನು ಮಂಡಿಸಿರತಕ್ಕಂಥಹ್ದಕ್ಕೆ ನಾನು ಟೆಕ್ನಿ ಕ್ವಾಲಿಟಿಗೆ ಹೋಗುವುದಕ್ಕೆ ಮುಂಚೆ, ಒಂದು ನಿರ್ಣಯವನ್ನು ನಾವು ಇಲ್ಲಿ ಓದಿದ್ದೇವೆ. ಅವರು ನಿರ್ಣಯ ಮಂಡಿಸುವಾಗ ಮಾನ್ಯ ಜೆ.ಹೆಚ್.ಪಟೇಲ್ ಸರ್ಕಾರದ ಮೇಲೆ ನಮ್ಮ ಅವಿಶ್ವಾಸ ನಿರ್ಣಯ ಎಂದು ಮಂಡಿಸಿದ್ದಾರೆ. ಜನತಾದಳ ಸರ್ಕಾರದ ಮೇಲೆ ಎಂದು ಆ ನಿರ್ಣಯ ಮಂಡಿಸಿಲ್ಲ. ಅವಿಶ್ವಾಸ ನಿರ್ಣಯ ಜೆ.ಹೆಚ್.ಪಟೇಲ್ ಸರ್ಕಾರದ ಮೇಲೆ ಎಂದರೆ, ಬರತಕ್ಕಂಥದ್ದು 80 ದಿವಸಗಳ ಕಾಲ ಮಾತ್ರ. ನಾವು ಟೆಕ್ನಿ ಕ್ವಾಲಿಟಿ ಮೇಲೆ ಹೋಗೋಣ.

ಇದು ಒಂದು ವಿರೋಧ ಪಕ್ಷಗಳು ಇಂತಹ ಮಹತ್ತರವಾದ ನಿಯಮಗಳನ್ನು, ಅಸ್ತ್ರವನ್ನು ಬಳಸುವಾಗ ಎಷ್ಟು ಎಡವಿದ್ದಾರೆ ಎನ್ನತಕ್ಕಂಥದ್ದು ಮಹತ್ತರವಾದುದು ಈ ವಿಚಾರದಲ್ಲಿ. ಏಕೆಂದರೆ 80 ದಿವಸಗಳಲ್ಲಿ 45 ದಿವಸ ಇಲ್ಲೇ ಕೂತಿದ್ದೇವೆ. 40-45 ದಿವಸಗಳ ಕಾಲ ವಿಧಾನ ಸಭೆ ನಡೆಸಿ, 80 ದಿವಸಗಳಲ್ಲಿ ಯಾವುದೇ ಜಾಣ್ಮೆ ಇರತಕ್ಕಂತಹ ರಾಜಕೀಯ ಪಕ್ಷಗಳು ಮಾಡತಕ್ಕಂತಹ ಕೆಲಸವೇ? ಸಂವಿಧಾನದಲ್ಲಿ ಒಂದು ಸರ್ಕಾರಕ್ಕೆ ಐದು ವರ್ಷಗಳ ಕಾಲ ಇದೆ, ಆದರೆ ರಾಜಕೀಯ ಪಕ್ಷಗಳಿಗೆ ಅವಿಶ್ವಾಸ ನಿರ್ಣಯ ಮಂಡಿಸಬೇಕಾದರೆ ಪಾರ್ಲಿಮೆಂಟಿನಲ್ಲಿ ನೋಡಿದ್ದೇನೆ, ಮಾನ್ಯ ನಂಜೇಗೌಡರೂ ಸಹ ಅನೇಕ ವರ್ಷ ಪಾರ್ಲಿಮೆಂಟಿನಲ್ಲಿ ಕೆಲಸ ಮಾಡಿದ್ದಾರೆ. ನಾವು ಸರ್ಕಾರದ ಮೇಲೆ ವಿರೋಧ ಮಾಡಿದ್ದೇವೆ, ಯಾವ ಸಂದರ್ಭದಲ್ಲಿ ವಿರೋಧ ಮಾಡುತ್ತೇವೆ. ಎಷ್ಟು ಕಾಲ ಕೊಡಬೇಕು, ಒಂದು ರಾಜಕೀಯ ಪಕ್ಷಕ್ಕೆ ಒಬ್ಬ ಜಾಣ್ಮೆ ರಾಜಕಾರಿಣಿಗೆ, ಒಬ್ಬ ಬುದ್ಧಿವಂತ ರಾಜಕೀಯ ನಾಯಕನಿಗೆ, ಒಂದು ರಾಜ್ಯದ ಆಸಕ್ತಿ ಇರತಕ್ಕಂತಹ ರಾಜಕೀಯ ಮುಖಂಡನಿಗೆ ಒಂದು ಸರ್ಕಾರಕ್ಕೆ ಅಥವಾ ಒಬ್ಬ ಮುಖ್ಯ ಮಂತ್ರಿಗೆ ಆ ಮಂತ್ರಿ ಮಂಡಲಕ್ಕೆ ಕನಿಷ್ಟ ಒಂದು ವರ್ಷಗಳ ಕಾಲಅವಕಾಶ ಕೊಟ್ಟು ನಂತರ ಈ ನಿರ್ಣಯವನ್ನು ತಂದಿದ್ದರೆ, ಅದಕ್ಕೆ ಒಂದು ಅರ್ಥ ಇರುತ್ತಿತ್ತು. ನಿರ್ಣಯ ತಂದರು ನಿರ್ಣಯ ತರುವಾಗ ಜೆ.ಹೆಚ್. ಪಟೇಲ್ ಸರ್ಕಾರದ ಎಂಭತ್ತು ದಿವಸಗಳದ್ದು ಅಲ್ಲಿ . ಸಂಪುಟದ ಮೇಲೆ ನಿರ್ಣಯ ತರುವಾಗ ಚರ್ಚೆ ಮಾಡಿದ್ದು ಏನು ? ಎಂಟು ವರ್ಷಗಳದ್ದು, 10 ವರ್ಷಗಳದ್ದು, 15 ವರ್ಷಗಳದ್ದು 50 ವರ್ಷದ್ದು. ಚರ್ಚೆ ಮಾಡಬಾರದು ಎಂದು ನಾನು ಹೇಳುವುದಿಲ್ಲ, ಯಾವ ಅಸ್ತ್ರವನ್ನು ಬಳಸುತ್ತಿದ್ದೇನೆ, ನಾವು ಇಲ್ಲಿ ಕ್ವೆಶ್ಚನ್ ಹವರ ಸಸ್ಪೆಂಡ್ ಮಾಡುತ್ತೇವೆ, ಕಾಲಿಂಗ್ ಅಟೆನ್‌ಷನ್ ಸಸ್ಪೆಂಡ್ ಮಾಡುತ್ತೇವೆ, ವಿಶೇಷವಾಗಿ ದಿನಾಂಕ ನಿಗಧಿ ಮಾಡುತ್ತೇವೆ. ಅವಿಶ್ವಾಸ ನಿರ್ಣಯವನ್ನು ಇಡೀ ರಾಷ್ಟ್ರ ನೋಡುತ್ತದೆ. ಆದರೆ ಈ ಸದನವನ್ನು ಎರಡು ದಿವಸಗಳ ಕಾಲ ನೀವು ಬಳಸಿಕೊಂಡಿದ್ದು ಏನೆಂದರೆ, ಮಾನ್ಯ ಸಾರಿಗೆ ಮಂತ್ರಿಗಳು ಏನು ಹೇಳಿದರು ಅದು ಅಕ್ಷರಶಃ ಇವತ್ತು ಸಾಬೀತು ಆಗುತ್ತದೆ. ಜನರು ನೋಡಲಿ, ಅದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ನಾನು ಬಹಳ ಬಯಸಿದ್ದೆ, ನಮ್ಮ ನಂಜೇಗೌಡರು ಬಹಳ ಸೂಕ್ಷ್ಮವಾಗಿ ಮತಕ್ಕೆ ಹಾಕಿ ಬಿಡಿ ಎಂದು ಹೇಳಿದರು : ಏಕೆ ಅವರು ಪಾರ್ಲಿಮೆಂಟಿನಲ್ಲಿ ನೋಡಿದ್ದರು. ಅವಿಶ್ವಾಸ ನಿರ್ಣಯ ಅಂದರೆ ಏನು ? ಅವಿಶ್ವಾಸ ನಿರ್ಣಯ ಚರ್ಚೆ ಏಕೆ ನಡೆಯುತ್ತದೆ, ಅದಕ್ಕೆ ಏನು ಅರ್ಥ ಇರುತ್ತದೆ ಎಂದು ನೋಡಿದ್ದರಿಂದ, ಅವರು ಸೂಕ್ಷ್ಮವಾಗಿ ಓಟಿಗೆ ಹಾಕಿ ಬಿಡಿ ಎಂದು ನಿನ್ನೆ ಬೆಳಿಗ್ಗೆನೇ ಹೇಳಿದರು. ಆದ್ದರಿಂದ ನಮಗೆ ಏನು ನೋವಾಯಿತು ಎಂದರೆ, ಇಂತಹ ಅಸ್ತ್ರವನ್ನು ವಿರೋಧ ಪಕ್ಷಗಳವರು ಸಮಯಕ್ಕೆ ಸರಿಯಾಗಿ ತರದೆ ದಾರಿ ತಪ್ಪಿ ರಾಜಕೀಯ ಉದ್ದೇಶವನ್ನು ಇಟ್ಟುಕೊಂಡು ಇದು ಜೆ.ಹೆಚ್. ಪಟೇಲರ ಸರ್ಕಾರದ ವಿರುದ್ಧ ಅಲ್ಲ ಅಥವಾ ದೇವೇಗೌಡರ ಸರ್ಕಾರದ ವಿರುದ್ಧ ಅಲ್ಲ, ಯಾರ ವಿರುದ್ಧ ನಿರ್ಣಯ ತಂದಿದ್ದೀರಿ ಎಂಬುದು ನನಗೆ ಅರ್ಥವಾಗಿಲ್ಲ. ಮಲ್ಲಿಕಾರ್ಜುನ ಖರ್ಗೆಯವರು ಒಂದು ರಾಜಕೀಯ ಪಕ್ಷದ ಮುಖಂಡರು, ನಾನೂ ಕಾಂಗ್ರೆಸ್ ಪಕ್ಷದಲ್ಲಿ ಇದ್ದವನು ಕಾಂಗ್ರೆಸ್ ಪಕ್ಷದಲ್ಲಿ ಪಕ್ಷದಲ್ಲಿ ಕೆಲಸ ಮಾಡಿದವನು, ಇವರ ಪಕ್ಷದವರು ಕೇಂದ್ರ ಸರ್ಕಾರದಲ್ಲಿ ದೇವೇಗೌಡರ ಸರ್ಕಾರಕ್ಕೆ ಬೆಂಬಲ ಮಾಡುತ್ತಾರೆ. ಇಲ್ಲಿ ಜೆ.ಹೆಚ್.ಪಟೇಲರ ಸರ್ಕಾರಕ್ಕೆ ಅವಿಶ್ವಾಸ ನಿರ್ಣಯ ತರುತ್ತಾರೆ. ಯಾವ ರಾಜಕೀಯ ನೀತಿ ಇದು.?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ನಿಮ್ಮ ಗುಲಾಮರಾ ? ನೀವು ಮಾಡಿದ ತಪ್ಪಿಗೆ ನಾವು ಪಾರ್ಟಿ ಆಗುವುದಕ್ಕೆ ಬಂದಿದ್ದೇವೆಯೋ ಅಲ್ಲಿ ರಾಷ್ಟ್ರಮಟ್ಟದಲ್ಲಿ ಏನು ಸಹಾಯ ಮಾಡಬೇಕೋ, ರಾಷ್ಟ್ರದ ಹಿತದೃಷ್ಟಿಯಿಂದ , ಪ್ರಜಾಪ್ರಭುತ್ವದ ತತ್ವದ ಪ್ರಕಾರ ಅಲ್ಲಿ ಇವತ್ತು ಸಹಾಯ ಮಾಡಿದ್ದೇವೆ. ಇಲ್ಲಿ ನಿಮ್ಮ ತಪ್ಪಿಗೆ ನಾವು ಎಲ್ಲರೂ ನಿಮಗೆ ಸಹಾಯ ಮಾಡಬೇಕೇ: What is this ? ನೀವು ಅಲ್ಲಿ ಮಾಡಿದ್ದೀರಿ, ಅದಕ್ಕಾಗಿ ಇಲ್ಲಿ ಸಪೋರ್ಟ್ ಮಾಡಿ ಎಂದು ಹೇಳುತ್ತಿರೋ ?

ಶ್ರೀ ಕೆ. ಎನ್. ನಾಗೇಗೌಡ: ಮಾನ್ಯ ಉಪಾಧ್ಯಕ್ಷರೆ, ಒಂದು ರಾಜಕೀಯ ಪಕ್ಷ ಅವರದು, ಒಂದು ನ್ಯಾಷನಲ್ ಪಾರ್ಟಿ .ಇದು ಯಾವ ರಾಜಕೀಯ ನೀತಿ ?

Sri M. Mallikarjuna Kharge: It is our desire, what to do, what not to do in Karnataka State,........

ಶ್ರೀ ಕೆ. ಎನ್. ನಾಗೇಗೌಡ : ಎಷ್ಟು ಅರ್ಥ ಇದೆ, ರಾಜಕೀಯವಾಗಿ ಆಗುತ್ತಿದೆ ಎಂದು ನಾನು ಹೇಳಿದೆ. ಆ ಹಕ್ಕು ನನಗೆ ಇದೆ ಹೇಳುವುದಕ್ಕೆ. ಇಷ್ಟು ಲಘುವಾಗಿ ರಾಜಕೀಯ ದುರುದ್ದೇಶ ಇಟ್ಟುಕೊಂಡು ಅದಕ್ಕೆ ಒಂದ ತತ್ವ ಇಲ್ಲದೆ, ಒಂದು ವಿಚಾರ ಇಲ್ಲದೆ, ಒಂದು ರಾಜಕೀಯ ಪಕ್ಷವಾಗಿ ಕಾಂಗ್ರೆಸ್ ಪಕ್ಷದ ಮುಖಂಡರಾಗಿ ಮಾನ್ಯ ಖರ್ಗೆಯವರು ಈ ಸದನದಲ್ಲಿ ನಡೆದುಕೊಂಡದ್ದು, ಕಾಂಗ್ರೆಸ್ ಹೈ ಕಮ್ಯಾಂಡ್‌ಗೂ ಸಹ ಇಷ್ಟ ಬರುವುದಿಲ್ಲ. ಇದು ರಾಷ್ಟ್ರಿಯ ನೀತಿ ಅಲ್ಲ, ಅದು ಬಹಳ ದ್ವಂದ್ವ ನೀತಿ ಎನ್ನತಕ್ಕಂಥದ್ದನ್ನು ಹೇಳದೆ ಹೋದರೆ, ಏಕೆಂದರೆ ಇದು ಅಸ್ತ್ರ ಸಾಮಾನ್ಯವಾದ ಒಂದು ಮಿಸ್ಟೇಕ್ ಹೇಳುವುದು ಅಲ್ಲ. ಸರ್ಕಾರದ ಲೋಪದೋಷಗಳನ್ನು ಹೇಳತಕ್ಕಂಥದ್ದು ಅಲ್ಲ, ಸ್ಕ್ಯಾಂಡಲ್ ಮಾಡತಕ್ಕಂಥದ್ದು ಅಲ್ಲ, ನೀವು ತಂದಿರತಕ್ಕಂತಹ ಅಸ್ತ್ರ ಈ ಸರ್ಕಾರ ಇರಬೇಕಾ? ಈ ಸರ್ಕಾರ ಹೋಗಬೇಕಾ ? ಅದು ತಂದಿರತಕ್ಕಂತಹ ನಿಯಮದಲ್ಲಿ ನೀವು ಹಾಕಿರತಕ್ಕಂತಹ ರುಜು. ಅದು ರಾಜಕೀಯ ತೀರ್ಮಾನ ಈ ನಿರ್ಣಯ. ಈ ನಿರ್ಣಯದಲ್ಲಿ ರಾಜಕೀಯ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಆ ನಿರ್ಣಯಕ್ಕೆ ಬಿ.ಜೆ.ಪಿ.ಯವರು ಕಾಂಗ್ರೆಸ್ ಎರಡೂ ಒಂದು ಎನ್ನತಕ್ಕಂಥದ್ದನ್ನು ನೀವು ಕರ್ನಾಟಕದಲ್ಲಿ ಸಾಬೀತು ಮಾಡುತ್ತೀರಾ ? ಈ ನಿರ್ಣಯಕ್ಕೆ ನೀವುಗಳು ಒಟ್ಟಿಗೆ ಸಹಿ ಹಾಕಿದ ಮೇಲೆ ನಿಮ್ಮ ಎರಡು ಪಕ್ಷಗಳೂ ಒಂದೇ ಎಂದು ತೀರ್ಮಾನವೇ ಎಂಬುದನ್ನು ಅವರು ಹೇಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ : ಕರ್ನಾಟಕದ ಹಿತ ಬಂದಾಗ ನೀವುಕೂಡ ಅನೇಕ ಸಾರಿ ನಮಗೆ ಸಪೋರ್ಟ್ ಮಾಡಿದ್ದೀರಿ, ನಾವು ಕೂಡ ಮಾಡಬೇಕಾಗುತ್ತದೆ. ಬಿ.ಜೆ.ಪಿ. ಇರಬಹುದು, ಕೆ.ಸಿ.ಪಿ. ಇರಬಹುದು, ಆದರೆ ರಾಜ್ಯದ ಹಿತ ಬಂದಾಗ ನಾವೆಲ್ಲರೂ ಒಂದಾಗಬೇಕಾಗುತ್ತದೆ. ಇವತ್ತು ನೀವು ರಾಜ್ಯದ ಹಿತವನ್ನು ಬದಿಗಿಟ್ಟಿದ್ದೀರಿ ಎಂದು ನಾವು ಈ ಕಡೆ ಇರತಕ್ಕಂತಹವರು ಎಲ್ಲರೂ ಕೂಡ ಒಂದಾಗಿದ್ದೇವೆ. ನೀವು ಆಲಮಟ್ಟಿ ಇಷ್ಯೂ ಇರಬಹುದು,

ಕಾವೇರಿ ಇಷ್ಯೂ ಇರಬಹುದು, ಇವತ್ತು ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನಲ್ಲಿ ನಡೆದಂತಹ, ಕಂಟ್ರ್ಯಾಕ್ಟರ್‌ಗಳಿಗೆ ಕೊಟ್ಟಂತಹ ಇಲ್ಲೀಗಲ್ ಕಂಟ್ರ್ಯಾಕ್ಟ್‌ಗಳು ಇರಬಹುದು, ಅದರಲ್ಲಿ ನಡೆದ ಕೋಟ್ಯಾಂತರ ರೂಪಾಯಿ ಅವ್ಯವಹಾರ ಇರಬಹುದು. ಇದಕ್ಕೆ ನಾವೆಲ್ಲರೂ ಕೂಡ ಒಗ್ಗಟ್ಟಾಗಿ ಪ್ರತಿಭಟನೆ ಮಾಡಬೇಕಾಗುತ್ತದೆ. ಕರ್ನಾಟಕ ರಾಜ್ಯದ ಜನತೆಯ ಹಿತ ದೃಷ್ಟಿಯಿಂದ ಇದು ದೇಶದ ಹಿತದೃಷ್ಟಿಯಿಂದ ಅಲ್ಲಿ ಏನು ಮಾಡಬೇಕು ಎಂದು ನಮ್ಮ ಪಕ್ಷದವರು ನಿರ್ಣಯ ತೆಗೆದುಕೊಂಡಿದ್ದಾರೆ. ನೀವು ನಮಗೆ ಬುದ್ದಿ ಹೇಳಬೇಕಾಗಿಲ್ಲ. ನೀವು ತಪ್ಪು ಮಾಡಿದಿರಿ ಎಂದು ಕಿವಿ ಹಿಂಡಿ ಜನ ನಮಗೆ ಮತ್ತೆ ಕಳುಹಿಸಿದ್ದರೆ ಹೊರತಾಗಿ ನಿಮಗೆ ಕೈಜೋಡಿಸಿ ಎಂದು ನಮಗೆ ಕಳುಹಿಸಿಲ್ಲ.

ಶ್ರೀ ಕೆ. ಎನ್. ನಾಗೇಗೌಡ: ನಮಗೆ ಕೈ ಜೋಡಿಸಿ ಎಂದು ನಾನು ಕೇಳಲಿಲ್ಲ. ತಪ್ಪುಗಳನ್ನು ತೋರಿಸುವುದಕ್ಕೆ ಈ ಸದನದ ನಿಯಮಗಳು ಇವೆ. 40 ದಿವಸಗಳ ಕಾಲ ಸದನ ನಡೆದಿದೆ, ನೀವು ಯಾವ ಅಸ್ತ್ರವನ್ನು ಬಳಸಿದ್ದೀರಿ, ಅವಿಶ್ವಾಸ ನಿರ್ಣಯವನ್ನು ಬಳಸಿದ್ದೀರಿ, ಅದು ತಪ್ಪುತೋರಿಸುವುದಕ್ಕೆ ಅಲ್ಲ, ಆಡಳಿತದ ಲೋಪತೋರಿಸುವುದಕ್ಕೆ ರಾಜಕೀಯವಾಗಿ ತೀರ್ಮಾನ ತೆಗೆದುಕೊಳ್ಳಬೇಕು. ನೀತಿನಿಯಮಗಳನ್ನು ಮಾಡುತ್ತೇವೆ, ಅದರಲ್ಲಿ ನೀವು ಕಡೆಗಣಿಸಿದ್ದೀರಿ ಎಂದು ಹೇಳಿದೆ ವಿನಹ ಬೇರೆ ಅಲ್ಲ. ಕಾಂಗ್ರೆಸ್ ಪಕ್ಷದ ನಾಯಕರಿಗೆ ಮೂರು ನಾಲ್ಕು ದಿವಸ ಆದ ಮೇಲೆ ಅರಿವಾಗುತ್ತದೆ ಎಂದು ನನಗನ್ನಿಸುತ್ತದೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ತಪ್ಪು ಮೆಸೇಜ್ ಹೋಗಬಾರದು. ಈ ದೇಶದ ಜನರಿಗೆ ತಪ್ಪು ಮೆಸೇಜ್ ಹೋಗುವುದು ಬೇಡ. ನಾವು ಅವರು ತಂದಿದ್ದಕ್ಕೆ ಸಪ್ಪೋರ್ಟ್ ಮಾಡುವುದು, ನಾವು ತಂದಿದ್ದು ಅಲ್ಲ, ಇದು ಒಟ್ಟಾಗಿ ಎಲ್ಲಾ ವಿರೋಧ ಪಕ್ಷಗಳವರು ಸೇರಿ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದೇವೆ.

6:40 ಪಿ.ಎಂ

ಅದು ಬಿ.ಜೆ.ಪಿ ತಂದಿದೆ ನೀವು ಅದಕ್ಕೆ ಸಪ್ಪೋರ್ಟ್ ಮಾಡಿದಿರಿ ಎಂದು ಹೇಳಿ, ಡಿವೈಡ್ ಮಾಡಿ ನಿಮ್ಮ ಮೇಲೆ ನಡೆಯತಕ್ಕಂಥ ದಾಳಿ ತಪ್ಪಿಸಿಕೊಳ್ಳುವದಕೋಸ್ಕರ ಇದನ್ನು ನೀವು ಹೇಳಬೇಡಿ. ಒಂದು. ಎರಡನೇಯದಾಗಿ ನೀವು ಮಾಡಿದಂಥ ತಪ್ಪು ಇವೊತ್ತು ಹೇಳಿದ್ದೇವೆ, ಆಲಮಟ್ಟಿಯಲ್ಲಿ ಯಾವ ರೀತಿಯಾಗಿ ಎಡವಿದ್ದೀರಿ, ಕಾವೇರಿಯಲ್ಲಿ ಯಾವ ರೀತಿಯಾಗಿ ಎಡವಿದ್ದೀರಿ, ಕಾಂಟ್ರ್ಯಾಕ್ಟನಲ್ಲಿ ಯಾವ ರೀತಿಯಾಗಿ ಎಡವಿದ್ದೀರಿ ಅದಕ್ಕೆ ಉತ್ತರ ಹೇಳಿ. ನಮ್ಮ ನೀತಿ ಇರಲಿ, ನಮ್ಮ ನೀತಿ ಒಳ್ಳೆಯದು ಇದೆ ಎಂದು ಹೇಳಿಯೇ ಇವೊತ್ತು ನೀವು ನಲವತ್ತು ಜನರು ಇದ್ದರೂ ಕೂಡ ನಿಮ್ಮ ಮುಖಂಡರು ಇವೋತ್ತು ಪ್ರಧಾನ ಮಂತ್ರಿಗಳಾಗಿ ಉಳಿದಿದ್ದಾರೆ. ಇಲ್ಲದಿದ್ದರೆ ನಲವತ್ತು ಇದ್ದವರು ಈ ದೇಶದೊಳಗೆ ಎಂದೂ ಕೂಡ ಪ್ರಧಾನ ಮಂತ್ರಿಗಳಾಗಿಲ್ಲ.

ಶ್ರೀ ಕೆ.ಎಸ್. ನಾಗೇಗೌಡ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಖರ್ಗೆಯವರು ಹೇಳಿದಕ್ಕೆ ಮೊದಲು ಹೇಳುತ್ತೇನೆ. ನಾನು ವಿರೋಧ ಪಕ್ಷದ ನಾಯಕರು ಹೇಳಿದ್ದಕ್ಕೆ ಆಮೇಲೆ ಬರುತ್ತೇನೆ. ಮಾನ್ಯ ಖರ್ಗೆಯವರು ಹೇಳಿದರು, ಎಷ್ಟು ಹಣವನ್ನು ನೀವು ಆಲಮಟ್ಟಿಗೆ ಖರ್ಚು ಮಾಡಿದ್ದೀರಿ, ಎಷ್ಟು ಹಣ ಇಟ್ಟಿದ್ದೀರಿ, ನಾವು ಸಾವಿರ ಕೋಟಿ ಮಾಡುತ್ತೇವೆ, ನಾವು ಸಾವಿರ ಕೋಟಿ ಮಾಡುತ್ತೇವೆ ಎಂದು ಹೋದವರೂ ಹೇಳಿದ್ದರು. ನೀವು ಹೇಳಿದ್ರಿ, ಅದಕ್ಕಾಗಿ ಎಷ್ಟು ಹಣ ಇಟ್ಟಿದ್ದೀರಿ ಎನ್ನತಕ್ಕಂಥ ಮಾತನ್ನು ಅವರ ಒಂದು ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಯಾವ ಯಾವ ಮುಖ್ಯಮಂತ್ರಿಗಳು ಎಷ್ಟೆಷ್ಟು ಹಣ ಖರ್ಚು ಮಾಡಿದ್ದಾರೆ, ಯಾವ ಯಾವ ಅವಧಿಯಲ್ಲಿ ಖರ್ಚು ಮಾಡಿದ್ದಾರೆ ಎನ್ನತಕ್ಕಂಥ ಎಲ್ಲಾ ಫಿಗರ್ಸ್‌ನ್ನು ನಾನು ತರಿಸಿ ನೋಡಿದ್ದೇನೆ. ಮಾನ್ಯ ದೇವರಾಜ್ ಅರಸುರವರ ಕಾಲದಿಂದ ಗುಂಡೂರಾವ್‌ರವರ ಕಾಲದಿಂದ , ಹೆಗಡೆಯವರ ಕಾಲದಿಂದ, ಬೊಮ್ಮಾಯಿಯವರ ಕಾಲದಿಂದ, ವಿರೇಂದ್ರ ಪಾಟೀಲರು, ಬಂಗಾರಪ್ಪನವರ ಕಾಲ ವೀರಪ್ಪಮೊಯಿಲಿಯವರ ಕಾಲ , ದೇವೇಗೌಡರ ಕಾಲ ಎಲ್ಲಾ ಕಾಲದಲ್ಲಿ........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಹೇಳಿ ನಾನು ಬೇಡ ಎಂದು ಹೇಳುವುದಿಲ್ಲ. ಆಧರೆ ಆಗಿನ ನೂರು ಕೋಟಿ ಈಗ ಕೊಟ್ಟಂಥ ಆರುನೂರು ಕೋಟಿಗೆ ಸ್ವಲ್ಪ ಕಂಪ್ಯಾರಿಸನ್, ಪ್ರೈಸ್ ಎಸ್ಕಲೇಷನ್ ಎಲ್ಲವನ್ನೂ ಕೂಡ ಹೇಳಿ.

ಶ್ರೀ ಕೆ. ಎಸ್. ನಾಗೇಗೌಡ: ಮಾನ್ಯ ಖರ್ಗೆಯವರು ಮಂತ್ರಿ ಕೆಲಸ ಮಾಡಿ ಅನುಭವ ಇರತಕ್ಕಂಥವರು, ಅವರು ಮನಿ ವ್ಯಾಲ್ಯುಯೇಷನ್ ಕ್ಯಾಲ್ಕುಲೇಷನ್ ಮಾಡತಕ್ಕಂಥದ್ದನ್ನು ಒಂದು ಕಡೆ ಇಟ್ಟುಕೊಂಡಿರಲಿ. ಆ ಹಣಕ್ಕೆ ತಕ್ಕಂತೆ ಕೆಲಸ ಆಗಿರುತ್ತದೆ, ಆ ದುಡ್ಡಿಗೆ ತಕ್ಕಂತೆ ಕೆಲಸ ಆಗಿರುತ್ತದೆ. ಇವೊತ್ತು ಕಬ್ಬಿಣದ ಬೆಲೆ 14 ಸಾವಿರ ಇದ್ದರೆ, ಇವೊತ್ತು ಮೂರು ಸಾವಿರ ಇರುತ್ತದೆ. ಆ ವಿಚಾರ ಬೇಡ. ನೀವು ಅರೋಪ ಮಾಡುವಾಗ ಹೇಳಿದಿರಿ, ದೇವೇಗೌಡರ ಕಾಲದಲ್ಲಿ ಸಾವಿರ ಕೋಟಿ ಹಣ ಕೊಡುತ್ತೇವೆ ಎಂದು ಹೇಳಿ, ಏನು ಕೊಟ್ಟಿದ್ದಾರೆ ಎಂದು ತಮ್ಮ ಭಾಷಣದಲ್ಲಿ ತಾವು ಪ್ರಸ್ತಾಪ ಮಾಡಿದಿರಿ, ಅದಕ್ಕೆ ನಾನು ಎಲ್ಲಾ ಮುಖ್ಯಮಂತ್ರಿಗಳು, ದೇವರಾಜ್ ಅರಸುರವರ ಕಾಲದಿಂದ ಏನೇನು ಕೆಲಸ ಮಾಡಿದ್ದಾರೆ ಎಷ್ಟೆಷ್ಟು ಖರ್ಚು ಮಾಡಿದ್ದಾರೆಂದು ತರಿಸಿ ಇಟ್ಟಿದ್ದೇನೆ. ಅದರಲ್ಲಿ ನಾನು ಒಂದೇ ಒಂದು ಕೃಷ್ಣಾ ಬೇಸಿನ್‌ಗೆ, ದೇವರಾಜ್ ಅರಸುರವರ ಕಾಲದಲ್ಲಿ 228 ಕೋಟಿ ರೂಪಾಯಿ ಖರ್ಚಾಗಿದೆ, ಮಾನ್ಯ ಗುಂಡೂರಾವ್‌ರವರ ಕಾಲದಲ್ಲಿ 205 ಕೋಟಿ ರೂಪಾಯಿ ಖರ್ಚಾಗಿದೆ, ಅದು ಮೂರು ವರ್ಷ ಅದು ಐದು ವರ್ಷಕ್ಕೆ , ನಾಲ್ಕು ವರ್ಷಕ್ಕೆ ,ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ 395 ಕೋಟಿ ರೂಪಾಯಿ ಖರ್ಚಾಗಿದೆ. ಮಾನ್ಯ ಬೊಮ್ಮಾಯಿಯವರ ಕಾಲದಲ್ಲಿ ಸುಮಾರು 210 ಕೋಟಿ ರೂಪಾಯಿ ಖರ್ಚಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾಗೇಗೌಡರವರು ಕಾಂಗ್ರೆಸ್‌ನಲ್ಲಿ ಇದ್ದುದ್ದನ್ನು ಮರೆತು ಬಿಡಬೇಡಿ.

ಶ್ರೀ ಕೆ. ಎನ್. ನಾಗೇಗೌಡ: ಇದಕ್ಕೇನು ಸಾರ್, ದುಡ್ಡಿಗೇನಿಲ್ಲ, ಕಾಂಗ್ರೆಸ್, ಬಿ.ಜೆ.ಪಿ, ದಳ ಎಂದು ದುಡ್ಡೇನಾದರೂ ಬೇರೆ ಪ್ರಿಂಟ್ ಆಗಿದ್ದರೆ ನಾನು ಹೇಳುತ್ತೇನೆ. ವೀರೇಂದ್ರ ಪಾಟೀಲರ ಕಾಲದಲ್ಲಿ ಸುಮಾರು 133 ಕೋಟಿ ಖರ್ಚಾಗಿದೆ. ಬಂಗಾರಪ್ಪನವರ ಕಾಲದಲ್ಲಿ 447 ಖರ್ಚಾಗಿದೆ. ವೀರಪ್ಪಮೊಯಿಲಿಯವರ ಕಾಲದಲ್ಲಿ 629ಕೋಟಿ ಖರ್ಚಾಗಿದೆ, ಮಾನ್ಯ ದೇವೇಗೌಡರ ಕಾಲದಲಿ 1995-96ಕ್ಕೆ ಸುಮಾರು 420 ಕೋಟಿ ರೂಪಾಯಿ ಹೋದ ವರ್ಷ, ಈ ವರ್ಷ 381 ಕೋಟಿ ರೂಪಾಯಿ ನಾವು ಖರ್ಚು ಮಾಡಿದ್ದೇವೆ. ಅಂದರೆ ನಿಮಗೆ ಹೇಳುವುದಾದರೆ 1995-96ಕ್ಕೆ ಮೇಜರ್ ನೀರಾವರಿಗೆ ಇಟ್ಟಿದ್ದುದು 765ಕೋಟಿ ರೂಪಾಯಿ ಅದರಲ್ಲಿ ಹೋದ ವರ್ಷ 713ಕೋಟಿ ರೂಪಾಯಿಯನ್ನು ಖರ್ಚು ಮಾಡಿದ್ದೇವೆ. ಈ ವರ್ಷ ಸುಮಾರು 1996-97ಕ್ಕೆ 761ಕೋಟಿ ಇಟ್ಟಿದ್ದರೆ, 189ಕೋಟಿ ಕೃಷ್ಣಾ ಭಾಗ್ಯ ನಿಗಮ ಬಿಟ್ಟು,

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ನಿಯಮಬದ್ಧರು, ಕಾಲಬದ್ದರು, ಸಾವಿರ ಕೋಟಿಯನ್ನು ಕದ್ದಾದರೂ ಖರ್ಚು ಮಾಡುತ್ತೇವೆಂದು ಹಿಂದಿನ ಮುಖ್ಯಮಂತ್ರಿಗಳು ಹೇಳಿದ್ದರು. ಅದು ಮಾಡಿದ್ದರೆ ಶಹಬಾಸ್‌ಗಿರಿ ಹೇಳುತ್ತಿದ್ದೆವು.

ಶ್ರೀ ಕೆ.ಎನ್. ನಾಗೇಗೌಡ: ಈಗಲೂ ನಾನು ವಿಷಯಕ್ಕೆ ಬರುತ್ತಿದ್ದೇನೆ. 392ಕೋಟಿ ರೂಪಾಯಿಗಳನ್ನು ನಾವು ಕೃಷ್ಣಾ ಭಾಗ್ಯ ನಿಗಮದಲ್ಲಿ ಖರ್ಚು ಮಾಡಿದ್ದೇವೆ. ಸುಮಾರು 189ಕೋಟಿ ರೂಪಾಯಿ ಇರಿಗೇಶನ್ ಸ್ಕೀಮ್ ವರ್ಲ್ಡ್ ಬ್ಯಾಂಕ್ ಸ್ಕೀಮ್‌ನಲ್ಲಿ ಖರ್ಚು ಮಾಡಿದ್ದೇವೆ. ಇನ್ನೂ ಕೂಡ ನಮ್ಮ ಹತ್ತಿರ ಕೃಷ್ಣಾ ಭಾಗ್ಯ ನಿಗಮದಲ್ಲಿ 225 ಕೋಟಿ ರೂಪಾಯಿಗಳಷ್ಟು ಹಣ ಇದೆ. ಸುಮಾರು 300ಕೋಟಿ ರೂಪಾಯಿ ಹಣವನ್ನು ನಾವು ಮತ್ತೇ ನವೆಂಬರ್‌ನಲ್ಲಿ ರೈಸ್ ಮಾಡುತ್ತಿದ್ದೇವೆ. 465 ಕೋಟಿ ರೂಪಾಯಿಗಳನ್ನು ಬಜೆಟರಿ ಸಪೋರ್ಟಾಗಿ ಹಣ ಇಟ್ಟಿದ್ದೇವೆ. ಸುಮಾರು 1150 ಕೋಟಿ ಇಟ್ಟಿದ್ದು, 150 ಕೋಟಿ ರೂಪಾಯಿಗಳ ಇಂಟ್ರೆಸ್ಟ್ ಬಿಟ್ಟು, ಸಾವಿರ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡತಕ್ಕಂಥ ಎಲ್ಲಾ ವ್ಯವಸ್ಥೆ ಮಾಡಿಕೊಂಡು ಇವೊತ್ತಿನ ದಿವಸ ಹಣ ಖರ್ಚು ಮಾಡಿದ್ದೇವೆ. 1997 ಮಾರ್ಚ್ ಒಳಗೆ ನಾವು ಸಾವಿರ ಕೋಟಿ ಮಾಡಿರತಕ್ಕಂಥದ್ದನ್ನು ಇಲ್ಲಿ ನಾವು ತೋರಿಸಿಕೊಡುತ್ತೇವೆ ಎನ್ನತಕ್ಕಂಥದ್ದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

ಮಾನ್ಯ ಖರ್ಗೆಯವರು ಕಾಂಟ್ರಾಕ್ಟ್ಸ್ ಬಗ್ಗೆ ಇನ್ನೊಂದು ಬಹಳ ಮಹತ್ತರವಾದ ವಿಚಾರವನ್ನು ಪ್ರಸ್ತಾಪ ಮಾಡಿದರು. ಕಾಂಟ್ರಾಕ್ಟಗಳಿಗೆ ಸಾವಿರ ಕೋಟಿ ರೂಪಾಯಿ ರಾತ್ರೋ ರಾತ್ರಿ ಕೊಟ್ಟುಬಿಟ್ಟಿದ್ದಾರೆಂದು ಅವರು ಹೇಳಿದರು. ನಾನು ತರಿಸಿ ನೋಡಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಾಂಟ್ರಾಕ್ಟರ್‌ಗಳಿಗೆ ಎಂದು ಅಲ್ಲ. ಸ್ವಲ್ಪ ಕೇಳಿ ನಾನು ಹೇಳುತ್ತೇನೆ I stand by that. ಸಾವಿರ ಕೋಟಿ ರೂಪಾಯಿ ಎಸ್ಟಿಮೇಟ್ ಇರತಕ್ಕಂಥ ಕೆಲಸ ಮೂರು ದಿವಸದಲ್ಲಿ ಬೇಕಾದವರಿಗೆ ಅನ್ ಕ್ವಾಲಿಫೈಡ್ ಕಾಂಟ್ರಾಕ್ಟರ್‌ಸ್ನು ಕರೆದು ಕೊಟ್ಟಿದ್ದಾರೆ ಎನ್ನತಕ್ಕಂಥದ್ದನ್ನು ನಾನು ಹೇಳಿದ್ದೇನೆ. ಅದು ಇಲ್ಲ ಎಂದರೆ ತಾವು ಹೇಳಿ.

ಶ್ರೀ ಕೆ.ಎನ್. ನಾಗೇಗೌಡ : ಇಲ್ಲ, ಕೊಟ್ಟಿರತಕ್ಕಂಥದ್ದು ನವೆಂಬರ್ 1995ರಲ್ಲಿ 108ಕೋಟಿ ರೂಪಾಯಿ, ಮೇ, 1996ರಲ್ಲಿ 202ಕೋಟಿ ರೂಪಾಯಿ, ಇದು ಬ್ರ್ಯಾಂಚ್ ಮತ್ತು ಮೇನ್ ಕೆನಾಲ್‌ಗಳಿಗೆ. ಮತ್ತೆ ಡಿಸ್ಟ್ರಿಬ್ಯೂಟರಿಗಳಿಗೆ 90ಕೋಟಿ ರೂಪಾಯಿ, ಒಟ್ಟು ನಾಲ್ಕುನೂರು ಕೋಟಿ ರೂಪಾಯಿಗಳನ್ನು ಎನ್‌ಆರ್‌ಬಿಸಿನಲ್ಲಿ, ಜೆಬಿಸಿನಲ್ಲಿ, ಐಬಿಸಿನಲ್ಲಿ ಕೊಟ್ಟಿರತಕ್ಕಂಥದ್ದು ಇದರಲ್ಲಿ ಕೆಲವು ನಿಯಮಾವಳಿಗಳನ್ನು ಮಾಡಿದ್ದಾರೆ, 213ಜನರನ್ನು ಕಂಟ್ರ್ಯಾಕ್ಟರ್ಸ್‌ಗಳನ್ನು ಅವೊತ್ತು ಎಲ್ಲಾ ಪೇಪರ್‌ನಲ್ಲಿ ನೋಟಿಫಿಕೇಷನ್ ಮಾಡಿ, ದಿನಾಂಕ 10 ನವೆಂಬರ್ 1995ರಲ್ಲಿ ಐಡೆಂಡಿಫೈ ಮಾಡಿ, direct intrustment of canal work in Upper Krishna Project, ಎಂದು ಹೇಳಿ ಎಲ್ಲಾ ಪೇಪರ್‌ಗಳಲ್ಲಿ ಪಬ್ಲಿಷ್ ಮಾಡಿ, 213 ಜನ ಬಂದು, ಆ 213ಜನರಲ್ಲಿ ಚೀಫ್ ಇಂಜಿನಿಯರ್ಸ್‌ಗಳ ಕಮಿಟಿ ಅದನ್ನು ಕ್ವಾಲಿಫೈಡ್ ಲಿಸ್ಟ್ ಮಾಡಿ, ಅದಾದ ಮೇಲೆ ಕೆ.ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಕಮಿಟಿ ಮಾಡಿ, ಪ್ರತಿಯೊಂದನ್ನು ಸ್ಕ್ರೂಟಿನೈಸ್ ಮಾಡಿ, ಅವರ ಕೆಪಾಸಿಟಿ ಎಷ್ಟಿದೆ, ಅವರ ಪ್ರೀವಿಯಸ್ ಹಿಸ್ಟ್ರಿ ಹೇಗಿದೆ, ಎಷ್ಟು ಹಣ ಖರ್ಚು ಮಾಡುವ ಶಕ್ತಿ ಇದೆ, ಅವರ ಟರ್ನ್‌ಓವರ್ ಏನು ಇದೆ, ಎನ್ನತಕ್ಕಂಥದ್ದರ ಜೊತೆಗೆ, ಬಹಳ ಮಹತ್ತರವಾಗಿ ಮಾಡಿರತಕ್ಕಂಥದ್ದು ಏನಿದೆ ಎಂದರೆ, ಈ ಕೆಲಸ ಬಹಳಷ್ಟು ಕೋಮಾ ಸ್ಟೇಜ್‌ನಲ್ಲಿ ಇದ್ದುದರ ಬಗ್ಗೆ ಇಲ್ಲಿ ಚರ್ಚೆ ನಡೆದಿದೆ, ಅದು ಲ್ಯಾಂಡ್ ಏನಿದೆ ಭೂಮಿಯ ಅಕ್ವೈರ್‌ಗೋಸ್ಕರ 4-5 ವರ್ಷಗಳ ಕಾಲ ಜಮೀನಿನವರಿಗೂ, ಸರ್ಕಾರಕ್ಕು ಇಲಾಖೆಯವರಿಗೂ ತಕರಾರು ಆಗಿ ಜಮೀನು ಬಿಡಲಿಲ್ಲ. ಆಗ ಈ ನೋಟಿಫಿಕೇಷನ್‌ನಲ್ಲಿ ಹಾಕಿರತಕ್ಕಂಥ ಷರತ್ತು ಏನು ಎಂದರೆ, ಯಾರೂ ಭೂ ಮಾಲೀಕರ ಹತ್ತಿರ ಒಪ್ಪಿಗೆ ತೆಗೆದುಕೊಂಡು ಬರುತ್ತಾರೆ, ಅದು ಒಂದು ಷರತ್ತು ಜೊತೆಗೆ ಯಾರು ಎಸ್.ಆರ್. ರೇಟ್‌ನಲ್ಲಿ ಮೈನಸ್ ಆರು ಪರ್ಸೆಂಟ್, ಮೈನಸ್ ಹತ್ತು ಪರ್ಸೆಂಟ್ ಇರತಕ್ಕಂಥದ್ದೂ ಕೂಡ ಇಲ್ಲಿ ಬಂದಿದ್ದಾವೆ. ತಾವೇ ಪ್ರಾರಂಭದಲ್ಲಿ ಚರ್ಚೆ ಮಾಡಿದ್ದೀರಿ, ಮಾನ್ಯ ಧರ್ಮಸಿಂಗ್‌ರವರು ಕೂಡ ಇದಕ್ಕೆ ಒಪ್ಪುತ್ತಿದ್ದಾರೆ, ನೀವು ಒಪ್ಪುವುದಿಲ್ಲ ಅದನ್ನು ಇಲ್ಲೇ ಚರ್ಚೆಯಾಗಿತ್ತು ಕ್ಲೈಮ್ಸ್ ಬಗ್ಗೆ ಯಾರೂ ಕ್ಲೈಮ್ ಮಾಡುವುದಿಲ್ಲ, ಯಾರು ಜಮೀನ್ದಾರರ ಹತ್ತಿರ ಒಪ್ಪಿಗೆ ಪಡೆದುಕೊಂಡು ಬರುತ್ತಾರೆ, ಯಾರು ಎಸ್. ಆರ್. ರೇಟ್‌ಗಿಂತ ಕಡಿಮೆ ಬರುತ್ತಾರೆ, ಎನ್ನತಕ್ಕಂಥದ್ದನ್ನು ಕ್ವಾಲಿಫೈಡ್ ಲಿಸ್ಟ್ ಮಾಡಿ, ಆ ಕ್ವಾಲಿಫೈಡ್ ಲಿಸ್ಟನಲ್ಲಿ, ಶೇಕಡಾ ಅರವತ್ತಕ್ಕಿಂತ ಹೆಚ್ಚು ಕರ್ನಾಟಕದವರಿಗೆ ಕೊಟ್ಟಿದ್ದಾರೆ. ಲಿಸ್ಟ ಇದೆ ನನ್ನ ಹತ್ತಿರ. ಅವರ ಲಿಸ್ಟನ್ನು ತಮಗೆ ಕಳುಹಿಸಿಕೊಡುತ್ತೇನೆ, ಅದರಲ್ಲಿ ಮುಚ್ಚುಮರೆ ಏನೂ ಇಲ್ಲ. ಅಲ್ಲಿ ಇವೊತ್ತಿನದಿವಸ ಪ್ರತಿಯೊಂದು ನಿಯಮಾಳಿಗಳ ಪ್ರಕಾರ ಈ ನಾಲ್ಕನೂರು ಕೋಟಿಗೆ ಏನು ಕೊಟ್ಟಿದ್ದಾರೆ, ಕೆ.ಸಿ ರೆಡ್ಡಿಯವರ ಕಮಿಟಿಯಲ್ಲಿ, ಮತ್ತು ಚೀಫ್ ಇಂಜಿನಿಯರ್ಸ್ ಕಮಿಟಿಯಲ್ಲಿ ಕ್ವಾಲಿಫೈಡ್ ಲಿಸ್ಟ್ ಮಾಡಿ, ಮಾಡಿದ್ದಾರೆ. ಮಾನ್ಯ ಯಡಿಯೂರಪ್ಪನವರು ಹೇಳಿದರು ಆಂಧ್ರದವರಿಗೆ ಕೊಟ್ಟಿದ್ದಾರೆಂದು. ಆದರೆ ಇವರು ಕರ್ನಾಟಕದಲ್ಲಿ ನಿನ್ನೆ ಮೊನ್ನೆ ರಿಜಿಸ್ಟರ್ ಆದವರಲ್ಲ. ನಾನು ತರಿಸಿ ನೋಡಿದ್ದೇನೆ. ಇವರೆಲ್ಲಾ ತಾತನ ಕಾಲದಲ್ಲಿ ರಿಜಿಸ್ಟರ್ ಆದವರಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ: ನೀವು ಬಂದ ಮೇಲೆ ಆಂಧ್ರದವರಿಗೆ ಕೊಟ್ಟಿದ್ದೀರಿ ಎಂದು ನಾನು ಹೇಳಲಿಲ್ಲ. ನನ್ನ ಉದ್ದೇಶ, ಆಂಧ್ರದವರಿಗೆ ಕಾವೇರಿ ಹತ್ತಿರ ಕರೆದುಕೊಂ

ಬಂದು ಅವರಿಗೇ ಕೊಡಿ ನನ್ನದೇನೂ ಅಭ್ಯಂತರ ಇಲ್ಲ, ವಿರೋಧ ಇಲ್ಲ, ನನ್ನದೇನು ಎಂದರೆ ಆಂಧ್ರದ ಕಂಟ್ರಾಕ್ಟರ್ ಇಲ್ಲೇನು ಕೃಷ್ಣಾ ಬೇಸಿನ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ಆಸಕ್ತಿ ಇಲ್ಲ, ಕೆಲಸ ಮಾಡುತ್ತಿಲ್ಲ, ಆಂಧ್ರದ ಇಂಟ್ರಸ್ಟ್ ನೋಡಿಕೊಂಡು ನಮ್ಮ ಪ್ರಗತಿ ಕುಂಠಿತವಾಗಿದೆ, ಯೋಗ್ಯರು, ಕೆಲಸ ಮಾಡುವಂಥವರು ನಮ್ಮ ಕಂಟ್ರಾ ್ಯಕ್ಟರ್ ಇದ್ದಾರೆ, ಅವರಿಗೆ ಕೊಟ್ಟು ಕೆಲಸ ಮಾಡಿಸಿ. ಆಂಧ್ರದ ಕಂಟ್ರಾಕ್ಟರ್‌ಗೆ ಕೊಟ್ಟಿದ್ದರಿಂದ ಫೋಟೋ ತೆಗೆಸಿ ಕಿತಾಪತಿ ಮಾಡುವ ಧಂದೆ ನಡೆದಿದೆ. ಪ್ರೋಗ್ರೆಸ್ ಇಲ್ಲ, ಮೂರು ವರ್ಷಕ್ಕೆ ಒಂದು ವರ್ಕ್ ಕೊಟ್ಟರೆ, ಮುಗಿಸದೆ ಎಸ್ಕಲೇಷನ್ ಚಾರ್ಜ್ ಎಂದು ಹೇಳಿ ಕೋಟಿಗಟ್ಟಲಿ ಹಣ ತೆಗೆದುಕೊಂಡು ಲೂಟಿ ಯಾಗಿದೆ ಎಂದು ಹೇಳಿದೆ. ದಾಖಲೆ ತೆಗೆದು ನೋಡಿ. ನಿಮಗೆ ಮನವರಿಕೆಯಾದರೆ, ಮಾಡಿ. ನಾಳೆ ಯಾರು ಇರುತ್ತಾರೆ, ನೋಡೋಣ.

ಶ್ರೀ ಕೆ.ಎನ್. ನಾಗೇಗೌಡ : ನಾವೇ ಮಾಡಿರಲಿ, ಬೇರೆ ಯಾರೇ ಮಾಡಿರಲಿ ಎಷ್ಟು ನಿಯಮಾವಳಿಗಳ ಪ್ರಕಾರ ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ನಾನು ಸದನದ ಮುಂದೆ ಇಡುತ್ತೇನೆ. ಸಂಪೂರ್ಣವಾಗಿ ನಿಯಮಾವಳಿಗಳ ಪ್ರಕಾರ ಪ್ರತಿಯೊಂದನ್ನು ಇಲ್ಲಿ ಮಾಡಿರತಕ್ಕಂಥದ್ದು, ಟೆಂಡರ್ ಕರೆದ ಎರಡೂವರೆ ತಿಂಗಳ ಕಾಲ ಅಥವಾ ಮೂರು ತಿಂಗಳ ಕಾಲ.......

ಶ್ರೀ ಬಿ. ಎಸ್. ಯಡಿಯೂರಪ್ಪ: ಪೇಟ್ರಿಯಾಟಿಸಂ ಇಲ್ಲ., ಆಸಕ್ತಿ ಇಲ್ಲ ಎನ್ನುವ ಅರ್ಥ ನಾನು ಹೇಳಿದೆನೆ ಹೊರತಾಗಿ........

ಶ್ರೀ ಕೆ. ಎನ್ .ನಾಗೇಗೌಡ: ಅವರ ಆರೋಪ ಏನು ಎಂದರೆ, ಅಲ್ಲಿ ಪ್ರೋಗ್ರೆಸ್ ಇಲ್ಲ, ಆಂಧ್ರದವರಿಗೆ ಕೋಟ್ಯಾಂತರ ರೂಪಾಯಿ ಕೊಟ್ಟುಬಿಟ್ಟಿರಿ , ನಿಯಮಾವಳಿಗಳನ್ನು ಮಾಡಿಲ್ಲ, ಟೆಂಡರ್ ಮಾಡಿಲ್ಲ, ಮತ್ತೊಂದು ಮಾಡಿಲ್ಲ, ಎಂದು ಏನು ಭಾಷಣ ಮಾಡಿದರು. ಆದರೆ ಪ್ರತಿಯೊಂದು ಕಮಿಟಿನಲ್ಲಿ ಪ್ರತಿಯೊಂದು ಲಿಸ್ಟ್ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಉಪಾಧ್ಯಕ್ಷರೇ, Still I say , you have given on piecework.

ಶ್ರೀ ಕೆ.ಎನ್.ನಾಗೇಗೌಡ : ಮಾನ್ಯ ಅಧ್ಯಕ್ಷರೇ ಪೀಸ್ ವರ್ಕ್ ಅಲ್ಲ ಇವರು 1992ರಲ್ಲಿ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮುಂದೆ Without calling for tender, you have decided on 29th and 30th, ಅದನ್ನು ಬಿಟ್ಟು ಬೇರೆ ಮುಂದು ಹೋಗುವುದು ಬೇಡ.

ಶ್ರೀ ಕೆ. ಎನ್ . ನಾಗೇಗೌಡ: ಮುಂದೆ ಹೋಗೋಣ. ಜೇವರ್ಗಿ ಬ್ರ್ಯಾಂಚ್‌ನಲ್ಲಿ 1 ರಿಂದ 18 ರವರೆಗೆ ಪೀಸ್ ವರ್ಕ್ ಕೊಟ್ಟಿದ್ದೇವೆಯೇ ಹೊರತು 19 ರಿಂ 70 ರವರೆಗೆ ಮುಂದಕ್ಕೆ ಕೊಟ್ಟಿಲ್ಲ. ಡೈರಕ್ಟ್ ಎಂಟ್ರಸ್ಟ್ ಮೆಂಟ್‌ಗೆ ಒಂದು ನಿಯಮಾವಳಿ ಇದೆ. ಆ ನಿಯಮಾವಳಿ ಪ್ರಕಾರ ಕೆ.ಸಿ. ರೆಡ್ಡಿಯವರ ಅಧ್ಯಕ್ಷತೆ ಯೊಳಗೆ ಪ್ರತಿ ಕ್ವಾಲಿಫೈಡ್ ಲಿಸ್ಟ್ ಮಾಡಿ, ಎಷ್ಟೆಷ್ಟು ಟರ್ನ್‌ಓವರ್ ಇದೆ, ಯಾವ ರೀತಿ ಕೆಪ್ಯಾಸಿಟಿ ಇದೆ, ಎಷ್ಟು ಮೆಷಿನರೀಸ್ ಅವರ ಹತ್ತಿರ ಇದೆ ಮತ್ತು ಅವರು ಯಾವ ರೀತಿಯಲ್ಲಿ ಕೆಲಸವನ್ನು ಮಾಡಬಹುದು ಎನ್ನುವ ಅಧಾರವನ್ನು ಇಟ್ಟುಕೊಂಡೇ ಇವೊತ್ತಿನ ದಿವಸ ಈ ಕೆಲಸಗಳನ್ನೆಲ್ಲಾ ಮಾಡಿರತಕ್ಕಂಥದ್ದು. ಪೀಸ್ ವರ್ಕ್ ಕೊಟ್ಟಿರತಕ್ಕಂಥದ್ದು ಕೇವಲ 1992-95ರಲಿ ಮಾತ್ತ ಅದರೆ 1995ರಲ್ಲಿ ಏನು ಎರಡು ಲಿಸ್ಟ್ ಮಾಡಿದ್ದಾರೆ, ಆ ಎರಡು ಲಿಸ್ಟ್‌ಗಳು ಪೀಸ್ ವರ್ಕ್‌ಗಳಲ್ಲದ್ದಲ್ಲ. ಅದು ಡೈರಕ್ಟ್ ಎಂಟ್ರಸ್ಟ್‌ಮೆಂಟ್‌ಗೆ ನೋಟಿಫಿಕೇಷನ್, ಕಮಿಟಿ, ಕ್ವಾಲಿಫಿಕೇಷನ್ ಲಿಸ್ಟ್ ಅವರ ಕೆಪ್ಯಾಸಿಟಿ ಮತ್ತು ಮೈನಸ್ 6 ಪರ್ಸೆಂಟ್, ಮೈನಸ್ 10 ಪರ್ಸೆಂಟ್ ಎಸ್ಸಾರ್ ರೇಟಿಗೆ ಬಂದು ಕೆಲಸ ಮಾಡುತ್ತಾ ಇರತಕ್ಕಂಥವರು, ಆದ್ದರಿಂದ ಅವರು ಏನು ಇದರ ಬಗ್ಗೆ ಆರೋಪವನ್ನು ಮಾಡಿದ್ದಾರೆ ಅವೆಲ್ಲವೂ ಸತ್ಯಕ್ಕೆ ದೂರವಾದಂಥದ್ದು. ಇದರ ಹಿನ್ನೆಲೆಯಲ್ಲಿ ಅವರು ಒಂದು ವಿಷಯವನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ನಾವು ಈ ರೀತಿಯಲ್ಲಿ ಕೆಲಸ ಮಾಡಿದ್ದರಿಂದಲೇ ಇವೊತ್ತು ಆಲಮಟ್ಟಿಯಲ್ಲಿ 12 ಟಿ.ಎಂ.ಸಿ. ನೀರು ಏನು ನಮಗೆ ದೊರೆಯುತ್ತದೆಂದು ಎಕ್ಸ್‌ಪೆಕ್ಟ್ ಮಾಡಿದ್ದೇವೆಯೋ, ಆ ನೀರನ್ನು ಪಡೆಯುವ ದೃಷ್ಟಿಯಿಂದಲೇ ನಾವು ಇಷ್ಟೊಂದು ತರಾತುರಿಯಿಂದ ಕೆಸವನ್ನು ಮಾಡಿರತಕ್ಕಂಥದ್ದು. ಅದನ್ನು ಅವರು ಅರ್ಥ ಮಾಡಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಇಷ್ಟೆಲ್ಲಾ ಕೆಲಸವನ್ನು ನಾವು ತರಾತುರಿಯಿಂದ ಮಾಡಿರುವುದರಿಂದಲೇ ಇವೊತ್ತು ಆಂಧ್ರದವರಿಗೆ ಕಣ್ಣು ಬಿದ್ದಿರುವುದು. ಈ ನಾಲೆಗಳನ್ನು ಮತ್ತು ನಮ್ಮ ಹಕ್ಕನ್ನು ಉಪಯೋಗಿಸಿಕೊಳ್ಳುತ್ತಿದ್ದಾರಲ್ಲಾ ಎನ್ನುವ ಹೊಟ್ಟೆ ಉರಿಯಿಂದಲೇ ಆಂಧ್ರಧವರು ಇವೊತ್ತು ಹೊರಟಿರತಕ್ಕಂಥದ್ದು. ಇದನ್ನು ಇವರು ಅಪ್ರೀಷಿಯೇಟ್ ಮಾಡಬೇಕು. ಒಟ್ಟು 480 ಕೋಟಿ ರೂ.ಗಳನ್ನು ಮಾನ್ಯ ದೇವೇಗೌಡರು ಇಟ್ಟು ಹೋಗಿದ್ದಾರೆ. ತಾವು ಅದನ್ನು ಮರೆತುಬಿಡಬಾರದು. ಒಟ್ಟು 480 ಕೋಟಿ ರೂ. ಗಳನ್ನು ಕೃಷ್ಣಾ ಜಲ ಭಾಗ್ಯ ನಿಗಮದಲ್ಲಿ ಹಣವನ್ನು ಸಂಗ್ರಹಿಸಿ ಹಣ ಇಟ್ಟು ನೀವು ಕೆಲಸ ಮಾಡಿರಿ ಎಂದಿದ್ದಾರೆ. ಜನಗಳಿಗೆ ಬಡ್ಡಿಯನ್ನು ಕೊಟ್ಟು ಹಣವನ್ನು ಸಂಗ್ರಹಿಸಿ ಈ ಕೆಲಸವನ್ನು ಮಾಡಿಸುತ್ತಿರುವ ಕಾರಣವೇನೆಂದರೆ, ನೀವೇನು 2000 ಇಸವಿಯೊಳಗೆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ನಮ್ಮ ಕೈಯಲ್ಲಿ ಆಗುವುದಿಲ್ಲ ಎಂದು ಏನು ಹೇಳುತ್ತಿದ್ದೀರಿ ಅದನ್ನು ಸುಳ್ಳು ಮಾಡಿ ನೀರನ್ನು ಉಪಯೋಗಿಸಿಕೊಳ್ಳುತ್ತೇವೆ ಎಂಬುದನ್ನು ಸಾಬೀತುಮಾಡುವುದಕ್ಕಾಗಿ ಈ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದು. ಕೃಷ್ಣ ಜಲ ಭಾಗ್ಯ ನಿಗಮ ಮತ್ತು ಈ ಡೈರಕ್ಟ್ ಎಂಟ್ರಷ್ಟ್‌ಮೆಂಟ್ ಕಾರ್ಯಕ್ರಮಗಳು ಇದರಲ್ಲಿ ಬರುತ್ತವೆ. ಈ ರೀತಿಯ ಕಾರ್ಯಕ್ರಮಗಳ ಕೆಲಸಗಳನ್ನು ನೋಡಿಯೇ ಇವೊತ್ತು ಇವರು ನೀರನ್ನು ಉಪಯೋಗಿಸಿಕೊಂಡು ಬಿಡುತ್ತಾರಲ್ಲಾ ಎಂದು ಆಂಧ್ರದವರು ಹೊಟ್ಟೆ ಉರಿ ಪಡುತ್ತಿದ್ದಾರೆ. ಮಾನ್ಯ ಖರ್ಗೆಯವರು ಮಾತನಾಡುತ್ತಾ ಕಾವೇರಿ ವಿಷಯ ಪ್ರಸ್ತಾಪ ಮಾಡಿದರು. ಇದರ ಬಗ್ಗೆ ನಾನು ಹೇಳಬೇಕೆಂದರೆ ಇವೊತ್ತು ಈ ಕಾವೇರಿ ವಿಷಯದಲ್ಲಿ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ನಡುವೆ ಎಷ್ಟು ಮದುರವಾದ

ವಾತಾವರಣವನ್ನು ಮಾಡಿಕೊಂಡಿದ್ದೇವೆ ಎಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸೂಕ್ಷ್ಮವಾಗಿ ಹೇಳುತ್ತಾರೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ನಾನೇನು ಮದ್ರಾಸಿಗೆ ಭೇಟಿ ಕೊಟ್ಟು ಕರುಣಾನಿಧಿಯವರನ್ನು ಭೇಟಿಯಾಗಿದ್ದೆವೋ, ತದನಂತರ ಯಾವುದೇ ವ್ಯಾಜ್ಯವಿಲ್ಲದೇ, ಪ್ರೀತಿ ವಿಶ್ವಾಸದಿಂದ ಅತ್ಯಂತ ಮಧುರವಾದ ವಾತಾವರಣದಲ್ಲಿ ನಮ್ಮ ನಿಲುವಿನ ಬಗ್ಗೆಯೂ ಕೂಡ ಅವರು ಅರ್ಥಮಾಡಿಕೊಂಡು ಈಗ ಎರಡನೇ ಬಾರಿ ಮತ್ತೆ ಭೇಟಿಯಾಗುತ್ತಿರುವ ವಾತಾವರಣವೇ ಒಂದು ಚರಿತ್ರಾರ್ಹವಾಗಿದೆ. ಇದರ ಬಗ್ಗೆ ಬೇಕಾದರೆ ಮಾನ್ಯ ಖರ್ಗೆಯವರೇ ಹೇಳಲಿ, ಎಂದಾದರೂ ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಎರಡನೇ ಬಾರಿ ಭೇಟಿಯಾಗಿದ್ದಾರೆಯೇ? ಮಾನ್ಯ ನಂಜೇಗೌಡರಿಗೆ ಗೊತ್ತಿದ್ದರೆ ಹೇಳಲಿ ? ಆದುದರಿಂದ ಈಗ ಎರಡನೇ ಬಾರಿ ಭೇಟಿಯಾಗುತ್ತಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದು ಮಧುರವಾದ ವಾತಾವರಣ ಸೃಷ್ಟಿಯಾಗಿದೆ. ಅವರಿಗೆ ಮತ್ತು ನಮಗೆ ವಿಶ್ವಾಸ ಬಂದಿದೆ. ಕೋರ್ಟ್ ಎನ್ನತಕ್ಕಂಥದ್ದನ್ನು, ಟ್ರಿಬ್ಯುನಲ್‌ನ್ನು ಬಿಡತಕ್ಕಂಥ ವಿಚಾರ ವನ್ನು ನಾವೆಂದೂ ಮಾತನಾಡಿಲ್ಲ, ಇವೊತ್ತು ಏನೋ ಹೇಳಿದರು, ಇದೇ ನಿಮ್ಮ ಒಳಗುಟ್ಟು, ಟ್ರಿಬ್ಯುನಲ್ ಚೇರ್ಮನ್ ಮಾಡಿ ಎಂದು ಕ್ಷಣ ಕೂಡ ಬಂದಿಲ್ಲ. ಅದನ್ನು ಅವರೂ ಕೂಡ ಎತ್ತಲಿಲ್ಲ ಮತ್ತು ನಮ್ಮ ಮುಖ್ಯಮಂತ್ರಿಗಳೂ ಕೂಡ ಎತ್ತಲಿಲ್ಲ, ಆಗ ನಾವೂ ಕೂಡ ಎತ್ತಲಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೇ, ಇವೊತ್ತು ಮದ್ರಾಸಿನ ವಿಧಾನ ಸಭೆಯಲ್ಲಿ ನಡೆದಿರತಕ್ಕಂಥದ್ದು ಹೀಗಿದೆ. ನಾನು ಈಗ ಓದಿ ಹೇಳುತ್ತೇನೆ. " Replying to Mr. M.A.Latheef, an Independent member and Ponnuswamy C.P.I., the Chief Minister asserted that the talks would be held within the frame work of the Interim Award of the Tribunal. There will be no changes at this stage." ನೀವು ಒಂದಷ್ಟು ಇಷ್ಟೆ, ಇವೊತ್ತು ಅಲ್ಲಿಯ ರಾಜ್ಯದ ಮುಖ್ಯಮಂತ್ರಿಗಳು ಹೌಸ್‌ನಲ್ಲಿ ಸ್ಪಷ್ಟ ಮಾಡಿದ್ದಾರೆ. ಇಂಟ್ರಿರೀಮ್ ಆರ್ಡ್‌ರ್ ಏನಿದೆ ಅದರ ಆಧಾರದ ಮೇಲೆ ಮಾತುಕತೆ ಆಡುತ್ತೇನೆ ಎಂದಿದ್ದಾರೆ, ಆದರೆ ತಾವೇನು ಹೇಳುತ್ತಿದ್ದೀರೆಂದರೆ ಇಂಟ್ರಿರೀಮ್ ಆರ್ಡ್‌ರ್ ಕಾರ್ಯರೂಪಕ್ಕೆ ಬರುವಂಥದ್ದಲ್ಲ ಮತ್ತು ಇದು ಸಾಧುವೂ ಅಲ್ಲ, ಇದು ಅನ್ಯಾಯವಾಗಿದೆ ಎಂದೇ ಅವೊತ್ತಿನಿಂದಲೂ ಟ್ರಿಬ್ಯುನಲ್ ಬಗ್ಗೆ ನಿಮ್ಮ ಆರೋಪ ಇರುವುದು. ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಆಗಬೇಕು, ಅದರ ಆಧಾರದ ಮೇಲೆ ನೀರನ್ನು ಹಂಚಿಕೊಳ್ಳಬೇಕೆಂದು ಹೇಳುತ್ತಿರುವುದು. ಬರೀ ಆ ಮಾತುಕತೆ ಆಡುವುದಕ್ಕೆ ನಮ್ಮ ಮುಖ್ಯಮಂತ್ರಿಗಳು ಕರುಣಾನಿಧಿಯವರ ಹತ್ತಿರ ಏಕೆ ಹೋಗಬೇಕು ?

ಶ್ರೀ ಕೆ. ಎನ್. ನಾಗೇಗೌಡ: ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಒಂದು ಮನವಿಯನ್ನು ಮಾಡುತ್ತೇನೆ. ಹೊಸದಾಗಿ ಟ್ರಿಬ್ಯುನಲ್ ಕಾನ್ಸಿಟ್ಯೂಟ್ ಆಗುತ್ತಿಲ್ಲ. ಟ್ರಿಬ್ಯುನಲ್ ಕಾನ್ಸಿಟ್ಯುಟ್ ಆಗಿ ಚೇರ್ಮನ್ ಹುದ್ದೆ ಖಾಲಿ ಇದ್ದಾಗ ಕೇಂದ್ರ ಸರ್ಕಾರದ obligatory part of it

ಅದು, ಅದನ್ನು ಮಾಡಬೇಕಾದದ್ದು ಅವರಿಗೇ ಬಿಟ್ಟ ವಿಷಯ ನಾವು ಇಂದೂ ಕೂಡ ಟ್ರಿಬ್ಯುನಲ್ ವಿಚಾರ ಪ್ರಸ್ತಾಪ ಮಾಡಿಲ್ಲ ಮತ್ತು ನಾವು ಮಾಡುವುದಕ್ಕೂ ಹೋಗುವುದಿಲ್ಲ. ಆದರೆ ಕರುಣಾನಿಧಿಯವರು ಏನೋ ಹೇಳಿಕೊಂಡಿದ್ದಕ್ಕೆ ನೀವ್ಯಾಕೆ ಅಷ್ಟು ಆಸಕ್ತಿ ತೋರಿಸುತ್ತೀರೋ ನನಗಂತೂ ಗೊತ್ತಾಗಲಿಲ್ಲ. ಆದರೆ ಒಂದು ಮಾತನ್ನು ಕಾವೇರಿ ವಿಚಾರದಲ್ಲಿ ನಾನು ಸ್ಪಷ್ಟವಾಗಿ ಹೇಳಬಯಸುವುದೇನೆಂದರೆ, ಇವೊತ್ತು ಕಾವೇರಿ ವಿಚಾರದಲ್ಲಿ ಮಧುರವಾದಂಥ ವಾತಾವರಣ ಸೃಷ್ಟಿಯಾಗಿದೆ ಮತ್ತು ಎರಡೂ ರಾಜ್ಯದ ಮುಖ್ಯ ಮಂತ್ರಿಗಳಲ್ಲಿ ಹೆಚ್ಚು ವಿಶ್ವಾಸ ಬೆಳೆದಿದೆ, ಈ ವಿಚಾರದಲ್ಲಿ ಅಂತಿಮವಾದ ತೀರ್ಪಿಗೆ ನಾವುಗಳು ಬರಬೇಕಾಗಿದೆ. ನೂರಾರು ವರ್ಷಗಳಿಂದ ಜನರು ಇದರಿಂದ ನರಳುತ್ತಿದ್ದಾರೆ. ಎರಡೂ ರಾಜ್ಯಗಳಿಗೂ ಸರಿ ಹೊಂದುವ ಸೂತ್ರವನ್ನು ಕಂಡುಹಿಡಿಯಬೇಕು ಎನ್ನುವ ವಿಚಾರದಲ್ಲಿ ಬಹಳ ಯಶಸ್ವಿಯಾಗುವ ದಾರಿಯಲ್ಲಿ ನಾವು ಇದ್ದೇವೆ ಎನ್ನತಕ್ಕಂಥ ಒಂದು ಮಾತನ್ನು ಹೇಳುತ್ತೇನೆ. ಇದಾದ ನಂತರ ಮಾನ್ಯ ಖರ್ಗೆಯವರು ತುಂಗಭದ್ರಾ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ತುಂಗಭದ್ರಾ ನಾಲೆ ಒಡೆದುಹೋಗಿದೆ ಎಂದು ಅವರು ಹೇಳಿದರು. ನಾನು ಈ ಬಗ್ಗೆ ಅವರ ಗಮನಕ್ಕೆ ತರಬಯಸುವುದೇನೆಂದರೆ ಸುಮಾರು 18 ಕೋಟಿ ರೂ.ಗಳನ್ನು ಅರ್ತನ್ ಸ್ಟ್ರೆಂಥ್‌ಗೋಸ್ಕರ ಮಂಜೂರು ನಾವು ಮಾಡಿದ್ದೆವು. ಇಲ್ಲಿಯವರೆವಿಗೆ ಒಟ್ಟು 9 ಕೋಟಿ 46 ಲಕ್ಷ ರೂ. ಗಳು ಖರ್ಚಾಗಿದೆ. ಅಲ್ಲಿ ಆಗಿರುವ ಸಮಸ್ಯೆ ಏನೆಂದರೆ ಯಾವ್ಯಾವ ಪೋರ್ಶ್‌ನ್‌ನ್ನು ಅರ್ತನ್ ಸ್ಟ್ರೆಂಥನ್‌ಗೋಸ್ಕರ ತೆಗೆದುಕೊಂಡಿದ್ದರೋ ಆ ಪೋರ್ಶ್‌ನ್‌ಗಳಲ್ಲಿ ನಾಲೆ ಒಡೆದು ಹೋಗಿಲ್ಲ. ಇದನ್ನು ಮಾನ್ಯ ಖರ್ಗೆಯವರು ಅರ್ಥಮಾಡಿಕೊಳ್ಳಬೇಕು. ಒಡೆದುಹೋಗಿರುವ ಪೋರ್ಷನ್ ಯಾವುದೆಂದರೆ ಯಾವುದು ರಿಪೇರಿಯಾಗಿಲ್ಲವೋ ಸುಮಾರು 40-50 ವರ್ಷಗಳಿಂದ ಇದೆ ಅಲ್ಲಿ ನಾಲೆ ಒಡೆದಿರಬಹುದು. ಏಕೆಂದರೆ ಸುಮಾರು ಮೂರು ಅಥವಾ ಮೂರುವರೆ ಸಾವಿರ ಕ್ಯೂಸೆಕ್ಸ್ ನೀರು ಅದರಲ್ಲಿ ಡಿಸ್ಚಾರ್ಜ್ ಆಗಿರುತ್ತದೆ. ಅರು ಲಕ್ಷ ಎಕರೆಗೆ ನಾವು ನೀರನ್ನು ಕೊಡಬೇಕಾಗಿದೆ. ಹೀಗಾಗಿ ಇದು ಬಹಳ ಹಳೆಯ ಕಾಲದ ನಾಲೆಯಾಗಿದ್ದು ರಿಪೇರಿಯಾಗದೇ ಹಾಗೆಯೇ ಬಿಟ್ಟುಕೊಂಡು ಬಂದಿದ್ದಾರೆ. ಯಾವ ಬೆಳೆಯನ್ನೂ ಅಲ್ಲಿ ಹಾಕಿರಲಿಲ್ಲ. ಬೆಳೆ ಹಾಕದೆಯೇ ಕೇವಲ ಒಟ್ಟಲನ್ನು ಹಾಕಿಕೊಂಡು ಬೆಳೆಯನ್ನು ಹಾಕುವುದಕ್ಕೆ ಸ್ವಲ್ಪ ತಡ ಆಗಿರತಕ್ಕಂಥದ್ದು ಸತ್ಯವಾದ ವಿಚಾರ. ಈಗ ನಾವು ಬಹಳ ತರಾತುರಿಯಿಂದ ಎಲ್ಲಾ ಕಾರ್ಯಕ್ರಮವನ್ನು ಮುಗಿಸಿ 6 ಲಕ್ಷ ಎಕರೆಗೆ ನೀರನ್ನು ಕೊಟ್ಟಿದ್ದೇವೆ. ಈಗಾಗಲೇ 8 ರಿಂದ 9 ಕೋಟಿ ರೂ. ಗಳವರೆಗೆ ಹಣವನ್ನು ಖರ್ಚು ಮಾಡಿದ್ದೇವೆ. ನಾವು 30ನೇ ತಾರೀಖು ನಾಲೆಯನ್ನು ಇನ್‌ಸ್ಪೆಕ್ಟ್ ಮಾಡುವುದಕ್ಕೆ ಹೋಗುತ್ತಿದ್ದೇನೆ, ಆಗ ರಾಯಚೂರು ಜಿಲ್ಲಾ ಮಂತ್ರಿಗಳು ಬರುತ್ತಾರೆ. ಬೇಕಾದರೆ ವಿರೋಧ ಪಕ್ಷದ ನಾಯಕರು ಕೂಡ ಬರಬಹುದು. ಅವರನ್ನೂ ಕೂಡ ಕರೆದಿದ್ದೇನೆ. ಆದರೆ ಸುಮ್ಮನೇ 250 ಕೋಟಿ ರೂ.ಗಳ ಬೆಳೆ ನಷ್ಟ ಆಗಿದೆ ಎಂದು ಹೇಳುವುದು ಸರಿಯಲ್ಲ. ಏಕೆಂದರೆ ಇನ್ನೂ ಬೆಳೆಯನ್ನೇ ಬೆಳೆ ಅಲ್ಲಿನ ರೈತರು ಇಟ್ಟಿಲ್ಲ. ನಿನ್ನೆ ಖರ್ಗೆಯವರೇನೋ ಮಾತನಾಡುತ್ತಾ, 250 ಕೋಟಿ. ರೂ. ಗಳ ಬೆಳೆ ನಷ್ಟವಾಗಿ ಹೋಯಿತು, ಸರ್ಕಾರಕ್ಕೆ ನಿಗಾ ಇಲ್ಲ, ಆ ಕಾರಣಕ್ಕಾಗಿ ಸರ್ಕಾರದಲ್ಲಿ ವಿಶ್ವಾಸ ಇಲ್ಲ ಎಂದರು. ಆದರೆ ರೈತರು ಬೆಳೆಯನ್ನೇ ಹಾಕದೇ ಕೇವಲ ಒಟ್ಟಲನ್ನು ಹಾಕಿಕೊಂಡಿದ್ದಾರೆ, ಅದಕ್ಕೆ ನೀರನ್ನು ಕೊಡತಕ್ಕಂಥದ್ದಕ್ಕೆ ಅರ್ತನ್ ಸ್ಟ್ರೆಂಗ್ತ್‌ನ್‌ನಲ್ಲಿ ಕೆಲಸ ಸ್ವಲ್ಪ ತಡವಾಗಿದೆ. ಈಗ ನಾವು

ಅದಕ್ಕೆ ತೀವ್ರ ನಿಗಾ ಕೊಟ್ಟಿದ್ದೇವೆ. ಮೂರು ದಿವಸಗಳ ಹಿಂದಿನಂದು ನನಗೆ ಬಂದಿರುವ ದೂರವಾಣಿ ಮಾಹಿತಿ ಪ್ರಕಾರ ಸಂಪೂರ್ಣವಾಗಿ ನಾವು ರಾಯಚೂರು ಭಾಗದವರಿಗೆ ನೀರನ್ನು ಕೊಟ್ಟಿದ್ದೇವೆ. 6 ಲಕ್ಷ ಎಕರೆಗೆ ನೀರಾವರಿಯಾಗಿದೆ. ಈಗ ಅವರು ನಾಟಿ ಹಾಕುವುದಕ್ಕೆ ಪ್ರಾರಂಭ ಮಾಡಿದ್ದಾರೆ ಎನ್ನುವ ಮಾಹಿತಿಯನ್ನು ಅವರಿಗೆ ಕೊಡುತ್ತಾ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದರ ಬಗ್ಗೆ ಸ್ವಲ್ಪ ರಾಂಗ್ ಇನ್‌ಫರ್ಮೇಷನ್ ಕೊಡುತ್ತಿದ್ದೀರಿ.

ಶ್ರೀ ಕೆ. ಎನ್. ನಾಗೇಗೌಡ: ಹೇಗೆ ರಾಂಗ್ ಇನ್‌ಫರ್ಮೇಷನ್ ಕೊಡುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲೇ ಇದೇ ಸದನದಲ್ಲಿ ತಾವೂ ಕೂಡ ಒಪ್ಪಿಕೊಂಡಿದ್ದೀರಿ. ಮೊದಲಿನ ನಿಮ್ಮ ಷೆಡ್ಯೂಲ್ ಪ್ರಕಾರ ತುಂಗಾಭದ್ರ ಲೆಫ್ಟ್ ಬ್ಯಾಂಕ್ ಕ್ಯಾನಲ್ ರಿಪೇರಿ ಮಾಡತಕ್ಕಂಥದ್ದು ಮೇ ತಿಂಗಳ ಕೊನೆಯವರೆಗೆ ಎಂದಿತ್ತು. ಆ ಪ್ರಕಾರ ಮೇ ತಿಂಗಳ ಕೊನೆಯೊಳಗೆ ರಿಪೇರಿಯಾಗಿ ಕೆಲಸ ಮುಗಿಯುತ್ತದೆಂದು ರೈತರು ತಿಳಿದು, ಜೂನ್‌ನಲ್ಲಿ ಶೇಂಗಾ, ಸೂರ್ಯಕಾಂತಿ ಬೆಳೆಯನ್ನು ಶೆಡ್ಯೂಲ್ ಪ್ರಕಾರ ಬಿತ್ತಿ ಕೊಂಡಿದ್ದರು. ಆದರೆ ಮೇ ತಿಂಗಳಿಗೆ ಕೆಲಸ ಮುಗಿಯಲಿಲ್ಲ. ಇದಾದ ನಂತರ ನೀವು ಜೂನ್ ತಿಂಗಳ ಕೊನೆಯವರೆಗೆ ಎಂದು ಟಾರ್ಗೆಟ್‌ನ್ನು ಕೊಟ್ಟಿರಿ. ಜೂನ್‌ಗೂ ಮುಗಿಯದೇ ಕೊನೆಗೆ ಜುಲೈ ತಿಂಗಳ ಕೊನೆಯವರೆಗೆ ಎಂದು ಮಾಡಿದಿರಿ. ಆಗಲೂ ಕೂಡ ಕೆಲಸ ಮುಗಿಯಲಿಲ್ಲ. ಕೊನೆಗೆ ನೀವೇನು ಮಾಡಿದಿರಿ ಎಂದರೆ ಆಗಸ್ಟ್ ತಿಂಗಳ ಮೊದಲ ವಾರದಲ್ಲಿ ತಾವು ನೀರನ್ನು ಬಿಟ್ಟಿರಿ. ಹಾಗಾದರೆ ನೀವೇ ಲೆಕ್ಕವನ್ನು ಹಾಕಿಕೊಳ್ಳಿ, ರೈತರು ಏನು ಜೂನ್‌ನಿಂದ ಆಗಸ್ಟ್ ತಿಂಗಳ ಮಧ್ಯ ಭಾಗದಲ್ಲಿ ಹಾಕಿದಂಥ ಬೆಳೆಗಳಾದ ಶೇಂಗಾವಾಗಲೀ ಸೂರ್ಯಕಾಂತಿಯಾಗಲೀ ಎಲ್ಲ ಬೆಳೆಯೂ ಕೂಡ ಹಾಳಾಗಿ ಹೋಯಿತು. ಸುಮ್ಮನೆ ಏನೇನೋ ಇವೊತ್ತು ನೀವು ಮಾತ ನಾಡಿದರೆ ಸರಿ ಇಲ್ಲ. ಮಾನ್ಯ ಉಪಾಧ್ಯಕ್ಷರೇ, ಇದರ ಬಗ್ಗೆ ನೀವೇ ಹೇಳಿ, ಆ ಸೀಸನ್‌ನಲ್ಲಿ ಏನು ಬೆಳೆಯಾಗುತ್ತದೆ ಎನ್ನುವುದನ್ನು ನೀವೇ ಹೇಳಿ. ನ್ಯಾಚುರಲಿ ಈ ಬೆಳೆಗಳನ್ನು ಹಾಕಿದ ಮೇಲೆ ಈ ಕ್ಯಾನಲ್‌ನಿಂದ ನೀರನ್ನು ರೈತರು ನಿರೀಕ್ಷೆ ಮಾಡುತ್ತಾರೆ. ಏಕೆಂದರೆ ಇದರ ಹಿಂದೆಯೇ ನೀವೇ ಒಂದು ಅನೌನ್ಸ್ ಮಾಡಿ ಮೇ ತಿಂಗಳ ಕೊನೆಯೊಳಗೆ ರಿಪೇರಿ ಕೆಲಸ ಮುಗಿಸಿ ನೀರನ್ನು ನಾವು ಬಿಡುತ್ತೇವೆಂದು ಹೇಳಿದ್ದೀರಿ. ಈ ಕ್ಯಾನಲ್‌ನ್ನು 20 ಕೋಟಿ ರೂ. ಗಳನ್ನು ಖರ್ಚು ಮಾಡಿ ರಿಪೇರಿ ಮಾಡುತ್ತೇವೆ ಎಂದು ಹೇಳಿದ್ದಿರಿ. ಈ ರೀತಿ ಹೇಳಿದ ಮೇಲೂ ಕೂಡ ಪುನಃ ತಾವು ಹೇಗೋ ಅದನ್ನು ಸಮರ್ಥನೆ ಮಾಡಿಕೊಳ್ಳುತ್ತೇವೆ ಎಂದರೆ ಅದು ತಮಗೆ ಬಿಟ್ಟದ್ದುದು.

ಶ್ರೀ ಕೆ. ಎನ್. ನಾಗೇಗೌಡ: ಇದು ಸಮರ್ಥನೆ ಅಲ್ಲ. ಮಾನ್ಯ ಖರ್ಗೆಯವರು ಬೇಕಾದರೆ ಬರಲಿ. ನಮ್ಮ ಅಧಿಕಾರಿಗಳು ಇಲ್ಲಿ ಇದ್ದಾರೆ, ಅವರೇ ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ ಮಾನ್ಯ ಖರ್ಗೆಯವರು ಇನ್ನೂ ಅಲ್ಲಿ ವರ್ಕ್ ಕಂಪ್ಲೀಟ್ ಆಗಿಲ್ಲದಿದ್ದಾಗ ಹೋಗಿ ನೋಡಿಕೊಂಡು

ಈಗ ನಾನು 30ನೇ ತಾರೀಖು ಮುನಿರಾಬಾದ್‌ಗೆ ಹೋಗುತ್ತಿದ್ದೇನೆ. ಆಗ ಅಲ್ಲಿಗೆ ಭೇಟಿ ಕೊಡುವುದಕ್ಕಾಗಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರನ್ನೂ ಕರೆದಿದ್ದೇನೆ, ನೀವೂ ಕೂಡ ಬನ್ನಿ. ಅಲ್ಲಿ ಎಷ್ಟು ಕೋಟಿ ರೂ. ಗಳ ಬೆಳೆ ಹಾಳಾಗಿದೆ ಎಂದು ನಾವು ಎಸ್ಟಿಮೇಟ್ ಮಾಡೋಣ. ಈ ರೀತಿ ಸುಮ್ಮನೇ ಮಾತನಾಡುವುದರಲ್ಲಿ ಅರ್ಥವಿಲ್ಲ. ಇಷ್ಟನ್ನು ಮಾತ್ರ ನಾನು ಹೇಳಬಯಸುತ್ತೇನೆ. ಇನ್ನು ನಾರಾಯಣಪುರ ಡ್ಯಾಮ್ ವಿಚಾರದಲ್ಲೂ ನಮ್ಮ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ಇದರಲ್ಲಿ ಭೀಮಾ ಲಿಫ್ಟ್ ಆಗಲೀ, ಭೀಮಾ ನದಿಯ ವಿಚಾರದಲ್ಲಿ, ಈ ನಾರಾಯಣಪುರ ವಿಚಾರದಲ್ಲಿ ಶ್ರೀಮಾನ್ ಕೆ.ಸಿ. ರೆಡ್ಡಿಯವರ ಆಧ್ಯಕ್ಷತೆಯಲ್ಲಿ ಕಮಿಟಿ ಮಾಡಿ, ಎಲ್ಲೆಲ್ಲೆ ನೀರು ಸೋರುತ್ತಿದೆ ಎನ್ನುವ ವಿಚಾರವನ್ನು ಪರಿಶೀಲಿಸಲು ಕಮಿಟಿಯನ್ನು ಮಾಡುತ್ತೇವೆ. ಇದು ಒಂದು ವಿಚಾರವಾದರೆ. ಇನ್ನು ಭೀಮಾ ಲಿಫ್ಟ್ ಮತ್ತು ಭೀಮಾ ಫ್ಲೋರ್‌ಗೆ ಹಣವನ್ನು ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಇಲ್ಲಿ ಭೀಮಾ ಲಿಫ್ಟ್‌ನಲ್ಲಿ 9 ಟಿ.ಎಂ.ಸಿ. ನೀರಿಗೆ ಮತ್ತು ಭೀಮಾ ಫ್ಲೋರ್‌ನಲ್ಲಿ 6 ಟಿ.ಎಂ.ಸಿ. ನೀರನ್ನು ನಾವು ಮೀಸಲಾಗಿ ಇಟ್ಟುಕೊಂಡಿದ್ದೇವೆ. ಇದಕ್ಕೆ ಸ್ವಲ್ಪ ಹಣವನ್ನು ನಾವು ಕೊಟ್ಟಿಲ್ಲ. ಈಗಾಗಲೇ ಭೀಮಾ ಲಿಫ್ಟ್ ಬಗ್ಗೆ ಹಣಕಾಸಿನ ವಿಚಾರದಲ್ಲಿ ಹಣಕಾಸು ಮಂತ್ರಿಗಳ ಜೊತೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ಮಾತನಾಡಿದ್ದೇನೆ. ಎಷ್ಟು ಮಾಹಿತಿಯನ್ನು ತೆಗೆದುಕೊಂಡು ಬರುವ ವರ್ಷದಿಂದ ಹೆಚ್ಚು ನೀರನ್ನು ಉಪಯೋಗಿಸಿಕೊಳ್ಳುತ್ತೇವೆ ಮತ್ತು ಆನಿಟ್ಟಿನಲ್ಲಿ ಹೆಚ್ಚು ಪ್ರಯತ್ನವನ್ನು ಮಾಡುತ್ತೇವೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಕೊನೆಯದಾಗಿ ನಾನು ಒಂದು ಮಾತನ್ನು ಹೇಳುವದೇನೆಂದರೆ ಈ ಕಾವೇರಿ ವಿಚಾರದಲ್ಲಾಗಲೀ ಮತ್ತು ಆಲಮಟ್ಟಿ ವಿಚಾರದಲ್ಲಾಗಲೀ ಇವೆರಡರಿಂದಲೂ ನೀರನ್ನು ಬಳಸಿಕೊಳ್ಳತಕ್ಕಂಥ ಮತ್ತು ಉಪಯೋಗಿಸಿಕೊಳ್ಳತಕ್ಕಂಥ ವಿಧದಲ್ಲಿ ನಮ್ಮ ಸರ್ಕಾರ ಎಂದೂ ಎಡವಿಲ್ಲ ಮತ್ತು ಎಡುವುದೂ ಇಲ್ಲ. ಏಕೆಂದರೆ ಆ ರೀತಿಯಲ್ಲಿ ಬಂಧರಾಗಿ ರೈತರಿಗೆ ಅನ್ಯಾಯ ಮಾಡಿ ಇಲ್ಲಿ ಉಳಿಯುವಂಥವರು ನಾವ್ಯಾರೂ ಅಲ್ಲ ಎನ್ನುವುದನ್ನು ಮಾನ್ಯ ಖರ್ಗೆಯವರು ಒಪ್ಪಿಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ. ಇದನ್ನು ಯಡಿಯೂರಪ್ಪನವರೂ ಕೂಡ ಒಪ್ಪುತ್ತಾರೆ. ಈಗಲಾದರೂ ಕೂಡ ನಮ್ಮ ಮೇಲೆ ವಿಶ್ವಾಸ ಇಟ್ಟು, ನಂಬಿಕೆ ಇಟ್ಟು ಈಗಾಗಲೇ ಅವರು ಮಾಡಿತರಕ್ಕಂಥ ಅವಿಶ್ವಾಸ ನಿರ್ಣಯವನ್ನು ವಾಪಸ್ಸು ತೆಗೆದುಕೊಂಡು ನಿನ್ನೆ ಮೊನ್ನೆ ಅವರು ಮಾಡಿರತಕ್ಕಂಥ ಎಲ್ಲಾ ಭಾಷಣವನ್ನು ಮರೆಯಬೇಕು . ಏಕೆಂದರೆ, ನೀರಾವರಿಯಿಂದ ರಾಜ್ಯದ ಹಿತವನ್ನು ಕಾಪಾಡುವುದೇ ಜೆ.ಹೆಚ್.ಪಟೇಲ್ ಸರ್ಕಾರದ ಉದ್ದೇಶವಾಗಿದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಈಗಾಗಲೇ ಅವರು ತಂದಿರುವ ಅವಿಶ್ವಾಸ ನಿರ್ಣಯದ ಬಗ್ಗೆ ಹೇಳಬೇಕೆಂದರೆ, ಇದಕ್ಕೆ ಸರಿಯಾದ ಕಾಲವೂ ಕೂಡ ಇದಲ್ಲ, ಮತ್ತು ಅವರು ಸರಿಯಾಗಿ ಮಾತನಾಡಿಯೂ ಇಲ್ಲ, ಇದರಲ್ಲಿ ಬರೀ ರಾಜಕೀಯ ಇದೆ. ಏಕೆಂದರೆ ದೇವೇಗೌಡರ ಮೇಲೆ ಅವರು ಮಾತನಾಡಬೇಕು.

ಶ್ರೀ ಎಂ.ಸಿ. ನಾಣಯ್ಯ : ಸ್ವಲ್ಪ ಬೈಯ್ದು ಹೇಳಿ.

ಶ್ರೀ ಕೆ. ಎನ್. ನಾಗೇಗೌಡ : ಬೈಯ್ದು ಹೇಳಿ ಎಂದು ನಾಣಯ್ಯನವರು ಹೇಳುತ್ತಿದ್ದಾರೆ.

ಆದರೆ ಬೈಯ್ಯುವುದು ಬೇಡ. ಏಕೆಂದರೆ ಅವರಿಗೆ ಹಾಗೇ ಅರ್ಥವಾಗುತ್ತದೆ. ಅವರಿಗೆ ಹೇಗೆ ಅರ್ಥವಾಗುತ್ತದೆಂದರೆ ಯಾವಾಗಲೂ ಕೂಡ ಟೀಕೆ ಮಾಡುವುದರಲ್ಲಿಯೇ ಅರ್ಥವಿರುವುದಿಲ್ಲ. ಅವರು ಮಾತನಾಡಿರತಕ್ಕಂಥ ಅವಿಶ್ವಾಸ ನಿರ್ಣಯದಲ್ಲಿ ನನಗೆ ಬಹಳ ನೋವು ಯಾವಾಗ ಬಂತೆಂದರೆ, ಈ ಅವಿಶ್ವಾಸ ನಿರ್ಣಯವನ್ನು ಬಹಳ ಬಾಲಿಶವಾಗಿ ಅವರು ಉಪಯೋಗಿಸಿದರಲ್ಲಾ ಮತ್ತು ಸಣ್ಣ ಮಟ್ಟದಲ್ಲಿ ಈ ಅಸ್ತ್ರವನ್ನು ಇವರು ಉಪಯೋಗಿಸಿದರಲ್ಲಾ ಅದು ಸರಿಯಾದುದಲ್ಲ. ಆ ಕಾರಣಕ್ಕಾಗಿ ನಾನು ಈ ಅವಿಶ್ವಾಸ ನಿರ್ಣಯವನ್ನು ವಿರೋಧ ಮಾಡಿ ನನ್ನ ಮಾತನ್ನು ಮುಗಿಸಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗಾದರೆ ಒಂದು ಕೆಲಸವನ್ನು ಮಾಡಿ. ಈಗ ನಾನೇನು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಕಾಂಟ್ರಾಕ್ಟ್‌ನಲ್ಲಿ ವ್ಯತ್ಯಾಸವಾಗಿದೆಯೆಂದು ಹೇಳಿದ್ದೇನೆ. ಅದನ್ನು ಲೋಕಾಯುಕ್ತಕ್ಕೆ ರೆಫರ್ ಮಾಡಿಬಿಡಿ.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ಏಕೆ ಲೋಕಾಯುಕ್ತಕ್ಕೆ ರೆಫರ್ ಮಾಡಬೇಕು ? ಅದು ಕ್ರಮಬದ್ಧವಾಗಿ , ನಿಯಮಾನುಸಾರವಾಗಿ ಮಾಡಿರತಕ್ಕಂಥಾದ್ದರಲ್ಲಿ ಯಾವ ಲೋಪವೂ ಇಲ್ಲ, ಯಾವ ಭ್ರಷ್ಟಾಚಾರವೂ ಇಲ್ಲ, ಅದರ ಅವಶ್ಯಕತೆಯೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಹೇಳುವುದು ಬೇಡ, ನಮ್ಮದು ಬೇಡ, ಲೋಕಾಯುಕ್ತ ನಿಮ್ಮ ಸರ್ಕಾರದ ಕಂಟ್ರೋಲ್‌ನಲ್ಲಿ ಇದೆಯಲ್ಲಾ, ಅದಕ್ಕೆ ರೆಫರ್ ಮಾಡಿ. ಏಕೆ ಅವಶ್ಯಕತೆ ಇಲ್ಲ, ನಾನು ಹೇಳುತ್ತಿದ್ದೇನೆ, ನೀವು ಇಲ್ಲ ಎಂದು ಹೇಳುತ್ತಿದ್ದೀರಿ, ಇದೆಲ್ಲಾ ಸೆಟ್ಲ್ ಆಗಬೇಕಾದರೆ ನಿಮ್ಮದೇ ಮೆಷಿನರಿ ಇದೆಯಲ್ಲಾ ಸರ್ಕಾರದ್ದು, ಲೋಕಾಯುಕ್ತಕ್ಕೆ ರೆಫರ್ ಮಾಡಿ. ಇಲ್ಲದಿದ್ದರೆ ಸಿ.ಓ.ಡಿ. ಮೇಲೆ ನಿಮಗೆ ನಂಬಿಕೆ ಇದ್ದರೆ ಸಿ.ಓ.ಡಿಗೆ ರೆಫರ್ ಮಾಡಿ.

ಶ್ರೀ ಕೆ.ಎನ್. ನಾಗೇಗೌಡ: ಲೋಕಾಯುಕ್ತಕ್ಕೆ ರೆಫರ್ ಮಾಡಿ, ಕೆಲಸ ನಿಲ್ಲಿಸಿ ಆಂಧ್ರದವರು ಏನು ಹೇಳುತ್ತಿದ್ದಾರೆ ಅವರಿಗೆ ಸಪೋರ್ಟ್ ಮಾಡಬೇಕು ಈಗ . ಅಲಮಟ್ಟಿಗೆ ತೊಂದರೆಯಾಗುತ್ತದೆ. ಕೆಲಸ ನಿಲ್ಲಿಸುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಕೆಲಸ ನಿಲ್ಲಿಸಿ ಎಂದು ಹೇಳುವುದಿಲ್ಲ. ನಾವು ನೇರವಾಗಿ ನಿಮಗೆ ಚಾರ್ಜ ಮಾಡಲಿಲ್ಲವಲ್ಲಾ. ಸಿ.ಓ.ಡಿಗೆ ಕೊಡಬೇಕು ಎಂದು ನಿಮಗೆ ಇದ್ದರೆ ಕೊಡಿ.

ಉಪಾಧ್ಯಕ್ಷರು : ನೀವೂ ನೀವೇ ಚರ್ಚೆ ಮಾಡಿದರೆ ಇದು ಅವಿಶ್ವಾಸ ನಿರ್ಣಯ ಸರಿ ಆಗುವುದಿಲ್ಲ. ತಾವು ದಯಮಾಡಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಅವರು ಹೇಳಿದರು, ನಾವು ಚಾರ್ಜ್ ಮಾಡಿದ್ದು ಸತ್ಯಕ್ಕೆ ದೂರವಾದುದು ಎಂದು . ಅದನ್ನು ಲೋಕಾಯುಕ್ತಕ್ಕೆ ರೆಫರ್ ಮಾಡಿ, ಸತ್ಯಾಂಶ ಹೊರಗೆ ಬರಲಿ. ಅದನ್ನು ಇಲ್ಲ, ಇದನ್ನು ಇಲ್ಲ ಎಂದರೆ ಹೇಗೆ?

ಉಪಾಧ್ಯಕ್ಷರು : ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಿ ತಾವು. ದಯಮಾಡಿ ತಾವು ಕುಳಿತುಕೊಳ್ಳಿ, ಶ್ರೀನಿವಾಸ್‌ರವರು ಮಾತನಾಡುತ್ತಾರೆ.

ಶ್ರೀ ಎಂ. ಶ್ರೀನಿವಾಸ್ (ಉತ್ತರ ಹಳ್ಳಿ) : ಮಾನ್ಯ ಉಪಾಧ್ಯಕ್ಷರೇ, ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಹೇಳುತ್ತಾ, ಇವತ್ತು ಜನತಾ ದಳದ ಸರ್ಕಾರ ಅಧಿಕಾರಕ್ಕೆ ಬಂದು 20 ತಿಂಗಳಾಯಿತು. ಅವರು ಯಾರ ಆಶೀರ್ವಾದವನ್ನು ಪಡೆದು ಬಂದರೋ ಅವರಿಗೆ ರಾಮಕೃಷ್ಣ ಹೆಗಡೆಯವರಿಗೆ ಕೋಳಿ ಮೊಟ್ಟೆಯಲ್ಲಿ ಹೊಡೆದರು.

ಮಾನ್ಯ ಸದಸ್ಯರು : ಈಗಾಗಲೇ ಬಿಟ್ಟು ಹೋಗಿದ್ದಾರೆ.......

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ : ಸ್ವಾಮಿ, ಈ ಅವಿಶ್ವಾಸ ನಿರ್ಣಯದ ಕೊನೆಯ ಹಂತದಲ್ಲಿದೇವೆ. ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಬಹಳ ನೋಡಿದ್ದೇನೆ. ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ಅವಿಶ್ವಾಸ ನಿರ್ಣಯದ ಬಗ್ಗೆ ಹೇಳುವುದಾದರೆ 70 ಜನ ನಾವು ರಾಮಕೃಷ್ಣ ಹೆಗಡೆಯವರ ಜೊತೆಯಲ್ಲಿ ಇರುತ್ತವೆ, ಹೋಗುವುದಿಲ್ಲ ಎನ್ನುವ ಮಾತು ಬಂತು. ಆದರೆ ಕೊನೆಗೆ ಆಶ್ರಯ ಯೋಜನೆಯ ಚೇರ್‌ಮನ್ ಮಾಡುತ್ತೇವೆ ಎಂದಿದ್ದಕ್ಕೆ ಇವತ್ತು ಎಲ್ಲರೂ ಬಂದು ಸೇರಿಕೊಂಡಿದ್ದಾರೆ.

ಮಾನ್ಯ ಸದಸ್ಯರು : ಮಾನ್ಯ, ಉಪಾಧ್ಯಕ್ಷರೇ, ನಾವೊಬ್ಬರೇ ಕೇಳುತ್ತಿಲ್ಲ, ಇವರು ಕೇಳುತ್ತಿದ್ದರು, ಗಲಾಟೆ ಮಾಡುತ್ತಿದ್ದರು, ಹಠ ಮಾಡಿ ಅಲ್ಲಿ........

ಶ್ರೀ ಎಂ. ಶ್ರೀನಿವಾಸ್ : ಹೇಳುತ್ತೇನೆ ಸ್ವಾಮಿ, ನಾನು ಏನೂ ಜಾಸ್ತಿ ಹೇಳುವುದಕ್ಕೆ ಹೋಗುವುದಿಲ್ಲ. ಐದು ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀಮತಿ ಬಿ.ಟಿ.ಲಲಿತಾನಾಯಕ್ : ಮಾನ್ಯ ಉಪಾಧ್ಯಕ್ಷರೇ, "ನುಡಿದರೆ ಮುತ್ತಿನ ಹಾರದಂತಿರಬೇಕು" ಎನ್ನುವ ಹಾಗೆ ಸ್ವಲ್ಪ ಸ್ವಲ್ಪ ಮಾತಿನಲ್ಲಿ ಏಕೆ ಅಷ್ಟಷ್ಟು ಕೊರೆಯುತ್ತಾರೆ ? ಮುಖ್ಯವಾದಂತಹ ಅಂಶವನ್ನು ಹೇಳಿಬಿಡಿ.

ಶ್ರೀ ಎಂ. ಶ್ರೀನಿವಾಸ್ : ನಾನು 1983 ರಿಂದ ಇದ್ದೇನೆ. ಯಾವಾಗಲೂ ಮಾತನಾಡುವುದಕ್ಕೆ ಬರುವುದಿಲ್ಲ. ಅದಕ್ಕೆ ಮಾತನಾಡುವುದಕ್ಕೆ ಕಲಿತುಕೊಂಡು ಮಾತನಾಡುತ್ತೇನೆ. ಇವತ್ತು ಅವಿಶ್ವಾಸ ನಿರ್ಣಯದಿಂದ ಮಾತನ್ನು ಅವರು ಗೆಲ್ಲಿಸಬಹುದು. ಅದರೂ ಇವತ್ತು ಅಶ್ರಯ ಯೋಜನೆಗೆ ನಾವು ಬಂದಿದ್ದೇವೆ. 30ನೇ ತಾರೀಖು ನಿಮ್ಮ ಜೊತೆ ಸೇರಿಕೊಳ್ಳುತ್ತೇವೆ, ಅವರಂತೂ ಬಿದ್ದು ಹೋಗುತ್ತದೆ ಎಂದು ಜನತಾ ದಳದಲ್ಲಿ ಮಾತನ್ನು ಆಡುತ್ತಿದ್ದಾರೆ. ನಂತರ ರಾಮಕೃಷ್ಣ ಹೆಗಡೆಯವರ ಜೊತೆ ಹೋಗುತ್ತೇವೆ ಎಂದು ಹೇಳುತ್ತಿದ್ದಾರೆ. ನಾನು ಏಕೆ ಈ ಮಾತನ್ನು ಹೇಳಿದೆ ಎಂದರೆ ನಾನು ದೆಹಲಿಗೆ ಹೋಗಿದ್ದೆ. ಪ್ರಧಾನಮಂತ್ರಿಗಳು ಇದ್ದರು. ಅಲ್ಲಿ ಬಹಳ ಜನ ಮಂತ್ರಿಗಳು ಸಿಕ್ಕಿದ್ದರು. ನಾನು ಏನಪ್ಪ ಚೆನ್ನಾಗಿ ಇದ್ದೀರಾ ಎಂದು ಕೇಳಿದೆ. ಆಮೇಲೆ ಏನು ಮಾಡಿದೆ ಎಂದರೆ ಹೆಗಡೆಯವರು ನಮ್ಮ ಹಳೇ ಗುರುಗಳು. ನಾನು ಹೆಗಡೆಯವರ ಮನೆಗೆ ಹೋದರೆ ಎಲ್ಲೋ ಹೋಗುತ್ತೇನೆ ಎಂದು ಮಂತ್ರಿಗಳು ಎಲ್ಲಾ ಅಲ್ಲೆ ಇದ್ದಾರೆ. ಅವರ ಮೇಲೆ ಎಷ್ಟು ವಿಶ್ವಾಸ ಇಟ್ಟಿದ್ದಾರೆ ಎಂದರೆ ಸುಮಾರು 70 ಜನ ಇವತ್ತು ಅವರ ಮೇಲೆ ವಿಶ್ವಾಸವನ್ನು ಇಟ್ಟಿದ್ದಾರೆ. 30 ನೇ ತಾರೀಖಿಗೆ ಅವರು ಹೋಗುತ್ತಾರೆಂದು ಹೇಳುತ್ತಾ.........

ಶ್ರೀ ಎಂ.ಸಿ. ನಾಣಯ್ಯ : ನೀವು ಯಾವಾಗ ಹೋಗುತ್ತಿದ್ದೀರಿ ಎಂದು ಹೇಳಿಬಿಡಿ. ಯಾವಾಗ ನೀವು ಹೋಗುತ್ತೀರಿ ಎಂದು ಹೇಳಿದರೆ, ಅದನ್ನು ಯಡಿಯೂರಪ್ಪನವರಿಗೆ ತಿಳಿಸಿಬಿಡೋಣ.

ಶ್ರೀ ಎಂ.ಶ್ರೀನಿವಾಸ್ ; ನಾನು ಇನ್ನು ಎಲ್ಲಿಗೂ ಹೋಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಅಧಿಕಾರ ತೆಗೆದು ಕೊಂಡಮೇಲೆ ಏನು ಮಾಡುತ್ತಾರೆ, ಆ ಭಾಗದಲ್ಲಿ ಇರಬಹುದು ಈ ಭಾಗದಲ್ಲಿ ಇರಬಹುದು, ಮೂರು ತಿಂಗಳಿಗೆ ಒಂದು ಸಾರಿ ಸಭೆಯನ್ನು ಕರೆಯುತ್ತಾರೆ. ಮೂರು ತಿಂಗಳಿಗೆ ಒಂದು ಸಭೆಯನ್ನು ಕರೆದು, ನಿಮ್ಮ ಕ್ಷೇತ್ರದಲ್ಲಿ ಏನೇನು ಕೆಲಸವಾಗುತ್ತದೆ ಎನ್ನುವ ಮಾತನ್ನು ಕೇಳುತ್ತಾರೆ. ಇದುವರೆಗೂ 20 ತಿಂಗಳು ಆಯಿತು, ಒಂದು ಸಭೆಯನ್ನು ಕರೆದಿಲ್ಲ. ಈ ಸಭೆಯನ್ನು ಕರೆಯದಿದ್ದಮೇಲೆ ಕೆಲಸ ಎಲ್ಲಿ ಆಗುತ್ತದೆ ? ಇದುವರೆಗೂ ಶಾಸಕರ ಸಭೆ ಕರೆದಿಲ್ಲ. ಕೆಲಸಗಳೆಲ್ಲಾ ನಿಂತು ಹೋಗಿದೆ. ಯಾವ ಕೆಲಸಗಳೂ ನಡೆಯುತ್ತಿಲ್ಲ ಎಂದು ಹೇಳುತ್ತಾ....

ಶ್ರೀ ಎಸ್.ಡಿ. ಜಯರಾಂ : ವಾರಕ್ಕೆ ಮೂರು ಸಲ ಪತ್ರಿಕೆಯಲ್ಲಿ ಬರುತ್ತದೆ. ಪ್ರಾರಂಭೋತ್ಸವ ಪ್ರಾರಂಭೋತ್ಸವ........

ಶ್ರೀ ಎಂ. ಶ್ರೀನಿವಾಸ್ : ವಾರಕ್ಕೆ ಮೂರು ಸಲ ನಿಮ್ಮ ಊರಿಗೆ ಹೋಗಬೇಕಾದರೆ ನಮ್ಮ ರೋಡ್ ಮೇಲೆ ಹೋಗಬೇಕು. ನೀವು ರೋಡ್‌ನಲ್ಲಿ ಹೋದರೆ ನನಗೆ ಬಂದ ಭಾಗ್ಯವನು? ನೀವು ನಮ್ಮ ರೋಡ್ ಮೇಲೆ ಹೋಗಲೇಬೇಕು. ಬೆಂಗಳೂರು ಮುಕ್ಕಾಲು ಭಾಗ ಸುತ್ತಿಕೊಂಡು ಹೋದರೂ ಉತ್ತರಹಳ್ಳೀನೇ...

ಉಪಾಧ್ಯಕ್ಷರು : ತಾವು ಚರ್ಚೆ ಮಾಡುತ್ತೀರೋ ಹೇಗೆ? ಎದುರು ಬದುರು ನಿಂತು ಚರ್ಚೆ ಮಾಡಿದರೆ ಹೇಗೆ ?

ಶ್ರೀ ಎಂ. ಶ್ರೀನಿವಾಸ್: ಅವರು ಸುಮ್ಮನೆ ಇರಲಿ. ನಮ್ಮ ನಾಯಕರು ಒಂದೆರಡು ಮಾತು ಹೇಳಿ ಹಗಲು ದರೋಡೆಗಾರರೊಂದಿಗೆ ಹಾಗೂ ಭೂಮಿ ಕಳ್ಳರೊಂದಿಗೆ ಇವರುಗಳ ಶಾಮೀಲಾಗಿದ್ದಾರೆ ಎನ್ನುವ ಮಾತನ್ನು ನೀವು ಹೇಳುವುದು ಸರಿಯಲ್ಲ ಎಂದು ಮಾನ್ಯ ಸಿಂಧ್ಯಾರವರು ಹೇಳಿದರು. ಮಾನ್ಯ ಸಿಂಧ್ಯಾರವರು ಬಹಳ ಚೆನ್ನಾಗಿ ಮಾತನಾಡಿದರು. ಉತ್ತರ ಹಳ್ಳಿ ಸರ್ವೇ ನಂಬರ್ 87ರಲ್ಲಿ 26 ಎಕರೆ 14 ಗಂಟೆ ಜಮೀನು ಭಾರತ್ ಕೋ-ಆಪರೇಟೀವ್ ಗೃಹ ನಿರ್ಮಾಣ ಸಂಘ, 69 ಎಕರೆ ಜಮೀನನ್ನು ಬಲದೊಟ್ ಎಂಬ ಒಬ್ಬ ಮಾರ್ವಾಡಿ; ಆತನ ಜಮೀನನ್ನು ಅಕ್ವಿಸಿಷನ್ ಮಾಡಿಸಿ ತೆಗೆದುಕೊಂಡಿದ್ದಾನೆ., ಅದಕ್ಕೆ ನನ್ನ ತಕರಾರು ಇಲ್ಲ., ತೆಗೆದುಕೊಳ್ಳಲಿ ಆದರೆ 69 ಎಕರೆಯಲ್ಲಿ 26 ಎಕರೆಯನ್ನು ಉಳಿಸಿಕೊಂಡು ರೆವಿನ್ಯೂ ಮಂತ್ರಿಗಳು ಸ್ವಲ್ಪ ಹೇಳುವದನ್ನು ಕೇಳಿಸಿಕೊಳ್ಳಬೇಕು. ಇದು ಕೋಟ್ಯಾಂತರ ರೂಪಾಯಿ ಸಂಸ್ಥೆ. 26 ಎಕರೆ ಸರ್ಕಾರದ ಜಮೀನನ್ನು ಅಕ್ವಿಸಿಷನ್ ಮಾಡಿ, ಆದು ಖರಾಬ್ ಲ್ಯಾಂಡ್ ಅದು ಗ್ರಾಂಟ್ ಆಗಿಲ್ಲ., ಅದನ್ನು ಗ್ರಾಂಟ್ ಮಾಡುವುದಕ್ಕೆ ಆಗುವುದಿಲ್ಲ. ಆದರೂ ಸಹ ಅಕ್ವಿಸಿಷನ್ ಮಾಡಿ, ಸರ್ಕಾರದ ಜಮೀನಿನ, ದುಡ್ಡನ್ನು 35 ಲಕ್ಷ ರೂಪಾಯಿ ಅವರು ಪಡೆದುಕೊಂಡಿದ್ದಾರೆ. ಅದು ಒಂದುಕಾಲು ಲಕ್ಷ ಒಂದು ಎಕರೆಗೆ ಆಗಿದೆ. ಆದನ್ನು ಲೇಔಟ್ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೂ ಸಹ ಒಂದು ಕಾಗದವನ್ನು ಕೊಟ್ಟಿದೆ ಇದುವರೆಗೂ ನಿಲ್ಲಿಸಿಲ್ಲ. ಸರ್ಕಾರದ ಜಮೀನಿನಲ್ಲಿ ಲೇ ಔಟ್ ಮಾಡುತ್ತಿದ್ದಾರೆ. ಸರ್ಕಾರದ ಜಮೀನನ್ನು ಅಕ್ವಿಸಿಷನ್ ಮಾಡಿ ಸರ್ಕಾರಕ್ಕೆ ಅಲ್ಲ ದುಡ್ಡು ಕೊಟ್ಟಿರುವುದು. ಅವನೇ ದುಡ್ಡು ತೆಗೆದುಕೊಂಡಿದ್ದಾನೆ. ಅದು ಸರ್ಕಾರದ ಜಮೀನು ಅವನ ಜಮೀನು ಆಲ್ಲ. ಅದನ್ನು ನೋಡಿದ್ದೀರೋ ಹೋಗಲಿ ನಿಲ್ಲಿಸಿದ್ದೀರೋ? ಅದರದ್ದು ಪಹಣಿ ಎಕ್ಸಟ್ರಾಕ್ಟ್ ಎಲ್ಲಾ ಇಲ್ಲಿ ಇಡುತ್ತಿದ್ದೇನೆ. ಎಲ್ಲಾ ಇದೆ , ಕೊಡುತ್ತೇನೆ.

7: 10 ಪಿ.ಎಂ

ಅದಾದಮೇಲೆ ವಿಶ್ವಭಾರತಿ ಗೃಹ ನಿರ್ಮಾಣ ಸಂಘ ಸ್ವಾಮಿ, ಹಿಂದೆ ದೇವೇಗೌಡರು ಮುಖ್ಯ ಮಂತ್ರಿಗಳಾಗಿದ್ದಂಥ ಕಾಲದಲ್ಲಿ ಬಿ.ಡಿ.ಎ . ಮಂತ್ರಿಗಳಾಗಿ ರೋಷನ್‌ಬೇಗ್‌ರವರು ಇದ್ದಾಗ ಅವರನ್ನು ಕರೆದುಕೊಂಡು, ಕಮಿಷನರ್‌ರವರನ್ನು ಕರೆದುಕೊಂಡು, ಅಧಿಕಾರಿಗಳನ್ನೆಲ್ಲಾ ಕರೆದು ಕೊಂಡು ಆ ಭಾಗಕ್ಕೆ ಹೋದೆ. ಹೋಗಿ ಇನ್‌ಸ್ಪೆಕ್ಷನ್ ಆಗಿ ಡಿ. ಸಿ. ಮತ್ತು ಬಿ.ಡಿ.ಎ.ಯಿಂದ ರಿಪೋರ್ಟ್ ಎಷ್ಟು ಬಂತು. ಹತ್ತೊಂಭತ್ತು ಮುಕ್ಕಾಲು ಎಕರೆ ಜಮೀನನ್ನು ಈ ವಿಶ್ವಭಾರತಿ ಕೋ- ಆಪರೇಟಿವ್ ಸೊಸೈಟಿಯವರು ಒತ್ತುವರಿ ಮಾಡಿದ್ದಾರೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಆಗಿನ ಮಂತ್ರಿಗಳಿಗೆ ಹೇಳಿದೆ. ಅವರು ತೆಗೆದುಕೊಳ್ಳಲಿಲ್ಲ. ಕೊನೆಗೆ ಆಗಿನ ಮುಖ್ಯಮಂತ್ರಿ ದೇವೇಗೌಡರ ಮನೆಗೆ ಹೋಗಿ ಅವರನ್ನು ಕರೆದುಕೊಂಡು, ನಾನು ಬಿ.ಡಿ.ಎ ಒಳಗೆ ಇದ್ದಾಗ ಮಾಡಿದ್ದು, ರಿಂಗ್ ರೋಡಿಗೆ ಅದುವರೆಗೆ ಮಣ್ಣನ್ನು ಸಹ ಹಾಕಿರಲಿಲ್ಲ. ನಾನು

ದೇವೇಗೌಡರನ್ನೇ ಕರೆದುಕೊಂಡು ಹೋಗಿ ತೋರಿಸಿದೆ, ದೇವೇಗೌಡರಿಗೆ ತೋರಿಸಿ, ನಾಲ್ಕು ಅಂತಸ್ತಿನ ಬಿಲ್ಡಿಂಗನ್ನು ಕಟ್ಟಿ ಪ್ಲಾಟ್ ಸಿಸ್ಟಂ ಮಾಡುತ್ತಿದ್ದಾರೆ ಎಂದು ಹೇಳಿದೆ ಅವರೂ ಸಹ ಅದನ್ನು ನೋಡಿದರು. ಇವೋತ್ತು ಸುಮಾರು ಒಂದು ಎಕರೆ ಎರಡು ಕೋಟಿ ರೂಪಾಯಿ ಎಂದರೆ ಸುಮಾರು 38 ಕೋಟಿ ರೂಪಾಯಿ ಆಗುತ್ತದೆ. ಆದರೆ ಇದುವರೆಗೂ ತಾವು ನಿಲ್ಲಿಸಿಲ್ಲ. ಆಯಿತು ಸಿ.ಓ.ಡಿ.ಗೆ ವಹಿಸುತ್ತೇವೆ, ರೆಫರ್ ಮಾಡಿಸುತ್ತೇವೆ ಎಂದರು, ಸಿ.ಓ.ಡಿ ಯದು ಏನೂ ಆಗಲಿಲ್ಲ. ಒಬ್ಬ ಸರ್ಕಲ್ ಇನ್‌ಸ್ಪೆಕ್ಟರ್ ನಮ್ಮ ಮನೆಗೆ ಬಂದು ಎರಡು ಸಾರಿ ಕೇಳಿದರು, ಎರಡೂ ಸರಿಯೂ ನಾನೇ ರೆಕಾರ್ಡ್ ಕೊಟ್ಟೆ, ಏಕೆಂದರೆ ಅಧಿಕಾರಿಗಳು ಸರಿಯಾಗಿ ರೆಕಾರ್ಡ್ ಕೊಡುವುದಿಲ್ಲ. ನಾನೇ ಪಹಣಿ, ಗಿಹಣಿ ಎಲ್ಲಾ ಕೊಟ್ಟೆ. ಅದಾದಮೇಲೆ ಸಿ.ಎ.ಜಾಗ ಬಿ.ಡಿ.ಎ. ಯಿಂದ ಅವರಿಗೆ ಅಪ್ರೂವಲ್ ಆಗಿಲ್ಲ, ಒಂದೇ ಒಂದು ಸ್ಟೇಜ್ ಮಾತ್ರ ಅಪ್ರೂವಲ್ ಆಗಿರುವಂಥದ್ದು, ಇನ್ನು ಮೂರು ಸ್ಟೇಜ್ ಅಪ್ರೂವಲ್ ಆಗದೆಯೆ ಸರ್ಕಾರದ ಜಮೀನನ್ನು ಮಾರುತ್ತಿದ್ದಾರೆ. ಇವೊತ್ತು ಅದು ಸಿ.ಎ.ಜಾಗ. ನಮ್ಮ ಬಿ.ಡಿ.ಎ. ಜಾಗ ಎಂದು ಎಕರೆಗಟ್ಟಲೆ ಪಾರ್ಕ್‌ಗಾಗಿ ಬಿಟ್ಟಿರುವದು, ಸ್ಕೂಲ್ಸ್ ಜಾಗ ಬಿಟ್ಟಿರುವುದು ಏನಿದೆ, ಇವನ್ನೆಲ್ಲಾ ಮಾರಿದ್ದಾರೆ, ಮಾರಿ ಕಟ್ಟುತ್ತಿದ್ದಾರೆ. ರಿಜಿಸ್ಟರ್ ಆಗುತ್ತಾ ಇದೆ. ಇನ್ನೊಂದು ಅದೇ ಕೆಂಗೇರಿಗೆ ಸೇರಿದಂತೆ 50 ಲಕ್ಷ 25 ಲಕ್ಷ ಒಂದು ಕೋಟಿ ಎರಡು ಕೋಟಿ ರೂಪಾಯಿ ಬೆಲೆ ಬಾಳುವಂಥ ಜಮೀನುಗಳು ಇವೆ. ಸರ್ವೆ ನಂ. 22 ರಲ್ಲಿ ಪೂಜಾರಿ ಎಂಬುವವರು ಎರಡು ಎಕರೆಗೆ ಕಾಂಪೌಂಡ್ ಹಾಕುತ್ತಿದ್ದಾರೆ. ಡಿ.ಸಿ.ಹೇಳಿದರು, ನಾವು ಒಂದು ತಡೆ ಹಾಕಿದೆವು, ನಿಲ್ಲಿಸಿದೆವು, ಅವರು ನಿಲ್ಲಿಸಿದರು. ನಿಲ್ಲಿಸಿ ಅದಮೇಲೆ ಮತ್ತೆ ಈಗ ಕಾಂಪೌಂಡ್ ಹಾಕುತ್ತಿದ್ದಾರೆ. ಅದಾದಮೇಲೆ ಬೆಸ್ಟ್ ಕ್ಲಬ್. ಬಿ.ಇ.ಎಂ.ಎಲ್. ಗೃಹ ನಿರ್ಮಾಣ ಸಹಕಾರ ಸಂಘದವರು ಅವರು ಲೇ ಔಟನ್ನು ಮಾಡಿದರು. 18 ಎಕರೆ ಜಮೀನಿನಲ್ಲಿ ಕ್ಲಬ್ ಕಟ್ಟಿ, ಬಿಲ್ಡಿಂಗ್ ಕಟ್ಟಿಸಿ, ರಾತ್ರಿ ಹಗಲು ಆ ಕ್ಲಬ್‌ನೊಳಗೆ ಇಸ್ಪೀಟ್ ಆಡುವಂಥ ಜಾಗವನ್ನು ನಿರ್ಮಾಣ ಮಾಡಿಕೊಂಡು 20 ತಿಂಗಳಾಯಿತು. ಸುಮಾರು ಕಾಗದಗಳನ್ನು ಆ ಬಗ್ಗೆ ಕೊಟ್ಟರೂ ಸಹ ಇವೊತ್ತಿಗೂ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ನಮಗೆ ರಿಪೋರ್ಟ್ ಬಂದಿದೆ, ತಮ್ಮ ಸರ್ಕಾರದಿಂದ ರಿಪೋರ್ಟ್ ತಂದಿದ್ದಾರೆ, ಇವತ್ತಿನವರೆಗೂ ಕ್ರಮ ತೆಗೆದುಕೊಳ್ಳಲಿಲ್ಲ. ನಂತರ ಈ ಪಿಳ್ಳಿಗಾನಹಳ್ಳಿ ಸರ್ವೆ ನಂಬರ್‌ನೊಳಗೆ 125 ಎಕರೆ, 125 ಎಕರೆ ಯೊಳಗೆ 52 ಎಕರೆ ಜಮೀನನ್ನು ರೈತರಿಗೆ ಕೊಟ್ಟಿದ್ದಾರೆ. ಇನ್ನು 73 ಎಕರೆಯನ್ನು ಪ್ರೈವೇಟ್‌ನವರು ಕನ್ವರ್ಷನ್ ಇಲ್ಲ, ಬಿ.ಡಿ.ಎ. ಅಪ್ರೂವಲ್ ಇಲ್ಲ, ಅಲಾಟ್‌ಮೆಂಟ್ ಇಲ್ಲ ಯಾವುದೂ ಇಲ್ಲ, ಬುಲ್ಡೋಜರ್‌ನಲ್ಲಿ ಒಡೆದು ಲೇ ಔಟ್ ಮಾಡುತ್ತಿದ್ದಾರೆ. ಇದು ಆಯಿತು. ವಿಜಯಾ ಬ್ಯಾಂಕ್ ಗೃಹ ನಿರ್ಮಾಣ ಸಹಕಾರಿ ಸಂಘದ ಬಗ್ಗೆ ಹೇಳಬೇಕಾದರೆ, 1ನೇ ಸ್ಟೇಜ್‌ನ ಅರ್ಧ ಭಾಗ ಮಾತ್ರ ಬಿ.ಡಿ.ಎ. ಪ್ಲಾನ್ ಅಪ್ರೂವಲ್ ಆಯಿತು, ಕೋರ್ಟ್‌ನೊಳಗೆ ಇಂಜೆಕ್ಷನ್ ಆರ್ಡರ್ ಇದೆ, ಪೋಲೀಸಿನವರ ಬೆಂಬಲವನ್ನು ತೆಗೆದುಕೊಂಡು ಇವೊತ್ತು ಲೇ ಔಟ್ ಮಾಡುತ್ತಿದ್ದಾರೆ. ಸರ್ಕಾರ ಇವೊತ್ತಿನವರೆಗೂ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ. ಇದೆಷ್ಟು ಪೇಪರ್ಸ್‌ಗಳನ್ನು ಅವರ ಕೈಯಲ್ಲಿ ಕೊಡುತ್ತಿದ್ದೇನೆ. ಇನ್ನೂ ಬೇಕಾದಷ್ಟು ಇದೆ ಅದನ್ನು ತರಿಸಿಕೊಡುತ್ತೇನೆ. ಇದಾದಮೇಲೆ, ಜಯನಗರ 9ನೇ ಬ್ಲಾಕ್ ನಲ್ಲಿ ಒಂದು ಎಕರೆ ಬಿ.ಡಿ.ಎ. ಜಮೀನಿಗೆ ಕಾಂಪೌಡ್ ಹಾಕಿದ್ದಾರೆ. ನಾನು ಇದನ್ನು ಏಕೆ ಹೇಳುತ್ತೇನೆ ಎಂದರೆ ಬಿ.ಡಿ.ಎ ಯೂ ಉದ್ಧಾರ ಆಗಬೇಕು, ಸರ್ಕಾರ ಉದ್ಧಾರ

ಆಗಬೇಕು ಎನ್ನುವ ವಿಚಾರದಲ್ಲಿ ಹೇಳುತ್ತಿದ್ದೇನೆ. ಸ್ವಲ್ಪ ದಯವಿಟ್ಟು ಕೇಳಿ ಹೇಳುತ್ತಿದ್ದೇನೆ, ಈ ಬಗ್ಗೆ ಸುಮಾರು 20 ತಿಂಗಳಿಂದ ಕಾಗದಗಳನ್ನು ಕೊಟ್ಟಿದ್ದೇನೆ, ಅದರೂ ಆಗಲಿಲ್ಲ. ಇದನ್ನು ನಾನು ಪ್ರಶ್ನೆ ಮಾಡುತ್ತಾ ಇರುವಂಥದ್ದು. ಒಂದುವೇಳೆ ಅದು ಆಗಿದ್ದರೆ ನಾನು ಇಲ್ಲಿ ಪ್ರಶ್ನೆ ಮಾಡುತ್ತಲೇ ಇರಲಿಲ್ಲ. ಇವೊತ್ತು ಬೆಂಗಳೂರು ಸುತ್ತಮುತ್ತ ಸರ್ಕಾರದ ಜಮೀನು ಇದೆ. ಸರ್ಕಾರದ ಜಮೀನನ್ನು ನಾವು ತೆಗೆದುಕೊಂಡು ಹರಾಜು ಹಾಕುತ್ತೇವೆ ಎಂದು ನೀವು ಹೇಳುತ್ತಿರೋ? ನೀವು ಹೇಗೆ ಹರಾಜು ಹಾಕುತ್ತೀರಿ? ಏಕೆ? 82 ಸಾವಿರ ಬಿ.ಡಿ. ಎ ನಲ್ಲಿ ಅಪ್ಲಿಕೇಷನ್ಸ್ ಇದೆ, ಅದರಲ್ಲಿ 20 ಸಾವಿರ ಅರ್ಜಿಗಳಿಗೆ ನೀವು ದುಡ್ಡು ವಾಪಸ್ಸು ಕೊಟ್ಟಿದ್ದೀರಾ ಇನ್ನೂ ಸುಮಾರು 38 ಕೋಟಿ ರೂಪಾಯಿ ಸಾರ್ವಜನಿಕರ ಹಣ ಇದೆ. ಸರ್ಕಾರದ ಜಮೀನನ್ನು ನೀವು ಹರಾಜು ಹಾಕುವುದಕ್ಕೆ ಬದಲಾಗಿ, ನೀವು ಬಿ.ಡಿ.ಎ.ಗೆ ಕೊಟ್ಟು ಲೇ ಔಟ್ ಮಾಡಿ ಅವರಿಗೆ ನೀವು ಸೈಟುಗಳನ್ನು ಕೊಡಬಹುದು, ಅದನ್ನು ಮಾಡುತ್ತಾ ಇಲ್ಲ, ಏಕೆ ಮಾಡುತ್ತಾ ಇಲ್ಲ.

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) : ಈ ಸರ್ಕಾರದ ವಶದಲ್ಲಿರತಕ್ಕಂಥ ಜಮೀನಿನಲ್ಲಿ ಬಿ.ಡಿ.ಎ.ಗೂ ಕೂಡ ನಾವು ಕೊಟ್ಟಿದ್ದೇವೆ. ಸರ್ಕಾರದ ಸಂಸ್ಥೆಗಳಿಗೆ ಕೊಟ್ಟಿದ್ದೇವೆ, ಆದರೆ ಇವರು ಹೇಳಿದಂತೆ ಬೇರೆ ಯಾರಿಗೂ ನಾವು ಕೊಟ್ಟಿಲ್ಲ.

ಶ್ರೀ ಎಂ . ಶ್ರೀನಿವಾಸ್ : ಇರಲಿ ಬಿಡಿ ನನಗೇನಾಗಬೇಕು, ನಾನು ಹೇಳುವದನ್ನು ದಯವಿಟ್ಟು ಸ್ವಲ್ಪ ಕೇಳಿ, ಇದರಿಂದ ನಿಮ್ಮ ಸರ್ಕಾರಕ್ಕೆ ಹಣ ಬರುವಂಥದ್ದು, ಇದನ್ನು ನಾನು ಹೇಳತಕ್ಕಂಥದ್ದು ಶಿವರಾಮೇಗೌಡರೇ ಈ ದೇಶದಲ್ಲಿ ಯಾರೂ ಮಾಡಿಲ್ಲ ಅಂತಹ ಒಳ್ಳೆಯ ಕೆಲಸವನ್ನು ಬಿ.ಡಿ.ಎ. ನಲ್ಲಿ ರೈತರಿಗೆ ನಾನು ಮಾಡಿಕೊಟ್ಟಿದ್ದೇನೆ. ರಾಮಕೃಷ್ಣ ಹೆಗಡೆಯವರ ಸರ್ಕಾರ ಇದ್ದಾಗ ಎಕರೆಗೆ ಒಂದು ಸೈಟನ್ನು ಕೊಟಿದ್ದಕ್ಕೆ ಇವೊತ್ತು ನೀವು ಅಷ್ಟು ಜನ ಗೆದ್ದಿರುವಂತದ್ದು, ಇವೊತ್ತು ಬಿ.ಡಿ.ಎ.ಗೆ ಸರಿಯಾದಂಥ ಅಧಿಕಾರಿಗಳನ್ನು ಹಾಕಿ ನಿಮ್ಮವರನ್ನೇ ತಾರೀಖಿನಂದು ಸಭೆ ಕರೆದಿದ್ದಾರಲ್ಲಾ...........

ಶ್ರೀ ಪಿ.ಜಿ. ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೆ, ಶ್ರೀ ನಿವಾಸ್‌ರವರಿಗೆ ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಸರ್ಕಾರ ಬೆಂಗಳೂರಿನ ಇತಿಹಾಸದಲ್ಲಿ ಸ್ವಾತಂತ್ರ್ಯ ಬಂದಮೇಲೆ ಮೊದಲನೇಸಾರಿಗೆ ರೆವಿನ್ಯೂ ಲ್ಯಾಂಡ್, ಕಾರ್ಪೊರೇಷನ್ ಲ್ಯಾಂಡ್, ಬಿ.ಡಿ.ಎ. ಲ್ಯಾಂಡ್ ಇದನ್ನೆಲ್ಲಾ ಈ ದರೋಡೆಕೋರರು ಅಥವಾ ಈ ನೆಲಗಳ್ಳರು ಮಾರಿದ್ದಾರೆ ಅವರನ್ನು ಪತ್ತೆ ಮಾಡಬೇಕೆಂದು ಹೇಳಿ ಒಬ್ಬ ಡಿ.ಐ.ಜಿ ಯವರನ್ನು ನೇಮಕ ಮಾಡಿ ಅವರ ಕೆಳಗಡೆ ಇಬ್ಬರು ಎಸ್.ಪಿಗಳನ್ನು ನೇಮಕ ಮಾಡಿ ಸ್ಟಾಫನ್ನು ಕೊಟ್ಟು ಕ್ರಮ ಕೈಗೊಂಡಿದ್ದೇವೆ. ಮುನಿಸಿಪಲ್ ಅಕ್ಟ್‌ನಲ್ಲಿ ಪ್ರಾವಿಷನ್ ಇತ್ತು, ಮಾಡಿರಲಿಲ್ಲ , ಈಗ ಆ ಪ್ರಾವಿಷನ್ ಅನ್ನು ಕಾರ್ಯಗತ ಮಾಡಿ ಟಾಸ್ಕ್‌ಫೋರ್ಸ್ ಎಂದು ಮಾಡಿದ್ದೇವೆ, ಇವರು ಅದನ್ನು ಹೇಳುವುದೇ ಇಲ್ಲ ನಾವು ಪತ್ತೆ ಮಾಡಿಸುತ್ತೇವೆ. This is the only Government which has done it. No other Government had done it.

ಶ್ರೀ ಎಂ. ಶ್ರಿನಿವಾಸ್ : ಆ ಡಿ.ಐ.ಜಿ.ಯವರನ್ನು ಹಾಕಿದ್ದುದು ನೀವಲ್ಲ, ಹೇಳುತ್ತೇನೆ ಕೇಳಿ, ದೇವೇಗೌಡರು ಜೊತೆಯೊಳಗೆ ಕುಳಿತುಕೊಂಡು ಆ ಜಮೀನುಗಳನ್ನೆಲ್ಲಾ ನೋಡಿದಾಗ ಶ್ರೀನಿವಾಸ್‌ರವರು ಹೇಳುವುದು ನಿಜಾಂತ ಇದೆ. ಒಬ್ಬರು ಡಿ.ಐ.ಜಿ.ಯವರನ್ನು ನೇಮಕ ಮಾಡಬೇಕೆಂದು ನಾನು ಹೇಳಿದ ಐಡಿಯಾವನ್ನೇ ಅವರು ಮಾಡಿದ್ದುದು. ನೀವು ಒಳ್ಳೆಯದನ್ನು ಮಾಡಿರುವುದನ್ನು ಇಲ್ಲವೆಂದು ಹೇಳುವುದಿಲ್ಲ. ನಾನು ಹೇಳುವಂಥಾದ್ದು ಇವತ್ತು ನಿಮ್ಮ ಸರ್ಕಾರ....

ಶ್ರೀ ರಮೇಶ್ ಸಿ. ಜಿಗಜಿಣಗಿ : ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಿರುವುದು ಅವರ ಕಣ್ಣಿಗೆ ಕಾಣುವುದಿಲ್ಲ. ಸುಮಾರು 1051 ಎಕರೆಗಳನ್ನು ವಶಪಡಿಸಿಕೊಂಡಿರುವುದನ್ನು ಅವರು ಹೇಳುವುದಿಲ್ಲ. ಅದನ್ನೂ ಹೇಳಿ.

ಶ್ರೀ ಎಂ . ಶ್ರೀನಿವಾಸ್ : ನಾನು ಏಕೆ ಈ ಮಾತನ್ನು ಹೇಳುತ್ತಿದ್ದೆನೆಂದರೆ, ಇವತ್ತು ಬೆಂಗಳೂರಿನ ಸುತ್ತ ಇದೆಲ್ಲಾ ನಡೆಯುತ್ತಿದೆ. 60 ಸಾವಿರ ಜನರ. ದುಡ್ಡು ಸುಮಾರು 10ವರ್ಷಗಳಿಂದ ಅವರ ಹತ್ತಿರವಿದೆ. ಅವರಿಗೆ ಸೈಟ್ ಮಾಡುವುದಕ್ಕೆ ಇವತ್ತು 20 ತಿಂಗಳುಗಳು ಆಗಿದೆ. ಎಷ್ಟು ಎಕರೆಯನ್ನು ಅಕ್ವಿಸಿಷನ್ ಮಾಡಿದ್ದಿರಾ ? 1989 ರಿಂದ ಇವತ್ತಿನವರೆಗೆ 1552 ಸೈಟ್‌ಗಳನ್ನು ಕೊಟ್ಟಿದ್ದೀರಷ್ಟೆ, 8 ವರ್ಷಗಳಿಂದ 36 ಕೋಟಿ ರೂಪಾಯಿಗಳ ಲಾಸ್ ಬಿ.ಡಿ.ಎ.ಗೆ ಆಗಿದೆ. ಏನು ಕಣ್ಣು ಮುಚ್ಚಿಕೊಂಡಿದ್ದೀರಾ ? ಏನು ಸರ್ಕಾರದ ಹಿಡಿತದಲ್ಲಿ ಇದೆ. ನಿಮ್ಮ ಹಿಡಿತದಲ್ಲೇ ಏಕೆ ಒಬ್ಬ ಛೇರ್ಮನ್ ಅನ್ನು ಹಾಕಿ ಒಬ್ಬ ಮೆಂಬರ್ ಅನ್ನು ನಿಮ್ಮವರನ್ನೇ ಹಾಕಿ ನಿಮ್ಮ ಹಿಡಿತದಲ್ಲೇ ಏಕೆ ನಡೆಸಬಾರದು ? 20 ತಿಂಗಳಾಯಿತು ಇವತ್ತಿಗೂ ನಿಮಗೆ ಛೇರ್ಮನ ಮಾಡುವುದಕ್ಕೆ ಆಗಲಿಲ್ಲ. ಇನ್ನು ನಿಮಗೆ ನೂರಾರು ಎಕರೆ ಕಾಂಪೌಂಡ್ ಹಾಕಿರುವುದನ್ನು ತಡೆಯುವುದಕ್ಕೆ ಆಗುತ್ತಾ ಇಲ್ಲ, ಅದನ್ನು ತಡೆದು ನೀವು ಸರ್ಕಾರಕ್ಕೆ ತೆಗೆದುಕೊಳ್ಳಿ, ಅದಕ್ಕೆ ನಾವು ಶಹಭಾಸ್‌ಗಿರಿಯನ್ನು ಹೇಳುತ್ತೇವೆ. ನಿಮ್ಮ ಅಧಿಕಾರಿಗಳು ಏನೋ ಬರೆಯುತ್ತಾರೆ. ಈ ಜಮೀನಿನಲ್ಲಿ ಅವನು ಇದ್ದಾನೆ, ನಾವು ಹೇಗೆ ಬಿಡಿಸುವುದು, ಆ ಸೊಸೈಟಿಯವನಿಗೆ ಕೊಟ್ಟು ಬಿಡೋಣ ಎಂದು ಹೇಳುತ್ತೀರಿ ಇವತ್ತು 26 ಎಕರೆಗಳನ್ನು ಲೇ ಔಟ್ ಮಾಡಿರುವುದನ್ನು ನೋಡಲು ಮಾನ್ಯ ನಂಜೇಗೌಡರನ್ನು ಕರೆದುಕೊಂಡು ಹೋಗಿದ್ದೆ. ಇದು ಎಷ್ಟು ಅನ್ಯಾಯವೆಂದರೆ ಇದನ್ನು ಅವರು ನೋಡಿದ್ದಾರೆ. ನಾನು ಹೇಳುವುದೆನೆಂದರೆ ಸರ್ಕಾರ ಏಕೆ ಇದನ್ನು ಉಳಿಸಿಕೊಳ್ಳಬಾರದು. ? ಯಾರ ಕೆಲಸವನ್ನು ಯಾರಿಗೆ ಕೊಡಬೇಕೋ ಅವರಿಗೆ ಕೊಡುತ್ತಾ ಇಲ್ಲ. ಡಾಕ್ಟರ್ ಅನ್ನು ತೆಗೆದುಕೊಂಡು ಹೋಗಿ ಇಂಜಿನಿಯರ್ ಮಾಡುತ್ತೀರಿ: ಇಂಜೀನಿಯರ್ ಅನ್ನು ತೆಗೆದುಕೊಂಡು ಹೋಗಿ ಡಾಕ್ಟರ್ ಮಾಡುತ್ತೀರಿ ; ಇದು ನೀವು ಮಾಡಿರುವಂತಹ ಕೆಲಸ. ಲಕ್ಷಣರಾವ್ ಸಮಿತಿಯವರು ಬೆಂಗಳೂರಿನಲ್ಲಿ ಅಂತ್‌ರ್ ಜಲ ಕಡಿಮೆಯಾಗುತ್ತಿದೆ. ಎಂದು ವರದಿಯನ್ನು ಕೊಟ್ಟರು ಇದು ಬಹಳ ಮುಖ್ಯವಾದಂಥದ್ದು, ಅಂತರ್ ಜಲ ಕಡಿಮೆಯಾಗಿರುವುದರಿಂದ ಕೆರೆಗಳನ್ನು ಉಳಿಸಿಕೊಳ್ಳಬೇಕು : ಎಷ್ಟು ಕೆರೆಗಳನ್ನು ಉಳಿಸಿಕೊಳ್ಳಬೇಕೆಂಬುದು ಬಹಳ ಮುಖ್ಯ . ನೀವು ಇವತ್ತು 25 - 50 ಎಕರೆಗಳನ್ನು ಬೆಂಗಳೂರಿನಲ್ಲಿ ಇಟ್ಟುಕೊಂಡು ಮಾಡಿಕೊಂಡರೆ ಪರವಾಗಿಲ್ಲ. ನಾನು ಅದನ್ನು ಹೇಳುವುದು. 350 ಎಕರೆ ಕೆರೆಯಬಗ್ಗೆ ಮೂರು ದಿವಸದಿಂದ ಪೇಪರ್‌ನಲ್ಲಿ

ಬರುತ್ತಾ ಇದೆ. ನಿಮ್ಮ ಅಧಿಕಾರಿಗಳು ಫಾರೆಸ್ಟ್‌ನವರಿಗೆ ಕೊಟ್ಟಿದ್ದರೆ, ಫಾರೆಸ್ಟ್‌ನವರು ಗಿಡಗಳನ್ನು ನೆಡಲಿ ಆದರೆ ನೀರಾವರಿಗೆ ತೆಗೆದುಕೊಂಡು, ನೀರಾವರಿ ಇಂಜಿನಿಯರ್‌ಗಳು ಕೆಲಸ ಮಾಡುವುದು . ನಾನು ನಿನ್ನೆ ಕಾರ್ಪೊರೇಷನ್‌ರವರನ್ನು ಕರೆದುಕೊಂಡು ಅಲ್ಲಿ ನಿಂತು ಕೊಂಡು ಬಿ.ಟಿ.ಎಂ ಲೇಔಟ್‌ನಲ್ಲಿ ಮುಳುಗಿರುವಂತಹ ಮನೆಗಳನ್ನು ಹೂಳು ಎತ್ತಿಸಿದ್ದೇವೆ. ದಯಮಾಡಿ, ನೀವು ಫಾರೆಸ್ಟ್‌ನವರಿಗೆ ಗಿಡಗಳನ್ನು ನಡುವುದಕ್ಕೆ ಕೊಡಿ; ಆದರೆ ನೀರಾವರಿಗೆ ಏನು ಇದೆಯೋ ಅದನ್ನು ನೀರಾವರಿ ಇಲಾಖೆಯವರಿಗೆ ಕೊಡಿ, ಅಲ್ಲಿ ಇಂಜಿನೀಯರ್‌ಗಳು ಬೇರೆಯವರು ಇದ್ದಾರೆ. ಅಲ್ಲಿ ನಮ್ಮ ಕೆಲಸವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ : ಈ ಸರ್ಕಾರ ಹೋಗುತ್ತದೆಂದರೆ, ಅವರಿಗೆ ಏಕೆ ಸಲಹೆ ಕೊಡುತ್ತಿರಿ ?

ಉಪಾಧ್ಯಕ್ಷರು : ಮಾನ್ಯ ಶ್ರೀನಿವಾಸ್‌ರವರೇ , ತಾವು ಬೇಗ ಮುಗಿಸಿ.

ಶ್ರೀ ಎಂ. ಶ್ರೀನಿವಾಸ್ ; ಇನ್ನು ಕೊನೆಯದಾಗಿ ಎರಡು ಮಾತನ್ನು ಹೇಳುತ್ತೇನೆ. ನಿನ್ನೆ ಸಾಯಂಕಾಲ ಪತ್ರಿಕೆಯಲ್ಲಿ ಓದಿದೆ. ಮಾನ್ಯ ಬಚ್ಚೇಗೌಡರು ಬಿ.ಡಿ.ಎ ಯಲ್ಲಿದ್ದಾಗ ಶ್ರೀನಿವಾಸ್‌ರವರು ಏನೇನು ಮಾಡಿದ್ದಾರೆಂಬುದು ಗೊತ್ತು ಎಂದು ಹೇಳಿದ್ದಾರೆ. ನಾನು ಏನೂ ಮಾಡಿಲ್ಲ ಹಾಗೆ ಏನಾದರೂ ಮಾಡಿದ್ದರೆ ಅದರ ರೆಕಾರ್ಡ್ ಕೊಟ್ಟರೆ, ನಾನು ಈ ಸಭೆಯಲ್ಲಿ ತಪ್ಪು ಒಪ್ಪಿಕೊಳ್ಳುತ್ತೇನೆ. ನಾನು ಬಿ.ಡಿ.ಎ ಯಲ್ಲಿದ್ದೆ, ಆಗ ಅವರು ಏನೋ ಕೆಲಸ ಮಾಡಿಕೊಡಿ ಎಂದು ನನ್ನ ಹಿತ್ತಿರ ಬರುತ್ತಿದ್ದರೇ ಹೊರತು, ನಾನು ಅವರ ಹತ್ತಿರ ಹೋಗುತ್ತಾ ಇರಲಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಈ ಸಂದರ್ಭದಲ್ಲಿ ಬಿ.ಡಿ.ಎ ಯಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ಗೊತ್ತಿಲ್ಲದ ಹಾಗೆ, ಸಿ.ಎ.ಜಾಗಗಳನ್ನು ಒಂದೊಂದು ಎಕರೆಯಂತೆ ಸ್ಕೂಲ್‌ಗಳಿಗೆ ಕೊಡುತ್ತಾ ಇದ್ದಾರೆ. ತಮಗೆ ಬೇಕಾದರೆ ರೆಕಾರ್ಡ್‌ಗಳನ್ನು ಕೊಡುತ್ತೇನೆ. ಇವತ್ತು ಕೋಟ್ಯಾಂತರ ರೂಪಾಯಿಗಳು ಹಾಳಾಗಿದೆ. ಅದನ್ನು ಮಾನ್ಯ ವಿರೋಧಪಕ್ಷದ ನಾಯಕರು ಜಮೀನಿನ ವಿಷಯದಲ್ಲಿ ಹೇಳಿರುವಂಥಾದ್ದು ಒಂದೊಂದು ವಿಷಯವೂ ಸತ್ಯವಾಗಿದೆ. ಅವ್ಯವಹಾರ ನಡೆದಿದೆ ಎಂಬುದು ನಿಜಾಂಶವಾಗಿದೆ ಇನ್ನು ರಾಜಕಾರಣಿಗಳಿಗೆ ಸಹ ಮಾನ್ಯ ಶಿವರಾಮೇಗೌಡರಿಗೆ ಬಿ.ಡಿ.ಎ. ಸೈಟ್ ಸಿಕ್ಕಿದೆಯಂತೆ, ಸಿಕ್ಕಿದ್ದರೆ ಅದು ಸಂತೋಷದ ವಿಷಯ. ತಾವು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಂ.ಪಿ.ಪ್ರಕಾಶ್ : (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಯವರು): ಮಾನ್ಯ ಉಪಾಧ್ಯಕ್ಷರೆ, ಈಗ ಅನೇಕ ಗೆಳೆಯರು ಪ್ರಸ್ತಾಪಿಸಿದಂತೆ ಈಗ ತರಾತುರಿಯಲ್ಲಿ ಮತ್ತು ಯಾವುದೇ ಉದ್ದೇಶವಿಲ್ಲದೆ ಯಾವುದಾದರೂ ಒಂದು ಗೊತ್ತುವಳಿಯನ್ನು ತಂದರೆ, ಅಥವಾ ಯಾವುದೇ ಒಂದು ಕಾರ್ಯವನ್ನು ಮಾಡಿದರೆ ಅದು ವಿಫಲತೆಯನ್ನು ಅನುಭವಿಸುತ್ತದೆ, ಗೊಂದಲ, ಅಸ್ಪಷ್ಟತೆಯನ್ನು ಉಂಟು ಮಾಡುತ್ತದೆ. ಈಗಾಗಲೇ

ಮಾನ್ಯ ನಾಗೇಗೌಡರು ಪ್ರಸ್ತಾಪಿಸಿದಂತೆ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಬೇಕೆನ್ನುವಂತಹ ಇರದೆ ಅಥವಾ ಉದ್ದೇಶ ಅವರಿಗೆ ಇದ್ದಿದ್ದರೆ, ಪ್ರಾಯಶಃ ಅದು ನಡವಳಿಕೆಯ ಪ್ರಕಾರ ಆಗಬಹುದಾಗಿತ್ತೋ ಏನೋ, ಆದರೆ ಯಾವುದೇ ಒಂದು ಚರ್ಚೆಯ ಸಂದರ್ಭದಲ್ಲಿ ಅವಕಾಶ ಸಿಗಲಿಲ್ಲವೆನ್ನುವಂತಹ ಸಂದರ್ಭದಲ್ಲಿ ಅವರು ಕೆಲವೊಂದು ವಿಷಯಗಳ ಮೂಲಕ ಸರ್ಕಾರದ ಬಗ್ಗೆ ಮುನಿಸು ಬಂದು ಈ ಕೊನೆಯ ಅಸ್ತ್ರ ಉಪಯೋಗಿಸುವಂತಹ ರೀತಿಯಲ್ಲಿ ಮಧ್ಯಂತರ ನಡವಳಿಕೆಯಲ್ಲಿ ಈ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಿದರು. ಅವಿಶ್ವಾಸ ಗೊತ್ತುವಳಿ ಎನ್ನುವಂಥಾದ್ದು ದೊಡ್ಡ ಬ್ರಹ್ಮಾಸ್ತ್ರ, ಇದನ್ನು ಉಪಯೋಗಿಸುವಂತಹ ರೀತಿಯಲ್ಲಿ ಈಗ ಅವರು ಯಾವುದನ್ನು ಬಯಲು ಮಾಡಿದರು ಎನ್ನುವುದನ್ನು ತಾವು ಯೋಚನೆ ಮಾಡಬೇಕಾಗುತ್ತದೆ. ಸರ್ಕಾರ ಇಂತಹ ಕೆಲಸವನ್ನು ನಿರ್ವೀರ್ಯತೆ ಮಾಡಿದೆ ಎನ್ನುವುದು ಆಗಿದ್ದರೆ, ಭ್ರಷ್ಟಚಾರ ಎನ್ನುವಂತಹ ವಿಷಯವನ್ನೇ ಒಂದು ಬಹಳ ಮುಖ್ಯವಾದಂತಹ ವಿಷಯವನ್ನಾಗಿ ಪ್ರಸ್ತಾಪ ಮಾಡಿದ್ದರೆ, ಸರ್ಕಾರವನ್ನು ಹಿಂದೆ ನಡೆಸಿರುವಂಥದ್ದು ಅಗತ್ಯವಿದೆ. ಯಾವುದಾದರೂ ಒಂದು ಉದ್ದೇಶವಿದ್ದಾಗ, ಅವಿಶ್ವಾಸ ಗೊತ್ತುವಳಿಯನ್ನು ಮುಂದೆ ತರುವುದರ ಮೂಲಕವಾಗಿ ಕಾಂಗ್ರೆಸ್ ಪಕ್ಷದವರು ಮಾಡಬೇಕೆನಿಸುವ ಅಥವಾ ಸಾಧಿಸಬೇಕಾಗಿರುವಂತಹ ಉದ್ದೇಶ ಏನು ? ರಾಜಕೀಯದಲ್ಲಿ ತನ್ನದೇ ಆದಂತಹ ತಂತ್ರಗಳು ತನ್ನದೇ ಆದಂತಹ ಉದ್ದೇಶಗಳು ಇರುತ್ತವೆ. ಇಲ್ಲಿ ತಕ್ಷಣದಲ್ಲಿ ಯಾವುದೇ ಚುನಾವಣೆಯನ್ನು ಮಾಡುವಂಥಾದ್ದು ಇಲ್ಲ. ಅಥವಾ ಈ ಸರ್ಕಾರವನ್ನು ತೆಗೆದು ಮತ್ತೊಂದು ಸರ್ಕಾರದ ಜೊತೆಗೆ ಕೈಗೂಡಿಸಿಕೊಳುತ್ತೇವೆನ್ನುವಂತಹದ್ದು ಆಗಿದ್ದರೆ, ಅವರಿಗೆ ಬಹುಮತ ವಿದೆಯೋ ಎಂಬ ಪ್ರಶ್ನೆ ಬರುತ್ತದೆ. ಹಿಂದೆ ಅನೇಕ ಬೇಡಿಕೆಗಳು ಬಂದಂತಹ ಸಂದರ್ಭದಲ್ಲಿ, ನಿಗಧಿತ ವೇಳೆಯಲ್ಲಿ ನಮ್ಮ ಕಾರ್ಯಕ್ರಮಗಳಿಗೆ ಅನುಗುಣವಾದಂತಹ ರೀತಿಯಲ್ಲಿ ಮಾಡುವುದಾದರೆ ಕ್ರಿಯಾ ಲೋಪವನ್ನು ಎತ್ತುವ ಮೂಲಕವಾಗಿ ನಮ್ಮ ಡಿಮಾಂಡ್‌ಗಳು ಸಂದರ್ಭದಲ್ಲಿ ಯಾವುದನ್ನು ಚರ್ಚೆ ಮಾಡಬೇಕೋ, ಆ ಚರ್ಚೆಯನ್ನು ಅವಿಶ್ವಾಸ ಗೊತ್ತುವಳಿ ಮೂಲಕವಾಗಿ ಚರ್ಚೆ ಮಾಡುವಂಥಾದ್ದು ನಮ್ಮ ಸತ್ ಸಂಪ್ರದಾಯಕ್ಕೆ ಸರಿಯಾದಂಥದ್ದು ಅಲ್ಲ. ಅವರು ಇದನ್ನು ಅವಿಶ್ವಾಸ ಗೊತ್ತುವಳಿಯಲ್ಲಿ ತುಂಬಬೇಕಾಗಿರುವಂತಹ ಶೂನ್ಯತೆ ಯಾವುದು? ಕಾರಣಕ್ಕಾಗಿ ಈ ವಿಚಾರಗಳ ಬಗ್ಗೆ ತರಾತುರಿಯಾಗಿ ನಿರ್ಣಯ ವನ್ನು ಮಾಡಿಕೊಳ್ಳ ತಕ್ಕಂಥದ್ದು ಏನು ಇದೆ ? ಇದಕ್ಕೆ ಒಂದು ತಾತ್ಕಾಲಿಕವಾಗಿರತಕ್ಕಂಥ ರಾಜಕೀಯ ಲಾಭ ಅಥವಾ ಪ್ರಚಾರ ಸಿಗಬೇಕೇ ವಿನಹ, ಅದು ದೂರ ದೃಷ್ಟಿಯಿಂದ ದೊಡ್ಡದಾಂತಹ ಅಪಾಯವನ್ನು ಸೃಷ್ಟಿ ಮಾಡುತ್ತದೆ. ಇಲ್ಲಿ ಬಿ.ಜೆ.ಪಿ ಯವರು ಕಾಂಗ್ರೆಸ್‌ನವರು ಒಂದಾಗಬಾರದೆಂಬ ಮಾತನ್ನು ಹೇಳುವುದಿಲ್ಲ. ಯಾರು ಒಂದಾಗಬೇಕು ಯಾರ ಬೆಂಬಲವನ್ನು ಯಾರು ಪಡೆಯ ಬೇಕೆನ್ನುವಂಥಾದ್ದು ಒಂದು ಸೈದ್ಧಾಂತಿಕ ತತ್ವದ ತಳಹದಿಯಮೇಲೆ ಆಗಿರುವಂಥದ್ದೇ ವಿನಹ, ಅದು ಸಮಯಸಾಧಕನದ ರೀತಿಯಲ್ಲಿ ಆಗಬಾರದು. ಇದು ನಮ್ಮ ದೃಷ್ಟಿ, ಆ ಕಾರಣಕ್ಕಾಗಿ ಅವಿಶ್ವಾಸ ಗೊತ್ತುವಳಿಯನ್ನು....

ಶ್ರೀಮತಿ ಪ್ರಮೀಳಾ ನೇಸರ್ಗಿ : ಸಮಯ ಸಾಧಕದನ.......

ಶ್ರೀ ಎಂ. ಪಿ.ಪ್ರಕಾಶ್ : ಅವೆಲ್ಲವನ್ನೂ ಹೇಳುತ್ತೇನೆ. ಇವತ್ತು ಮಾನ್ಯ ಜೆ.ಹೆಚ್. ಪಟೇಲ್ ರವರ ಸರ್ಕಾರದ ವಿರುದ್ಧವಾಗಿ, ನೀವು ತಂದಿರುವಂತಹ ಗೊತ್ತುವಳಿಯಲ್ಲಿ ಯಾವ ವಿಷಯಗಳನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಈ ಗೊತ್ತುವಳಿಯ ಬಗ್ಗೆ ಈಗಾಗಲೇ ತಮ್ಮ ಗೆಳೆಯರು. ಮಾತನಾಡಿದ್ದಾರೆ. ಇದು ಕೇವಲ ಅಧಿಕಾರಿ ಎನ್ನುವಂಥಾದ್ದು, ಎಂತಹ ವ್ಯಾಮೋಹವನ್ನು ಸೃಷ್ಟಿ ಮಾಡುತ್ತರೆಂದರೆ, ಅದು ಅವರಲ್ಲಿ ಅನೇಕವಾದಂತಹ ಭಾವನೆಗಳನ್ನು ಆಸೆಗಳನ್ನು ಸೃಷ್ಟಿಮಾಡುತ್ತದೆ. ಅವರು ತಮಷ್ಟಕ್ಕೆ ತಾವೇ ಅಧಿಕಾರಕ್ಕೆ ಬರಲು ಸಾಧ್ಯವಾಗಲಾರದಂತಹ ಸಂದರ್ಭದಲ್ಲಿ 11 ದಿವಸಗಳ ಕಾಲ ಪ್ರಧಾನಮಂತ್ರಿಯಾದರೂ ಚಿಂತೆ ಇಲ್ಲವೆಂದು ಹೇಳಿ ಆಸೆ ಪಡುವಂತಹ ವಿಷಯವೇನು ಇದೆ. ಇದು ತಮ್ಮ 11 ದಿವಸಗಳಕಾಲ ಅಧಿಕಾರ ಮಾಡಲು ಬಯಸಿದಂತಹ ಪಕ್ಷ , ಎಷ್ಟು ಸಮಯಸಾಧಕತನವನ್ನು ತೋರಿಸಿದೆ ಎಂಬುದು ಮುಖ್ಯವಾದಂತಹ ಪ್ರಶ್ನೆ. ಆದುದರಿಂದ ಇಲ್ಲಿ ಅವಿಶ್ವಾಸ ಗೊತ್ತುವಳಿಯನ್ನು ಮಾಡುವಂತಹ ಸಂದರ್ಭದಲ್ಲಿ ನಮ್ಮ ಸರ್ಕಾರ ಮಾಡಿದಂತಹ ಸಾಧನೆಗಳು ಏನು ಎಂದು ಆ ಜನಗಳು ಜಾಗೃತರಾಗಿದ್ದಾಗ ಮಾತ್ರ ನಮ್ಮ ಸರ್ಕಾರವನ್ನಾಗಲಿ ನಮ್ಮ ಸಮಾಜವನ್ನಾಗಲಿ ಪ್ರಭುತ್ವವನ್ನಾಗಿ ಇಟ್ಟು ಕೊಂಡು ಹೋಗಲು ಸಾಧ್ಯವಾಗುತ್ತದೆ. ಅಪ್ರಭುತ್ವವಾದಂತಹ ಸರ್ಕಾರ ಮತ್ತು ಸಮಾಜದಲ್ಲಿ ಎಲ್ಲಾ ಒಳ್ಳೆಯತನವನ್ನು ನಿರೀಕ್ಷಣೆ ಮಾಡುವಂಥಾದ್ದು ಎಷ್ಟು ತಪ್ಪು ಎನ್ನುವುದಕ್ಕಾಗಿ ಅಬ್ರಹ್ಯಾಂ ಲಿಂಕನ್‌ರವರು ಒಂದು ಸುಂದರವಾದ ಮಾತನ್ನು ಹೇಳಿದ್ದಾರೆ. "I have been selected to fill an important office, for a brief period. In your eyes invested with an influence which will soon pass away. But should my administration prove to be very wicked or what is more probable, a very foolish one. If you, the people , are true to yourselves and tothe constitution, there is but little harm that I can do, Thank God" ಎಂದು ಹೇಳಿದ್ದಾರೆ. ಆದುದರಿಂದ ಜನರು ಎಲ್ಲಿ ಒಂದು ಪ್ರಭುತ್ವವಾದಂತಹ ನಿಲುವನ್ನು ತೆಗೆದುಕೊಳ್ಳುತ್ತೇವೆ. ಆ ಪ್ರಭುತ್ವದ ಮೂಲಕವಾಗಿ ಸನ್ನಡತೆ ಮತ್ತು ವಿಷಯಾನುಕ್ರಮುಗಳಿಗೆ ಎನ್ನುವಂತಹ ರೀತಿಯಲ್ಲಿ ತಮ್ಮ ಎಲ್ಲಾ ನಡವಳಿಗೆಕಗಳನ್ನು ರೂಪಿಸಿಕೊಳ್ಳುತ್ತಾರೆ. ಅಲ್ಲಿ ಸರ್ಕಾರವು ಕೂಡ ತನ್ನದೇ ಆದಂತಹ ಒಂದು ವ್ಯಕ್ತಿತ್ವವನ್ನು ಬಿಂಬಿಸುವುದಕ್ಕೆ ಸಾಧ್ಯತೆಯಾಗುತ್ತದೆ., ಕಾರ್ಯಕ್ರಮಗಳನ್ನು ರೂಪಿಸಲು ಸಾಧ್ಯತೆಯಾಗುತ್ತದೆ., ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಸಾಧ್ಯವಾಗುತ್ತದೆ. ಭ್ರಷ್ಟಚಾರದ ವಿಚಾರದಲ್ಲಿ, ನೆಲಗಳ್ಳರು ಇದ್ದಾರೆ, ಕಾಡುಗಳ್ಳರು ಇದ್ದಾರೆ, ಗ್ರಾನೈಟ್ ಲೂಟಿ ಮಾಡಿದ್ದೀರಿ, ಇಂತಹ ಯಾವುದೋ ಒಂದು ಸಾರ್ವಜನಿಕ ಸಭೆಯಲ್ಲಿ ಮಾತನಾಡುವಂತಹ ರೀತಿಯಲ್ಲಿ ಮಾತನಾಡಿದರೆ, ನಾವು ಅದೇ ರೀತಿಯಾದಂತಹ ಒಂದು ಉದಾಹರಣೆಯನ್ನು ಕೊಡಬಹುದು. ಆಷಾಡ ಭೂತಿತನದ ಮನಸ್ಸಿನಲ್ಲಿ ಭ್ರಷ್ಟಾಚಾರ ಯಾವ ಕಾಲದಲ್ಲೂ ಕೂಡ ಇದೆ. ವಾರನ್ ಹೇಸ್ಟಿಂಗ್‌ರವರನ್ನು ಇಂಪೀಚ್ ಮಾಡಬೇಕಾದ ಸಂದರ್ಭದಲ್ಲಿ ಹೌಸ್ ಆಫ್ ಕಾಮನ್ಸ್‌ನಲ್ಲಿ ಆಗಿರತಕ್ಕಂಥದ್ದು, ನಂದಕುಮಾರ್ ಅದರ ಬಗ್ಗೆ ಕೊಟ್ಟಿರುವ ಹೇಳಿಕೆಗಳನ್ನು ನೋಡಿದರೆ, ಬಹಳ ವರ್ಷಗಳ ಕಾಲ, ಮೊಗಲರ ಕಾಲದಿಂದ ಅಥವಾ ಹಿಂದಿನ ನಮ್ಮ ರಾಜಮಹರಾಜರ ಕಾಲದಿಂದ, ಇಡೀ ಸಮಾಜ ಈ ತರಹವಾಗಿರುವ ವ್ಯಕ್ತಿತ್ವವನ್ನು , ಆಷಾಡಭೂತಿತನವನ್ನು ಮತ್ತು ತತಕ್ಷಣದಲ್ಲಿ

ಕೆಲಸವಾಗಬೇಕೆನ್ನುವ ಕಾರಣಕ್ಕಾಗಿಯೇ ಭ್ರಷ್ಟಾಚಾರದಲ್ಲಿ ನಿರತರಾಗಿರತಕ್ಕಂಥದ್ದು, ಒಂದು ಭೌತಿಕ ಭ್ರಷ್ಟಾಚಾರ ಮತ್ತೊಂದು ನೇರವಾಗಿರುವ ಹಣಕಾಸಿನ ಭ್ರಷ್ಟಾಚಾರ, ಇವುಗಳಲ್ಲಿ ಯಾವುದು ಹೆಚ್ಚು ಅಪಾಯಕಾರಿ ಎನ್ನತಕ್ಕದು ಕೂಡ ತಮಗೆ ಕಂಡುಬಂದಿದೆ. ಈ ದೃಷ್ಟಿಯಿಂದ ಹೇಳುವುದಾಗಿದ್ದರೆ, ಇತಿಹಾಸದ ಪುಟದಲ್ಲಿ ಒಂದು ಒಳ್ಳೆಯ ಉದಾಹರಣೆಯಾಗಿರತಕ್ಕಂಥದ್ದು ಒಂದಿದೆ, ನಾವೆಲ್ಲರೂ ಕೂಡ ಅದರಲ್ಲಿ ಭಾಗಿಗಳಾಗಿರತಕ್ಕಂಥ ಜನ. ಫೆಡ್ರಿಕ್ ದಿ ಗ್ರೇಟ್ ಎಂದು ಪರ್ಶಿಯಾ ದೇಶದಲ್ಲಿ ಒಬ್ಬ ಮಾಹಾ ಚಕ್ರವರ್ತಿ ಇದ್ದ. ಆತ ಕೆಂಪು ಸುಧಾರಣೆಗಳನ್ನು ಮಾಡಬೇಕೆಂದು ಪ್ರಯತ್ನವನ್ನು ಮಾಡಿದಂಥ ಸಂದರ್ಭದಲ್ಲಿ, ಅದು ಇಂಗ್ಲೆಂಡಿಗೆ ಸರಿಸಮಾನವಾಗಿ ಹೋಗುವುದಕ್ಕೆ ಸಾಧ್ಯವಾಗಲಿಲ್ಲ. ಆಗ ಆತ ಹೇಳುತ್ತಾನೆ ಸುಮಾರು ನಲವತ್ತು ಜನರಿರುವ ಈ ರೀತಿಯ ಸಭಾ ಸದನದಲ್ಲಿ ಏಕೆ ಇಷ್ಟೆಲ್ಲಾ ಭ್ರಷ್ಟಾಚಾರವಾಗುತ್ತಿದೆ? ನಾನು ಇಷ್ಟೊಂದು ದೊಡ್ಡ ಕೆಲಸಕಾರ್ಯಗಳನ್ನು ಮಾಡಿದರೂ ಕೂಡ ಜನಸಾಮಾನ್ಯರ ಜೀವನಮಟ್ಟವನ್ನು ಏರಿಸುವುದಕ್ಕೆ ನನಗೆ ಸಾಧ್ಯವಾಗುತ್ತಿಲ್ಲ, ಇದಕ್ಕೊಂದು ಉತ್ತರವನ್ನು ಕೊಡಿ ಎಂದು ಕೇಳಿದಾಗ, ಇದೇ ರೀತಿಯಾಗಿ ನಮ್ಮ ನಂಜೇಗೌಡರಂತಹ ಒಬ್ಬ ವಿವೇಕಿಯಾಗಿರುವ ವ್ಯಕ್ತಿ ಅಲ್ಲಿ ಮೂಲೆಯಲ್ಲಿ ಕುಳಿತಿದ್ದರು. ಅವರು ದೊಡ್ಡದಾಗಿರತಕ್ಕಂಥ ಒಂದು ಮಂಜಿನ ಗಡ್ಡೆಯನ್ನು ತೆಗೆದುಕೊಂಡು, ದಯಮಾಡಿ ಇದನ್ನು ಚಕ್ರವರ್ತಿಯವರಿಗೆ ಮುಟ್ಟಿಸಿ ಎಂದು ಕಳುಹಿಸಿ ಕೊಟ್ಟರು. ಆಗ ನಂಜೇಗೌಡರ ಕೈಯಲ್ಲಿ ಇಷ್ಟು ದೊಡ್ಡದಾಗಿರತಕ್ಕಂಥ ಮಂಜುಗಡ್ಡೆ, ಇವರೆಲ್ಲರ ಮೂಲಕ ಹಾದು ಚಕ್ರವರ್ತಿಯನ್ನು ಮುಟ್ಟುವಾಗ ಅದು ಇಷ್ಟಾಗಿತ್ತು. ನಾವು ಒಂದು ಲಕ್ಷದ ಎಂಬತ್ತು ಸಾವಿರ ಕೋಟಿ ರೂಪಾಯಿಗಳು, ಅದಕ್ಕಿಂತ ಮೀಗಿಲಾಗಿರತಕ್ಕಂಥ ಪಂಚವಾರ್ಷಿಕ ಯೋಜನೆಗಳಲ್ಲಿ ಕಾಯ್ದಿಟ್ಟಿರತಕ್ಕಂಥ ಹಣವನ್ನು ನವದೆಹಲಿಯ ಯೋಜನಾ ಆಯೋಗದಿಂದ ಕೆಳಮಟ್ಟದಲ್ಲಿರತಕ್ಕಂಥ ಒಬ್ಬ ಕನಿಷ್ಟರಲ್ಲಿ ಕನಿಷ್ಟನಾಗಿರತಕ್ಕಂಥ ವ್ಯಕ್ತಿಗೆ, ಅದು ಬಂದು ಸೇರುವಾಗ ನಾವೆಲ್ಲರೂ ಭ್ರಷ್ಟಾಚಾರದಲ್ಲಿ ಭಾಗಿಗಳಾಗಿದ್ದೇವೆ. ನಮ್ಮ ಕೈಗಳಲ್ಲಿ ಬಂದಿರತಕ್ಕಂಥ, ಆ ಮಂಜಿನಂತ ಹಣ ಕರಗಿ ಹೋಗಿರುವುದು ಕೂಡ ಇದೆ. ಈ ರೀತಿಯಾಗಿ ಇತಿಹಾಸದ ಉದಾಹರಣೆಗಳಿಂದ ಇಲ್ಲಿ ಪಾಠ ಹೇಳಬೇಕೆನ್ನುವ ಪ್ರಶ್ನೆಯಲ್ಲ, ಈ ದಿವಸವೇ ಜೆ.ಹೆಚ್.ಪಟೇಲರು ಮುಖ್ಯಮಂತ್ರಿಗಳಾದರೂ ಎನ್ನುವ ಕಾರಣಕ್ಕೆ ಉದ್ಭವವಾಗಿರತಕ್ಕಂಥದ್ದಲ್ಲ. ನಾವು ಮಾಡಿರತಕ್ಕಂಥ ಕಾರ್ಯಕ್ರಮಗಳನ್ನು ತಾವು ದಯಮಾಡಿ ಅವಲೋಕಿಸಬೇಕಾಗಿರತಕ್ಕಂಥದ್ದು ಒಂದು ನಿಷ್ಪಕ್ಷಪಾತವಾದ ದೃಷ್ಟಿಕೋನಗಳ ಮೂಲಕವಾಗಿ. ಈ ದೃಷ್ಟಿಯಿಂದ ನಾವು ಹೇಳಿದಾಗ, ಅವರು ಮಾಡಿರುವ ಅನೇಕ ಕಾರ್ಯಕ್ರಮಗಳಲ್ಲಿ, ನಮ್ಮ ಕುಡಿಯುವ ನೀರಿನ ವಿಚಾರದಲ್ಲಿ, ಪಂಚಾಯತ್ ರಾಜ್ ವಿಚಾರದಲ್ಲೂ ಕೂಡ ಟೀಕೆಟಿಪ್ಪಣಿಗಳಾದವು. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಹಿಂದುಳಿದ ಜನಾಂಗಕ್ಕೆ ಮೀಸಲಾತಿಯನ್ನು ಕೊಡಬೇಕೆಂದು ಸಂವಿಧಾನದ 73ನೇ ತಿದ್ದುಪಡಿ ಹೇಳುವುದಿಲ್ಲ, ಅದು ಆಯಾ ರಾಜ್ಯಗಳ ವಿವೇಚನೆಗೆ ಬಿಟ್ಟ ವಿಷಯವೆಂದು ಹೇಳುತ್ತಾರೆ. ಆದರೆ ಪರಿಶಿಷ್ಟಜಾತಿ: ಪರಿಶಿಷ್ಟ ಜನಾಂಗ ಮತ್ತು ಮಹಿಳೆಯರಿಗೆ ಆಯಾ ಜನಸಂಖ್ಯೆಗೆ ಅನುಗುಣವಾದಂಥ ಅನುಪಾತದಲ್ಲಿ ಆ ಮೀಸಲಾತಿ ಇರಬೇಕೆಂದಾಗ, ನಮ್ಮ ಈ ಸರ್ಕಾರ , ಸನ್ಮಾನ್ಯ ಶ್ರೀ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಅವರಿಗೆ ಮೀಸಲಾತಿಯನ್ನು ಕೊಡುವುದನ್ನು ಮಾಡಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಾನೂನನ್ನು ನಾವು ಮೊದಲು ತಂದಿದ್ದೇವೆ, ಅದನ್ನು ಏತಕ್ಕೆ ತಪ್ಪು ತಿಳುವಳಿಕೆಯಿಂದ ಹೇಳುತ್ತೀರಿ ? Who brought that Act ? Who amanded ?

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್; ನಾವು ಅದನ್ನು ಹೇಳುತ್ತೇವೆ

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೇಳುತ್ತಿದ್ದೇವೆಂದು ದಾರಿಯ ದಿಕ್ಕನ್ನು ತಪ್ಪಿಸುವುದೇ?

ಶ್ರೀ ಎಂ.ಪಿ.ಪ್ರಕಾಶ್ : ನಾವು ನೀವು ಅದನ್ನು ತಂದಿಲ್ಲವೆಂದು ಹೇಳುತ್ತಿಲ್ಲ.........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಆ ಆಕ್ಟ್ ಮಾಡಿಯೇ, ಗ್ರಾಮ ಪಂಚಾಯಿತಿ ಚುನಾವಣೆಯಾಯಿತು ಆ ಆಕ್ಟ್ ಪ್ರಕಾರವೇ ತಾಲ್ಲೂಕು ಪಂಚಾಯಿತಿ ಚುನಾವಣೆಯಾಯಿತು, ಇಂಕ್ಲೂಡಿಂಗ್ ಛೇರ್ಮನ್.......

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ನಾವು ಹೇಳುತ್ತೀವೆ, ನೀವು ಯಾವುದೇ ರಾಜ್ಯಗಳಲ್ಲಿ ಅಧಿಕಾರವನ್ನು.......

ಶ್ರೀಮತಿ ಪ್ರಮೀಳಾ ನೇಸರ್ಗಿ : ಚುನಾವಣೆ ಹತ್ತಿರ ಬಂದಿದೆಯೇ ? ತಮ್ಮ ಭಾಷಣವನ್ನು ನೋಡಿದರೆ ಚುನಾವಣೆ ಹತ್ತಿರ ಬಂದಂತೆ ಕಾಣುತ್ತದೆ.

ಶ್ರೀ ಎಂ. ಪಿ. ಪ್ರಕಾಶ್: ಈ ಕಾನೂನನ್ನು ನೀವು ತಂದಿದ್ದೀರೆನ್ನುವ ಹೆಗ್ಗಳಿಕೆ ನಿಮಗಿರಬಹುದು. ಆದರೆ ಈ ಸಂದರ್ಭದಲ್ಲಿ 73ನೇ ಸಂವಿಧಾನದ ತಿದ್ದುಪಡಿಯನ್ನು ತಂದಿರತಕ್ಕಂಥ ಹೆಗ್ಗಳಿಕೆ, ಎಲ್ಲಾ ಅವಕಾಶಗಳಿಂದ ವಂಚಿತರಾದ ಹಿಂದುಳಿದ ಜನಾಂಗಕ್ಕೆ, ಮೀಸಲಾತಿಯನ್ನು ಕೊಡಬೇಕೆನ್ನುವಕಡ್ಡಾಯವಾದಂಥ ನಿಯಮಾವಳಿಗಳನ್ನು ನೀವು ಮಾಡಲಿಲ್ಲ. ಅದು ಆಯಾ ರಾಜ್ಯ ಸರ್ಕಾರಗಳ ವಿವೇಚನೆಗೆ ಬಿಟ್ಟ ವಿಷಯವೆಂದು ಹೇಳುತ್ತೀರಿ, ಪಂಚಾಯತಿ ಮಟ್ಟದಲ್ಲಿ ತೀರ್ಮಾನ ಮಾಡಿದ್ದೇವೆ.....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಕ್ಟ್ ಮಾಡಿ ಪಂಚಾಯತಿ ಚುನಾವಣೆಯನ್ನೇ ಮಾಡಿದ್ದೇವೆ, ಅಧ್ಯಕ್ಷ ಸ್ಥಾನಕ್ಕೆ ರೋಸ್ಟರ್ ಪ್ರಕಾರ ಮೀಸಲಾತಿಯನ್ನು ಕೊಟ್ಟಿದ್ದೇವೆ. ಇದೇನಿದು ಉಪಾಧ್ಯಕ್ಷರೇ ನೀವು ಸಾಕ್ಷಿ ಇದ್ದೀರಿ ಹೇಳಿ, ಸುಮ್ಮನೆ ಏನೋ ಒಂದು ಹೇಳಿಕೊಂಡು ಹೋದರೆ ಹೇಗೆ?.........

(ಗೊಂದಲ)

+ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) ಮಾನ್ಯ ಉಪಾಧ್ಯಕ್ಷರೇ, ಈಗ ನಾವು ಮಾಡಿರತಕ್ಕಂಥದ್ದನ್ನು ಹೇಳಿದರೆ ಇವರಿಗೆ ಏತಕ್ಕೆ ಕೋಪ ಬರುತ್ತದೆಯೋ? ನನಗಂತೂ ಅರ್ಥ ವಾಗುತ್ತಿಲ್ಲ. ಹೌದು ಸುಳ್ಳು ಎಂದು ಜನರಿಗೆ ಹೇಳೋಣ, ಯಾರು ಸುಳ್ಳು ಹೇಳುತ್ತಿದ್ದಾರೆಂದು ಜನರು ತೀರ್ಮಾನ ಮಾಡುತ್ತಾರೆ. ಮಾನ್ಯ ಉಪಾಧ್ಯಕ್ಷರೆ, ಹಿಂದುಳಿದ ಜಾತಿಯವರಿಗೆ ಮಹಿಳೆಯರಿಗೂ ಮೀಸಲಾತಿ ಇತ್ತು. ಹಿಂದೆ ಇದ್ದಾಗ ನಾವೇ ಮಹಿಳೆಯರಿಗೆ ಮೀಸಲಾತಿಯನ್ನು ತಂದಿದ್ದುದು. ಮಹಿಳೆಯರಿಗೆ ಪ್ರಥಮಬಾರಿಗೆ ಕರ್ನಾಟಕದಲ್ಲಿ ಮೀಸಲಾತಿಯನ್ನು ತಂದವರು ಅಂದಿನ ನಮ್ಮ ಜನತಾ ಸರ್ಕಾರ. ನಾನು ಏತಕ್ಕೆ ಈ ಮಾತುನ್ನು ಹೇಳುತ್ತಿದ್ದೇನೆಂದರೆ, ಮಾನ್ಯ ಖರ್ಗೆಯವರಿಗೆ ನೀವು ಮೀಸಲಾತಿಯಪರವಿರಲಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ನೀವು ತಂದಿದ್ದ ಮೀಸಲಾತಿ, ನಿಜವಾದ ಹಿಂದುಳಿದವರಿಗೆ ಸಿಗುತ್ತಿರಲಿಲ್ಲ. ಇವತ್ತು ನೂರಕ್ಕೆ ಐವತ್ತೆರಡು ಜನ ಇರತಕ್ಕಂಥ ಹಿಂದುಳಿದ ಜಾತಿಯವರಿಗೆ, ಯಾವ ನಿಜವಾದ ಹಿಂದುಳಿದ ಜಾತಿಯವರಿಗೆ ಪ್ರತ್ಯೇಕ ಮೀಸಲಾತಿ ಕ್ಷೇತ್ರಗಳನ್ನು ನೀವು ಗ್ರಾಮಪಂಚಾಯಿತಿ ಚುನಾವಣೆಗಳನ್ನು ನಡೆಸಿದಾಗ ಮಾಡಿರೀ ಮಾಡಿರಲಿಲ್ಲ. (ಎ)-(ಬಿ) ಗುಂಪನ್ನು ಇವರು ಮಾಡಿದೀರೋ? ಮಾಡಿರಲಿಲ್ಲ. ಇವತ್ತು (ಎ) ಗುಂಪಗೆ 26.6 ಪರ್ಸೆಂಟ್, (ಬಿ) ಗುಂಪಿಗೆ 60 ಪರ್ಸೆಂಟ್(ಸಿ) 40 ಪರ್ಸೆಂಟ್ ಒಟ್ಟು 33 ಪರ್ಸೆಂಟ್ ಅನ್ನು ಮಾಡಿ, ಪ್ರತ್ಯೇಕ ಮೀಸಲಾತಿ ಕ್ಷೇತ್ರಗಳನ್ನು ಮಾಡಿದ್ದ ನಮ್ಮ ಸರ್ಕಾರ. ಇದು ಸುಳ್ಳಾ? ಇದು ಸತ್ಯವಲ್ಲವೇ? ಇದು ಒಂದು. ಇವರು ಹಿಂದುಳಿದ ಜಾತಿಯಲ್ಲಿ ಬರುತ್ತಾರೆಂದು ಎಲ್ಲರೂ ಹತ್ತು ಸಾವಿರ ರೂಪಾಯಿಗಳ ಒಳಗಡೆ ಆದಾಯ ಪ್ರಮಾಣ ಪತ್ರವನ್ನು ತೆಗೆದುಕೊಂಡು, ಮುಂದುವರೆದ ಜಾತಿಯವರು, ಬಹುಸಂಖ್ಯಾತರು, ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದರು. ಅದನ್ನು ಈಗ ಬದಲಾವಣೆ ಮಾಡಿ ಪ್ರಥಮಬಾರಿಗೆ ಇಡೀ ಭಾರತದಲ್ಲೇ (ಎ) ಗುಂಪಿಗೆ 26.6 ಪರ್ಸೆಂಟ್ ಮಾಡಿ, ಈಗ ಆ (ಎ) ಗುಂಪಿನಲ್ಲಿ ಕುರುಬರು, ಬೆಸ್ತರು ಮೊದಲನೆ ಸಲ ಮುಸಲ್ಮಾನರು ಈ ರೀತಿಯ ಜಾತಿಯವರಿರಬೇಕೆಂದು ಹೊರತು, ಅವರ ಜೊತೆಯಲ್ಲಿ ಒಕ್ಕಲಿಗರಾಗಲಿ, ಲಿಂಗಾಯಿತರಾಗಲಿ, ಬ್ರಾಹ್ಮಣರಾಗಲಿ ನಿಲ್ಲುವ ಹಾಗಿಲ್ಲ. ಈ ರೀತಿ ಪ್ರತ್ಯೇಕ ಮೀಸಲಾತಿ ಕ್ಷೇತ್ರವನ್ನು ಹಿಂದೆ ಮಾಡಿರಲಿಲ್ಲ. ನಾನು ನೀವು ಮೀಸಲಾತಿಗೆ, ವಿರುದ್ಧ ಎಂದು ಹೇಳುವುದಿಲ್ಲ. ಆ ಕಾರಣದಿಂದ ಇವತ್ತು ಯಾರು ನೇರ ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಸಾಧ್ಯವಿಲ್ಲ, ಅತ್ಯಂತ ಕಟ್ಟಕಡೆಯ ಮನುಷ್ಯ, ಅಲ್ಪಸಂಖ್ಯಾತರಲ್ಲಿರುವವರು ಕೂಡ ಇವತ್ತು ಜಿಲ್ಲಾಪಂಚಾಯತಿ ಸದಸ್ಯರಾಗುವುದಕ್ಕೆ, ತಾಲ್ಲೂಕು ಪಂಚಾಯಿತಿ ಸದಸ್ಯರಾಗುವುದಕ್ಕೆ ಅಧ್ಯಕ್ಷರಾಗುವುದಕ್ಕೆ ಉಪಾಧ್ಯಕ್ಷರಾಗುವುದಕ್ಕೆ ಸಾಧ್ಯವಾಯಿತು ಎನ್ನುವುದು ಇದು ನಿರ್ವಿವಾದ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ತಾವು ಯಾವ ಧಾಟಿಯಲ್ಲಿ ಮಾತನಾಡಿದಿರಿ ಎಂದರೆ ಕಾನೂನನ್ನೇ ನಾವು ತಂದಿದ್ದೇವೆ ಬ್ಯಾಕ್‌ವರ್ಡ್ ಕ್ಲಾಸಸ್, ಶೆಡ್ಯೂಲ ಕಾಸ್ಟ್ ಇವರ ಬಗ್ಗೆ ರಿಸರ್ವೇಷನ್ ಮಾಡತಕ್ಕಂಥದ್ದು ಮತ್ತು ಈ ಅಧ್ಯಕ್ಷರನ್ನು ರೋಸ್ಟರ್ ಪ್ರಕಾರ ಮಾಡುವುದು ಎಲ್ಲವೂ ಕೂಡ ನಮ್ಮ ಕಾಲದಲ್ಲಾಗಿದೆ ಎನ್ನುವ ಧಾಟಿಯಲ್ಲಿ ಹೇಳಿದರು. ಆದರೆ ಆ ಕಾನೂನನ್ನು ತಂದವರು ನಾವು ಆಚರಣೆಯಲ್ಲಿ ತಂದವರು ನಾವು ಮತ್ತು (ಎ) (ಬಿ) ಕ್ಯಾಟಗರಿಗೆ ರೆಕ್ರೂಟ್‌ಮೆಂಟ್ ಕೂಡ ಕೊನೆಯ ಘಳಿಗೆಯಲ್ಲಾಯಿತು. ಆದರೆ ಇದು ಅನ್ಯಾಯವಗುತ್ತದೆಂದು ಆದು ಪೆಡಿಂಗ್‌ನಲ್ಲಿತ್ತು. ಆದರೆ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ರಿಸರ್ವೇಷನ್ ಇರಲಿಲ್ಲವೆಂದು ತಾವು ಹೇಳುವುದಕ್ಕೆ ಸಾಧ್ಯವೇ ಇಲ್ಲ. ಹತ್ತು ಸಾವಿರ ರೂಪಾಯಿಗಳ ಆದಾಯವಿರುವುದನ್ನು ತೆಗೆದಿರಬಹುದು, ಆದರೆ ಅದನ್ನು ಆಕ್ಟ್‌ನಲ್ಲಿ ತೆಗೆದಿಲ್ಲ, ಅದು ರೂಲ್ಸ್‌ನಲ್ಲಿ ಮಾಡಿದಂಥ ಕಾನೂನು ಎಲ್ಲವನ್ನೂ ನಾವೇ ಮಾಡಿದ್ದೇವೆಂದು ಹೇಳಿಕೊಳ್ಳತಕ್ಕದ್ದು, ಇದು ಸರಿಯಲ್ಲ. ಸುಮ್ಮನೆ ಅದನ್ನು ನಿಮ್ಮ ಬೆನ್ನನ್ನು ನೀವೇ ಚಪ್ಪರಿಸಿಕೊಂಡು ಪದೇ ಪದೇ ಹೇಳಬೇಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ: ಇಷ್ಟೊತ್ತು ಪ್ರಜಾ ತಂತ್ರದ ವ್ಯವಸ್ಥೆಯ ಬಗ್ಗೆ, ಅಧಿಕಾರದ ವಿಕೇಂದ್ರಿಕರಣದ ಬಗ್ಗೆ, ಹಿಂದುಳಿದ ವರ್ಗದವರಿಗೆ ಅವಕಾಶ ಮಾಡಿಕೊಟ್ಟಿದ್ದೇವೆಂದು ಹೇಳಿದಿರಿ ತುಂಬಾ ಸಂತೋಷ. ಆದರೆ ಯಾವ ಎಂಭತ್ತು ಸಾವಿರಕ್ಕೂ ಹೆಚ್ಚು ಜನ, ಹರಿಜನಗಿರಿಜನ, ಮಹಿಳೆಯರು ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಗೆದ್ದಿದ್ದರೋ ನಾಳೆ ದಿವಸ ಆ ಎಂಭತ್ತು ಎಂಭತ್ತೆರಡು ಸಾವಿರ ಸಂಖ್ಯೆ ಇದ್ದವರಲ್ಲೆ ಒಬ್ಬ ವಿಧಾನಪರಿಷತ್ತಿಗೆ ಆಯ್ಕೆಯಾಗುತ್ತಿದ್ದ. ಎಲ್ಲಿ ಆ ಬಡವ, ಹರಿಜನ, ಮಹಿಳೆ ಆಯ್ಕೆಯಾಗಿ ಬಂದಬಿಡುತ್ತಾರೋ ಎಂದು ಅವರ ಮತದಾನದ ಹಕ್ಕನ್ನು ಕಿತ್ತುಕೊಂಡು ದ್ರೋಹ ಬಗೆದು ನೀವು ಇದೇ ಅಪರಾಧ ತಾನೇಮಾಡಿದ್ದು? ಸ್ವಾಮಿ, ಈ ನಾಡಿನ ಜನ ನಿಮ್ಮನ್ನು ಕ್ಷಮಿಸುವುದಿಲ್ಲ.

ಶ್ರೀ ಸಿದ್ದರಾಮಯ್ಯ : ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ, ನಗರ ಪಾಲಿಕೆಗಳ ಸದಸ್ಯರಲ್ಲಿ ಷೆಡ್ಯೂಲ್ ಕಾಸ್ಟ್‌ನವರು ಇಲ್ಲವೇ? ಅಲ್ಲಿ ಹಿಂದುಳಿದವರು ಇಲ್ಲವೇ?

ಶ್ರೀ ಬಿ. ಎಸ್. ಯಡಿಯೂರಪ್ಪ : ಎಲ್ಲಿ, ಯಾವುದರಲ್ಲಿ ?

ಶ್ರೀ ಸಿದ್ದರಾಮಯ್ಯ : ತಾಲ್ಲೂಕು ಪಂಚಾಯಿತಿಯಲ್ಲಿ ಜಿಲ್ಲಾ ಪಂಚಾಯಿತಿಯಲ್ಲಿ ನಗರಪಾಲಿಕೆಯ ಮುನಿಸಿಪಾಲಿಟಿಯಲ್ಲಿ, ಅಲ್ಲ (ಎ) ಗುಂಪಿನಲ್ಲಿ ಬರುವವರೆಲ್ಲಾ ಹಿಂದುಳಿದವರಲ್ಲವೇ? ಅವರು ಷೆಡ್ಯೂಲ್ ಕಾಸ್ಟ್‌ನವರಲ್ಲ ವೇ?

ಶ್ರೀ ಬಿ.ಎಸ್. ಯಡಿಯೂರಪ್ಪ: ಆ ಗ್ರಾಮಪಂಚಾಯಿತಿಯ ಬಡವ ಬರಬಾರದೇ? ಆ ಬಡವ ಎಂಎಲ್‌ಸಿಯಾಗಿ ಬರಬಾರದೇ? ಎಂಬತ್ತು ಸಾವಿರು ಜನರ ಮತದಾನದ ಹಕ್ಕನ್ನು ಕಿತ್ತು ಕೊಂಡವರುನೀವು.....

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅದು ಬೇರೆ ಪ್ರಶ್ನೆ, ಅದಕ್ಕೆ ನಾವು ಹೇಳಿದ್ದೇವೆ, ಅದನ್ನು ಪಾರ್ಲಿಮೆಂಟ್‌ನಲ್ಲಿ ಚರ್ಚೆ ಮಾಡಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾಯಿತ ಪ್ರತಿನಿಧಿಗಳಿಗೆ ದೊಡ್ಡ ದ್ರೋಹ ಮಾಡಿದ್ದೀರಿ . ಆದರೆ ಈಗ ದೊಡ್ಡ ಕಿರೀಟ ಸಾಧನೆ ಮಾಡಿದ್ದೇವೆಂದು ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇವರಿಂದ ಪಾಠ ಕಲಿಯಬೆಕಾದಂಥ ಅಗತ್ಯವಿಲ್ಲ.

7:40 ಪಿ.ಎಂ

ಶ್ರೀ ಎಂ. ಪಿ. ಪ್ರಕಾಶ್: ಸನ್ಮಾನ್ಯ ಉಪಾಧ್ಯಕ್ಷರೇ , ಈ ಸಂಪ್ರದಾಯಗಳು, ಈ ನಮ್ಮ ಸಂಸದೀಯ ವ್ಯವಸ್ಥೆಯಲ್ಲಿ ಕೊಡುವುದು ತೆಗೆದುಕೊಳ್ಳುವ ವ್ಯವಸ್ಥೆಯನ್ನು ಇಟ್ಟುಕೊಂಡಿರಬೇಕು. ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ ನಾವೆಲ್ಲರೂ ಶಾಂತರಾಗಿ ಕೇಳಿದ್ದೇವೆ. ಅದೇ ರೀತಿಯಾಗಿ ಯಾವುದಾದರೂ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದಾಗ, ಅದರಲ್ಲಿ ಮೊನಚು ಬಂದರೆ, ಆ ವಿಷಯದ ಬಗ್ಗೆ ಒತ್ತು ಕೊಡತಕ್ಕಂಥ ಕಾರಣಕ್ಕಾಗಿ ಬಳಸಿರತಕ್ಕಂಥಾದ್ದು ಆಗಿರುತ್ತದೆಯೇ ವಿನಃ ಪ್ರತಿಯೊಂದು ಶಬ್ದಕ್ಕೂ ಪ್ರತಿಯೊಂದು ಮಾತಿಗೂ ಅಡ್ಡಿಪಡಿಸಬೇಕು ಎನ್ನುವಂಥ ವ್ಯಾಖ್ಯಾಯನವನ್ನು ಅರ್ಥೈಸುತ್ತೇವೆ ಎನ್ನುವುದಾಗಿದ್ದರೆ, ಇದು ಸಂಸದೀಯ ನಡವಳಿಕೆ ಆಗುವುದಿಲ್ಲ. ಹೇಳಬೇಕಾದ ಎಲ್ಲ ಮಾತನ್ನು ತಾವೆಲ್ಲಾ ಹೇಳಿದ್ದೀರಿ. ಅ ವ್ಯಾಪಕವಾಗಿರತಕ್ಕಂಥ ಪ್ರಚಾರವನ್ನು ಪಡೆದಿದೆ. ಈಗ ನಾವು ಉತ್ತರವನ್ನು ಕೊಡುತ್ತಿದ್ದೇವೆ. ದಯವಿಟ್ಟು ಆ ಉತ್ತರವನ್ನು ಶಾಂತವಾಗಿ ಕೇಳತಕ್ಕಂಥ ದೊಡ್ಡ ಮನಸ್ಸನ್ನು ಇಟ್ಟುಕೊಳ್ಳಬೇಕು. ಅದು ಇದ್ದಾಗ ಮಾತ್ರ ಈ ನಡವಳಿಕೆಯನ್ನು ಸರಿಯಾದಂಥ ರೀತಿಯಲ್ಲಿ ಪಾಲಿಸಿದಂತೆ ಆಗುತ್ತದೆ. ಇವತ್ತು ಅವರು ಹೇಳಬಹುದು, ನೀವೇ ಎಲ್ಲವನ್ನೂ ಮಾಡಿದ್ದೀರಿ ಎಂದು ಕಿರೀಟ ಇಟ್ಟುಕೊಂಡಿದ್ದೇವೆ ಎಂದು ಅಲ್ಲ. ಒಂದೊಂದು ಸರ್ಕಾರ ತನ್ನ ಕಾಲದ ಇತಿಮಿತಿಗಳಲ್ಲಿ, ತನ್ನ ಒತ್ತಡಗಳ ಇತಿಮಿತಿಗಳಲ್ಲಿ ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡುತ್ತದೆ, ಮತ್ತು ಅನುಷ್ಠಾನಕ್ಕೆ ತರುತ್ತದೆ. ದೇವರಾಜ ಅರಸುರವರ ಕಾಲದಲ್ಲಿ ಆಗಿರತಕ್ಕಂಥ ಭೂಸುಧಾರಣಾ ಕಾನೂನಿನ ವಿಚಾರದಲ್ಲಿ, ಅದು ಒಂದು ಐತಿಹಾಸಿಕ ದಾಖಲೆ ಮತ್ತು ಹೆಜ್ಜೆ ಎಂದು ಗುರುತಿಸುತ್ತೇವೆ. ಹಾಗೆಯೇ ಹಿಂದಿನ ಸರ್ಕಾರದಲ್ಲಿ

ನಾವು ಮಾಡಿರತಕ್ಕಂಥ ಅಧಿಕಾರ ವಿಕೇಂದ್ರೀಕರಣದಲ್ಲಿ ಶೇ. 25 ರಷ್ಟು ಮೀಸಲಾತಿಯನ್ನು ಮಹಿಳೆಯರಿಗೆ ಕೊಡಬೇಕು ಎಂದು ಯೋಜನೆಯನ್ನು ಮಾಡಿ ಕಾನೂನನ್ನ ತಂದಿರತಕ್ಕಂಥಾದ್ದು ಅಂದಿನ ನಮ್ಮ ಜನತಾ ಪಕ್ಷದ ಸರ್ಕಾರ. ಹಾಗೆಯೇ ಕೇಂದ್ರ ಸರ್ಕಾರದಲ್ಲಿ ಮಂಡಲ ಆಯೋಗದ ಬಗ್ಗೆ ಈಗ ಮಾತನಾಡತಕ್ಕಂಥವರು ಎಲ್ಲರೂ ಇರಬಹುದು, 11 ತಿಂಗಳು ಮಾನ್ಯ ವಿ.ಪಿ.ಸಿಂಗ್‌ರವರು ಅಧಿಕಾರ ಮಾಡಿ ಹೋಗಿರಬಹುದು. ಆದರೆ ಅಂಥ ಒಂದು ವಿಚಾರದ ಬಗ್ಗೆ, ಒಂದು ಪ್ರಸ್ತಾಪವನ್ನು ಮಾಡಲು ಪ್ರಾರಂಭ ಮಾಡಿ ನಮ್ಮ ರಾಷ್ಟ್ರೀಯ ಮನ್ನಣೆಯನ್ನು ಪಡೆದಿರತಕ್ಕಂಥ ಎಲ್ಲಾ ರಾಜಕೀಯ ಪಕ್ಷಗಳೂ ಕೂಡ, ತಮ್ಮ ಪ್ರಣಾಳಿಕೆಯಲ್ಲಿ ಹಿಂದುಳಿದ ಜಾತಿಗೆ ಒತ್ತನ್ನು ಕೊಡುತ್ತೇವೆ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಕೊಡುತ್ತೇವೆ ಎನ್ನುವಂಥ ಮಾತನ್ನು ಕೇಳಿಸಲಿಕ್ಕೆ ಕಾರಣೀಭೂತವಾಗಿರತಕ್ಕಂಥಾದ್ದು ನಮ್ಮ ಜನತಾದಳ ಎಂದು ನಾವು ಹೆಮ್ಮೆ ಪಟ್ಟರೆ, ತಾವು ಅಸೂಯೆ ಪಡಬೇಕಾದಂಥ ಅಗತ್ಯವಿಲ್ಲ. ನಾವು ಮಾಡಿರತಕ್ಕಂಥ ಕಾರ್ಯಕ್ರಮಗಳನ್ನು ತಾವು ಮತ್ತೆ ಮುಂದುವರೆಸಿ ಅದನ್ನು ಹೆಚ್ಚು ಇದರಲ್ಲಿ. ವ್ಯಾಪಕವಾಗಿ ಮಾಡಿದರೆ, ಅದಕ್ಕೆ ಅಸೂಯೆ ಪಡತಕ್ಕಂಥಾದ್ದು ಏನೂ ಇಲ್ಲ. ಈಗ ಕುಡಿಯುವ ನೀರಿನ ವಿಚಾರಕ್ಕೆ ಬಂದರೆ, ಹಿಂದೆ ಮಾನ್ಯ ದೇವೇಗೌಡರು ಇದ್ದಂಥ ಕಾಲದಲ್ಲಿ ಮತ್ತು ಈಗ ಮಾನ್ಯ ಜೆ.ಹೆಚ್.ಪಟೇಲ್‌ರವರು ಮುಖ್ಯ ಮಂತ್ರಿಗಳಾಗಿರತಕ್ಕಂಥ ಕಾಲದಲ್ಲಿ ಸಾಧನೆ ಮಾಡಿರತಕ್ಕಂಥದ್ದನ್ನು ತಾವು ಯೋಚನೆ ಮಾಡಿ. 1995-96ನೇ ಸಾಲಿಗೆ ನಮ್ಮ ಆಯವ್ಯಯದಲ್ಲಿ ಕೊಟ್ಟಿರತಕ್ಕಂಥ ಹಣ ಕೇವಲ 108.40 ಕೋಟಿ ರೂಪಾಯಿಗಳಾಗಿದ್ದರೆ, ನಾವು ಖರ್ಚು ಮಾಡಿರುವುದು 160.54 ಕೋಟಿ ರೂಪಾಯಿಗಳು. 1995-96ರ ಹಿಂದಿನ ಸಾಲಿನಲ್ಲಿ ಅಂದರೆ 1994-95ರಲ್ಲಿ ತಾವು ಮಾಡಿರತಕ್ಕಂಥ ಖರ್ಚು ಎಷ್ಟು? ಕೇವಲ 108.40 ಕೋಟಿ ರೂಪಾಯಿಗಳು. ಅದರಲ್ಲಿ ಕೂಡ ನಮ್ಮ ಸರ್ಕಾರ ಡಿಸೆಂಬರ್‌ನಿಂದ 3 ತಿಂಗಳು ಅಧಿಕಾರದಲ್ಲಿತ್ತು. 3 ತಿಂಗಳಲ್ಲಿ ನಮ್ಮ ಪಾಲೂ ಸೇರಿ ಇದರಲ್ಲಿ ಖರ್ಚು ಆಗಿರತಕ್ಕಂಥಾದ್ದು ಇಷ್ಟು, ತಮ್ಮ ಮಂತ್ರಿ ಮಂಡಲ ಇದ್ದಂಥ ಕಾಲದಲ್ಲಿ, ಹಿಂದಿನ ಸರ್ಕಾರ ಇದ್ದಾಗ 1993-94ರ ಸಾಲಿಗೆ ಆಯವ್ಯಯದಲ್ಲಿ ಮಾಡಿರತಕ್ಕಂಥ ಖರ್ಚು 90.74 ಕೋಟಿ ರೂಪಾಯಿಗಳು. ಈ ವರ್ಷ ಅಂದರೆ 1996-97ನೇ ಸಾಲಿನಲ್ಲಿ ನಮ್ಮ ಹಣಕಾಸಿನ ಸಚಿವರು, ಸನ್ಮಾನ್ಯ ಜೆ.ಹೆಚ್. ಪಟೇಲರ ನೇತೃತ್ವದ ಈ ಸರ್ಕಾರ, 319.78 ಕೋಟಿ ರೂಪಾಯಿ ಗಳನ್ನು ಖರ್ಚು ಮಾಡಲು ಹೊರಟಿದೆ. ಇದು ಯಾವ ಕಾಲದಲ್ಲಿಯೂ ಕೂಡ ಕರ್ನಾಟಕದ ಇತಿಹಾಸದಲ್ಲಿ ಕುಡಿಯುವ ನೀರಿನ ವಿಚಾರಕ್ಕಾಗಿ , ಜನಗಳಿಗೆ ಕನಿಷ್ಟವಾಗಿರತಕ್ಕಂಥ ಅಗತ್ಯವನ್ನು ಕೊಡಲಿಕ್ಕಾಗಿ ಎಷ್ಟು ಕ್ವಾಂಟಮ್ ಜಂಪ್ ಆಗಿದೆ ಎನ್ನುವುದನ್ನು ಯೋಚನೆ ಮಾಡಿ. 1995-96ನೇ ಸಾಲಿನಲ್ಲಿ ಶೇ. 48ರಷ್ಟು ಹೆಚ್ಚುವರಿಯಾಗಿರತಕ್ಕಂಥ ಕೆಲಸವಾಗಿದ್ದರೆ, 1996-97ನೇ ಸಾಲಿನಲ್ಲಿ 319.78 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಮೀಸಲಾಗಿಟ್ಟು ಕೆಲಸ ಮಾಡುತ್ತಿದ್ದೇವೆ. ಅಂದರೆ, ನಮ್ಮ ಈ ಸರ್ಕಾರ ಮತ್ತು ಕೇಂದ್ರದಲ್ಲಿರತಕ್ಕಂಥ ದೇವೇಗೌಡರ ಸರ್ಕಾರಗಳೆರಡೂ ಕನಿಷ್ಟ ಅಗತ್ಯಗಳ ಬಗ್ಗೆ ನಾವು ಬೇಡಿಕೆಯನ್ನು ಮತ್ತು ಸವಲತ್ತುಗಳನ್ನು ಒದಗಿಸಿಕೊಡಬೇಕು ಎನ್ನತಕ್ಕಂಥದ್ದು ನಮ್ಮ ಮುಖ್ಯ ಉದ್ದೇಶ. ತಾವು ಅಧಿಕಾರ ಮಾಡುತ್ತಿದ್ದಂಥ ಸಂದರ್ಭದಲ್ಲಿ 89 ತಾಲ್ಲೂಕುಗಳಲ್ಲಿ ಉದ್ಯೋಗ ದೃಢೀಕರಣ ಯೋಜನೆ ಇರಲಿಲ್ಲ ಎನ್ನುವಂಥ ಕಾರಣಕ್ಕಾಗಿ ತಾವು ನೆಮ್ಮದಿ

ಎನ್ನತಕ್ಕಂಥ ಒಂದು ಯೋಜನೆಯನ್ನು ಮಾಡಿದಿರಿ. ಆ ಸಮೃದ್ಧಿ ಯೋಜನೆ ಕೇವಲ ಒಂದು ರಾಜ್ಯ ಸರ್ಕಾರದ ಕಾರ್ಯಕ್ರಮ ಆಗಿದ್ದರಿಂದ, ಸಂಪನ್ಮೂಲಗಳ ಕೊರತೆ ಇದ್ದುದರಿಂದ ಕೇವಲ 10 ಲಕ್ಷ, 15 ಲಕ್ಷ , 5 ಲಕ್ಷ ಗಳನ್ನು ಮಾತ್ರ ಕೊಡಲು ಸಾಧ್ಯವಾಗಿತ್ತು . ಆದರೆ ಉದ್ಯೋಗ ದೃಢೀಕರಣ ಯೋಜನೆಯಲ್ಲಿ ಒಂದು ಕೋಟಿ ರೂಪಾಯಿಗಳವರೆಗೂ ಕೂಡ ನಾವು ಖರ್ಚು ಮಾಡಲು ಸಾಧ್ಯತೆ ಇದೆ. ಈ ಕಾರಣಕ್ಕಾಗಿ ನಾವು ಅಧಿಕಾರ ತೆಗೆದುಕೊಂಡಂಥ ಸಂದರ್ಭದಲ್ಲಿ 89 ತಾಲ್ಲೂಕುಗಳಲ್ಲಿ ಇದ್ದುದು ಮುಂದೆ ಅದು 119 ತಾಲ್ಲೂಕುಗಳಿಗೆ ಆಯಿತು. ದೇವೇಗೌಡರು ಪ್ರಧಾನ ಮಂತ್ರಿಗಳಾದ ತಕ್ಷಣ ಅದು 133 ತಾಲ್ಲೂಕುಗಳಾಗಿವೆ. ಅವರು ಮೊನ್ನೆ ಬಂದಾಗ ಕೂಡ ಹೇಳಿದರು , ಈ ಒಂದು ಯೋಜನೆಯನ್ನು ಇಡೀ ಭಾರತ ದೇಶದ ಎಲ್ಲಾ ತಾಲ್ಲೂಕುಗಳಿಗೂ, ಎಲ್ಲಾ ಬ್ಲಾಕುಗಳಿಗೂ ಇದನ್ನು ನಾನು ಅನ್ವಯ ಮಾಡುತ್ತೇವೆ, ಎಂದು ಹೇಳಿದರು. ಇದಕ್ಕೆ ನೀವು ಶಾಹಬಾಸ್‌ಗಿರಿಯನ್ನು ಕೊಡಬೇಕು. ನಿಮ್ಮ ಬೆಂಬಲದಿಂದ ನಾವು ಸರ್ಕಾರದಲ್ಲಿದ್ದೇವೆ, ಅದು ನಿಜ. ಆದರೆ ಇವತ್ತು ಇಂಥ ಚಿಂತನೆಯನ್ನು ಯೋಚನೆ ಮಾಡಿ, ಉದ್ಯೋಗವನ್ನು ಕೊಡತಕ್ಕಂಥಾದ್ದು, ಉದ್ಯೋಗ ಪಡೆಯುತಕ್ಕಂಥಾದ್ದು ಅವರ ಆಜನ್ಮ ಸಿದ್ಧ ಹಕ್ಕು. ಅದನ್ನು ಒದಗಿಸಬೇಕಾಗಿರತಕ್ಕಂಥಾದ್ದು ಒಂದು ನಾಗರೀಕ ಸರ್ಕಾರದ ಕರ್ತವ್ಯ. ಅದನ್ನು ಮಾಡಿ ಕೊಡಲಿಕ್ಕಾಗಿ ಇಡೀ ನಮ್ಮ 175 ತಾಲ್ಲೂಕುಗಳಿಗೂ ಕೂಡ ಉದ್ಯೋಗ ದೃಢೀಕರಣ ಯೋಜನೆಯನ್ನು ಮುಂದೆ ಒಂದೆರಡು ತಿಂಗಳಲ್ಲಿ ಪ್ರಕಟಣೆಯಾಗುತ್ತದೆ, ಜಾರಿಗೊಳಿಸಲ್ಪಡುತ್ತದೆ. ನಾವು ಬೇರೆಬೇರೆ ಕಾರ್ಯಕ್ರಮಗಳ ಅಡಿಯಲ್ಲಿ ಮಾಡಿರತಕ್ಕಂಥಾದ್ದು ಸುಮಾರು 1212 ಹಳ್ಳಿಗಳಲ್ಲಿ , 1200 ಹಳ್ಳಿಗಳಿಗೆ ಸುಮಾರು 447 ಕೋಟಿ ರೂಪಾಯಿಗಳನ್ನು ವಿಶ್ವ ಬ್ಯಾಂಕಿನ ಯೋಜನೆಯಲ್ಲಿ 1989ನೇ ಇಸವಿಯಲ್ಲಿ ಅದರ ಬಗ್ಗೆ ಪ್ರಸ್ತಾವಗಳು ನಡೆದ್ದವು . 1993ರಲ್ಲಿ ಅದರ ಬಗ್ಗೆ ಒಂದು ಒಪ್ಪಂದವಾಗಿ ಕರಾರುಗಳಿಗೆ ಸಹಿ ಹಾಕಲು ಹೊರಟಿತ್ತು. ಆದರೂ ಕೂಡ ಅದನ್ನು ಯಾರಿಗೆ ಕೊಡಬೇಕು, ಯಾವ ರೀತಿಯಾಗಿ ವಿಲೇವಾರಿ ಮಾಡಬೇಕು ಎನ್ನುವಂಥ ವಿಚಾರದಲ್ಲಿ ಸುಮಾರು ಎರಡೂವರೆ ವರ್ಷಗಳ ಕಾಲ ಹಿಂದಿನ ಸರ್ಕಾರ ನಿಷ್ಕ್ರಿಯವಾಗಿತ್ತು. ವಿಶ್ವ ಬ್ಯಾಂಕ್ ಯೋಜನೆ ಇದೆ ಎನ್ನುವಂಥ ಕಾರಣಕ್ಕಾಗಿ, ಆಯ್ಕೆಯಾಗಿರತಕ್ಕ ಈ 1200 ಗ್ರಾಮಗಳಿಗೆ ಬೇರೆ ಯಾವ ಯೋಜನೆಯ ಮೂಲಕವಾಗಿಯೂ ನಾವು ಹಣವನ್ನು ಕೊಡಲು ಸಾಧ್ಯವಾಗಿರಲಿಲ್ಲ. ಆದರೆ ಇವತ್ತು ಅದಕ್ಕೆ ಒಪ್ಪಿಗೆ ಕೊಟ್ಟಿದ್ದರಿಂದ , ಕಳೆದ 18- 19 ತಿಂಗಳ ಅವಧಿಯ ನಮ್ಮ ಈ ಸರ್ಕಾರ 447 ಕೋಟಿ ರೂಪಾಯಿಗಳ ವಿಶ್ವ ಬ್ಯಾಂಕ್ ಯೋಜನೆಯ ಮೊದಲನೆಯ ಹಂತದ ಕಾರ್ಯಕ್ರಮವನ್ನು ನಾವು ಪ್ರಾರಂಭ ಮಾಡಿದ್ದೇವೆ. ಹಾಗೆಯೇ ಡೆನ್ಮಾರ್ಕಿನ ಪ್ರಧಾನ ಮಂತ್ರಿಗಳನ್ನು ನಮ್ಮ ಬಾಗೇಪಲ್ಲಿಯ ಮಿಟ್ಟೇಮರಿಗೆ ಕರೆದುಕೊಂಡು ಹೋಗಿ ತೋರಿಸಿದ್ದರಿಮದ ಈಗ ಅವರು 39 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೊಟ್ಟಿದ್ದಾರೆ. ಇಡೀ ಬಿಜಾಪುರ ಜಿಲ್ಲೆಯನ್ನು, ಇಡೀ ಚಿತ್ರದುರ್ಗ ಜಿಲ್ಲೆಯನ್ನು, ಇಡೀ ಕೋಲಾರ ಜಿಲ್ಲೆಯಲ್ಲಿರತಕ್ಕಂಥ ಎಲ್ಲಾ ತಾಲ್ಲೂಕುಗಳಿಗೆ ನಮ್ಮ ರಾಜ್ಯ ಸರ್ಕಾರದಿಂದ ಕೊಡತಕ್ಕಂಥ 13 ಕೋಟಿ ರೂಪಾಯಿಗಳು, ಅವರು ಕೊಡುವಂಥ 39 ಕೋಟಿ ರೂಪಾಯಿಗಳು, ಒಟ್ಟು 51 ಕೋಟಿ ರೂಪಾಯಿಗಳ ಯೋಜನೆಯನ್ನು ಈ ಮೂರು ಜಿಲ್ಲೆಗಳಿಗೆ ಅನ್ವಯಿಸಿದ್ದೇವೆ. ಇದನ್ನು ಹಿಂದೆ ಅವರು ಮಾಡಲಿಲ್ಲ ಎಂದು ಹೇಳಿದರೆ ಅವರು ಕೋಪಿಸಿಕೊಳ್ಳಬೇಕಾದಂಥ ಅಗತ್ಯವಿಲ್ಲ.

ಹಾಗೆಯೇ ಇವತ್ತು ನೆದರ್‌ಲ್ಯಾಂಡಿನ ಯೋಜನೆಯಲ್ಲಿರತಕ್ಕಂಥ ಕಾರ್ಯಕ್ರಮಗಳಿಗೆ ಒತ್ತನ್ನು ಕೊಟ್ಟಿದ್ದೇವೆ. ಬರುವ ತಿಂಗಳಿನಲ್ಲಿ ಸನ್ಮಾನ್ಯ ಯಾವಗಲ್‌ರವರು ಇರತಕ್ಕಂಥ ಪ್ರದೇಶವಾದ ನರಗುಂದದಲ್ಲಿ ಎರಡೂವರೆ ಕೋಟಿ ರೂಪಾಯಿಗಳ ಒಂದು ಹೊಸ ರೇಟಿಂಗ್‌ನಲ್ಲಿ ಒಂದು ಕೆರೆಯನ್ನು ಕಟ್ಟಿಸುವಂಥ ದೊಡ್ಡದಾದ ಒಂದು ವ್ಯವಸ್ಥೆಯನ್ನು ಮಾಡಿ ಕುಡಿಯುವ ನೀರಿಗೆ ಶಂಕು ಸ್ಥಾಪನೆಯನ್ನು ಮಾನ್ಯ ಜೆ.ಹೆಚ್. ಪಟೇಲ್‌ರವರು ಮಾಡುವವರಿದ್ದಾರೆ. ಈ ನೆದರ್‌ಲ್ಯಾಂಡಿನ ಯೋಜನೆ ಯಲ್ಲಿನ ಹಣ ನಮ್ಮ ಸರ್ಕಾರಕ್ಕೆ ಪುಕ್ಕಟೆಯಾಗಿ ಕೊಟ್ಟಿರತಕ್ಕಂಥ ಹಣ. ಅವರು ನಮ್ಮ ಹಿಂದುಳಿದಿರತಕ್ಕ ಈ ಅಭಿವೃದ್ಧಿಶೀಲ ರಾಷ್ಟ್ರಕ್ಕೆ ಕೊಟ್ಟಿರತಕ್ಕಂಥ ಕೊಡುಗೆ. ಇದನ್ನು ಕಳೆದ ನಾಲ್ಕಾರು ವರ್ಷಗಳಿಂದ ಉಪಯೋಗಿಸಲು ಸಾಧ್ಯವಾಗಿರಲಿಲ್ಲ. ಆದರೆ ಇದನ್ನು ಕಳೆದ 18 ತಿಂಗಳುಗಳಿಂದ ಉಪಯೋಗಿಸಿ ಕೊಳ್ಳತಕ್ಕಂಥ ಕಾರ್ಯಕ್ರಮಗಳನ್ನು ನಾವು ಮಾಡಿಕೊಂಡಿದ್ದೇವೆ. ಆದ್ದರಿಂದ ಕೇವಲ 2-3 ತಿಂಗಳಲ್ಲಿ ಮುಖ್ಯ ಮಂತ್ರಿಗಳಾದ್ಥಂಥ ಶ್ರೀಮಾನ್ ಜೆ.ಹೆಚ್. ಪಟೇಲ್‌ರವರ ನೇತೃತ್ವದಲ್ಲಿರತಕ್ಕಂಥ ಸರ್ಕಾರಕ್ಕೆ ಈ ವಿಚಾರಗಳ ಬಗ್ಗೆ ಅನಾವಶ್ಯಕವಾಗಿರತಕ್ಕಂಥ ಟೀಕೆ, ದುರುದ್ದೇಶದಿಂದ ಮಾಡಿರತಕ್ಕಂಥ ಟೀಕೆ ಎಂದು ಹೇಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಶ್ರೀರಂಗದೇವರಾಯಲುರವರು ಮಾತನಾಡಲು ಎದ್ದು ನಿಂತರು)

ಉಪಾಧ್ಯಕ್ಷರು: ಮತ್ತೊಬ್ಬರು ಮಾತನಾಡುವಾಗ ತಾವು ಈ ರೀತಿ ಎದ್ದು ನಿಂತರೆ ಹೇಗೆ? ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಶ್ರೀರಂಗದೇವರಾಯಲು : ಉಪಾಧ್ಯಕ್ಷರೇ, ಒಂದು ನಿಮಿಷ. ಮಾನ್ಯ ಮಂತ್ರಿಗಳು ನಾವು ನೆದರ್‌ಲ್ಯಾಂಡ್ ಸರ್ಕಾರದಿಂದ ಏನನ್ನೂ ತೆಗೆದುಕೊಳ್ಳಲು ಆಗಿಲ್ಲ ಎಂದು ಹೇಳಿದ್ದುದು ಸತ್ಯಕ್ಕೆ ದೂರವಾದುದು. ನಮ್ಮ ಸರ್ಕಾರ ಇದ್ದಾಗ, ನಾನು ಕಾಡಾ ಮಂತ್ರಿಯಾಗಿದ್ದಾಗ 10 ಕೋಟಿ ರೂಪಾಯಿಗಳನ್ನು ಪುಕ್ಕಟೆಯಾಗಿ ತೆಗೆದುಕೊಂಡಿದ್ದೇವೆ. ಅದೂ ಅಲ್ಲದೆ ಅವರು ಸೆಲಿನಿಟಿ ಸಾಯಿಲ್ಸಾಗೆ ಪುಕ್ಕಟೆಯಾಗಿ ಶೇ. 80ರಷ್ಟು ಗ್ರಾಂಟನ್ನು ನಮಗೆ ಕೊಟ್ಟಿದ್ದಾರೆ, ಶೇ. 20ರಷ್ಟನ್ನು ನಾವು ಕೊಡಬೇಕಾಗಿತ್ತು. ಪ್ರತಿಯೊಂದು ಕಾಡಾ ಆಫೀಸಿನಲ್ಲಿ ಇದನ್ನು ನಾನು ಎಲ್ಲರಿಗೂ ಹೇಳಿದ್ದೇನೆ. ನನ್ನ ಗಂಗಾವತೀ ಕ್ಷೇತ್ರಕ್ಕೆ ನಾವು 5 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೇವೆ ಎಂದು ನಾನು ಅದರ ಬಗ್ಗೆ ಹೆಮ್ಮೆಪಟ್ಟು ಹೇಳುತ್ತಿದ್ದೇನೆ.

ಶ್ರೀ ಎಂ. ಪಿ.ಪ್ರಕಾಶ್: ಸನ್ಮಾನ್ಯ ಉಪಾಧ್ಯಕ್ಷರೇ, ಸರ್ಕಾರ ಎನ್ನುವಂಥಾದ್ದು ನಿರಂತರವಾಗಿ ಇರತಕ್ಕಂಥಾದ್ದು, ಆ ಸರ್ಕಾರ, ಈ ಸರ್ಕಾರ ಎನ್ನುವ ಪ್ರಶ್ನೆಯಲ್ಲ. ಅವರು ಮಾಡಿಲ್ಲ ಎನ್ನುವಂಥ ಮಾತನ್ನು ನಾವು ಹೇಳಿಲ್ಲ. ಆದರೆ ನಾವು ಹೆಚ್ಚು ದಕ್ಷವಾಗಿ, ಹೆಚ್ಚು ಪ್ರಾಮಾಣಿಕವಾಗಿ, ಹೆಚ್ಚು ಶಕ್ತಿಯುತವಾಗಿ ಕೆಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದೇವೆ. ಸರ್ಕಾರ ತನ್ನ ಕಾರ್ಯಕ್ರಮಗಳನ್ನು ರೂಪಿಸುವಾಗ ತೋರಿಸುವಂಥ ಜಾಣ್ಮೆ, ಅದು ಯಾರ

ಪರವಾಗಿ ನಿಲ್ಲುತ್ತದೆ ಎನ್ನತಕ್ಕಂಥ ಅವರ ರಾಜಕೀಯ ಇಚ್ಛಾಶಕ್ತಿ ಇವುಗಳ ಮೇಲೆ ರಾಜಕೀಯವಾಗಿ ಸರ್ಕಾರಗಳನ್ನು ತೂಕ ಮಾಡಬೇಕಾಗುತ್ತದೆಯೇ ವಿನಃ ಆಯಾ ಸರ್ಕಾರಗಳ ದೈನಂದಿನ ಕರ್ತವ್ಯಗಳನ್ನು ನಿರ್ವಹಿಸಿದಕ್ಕಾಗಿ ಶಹಬಾಸ್‌ಗಿರಿ ಪಡೆಯುವುದಿಲ್ಲ, ಅದು ಇತಿಹಾಸದಲ್ಲಿ ಉಳಿಯುವುದಿಲ್ಲ. ಹಾಕಿಕೊಂಡಿರುವು ಕಾರ್ಯಕ್ರಮಗಳ ಆಧಾರದ ಮೇಲೆ , ಮಾಡಿರತಕ್ಕಂಥ ಕೆಲಸಕಾರ್ಯಗಳು ಎನಿದೆ ಇವುಗಳಲ್ಲಿ ಒಂದು ವಿಚಾರವನ್ನು ತಮ್ಮ ಮುಂದಿದೆ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. 'ನಿರ್ಮಲ ಕರ್ನಾಟಕ' ಯೋಜನೆಯಲ್ಲಿ ಇಡೀ ಭಾರತ ಸರ್ಕಾರದ ಆಯವ್ಯಯದಲ್ಲಿ ಇರತಕ್ಕಂಥಾದ್ದು ಕೇವಲ 60 ಕೋಟಿ ರೂಪಾಯಿಗಳು. ಆದರೆ ಕಳೆದ ಅಕ್ಟೋಬರ್ 1995ರಲ್ಲಿ ಶ್ರೀಮಾನ್ ದೇವೇಗೌಡರವರು ಮುಖ್ಯಮಂತ್ರಿಗಳು ಅವತಿ ಗ್ರಾಮದಲ್ಲಿ ಪ್ರಾರಂಭೋತ್ಸವ ಮಾಡಿರತಕ್ಕಂಥದ್ದು, ಅದಕ್ಕೆ ನಮ್ಮ ರಾಜ್ಯ ಸರ್ಕಾರ ಆಯವ್ಯಯದಲ್ಲಿ ಕೊಟ್ಟಿರತಕ್ಕಂಥಾದ್ದು ಸುಮಾರು 80 ಕೋಟಿ ರೂಪಾಯಿಗಳು. ಕಳೆದ 10 ವರ್ಷಗಳಲ್ಲಿ ಶೌಚಾಲಯ ಕಾರ್ಯಕ್ರಮಗಳಿದ್ದರೂ ಕೂಡ ಅವುಗಳನ್ನು ಕಟ್ಟಿರತಕ್ಕಂಥಾದ್ದು ಕೇವಲ ಒಂದು ಲಕ್ಷ ಆಗಿದ್ದರೆ, ಈಗ ನಾವು ಒಂದು ಲಕ್ಷದ 75 ಸಾವಿರ ಕೌಟುಂಬಿಕ ಶೌಚಾಲಯಗಳನ್ನು ಕಟ್ಟಿದ್ದೇವೆ. ಇದನ್ನು ಈ ರೀತಿಯಾಗಿ ಹೇಳತಕ್ಕಂಥ ಪ್ರಶ್ನೆಯ ಜೊತೆಜೊತೆಗೆ ರಾಜಕೀಯವಾಗಿ ಸಾಮಾನ್ಯವಾಗಿ ಕೆಲವು ವಿಚಾರಗಳ ಬಗ್ಗೆ ಪತ್ರಿಕೆಯಲ್ಲಿ ಬಂದಿರತಕ್ಕಂಥಾದ್ದು ಇದೆ. ಹುಬ್ಬಳ್ಳಿಯ ಘಟನೆಯನ್ನು ಅವರು ಬಹಳ ಭಾವುಕರಾಗಿ ಪ್ರಸ್ತಾಪ ಮಾಡಿದರು. ಹುಬ್ಬಳ್ಳಿ ಘಟನೆಯ ಬಗ್ಗೆ ಯಾರಾದರೂ ತಮ್ಮದೇ ಆಗಿರತಕ್ಕಂಥ ಅಭಿಪ್ರಾಯಗಳನ್ನು ವ್ಯಕ್ತ ಮಾಡಲು ಸರ್ವಸ್ವತಂತ್ರರು. ಅದಕ್ಕೆ ಪ್ರಜಾಪ್ರಭುತ್ವದ ವ್ಯವಸ್ಥೆ ಎಂದು ಕರೆಯುತ್ತೇವೆ. ಆದರೆ ಆಳುವ ಪಕ್ಷಕ್ಕೆ ಇರುವಂತ ಜವಾಬ್ದಾರಿಯ ಜೊತೆಗೆ, ಆ ಚಳುವಳಿಗಳನ್ನು ವ್ಯಕ್ತ ಮಾಡಲು ಸರ್ವಸ್ವತಂತ್ರರು. ಅದಕ್ಕೆ ಪ್ರಜಾಪ್ರಭುತ್ವದ ವ್ಯವಸ್ಥೆ ಎಂದು ಕರೆಯುತ್ತೇವೆ. ಆದರೆ ಆಳುವ ಪಕ್ಷಕ್ಕೆ ಇರುವಂಥ ಜವಾಬ್ದಾರಿಗಳು ಇವೆ. ಅಲ್ಲಿ ಗಲಭೇಯನ್ನು ಮಾಡುವುದರ ಮೂಲಕವಾಗಿ, ಅದನ್ನು ಇವರು ಮಾಡಿದ್ದಾರೆ. ಅವರು ಮಾಡಿದ್ದಾರೆ ಎನ್ನುವಂಥ ಪ್ರಶ್ನೆಯಲ್ಲ. ಪ್ರಧಾನ ಮಂತ್ರಿಗಳು ಹುಬ್ಬಳ್ಳಿಗೆ ಬರುತ್ತಾರೆ ಎನ್ನುವಂಥ ಕಾರಣಕ್ಕಾಗಿ ಅವರು ಅಲ್ಲಿಗೆ ಬರಬಾರದು ಎಂದು ಹಠ ಹಿಡಿಯತಕ್ಕಂಥವಾದ ಯಾವುದು? ಅದೇ ರೀತಿಯಾಗಿ ಗೋಡೆ ಬರಹಗಳನ್ನು ಅಶ್ಲೀಲವಾಗಿ ಬರೆದರು. ಅಶ್ಲೀಲವಾಗಿ ಬರೆಯಲಿಲ್ಲ ಎನ್ನುವ ಒಂದು ಮಾತನ್ನು ಹೇಳಿದ್ದರೂ ಕೂಡ ಗೋಡೆ ಬರಹಗಳನ್ನು ಬರೆಯುವಂಥ ವಿಚಾರಕ್ಕೂ ಕೂಡ ಕಾನೂನು ಇದೆ. ಯಾರೂ ಎಲ್ಲಿ ಬೇಕಾದರೂ ಕೂಡ ಎಲ್ಲಾ ಗೋಡೆಗಳ ಮೇಲೆ ಬರೆಯುವುದಕ್ಕೆ ಸಾಧ್ಯತೆ ಇಲ್ಲ. ಕಾನೂನಿನ ಪ್ರಕಾರವಾಗಿ ಅವರಲ್ಲಿ ಯಾರಾದರೂ 4 ಮಂದಿಯನ್ನು ದಸ್ತಗಿರಿ ಮಾಡಿದರೆ, ಆದರಲ್ಲಿ ಪ್ರಸ್ತಾಪ ಮಾಡಿರತಕ್ಕಂಥ ಶಾಸಕರು ಯಾರು? ಆದರೆ ಅವರನ್ನು ಅಮಾನತ್ತಿನಲ್ಲಿಡಬೇಕೆಂದು ಹಠ ಹಿಡಿದರು.

(ಗೊಂದಲ)

ಒಬ್ಬ ಶಾಸಕರಾಗಿರತಕ್ಕಂಥವರು ಅವರನ್ನು ಜಾಮೀನಿನ ಮೇಲೆ ಬಿಡಿ ಎಂದು ಕೇಳತಕ್ಕಂಥದ್ದು ಬೇರೆ. ಆದರೆ ತತ್‌ಕ್ಷಣದಲ್ಲಿ ಅಲ್ಲಿ ಕಾರ್ಯನಿರ್ವಹಿಸುತ್ತಿರುವಂಥ ಅಧಿಕಾರಿಯನ್ನು ಅಮಾನತ್ತಿನಲ್ಲಿ

ಇಡಬೇಕೆಂದು ಹೇಳಿ ಆಗ್ರಹ ಮಾಡತಕ್ಕಂಥದ್ದು ಒಳ್ಳೆಯದಲ್ಲ. ಅದು ವೈಯಕ್ತಿಕ ಕಾರಣಗಳ ಮೂಲಕ ಮಾಡಿರತಕ್ಕಂಥ ಆಗ್ರಹ. ಮಾನ್ಯ ಪ್ರಧಾನ ಮಂತ್ರಿಗಳು ಅಲ್ಲಿಗೆ ಬಂದಿರತಕ್ಕಂಥ ಸಂದರ್ಭದಲ್ಲಿ ಅಲ್ಲಿ ಪಾಟೀಲ ಪುಟ್ಟಪ್ಪನವರು ರೈಲ್ವೆ ವಲಯವನ್ನು ಮಾಡಬೇಕೆಂದು ಹೇಳಿ ಮಾಡಿರತಕ್ಕಂಥ ಸತ್ಯಾಗ್ರಹದಲ್ಲಿ ಯಾರನ್ನೂ ಕೂಡ ನಾವು ಬಂಧಿಸಿಲ್ಲ. ಇದರ ಬಗ್ಗೆ ತಾವು ಯೋಚನೆ ಮಾಡಿ. ಅವರು ತಮ್ಮ ನಿರಶನ ವ್ರತವನ್ನು ಪ್ರಾರಂಭ ಮಾಡಿದರು. ಅವರನ್ನು ನಾವು ಬಂಧಿಸುವಂಥ ಕೆಲಸವನ್ನು ಮಾಡಿಲ್ಲ. ಆದರೆ ಯಾರು ಶಾಸ್ವತವಾಗಿರತಕ್ಕಂಥ ಕಾರ್ಯಕ್ರಮಗಳನ್ನು ಮಾಡಿ ಪ್ರತಿಭಟನೆ ಮಾಡುತ್ತಾರೆ, ಅದಕ್ಕೆ ನಮ್ಮ ವಿರೋಧ ಇಲ್ಲ. ಪ್ರತಿಭಟನೆ ಎನ್ನತಕ್ಕಂಥದ್ದು ಕೂಡ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಒಂದು ಅಂಗ. ಆದ್ದರಿಂದ ಅದನ್ನು ನಾವು ಮಾನ್ಯ ಮಾಡುತ್ತೇವೆ. ಅಲ್ಲಿ ಒಂದು ರೈಲ್ವೆ ವಲಯ ಬರಬೇಕು ಎನ್ನತಕ್ಕಂಥ ಮಾತು ಏನು ಇದೆ, ಅದಕ್ಕೂ ಕೂಡ ನಮ್ಮ ಸ್ವಾಗತವಿದೆ. ಆದರೆ ಕೇಳುವಂಥ ವಿಚಾರದಲ್ಲೂ ಕೂಡ ನಾವು ಇರುವಂಥ ಕಾನೂನಿನ ಸುವ್ಯವಸ್ಥೆಯುನ್ನು ಕೈಗೆ ತೆಗೆದುಕೊಳ್ಳತಕ್ಕಂಥ ಪ್ರಯತ್ನ ಮಾಡತಕ್ಕಂಥದ್ದು ಆಗಲಿ, ಅಲ್ಲಿರುವಂಥ ಠಾಣೆಯ ಅಧಿಕಾರಿಯನ್ನು ಅಧಿಕಾರದಿಂದ ತತ್‌ಕ್ಷಣದಿಂದಲೇ ಅಮಾನತ್ತಿನಲ್ಲಿಡಬೇಕು ಎನ್ನುವಂಥ ಮಾತನ್ನು ಹೇಳಿದರೆ, ಅದು ಎಷ್ಟರಮಟ್ಟಿಗೆ ಗ್ರಾಹ್ಯವಾಗುತ್ತದೆ? ಅದನ್ನು ಎಷ್ಟರಮಟ್ಟಿಗೆ ನಾವು ಪುರಸ್ಕರಿಸಲಿಕ್ಕೆ ಸಾಧ್ಯತೆ ಆಗುತ್ತದೆ? ನಾಳೆ ಯಾರೇ ಅಧಿಕಾರಕ್ಕೆ ಬಂದರೂ ಕೂಡ ಸರ್ಕಾರವನ್ನು ಈ ರೀತಿ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಅವರೂ ಕೂಡ ಜವಾಬ್ದಾರಿಯುತವಾಗಿರತಕ್ಕಂಥ ರಾಷ್ಟ್ರೀಯ ಪಕ್ಷದವರು ಆಗಿದ್ದಾರೆ. ಮೂರು ರಾಜ್ಯಗಳಲ್ಲಿ ಅವರು ಅಧಿಕಾರವನ್ನು ಮಾಡಿದ್ದಾರೆ. ಆದ್ದರಿಂದ ಇಲ್ಲಿರತಕ್ಕಂಥ ಪ್ರಶ್ನೆ, ಯಾರು ತಮ್ಮದೇ ಆಗಿರತಕ್ಕಂಥ ಸಭೆಗಳನ್ನು ನಡೆಸಿ ಕೊಳ್ಳುವುದಕ್ಕೆ ಸ್ವಾತಂತ್ರ್ಯ ಸಿಗದಿದ್ದರೆ, ನಾವು ಪೂರ್ವಭಾವಿ ಸಿದ್ದತೆಗಳನ್ನು ಮಾಡಿಕೊಳ್ಳುವುದಕ್ಕೆ ನಾನು ಮತ್ತು ನನ್ನ ಸಚಿವ ಸಹೋದ್ಯೋಗಿಗಳಾದ ಮಾನ್ಯ ಉದಾಸಿಯವರು, ಮಾನ್ಯ ಎಸ್. ಎನ್. ಪಾಟೀಲರು ಹೀಗೆ ನಾವೆಲ್ಲರೂ ಅಲ್ಲಿಗೆ ಹೋದಾಗ, ಅಲ್ಲಿ ಗಾಜಿನ ಮನೆಯಲ್ಲಿ ನಡೆಯತಕ್ಕಂಥ ಸಮ್ಮೇಳನದಲ್ಲಿ ನೀವು, ನಿಮ್ಮನ್ನು ಒಳಗಡೆ ಹೋಗಲಿಕ್ಕೆ ನಾವು ಬಿಡುವುದಿಲ್ಲ ಎನ್ನತಕ್ಕಂಥ ಪ್ರತಿಭಟನೆ ಮಾಡಿದಿರಿ. ಅಲ್ಲಿ ಇರತಕ್ಕಂಥ ಬೇಡಿಕೆ ಏನೆಂದರೆ-ಅಲ್ಲಿವಲಯ ರೈಲ್ವೆ ಆಗಬೇಕು, ಉಚ್ಚನ್ಯಾಯಾಲಯದ ಒಂದು ಪೀಠ ಅಲ್ಲಿ ಸ್ಥಾಪನೆಯಾಗಬೇಕು, ಎನ್ನುವುದು. ನಿಜ. ಅಷ್ಟಕ್ಕೆ ನಾವು ಕೂಡ ಜವಾಬ್ದಾರರು ಆಗಿದ್ದೇವೆ. ನಾವುಕೂಡ ಆ ಬೇಡಿಕೆಯನ್ನು ಇಟ್ಟಿದ್ದೇವೆ. ನಾವು ಪ್ರಧಾನ ಮಂತ್ರಿಗಳಿಗೆ, ಕೇಂದ್ರ ಸರ್ಕಾರಕ್ಕೆ ನಮ್ಮ ಅನಿಸಿಕೆಗಳನ್ನು ಮುಖ್ಯಮಂತ್ರಿಗಳ ಮುಖಾಂತರ ಅದನ್ನು ಮುಟ್ಟಿಸಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇವೆ. ಆದರೆ ನಮ್ಮ ರಾಜಕೀಯ ಪಕ್ಷದ ಕಾರ್ಯಕರ್ತರ ಸಂಘಟನೆಯಲ್ಲಿ ನೀವು ಕಾರ್ಯಕ್ರಮ ಮಾಡಬೇಡಿ ಎಂದು ತಡೆ ಹಿಡಿಯುವುದು ಸರಿಯಲ್ಲ. ನಾವು ಪ್ರಧಾನಮಂತ್ರಿಗಳಿಗೆ ಮತ್ತೊಂದು ಕಡೆಗೆ ಅವರ ಬೇಡಿಕೆಗಳನ್ನು ಇಟ್ಟುಕೊಳ್ಳುವುದಕ್ಕೆ ಹೋದರೆ, ಅವರು ಈ ಘಟನೆ he gets a hasty retreat ಎಂದು ಹೇಳಿ ಬರೆಯುವಂಥದ್ದು, ಈ ರೀತಿಯಾಗಿ ಪತ್ರಿಕೆಗಳ ಬಗ್ಗೆ ಕೂಡ ನಾವು ಟೀಕೆ ಮಾಡುತ್ತೇವೆ ಎನ್ನತಕ್ಕಂಥ ಮಾತು ಅಲ್ಲ. ನನಗೆ ಇರತಕ್ಕಂಥ ನಂಬಿಕೆ ಏನೆಂದರೆ ಪತ್ರಿಕಾ ಸ್ವಾತಂತ್ರ್ಯವನ್ನು ಎಲ್ಲಾ ಕಾಲದಲ್ಲಿಯೂ ಕಾಪಾಡಬೇಕೆಂದು ಹೇಳಿ ಈ ಪತ್ರಿಕೆಗಳ ಬಗ್ಗೆ ಸಂಪೂರ್ಣವಾದಂಥ ವಿಶ್ವಾಸವಿದೆ. ಎಷ್ಟುರಮಟ್ಟಿಗೆ

ನನಗೆ ವಿಶ್ವಾಸವಿದೆಯೆಂದು ಹೇಳಿದರೆ, " a cantankerous press, a ubiquitous press must be sufferred by those in authority in order to Preserve the ever greater values of freedom of expression and the right of the right of the people to know ."

We believe in that. But, at the same time how, ಯಾವ ರೀತಿಯಾಗಿ ಜವಾಬ್ದಾರಿಯನ್ನು ಮಾಡಬೇಕು

"Journalisam is not a business, but it is a Proffession. A Proffessional should be ready to accept standard and a sense of value" ನಾವು ಯಾವಾಗಲೂ ನೀತಿ ಸಂಹಿತೆಯನ್ನು ರೂಪಿಸಿಕೊಂಡಿದ್ದಾಗ, ಆ ಮಟ್ಟಿಗೆ ನಾವು ಟೀಕೆ ಮಾಡುತ್ತೇವೆಯೇ ವಿನಃ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ವಿರೋಧ ಮಾಡುತ್ತೇವೆ ಎನ್ನತಕ್ಕಂಥ ಮಾತು ಅಲ್ಲ. ಪತ್ರಿಕಾ ಸ್ವಾತಂತ್ರ್ಯ ಎನ್ನತಕ್ಕಂಥದ್ದು ಅದು ನಮ್ಮದೇ ಆಗಿರತಕ್ಕಂಥದ್ದು ಆಗಿರಲಿ, ಒಂದು ವೇಳೆ ನಮ್ಮನ್ನೇ ಉಗ್ರವಾಗಿ ಟೀಕೆ ಮಾಡಿದರೂ ಕೂಡ ಅದನ್ನು ಸ್ವಾಗತಮಾಡುತ್ತೇವೆ. ಏಕೆಂದರೆ ಆ ವಿಚಾರಗಳು ಜನಸಾಮಾನ್ಯರಿಗೆ ಗೊತ್ತಾಗಬೇಕು ಎನ್ನುವ ವಿಚಾರಕ್ಕಾಗಿ ನಾವು ಸ್ವಾಗತ ಮಾಡುತ್ತೇವೆ. ಇದಕ್ಕೆ ದುರುದ್ದೇಶಗಳು ಇರುತ್ತವೆ ಎನ್ನುವಂಥ ಮಾತನ್ನು ನಾವು ಈ ಸಂಡರ್ಭದಲ್ಲಿ ಏಕೆ ಹೇಳುತ್ತೇವೆಂದರೆ - ರಾಜಕೀಯ ನಡವಳಿಕೆಗಳು, ಸಾಮಾಜಿಕ ಸ್ಥಿತ್ಯಂತರಗಳು, ಬದಲಾವಣೆಗಳು ಬರತಕ್ಕಂಥ ಸಂದರ್ಭದಲ್ಲಿ ಒಂದು ಹೊಸ ಸಂಸ್ಕೃತಿಯು ಉಗಮವಾಗುತ್ತದೆ. ಹೊಸ ಸಂಸ್ಕೃತಿಯ ಉಗಮ ಆಗುವಂಥ ಸಂದರ್ಭದಲ್ಲಿ ನಮಗೆ ಗ್ರಾಹ್ಯವಾಗಲಾರದಂಥ ರೀತಿಯ ಒಮದು ವಿಫಲವಾಗತಕ್ಕಂಥ ಸಂದರ್ಭಗಳು ಇರುತ್ತವೆ. ಈ ಭಾರತದ ಇತಿಹಾಸದಲ್ಲಿ ಆಚಾರ್ಯ ಪುರುಷರು ಎಲ್ಲಾ ಕಾಲದಲ್ಲಿಯೂ ಕೂಡ ವಂದನಾರ್ಹರಾಗಿದ್ದಾರೆ. ಅವರು ಎಲ್ಲರಿಗೂ ಕೂಡ ಸಮಧಾನದ ಸಂಗತಿಗಳನ್ನು, ಜೀವನದ ಬದುಕಿನ ವಿಚಾರಗಳನ್ನು ಮಾತ್ರ ಮಾತನಾಡುತ್ತಾರೆ. ಅವರು ಬದುಕಿದ್ದಾಗಲೂ ಕೂಡ ಗೌರವಾನ್ವಿತರಾಗಿರುತ್ತಾರೆ. ಅವರು ಸತ್ತ ಮೇಲೆಯೂ ಗೌರವಾನ್ವಿತರಾಗಿರುತ್ತಾರೆ. ಆದರೆ ಅನೇಕ ವಿಭೂತಿ ಪುರುಷರು ಬದಲಾವಣೆಗಳನ್ನು ತರಬೇಕು, ಮೂಲಭೂತವಾಗಿರತಕ್ಕಂಥ ಎಲ್ಲಾ ಸಾಮಾಜಿಕ ಅಂಗಗಳ ವ್ಯವಸ್ಥೆಯಲ್ಲಿ ಒಂದು ಹೊಸ ದೃಷ್ಟಿ, ಒಂದು ಹೊಸನಾಡನ್ನು ಕಟ್ಟಬೇಕೆಂದು ಬಯಸಿರತಕ್ಕಂಥವರು ಅವರು ಮಹಮ್ಮದ್ ಪೈಗಂಬರ್ ಆಗಲಿ, ಜೀಸಸ್ ಕ್ರಿಸ್ತ ಆಗಲಿ, ಮಹಾತ್ಮ ಗಾಂಧಿ ಆಗಿರಲಿ, ಬಸವಣ್ಣನವರು ಆಗಿರಲಿ, ಬುದ್ಧ ಆಗಿರಲಿ ಅಂಬೇಡ್ಕರ್ ಆಗಿರಲಿ, ಅವರುಗಳು ಬದುಕಿದ್ದಾಗಲೂ ಕೂಡ ಪ್ರತಿರೋಧ, ವಿರೋಧವನ್ನು ಅನುಭವಿಸುತ್ತಾರೆ. ಸತ್ತ ನಂತರವೂ ಅವರೆಲ್ಲರಿಗೂ ಕೂಡ ಕಲ್ಲು ಹಾಕುವಂಥ ಪ್ರಯತ್ನವನ್ನು ಮಾಡುತ್ತಾರೆ. ಏಕೆಂದರೆ ಇಂತಹ ಬದಲಾವಣೆಗಳನ್ನು ತರತಕ್ಕಂಥ ಸ್ಥಿತಿ ಇದ್ದಾಗ ನಾವು ಒಂದು ಹೊಸ ಬದಲಾವಣೆಗಳನ್ನು ತರಬೇಕು ಎನ್ನುವಂಥ ಪ್ರಯತ್ನ ಮಾಡಿದಾಗ ಇದೆಲ್ಲಾ ಆಗುತ್ತದೆ. ಇವತ್ತು ಒಂದು ಹೊಸ ಸಂಸ್ಕೃತಿ ಏನಾಗಿದೆ? ರಾಗಿ ಮುದ್ದೆಯ ಸಂಸ್ಕೃತಿ ಧೆಹಲಿಯಲ್ಲಿ ಹೋಗಿ ಪ್ರಧಾನ ಮಂತ್ರಿಗಳ ಕಛೇರಿಯಲ್ಲಿ ಕುಳಿತಿದೆ. ಆದ್ದರಿಂದ ಈ ಹೊಸ ಸಂಸ್ಕೃತಿಯನ್ನು

ತರಬೇಕು ಎನ್ನುವಂಥ ಪ್ರಯತ್ನ ಮಾಡಿದಾಗ, ಅಕ್ಕಿ ಮತ್ತು ರಾಗಿಗಳ ವಿಚಾರದಲ್ಲಿ ಕನಕದಾಸರು, ಮೊದಲಾದವರು ವ್ಯಾಖ್ಯಾನ ಮಾಡಿದ್ದಾರೆ.

(ಗೊಂದಲ)

ಶ್ರೀ ಎಂ. ಪಿ.ಪ್ರಕಾಶ್: ಮಾನ್ಯ ಶಾಸಕರುಗಳೇ, ನಮ್ಮ ಸಂಸ್ಕೃತಿ ಯಾವುದೆಂದರೆ ಕನಕದಾಸರು ಪ್ರತಿಪಾದನೆ ಮಾಡಿದಂಥ ರಾಮಧ್ಯಾನ ಚರಿತ್ರೆಯ ಸಂಸ್ಕೃತಿ ನಮ್ಮದು. ಆದ್ದರಿಂದ ಅದನ್ನು ನಂಬದೇ ಇರತಕ್ಕಂಥವರು ಈ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾರೆ. ಒಟ್ಟಿನಲ್ಲಿ ನಾನು ಇಷ್ಟ ಮಾತ್ರ ಹೇಳುತ್ತೀನೆ, ತಾವು ಏನು ಮಾನ್ಯ ಜೆ.ಹೆಚ್ ಪಟೇಲ್‌ರವರ ನೇತೃತ್ವದಲ್ಲಿರತಕ್ಕಂಥ ಈ ಸರ್ಕಾರದ ಮೇಲೆ ಬಹಳ ಅವಸರದಲ್ಲಿ ತಂದಿರತಕ್ಕಂಥ, ಯೋಚನೆಯನ್ನು ಮಾಡಲಾರದಂಥ ರೀತಿಯಲ್ಲಿ ತಂದಿರತಕ್ಕಂಥ ಅವಿಶ್ವಾಸ ಗೊತ್ತುವಳಿಏನು ಇದೆ, ಅದು ತನ್ನದೇ ಆಗಿರತಕ್ಕಂಥ ಸಹಜ ಸಾವನ್ನು ಅಪ್ಪುತ್ತದೆ. ಆ ಗೊತ್ತುವಳಿಗೆ ಗೊತ್ತು-ಗುರಿ, ಮೊನಚು ಯಾವುದೂ ಇಲ್ಲ. ಆದರೆ ನಾವು ನೀವು ಮಾಡಬೇಕಾಗಿರತಕ್ಕಂಥ ಒಂದು ಕರ್ತವ್ಯ ಇದೆ. ಆ ಕರ್ತವ್ಯ ಏನೆಂದರೆ ಜನಸಾಮಾನ್ಯರಲ್ಲಿ ಒಂದು ಪ್ರಜ್ಞೆಯನ್ನು ಅದರ ಬಗ್ಗೆ ವಿಚಾರವನ್ನು.

ಶ್ರೀ ಬಿ.ಎಸ್. ಯಡಿಯೂರಪ್ಪ(ಮಾನ್ಯ ಉಪಾಧ್ಯಕ್ಷರೇ, ಆ ಕಡೆ ನೋಡಿ, ಸರ್ಕಾರದ ವಿಪ್ ಆ ಕಡೆ ಈ ಕಡೆ ಓಡಾಡುತ್ತಿದ್ದಾರೆ. ಎಲ್ಲಿ ಹೆಚ್ಚು ಕಡಿಮೆ ಆಗುತ್ತದೆಯೋ ಎಂದು ಒದ್ದಾಡಿಕೊಂಡು ಹೋಗುತ್ತಿದ್ದಾರೆ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದಂತೆ ನಮಗೆ ಆ ತರಹದ ಯಾವುದೇ ಭಯ ಇಲ್ಲ. ಆದ್ದರಿಂದ ಈಗ ಒಂದು ಮಾತನ್ನು ಹೇಳಿ ವಿರಮಿಸುತ್ತೇನೆ. ನಾವು ನೀವು ಎಲ್ಲಾ ಜನಪ್ರತಿನಿಧಿಗಳು ಆಗಿರತಕ್ಕಂಥವರು ಮಾಡಬೇಕಾದಂಥ ಒಂದು ಕರ್ತವ್ಯ ಏನೆಂದರೆ ಜನಸಾಮಾನ್ಯರನ್ನು ಜಾಗ್ರತೆಯಾಗಿ ಇಟ್ಟುಕೊಳ್ಳತಕ್ಕಂಥದ್ದು , ಪ್ರಭುತ್ವವಾಗಿರತಕ್ಕಂಥ ಒಂದು ಸಮಾಜ ತನ್ನ ಉಳಿವನ್ನು ತನ್ನ ವಿಕಾಸವನ್ನು ಅದು ಕಂಡುಕೊಳ್ಳುತ್ತದೆ. ಅದನ್ನೇ ಅಂಬೇಡ್ಕರ್‌ರವರ ಮಾತಿನಲ್ಲಿ ಹೇಳುವುದಾದರೆ: "The Constitution has been raid for immortality if the the work of man may justify the aspire to such a title. It may nevertheless perish in an hour by the folly or corruption or negligence of its only keeper, the people. The only keeper for the people to whom we all owe everything to them." ಆದ್ದರಿಂದ ಈ ಸಂದರ್ಭದಲ್ಲಿ ಕೇಳಿಕೊಳ್ಳುವುದೇನೆಂದರೆ, ಯಾವುದೋ ಕಾರಣಗಳಿಗಾಗಿ, ತಾವು ರಾಜಕೀಯವಾದಂಥ ಸಣ್ಣ

ಕಾರಣಗಳಿಗೆ ಈ ಸದನದ ಸಮಯವನ್ನು ವ್ಯಯ ಮಾಡಿರತಕ್ಕಂಥದ್ದು ಸರಿಯಲ್ಲ. ಆದ್ದರಿಂದ ಗೊತ್ತುವಳಿಯನ್ನು ತಿರಸ್ಕಾರ ಮಾಡಬೇಕು. ನಾವು ತಿರಸ್ಕಾರ ಮಾಡುವುದಕ್ಕಿಂಥ ಪೂರ್ವದಲ್ಲಿಯೇ ಮಾನ್ಯ ವಿರೋಧ ಪಕ್ಷದ ನಾಯಕರು ವಾಪಾಸ್ಸು ತೆಗೆದುಕೊಂಡಿದ್ದರೆ, ಒಂದು ಸತ್‌ಸಂಪ್ರದಾಯ ಆಗುತ್ತಿತ್ತು ಎಂದು ಹೇಳಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ನಾವು ಎಷ್ಟು ಜನ ಎಷ್ಟು ಗಂಟೆ ಕಾಲ ಮಾತನಾಡಿದ್ದೇವೆ ಮತ್ತು ಏನು ಪ್ರಶ್ನೆಗಳನ್ನು ಕೇಳಿದ್ದೇವೆ ಅಷ್ಟುಕ್ಕೂ ಅವರು ಮಾತನಾಡಬೇಕಾಗಿತ್ತು. ಮಾನ್ಯ ಸಚಿವರು ಮಾತನಾಡಿರುವಂಥದ್ದು ನಾವು ಕೇಳಿದಂಥ ಪ್ರಶ್ನೆಗೆಳಿಗೆ ಅದು ಉತ್ತರ ಅಲ್ಲ. ಈಗ ಮಾತನಾಡಿದ್ದು ಹೇಗಿತ್ತು ಎಂದರೆ ಅವತ್ತು ಬೇಡಿಕೆ ಮೇಲೆ ಮಾತನಾಡ್ಡಿಕ್ಕೆ ಉತ್ತರ ಕೊಟ್ಟಿರಲಿಲ್ಲ. ಆದ್ದರಿಂದ ಬಹಶ: ಅದಕ್ಕೆ ಇದು ಒಂದು ಅವಕಾಶವೆಂದು ತೋರುತ್ತದೆ.

ಶ್ರೀ ಆರ್. ವಿ.ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೆ, ನಾನು ಬಹಳ ಧೀರ್ಘ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪ್ರಕಾಶ್‌ರವರು ತಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ ಉತ್ತರ ಕೊಡಬಹುದೆಂದು ನಾನು ತಿಳಿದುಕೊಂಡಿದ್ದೆ. ನಾವು ನಿಮ್ಮ ಇಲಾಖೆಯ ಬಿಲ್ ಬಗ್ಗೆ ಚರ್ಚೆ ಆಗುವಂಥ ಕಾಲದಲ್ಲಿ ಗ್ರಾಮ ಪಂಚಾಯಿತಿ ಸದಸ್ಯನಿಗೆ ವಿಧಾನಪರಿಷತ್‌ಗೆ ಆಯ್ಕೆ ಯಾಗುವಂಥ ಸಂದರ್ಭದಲ್ಲಿ ಅವನಿಗೆ ಓಟಿನ ಹಕ್ಕು ಬಗ್ಗೆ , ಕೇಂದ್ರ ಸರ್ಕಾರದವರು ರೆಕಮಂಡ್ ಮಾಡುತ್ತಾರೆಂದು ತಾವು ಹೇಳಿದ್ದಿರಿ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೀರೋ ? ಈ ಬಗ್ಗೆ ನಿಮ್ಮ ನಿರ್ಧಿಷ್ಟವಾದ ನಿಲುವು ಏನು ?

+ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ನಿನ್ನೆಯ ದಿವಸ ಬಹಳ ಗಂಭೀರವಾದಂಥ ಆಪಾದನೆಯನ್ನು ಮಾಡಿದರು. ನಮ್ಮ ಕೆ.ಐ.ಎ.ಡಿ.ಬಿ. ಮುಖಾಂತರ ರಾಮನಗರ, ಬಿಡದಿ ಮತ್ತು ಸುತ್ತಮುತ್ತಲೂ ಇರುವ ಹಳ್ಳಿಯಲ್ಲಿ 3417 ಎಕರೆ 3 ಗುಂಟೆ ಭೂಮಿ ಅಕ್ವೆರ್ ಮಾಡುತ್ತಿದ್ದಾರೆ, ಎಂದು ಅವರು ಹೇಳಿದರು. ಮತ್ತು ಯಾವುದೋ ಕಂಪನಿ ಬಗ್ಗೆ ವಿವರವಾಗಿ ಹೇಳುತ್ತೇನೆ. ಅದರಲ್ಲಿ 690 ಎಕರೆ ಭೂಮಿ, ಸರ್ಕಾರಿ ಭೂಮಿಯು ಇದೆ ಎಂದು ಒಂದು ಅಪಾದನೆಯನ್ನು ಮಾಡಿದರು. ನನಗೆ ಬಹಳ ಆಶ್ಚರ್ಯವಾಯಿತು, ಎಕೆಂದರೆ ಇಷ್ಟು ದೊಡ್ಡ ಅಕ್ವಿಜಿಷನ್ ಅದಾಗ ಸರ್ಕಾರದ ಗಮನಕ್ಕೆ ಇದು ಏಕೆ ಬಂದಿಲ್ಲವೆಂದು. ಆದರೆ ನನ್ನ ಸ್ವಿಚ್ಛೆ ಏನೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಜವಾಬ್ದಾರಿಯುತವಾದಂತಹ ಸ್ಥಾನದಲ್ಲಿರುತ್ತಾರೆ ಅವರು ನಿಜವಾದಂತಹ ಪರಿಸ್ಥಿತಿಯನ್ನು ಏನು ಎಂದು ಅರಿತುಕೊಂಡು ಅಪಾದನೆಯನ್ನು ಮಾಡಬೇಕು. ಅವರು ಅಪಾದನೆಯನ್ನು ಮಾಡಿರುವುದರಿಂದ ಕೇವಲ ಅಲ್ಲಿಯ ಸತ್ಯ ಪರಿಸ್ಥಿತಿಯು ಏನಿದೆ ಎನ್ನುವುದನ್ನು ಮಾತ್ರ ಸದನ ಗಮನಕ್ಕೆ ತರುತ್ತೇನೆ. ಕರ್ನಾಟಕ ಇಂಡಸ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್

ಇವ್ರೊತ್ತಿನವರೆಗೆ ಈ ಭಾಗದಲ್ಲಿ 3,417 ಎಕರೆ ಭೂಮಿಯನ್ನು ಯಾವಾಗಲೂ ಸಹ ನೋಟಿಫೈಡ್ ಮಾಡಿಲ್ಲ, ಆಕ್ವೈರೆನ್ನೂ ಸಹ ಮಾಡಿಲ್ಲ. ಆ ಭಾಗದಲ್ಲಿ ಕೇವಲ 169 ಎಕರೆಗಳನ್ನು ಕರ್ನಾಟಕ ಪವರ್ ಕಾರ್ಪೊರೇಷನ್ನನು ಒಂದು ಪ್ರಾಜೆಕ್ಟ್‌ನ ಸಲುವಾಗಿ ಆಕ್ವೈರ್ ಮಾಡಿಕೊಂಡಿದ್ದೇವೆ. ನಮ್ಮ ರೆಕಾರ್ಡ್ ಪ್ರಕಾರ ಅಲ್ಲಿ ಒಂದು ಟೂರಿಸಂ ಪ್ರಾಜೆಕ್ಟ್ ಇದೆ ಅಲ್ಲಿ ಒಂದು ಗಾಲ್ಫಿ ಕ್ಲಬ್ ಬರುತ್ತಿದೆ, ಅವರಿಂದ ಟೂರಿಸಂ ಇಲಾಖೆಯವರು ಆ ಪ್ರಸ್ತಾವನೆಯನ್ನು ಮಂಜೂರು ಮಾಡಿ, ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ಗೆ 16 ಎಕರೆ 26 ಗುಂಟೆ ಭೂಮಿಯನ್ನು ಅಕ್ವೈರ ಮಾಡಬೇಕೆಂದು ಹೇಳಿದರು. ಆ ಪ್ರಕಾರವಾಗಿ ಕೆಐಡಿಬಿ ಯವರು ಒಂದು ನಿರ್ಣಯವನ್ನು ಮಾಡಿ 16 ಎಕರೆ 26 ಗುಂಟೆಯನ್ನು ಮಾತ್ರ ನಾವು ಅಕ್ವೈರ್ ಮಾಡುತ್ತಿದ್ದೇವೆ. ಮತ್ತೆ ತಾವು ಅಲ್ಲಿ ಹೆಲಿಕ್ಯಾಪ್ಟರ್ ಬಂತು ಎಂದು ಹೇಳಿದ್ದೀರಿ. ಅಲ್ಲಿಯ ಸತ್ಯಸಂಗತಿ ಏನಿದೆ ಎಂದರೆ, ರೆಕಾರ್ಡ್ಸ್ ಪ್ರಕಾರವಾಗಿ ಅಲ್ಲಿ ಒಂದು ಗಾಲ್ಫ್ ಕ್ಲಬ್ ಬರುತ್ತಿರುವುದರಿಂದ, ಅದು ಒಂದು ಟೂರಿಸ್ಂ ಪ್ರಾಜೆಕ್ಟ್ ಆದ ಗಾಲ್ಫ್ ಕ್ಲಬ್ ಬರುತ್ತಿದೆ, ಇದನ್ನು ಟೂರಿಸ್ಸಂ ಇಲಾಖೆಯವರು ಕ್ಲಿಯರ್ ಮಾಡಿದ್ದಾರೆ. ಟೂರಿಸಂನವರಿಗೆ 16 ಎಕರೆ 26 ಗುಂಟೆ ಭೂಮಿಯು ಅವರಿಗೆ ಬೇಕಾಗಿತ್ತು. ಅದರಿಂದ ನಾವು ಟುರಿಸಂ ಇಲಾಖೆಯ ಕೋರಿಕೆಯ ಪ್ರಕಾರವಾಗಿ ಕೆಐಡಿಬಿ ಯವರು ಬೋರ್ಡ್‌ನಲ್ಲಿಟ್ಟು ಸಿರಿಯಾಗಿ ಕಾಯಿದೆಯ ಪ್ರಕಾರವಾಗಿ ಅಕ್ವೈರ್ ಮಾಡಲು ಪ್ರಯತ್ನನಡೆದಿದೆ, ಆದರೆ ಆಕ್ವಿಜಿಷನ್ ಆಗಿಲ್ಲ. ಇನ್ನೂ ಸಹ (ಸಿ) ,28(3), ನಡೆಯುತ್ತಿದೆ, ಇನ್ನೂ ಎನ್‌ಕ್ವೊರಿ ನಡೆಯುತ್ತಿದೆ ಇನ್ನೂ ಪೂರ್ಣ ಅಕ್ವಿಜಿಷನ್ ಮುಗಿದಿಲ್ಲ. ಆದರೆ ಅಲ್ಲಿ ಹೆಲಿಕ್ಯಾಪ್ಟರ್ ಬಂದಿತ್ತು ಎಂದು ಹೇಳಿದರಲ್ಲಾ ಆದರ ಕತೆ ಏನೆಂದರೆ ನಮ್ಮ ರೆಕಾರ್ಡ್ಸ್ ಪ್ರಕಾರವಾಗಿ ಯಾವ ಕಂಪನಿ ಚಾಮುಂಡೇಶ್ವರಿ ಬಿಲ್‌ಟೆಕ್ ಪ್ರೈವೇಟ್ ಲಿಮಿಟೆಡ್ ಅಂದರೆ -ಈಗಲ್ಟನ್ ಅಲ್ಲಿ ರಿಸಾರ್ಟ್ ಮಾಡುತ್ತಿದ್ದಾರೆ ಅವರು ಆ ಜಾಗದ್ಲಿ ಟೂರಿಸ್ಟ್ ಅಕರ್ಷಣೆಯನ್ನು ಮಾಡಲು ಒಂದು ಡಾಕ್ಯುಮೆಂಟರಿ ಮಾಡಬೇಕಾಗುತ್ತದೆ. ಅದರಿಂದ ಅವರು ಒಂದು ಜಾಹಿರಾತು ಕಂಪನಿಗೆ 10 ನಿಮಿಷಗಳ ಒಂದು ಡಾಕ್ಯುಮೆಂಟರಿಯಾಗಬೇಕೆಂದು ಒಂದು ಕಾಂಟ್ರಾಕ್ಟ ಕೊಟ್ಟಿದ್ದರು. ಬಿ ಇ ಎಂ ಎಲ್ ನಿಂದ ಒಂದು ಹೆಲಿಕ್ಯಾಪ್ಟರ್ ಆದಕ್ಕೋಸ್ಕರವಾಗಿ ಬಂದಿತ್ತು ಅದು ಒಂದು ಡಾಕ್ಯುಮೆಂಟರಿಯ ಫಿಲ್ಮ್‌ನ್ನು ತೆಗೆದುಕೊಳ್ಳುವುದಕ್ಕೆ ಯಾವ ಪ್ರಧಾನಿ, ಮಾಜಿ ಪ್ರಧಾನಿ ಯಾರ ಮಗನೂ ಸಹ ಅಲ್ಲಿಗೆ ಬಂದಿರಲಿಲ್ಲ. ಇದು ಈ ರೀತಿಯಾಗಿದೆ, ಇದು ಸತ್ಯಸಂಗತಿ. ಮತ್ತೆ ಅಲ್ಲಿ ನಾವು 150 ಎಕರೆ ಲ್ಯಾಂಡ್‌ನ್ನು ಅಕ್ವೈರ್ ಮಾಡುತ್ತಿದ್ದೇವೆ ಮತ್ತೆ 10 ಎಕರೆ ಭೂಮಿಯನ್ನು ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಬೋರ್ಡ್‌ನ ಸಲುವಾಗಿ ಆಕ್ವೈರ್ ಮಾಡಬೇಕಾಗಿತ್ತು, ಆದರೆ ಅದು ಬೇಡವೆಂದು ಹೇಳಿದ್ದಾರೆ. ಅದ್ದುದರಿಂದ ಒಟ್ಟು ಅಕ್ವಿಜಿಷನ್ ಏರಿಯಾ 325 ಎಕರೆ. ಅದರಲ್ಲಿ ಮೂರು ಗಾರ್ಮೆಂಟ್ ಪ್ರಾಜೆಕ್ಟೇ ಇದೆ. ಕೇವಲ 16 ಎಕರೆ ಭೂಮಿಯನ್ನು ಮಾತ್ರ ಅಕ್ವೈರ್ ಮಾಡುತ್ತಿದ್ದೇವೆ ಸಾವಿರಾರು ಎಕರೆ ಭೂಮಿಯನ್ನು ಅಕ್ವೈರ್ ಮಾಡುತ್ತಿದ್ದಾರೆ ಎಂದು ಹೇಳಿರುವುದು ಸರಿಯಾದುದಲ್ಲ ಅದು ಸುಳ್ಳು ಅದರಲ್ಲಿ ಹುರುಳಿಲ್ಲ. ಹಾಗಾಗಿ ಮಾನ್ಯ ವಿರೋಧಪಕ್ಷದ ನಾಯಕರು ಜವಾಭ್ದಾರಿಯಿಂದ ಈ ಆಪಾದನೆಯನ್ನು ಮಾಡಿದ್ದರೆ, ಒಳ್ಳೆಯದಾಗುತ್ತಿತ್ತು ಎಂದು ಈ ಸದನದ ಗಮನಕ್ಕೆ ತರುತ್ತಿದ್ದೇನೆ. ಸದನದ ಕೊನೆಯದಿವಸ ಮಾನ್ಯ ಜೆ.ಎಚ್. ಪಟೇಲ್‌ರ ಮಂತ್ರಿಮಂಡಲದ ಬಗ್ಗೆ ಅವಿಶ್ವಾಸ

ನಿರ್ಣಯವನ್ನು ತಂದಿರುವುದು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಏಕೆಂದರೆ ಮಾನ್ಯ ಜೆ.ಹೆಚ್.ಪಟೇಲರು ಮುಖ್ಯಮಂತ್ರಿಗಳಾಗಿ, ಅವರು ಸರ್ಕಾರವನ್ನು ರಚಿಸಿ ಕೇವಲ ಮೂರು ತಿಂಗಳಾಗಲಿಲ್ಲ ಪತ್ರಿಕೆಯಲ್ಲೂ ಸಹ ಹಗರಣಗಳ ಬಗ್ಗೆ ಏನೂ ಬಂದಿಲ್ಲ. ಆ ರೀತಿ ಬಂದಿದ್ದರೆ ಇವರು ಅಪಾದನೆಯನ್ನು ಮಾಡಬಹುದಾಗಿತ್ತು. ಅಷ್ಟೇ ಅಲ್ಲ 44 ದಿವಸಗಳ ಅಧಿವೇಶನ ನಡೆಯಿತು ಇದರಲ್ಲಿ ಹಲವಾರು ವಿಷಯಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ಮತ್ತು ಕೆಲವು ಇಲಾಖೆಗಳ ಬೇಡಿಕೆಗಳು ಮೇಲೆ ಚರ್ಚೆಯನ್ನೂ ಸಹ ಮಾಡಿದ್ದಾರೆ, ಒಂದು ದಿನ ಒಂದು ಆಪಾದನೆಯನ್ನೂ ಸಹ ಮುಖ್ಯಮಂತ್ರಿಗಳ ಮೇಲೆ, ಮಂತ್ರಿಮಂಡಲದ ಮೇಲೆ ಯಾವುದೇ ಭ್ರಷ್ಟಾಚಾರದ ಆರೋಪವನ್ನು ಮಾಡಲಿಲ್ಲ. ಕೊನೆಯದಾಗಿ, ಶಾಸನಸಭೆ ಮುಗಿಯಲಿಕ್ಕೆ ಬಂದಾಗ, ಈ ರೀತಿಯಾದಂಥ ಅವಿಶ್ವಾಸ ನಿರ್ಣಯವನ್ನು ತರುವುದು ನನ್ನ ದೃಷ್ಟಿಯಲ್ಲಿ ಮತ್ತು ಪ್ರಜಾಪ್ರಭುತ್ವದಲ್ಲಿ ಸರಿಯಲ್ಲ ಎಂದು ನಾನು ಭಾವಿಸಿ, ಅದಕ್ಕೆ ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ನಾನು ತಮ್ಮನ್ನು ಇಷ್ಟೇ ಕೇಳುವಂಥದ್ದು . ಸನ್ಮಾನ್ಯ ಮುಖ್ಯಮಂತ್ರಿಗಳು ಬಂದ ತಕ್ಷಣ ಒಂದು ಮಾತನ್ನು ಹೇಳಿದ್ದೇನೆ, ನಾನೇನು ಆರೋಪವನ್ನು ಮಾಡಿದ್ದೇನೆ ಅವರ ವಿವರಗಳನ್ನು ನಾನು ಕೊಟ್ಟಿದ್ದೇನೆ, ನಮ್ಮ ಪತ್ರಕರ್ತರು ಸ್ನೇಹಿತರು ನಿಮಗೆ ವಿಶ್ವಾಸ ಇರುವಂಥ ಒಬ್ಬ ಮಂತ್ರಿ ವಿರೋಧಪಕ್ಷದವರನ್ನೂ ಅಲ್ಲಿಗೆ ಕರೆದುಕೊಂಡುಹೋಗೋಣ. ನಾನು ಆರೋಪ ಮಾಡಿದಂತೆ ಸರ್ವೆ ನಂಬರ್ 83 ರಲ್ಲಿ 160 ಎಕರೆ 29 ಗುಂಟೆ ಗೋಮಾಳ ಏನು ಇದೆ ಸರ್ಕಾರದ್ದು, ಅದಕ್ಕೆ ಬೇಲಿ ಹಾಕಿರುವಂತದ್ದು ನಿಜವೋ ಅಲ್ಲವೋ ಈ ಮಾತನ್ನು ನಿಮಗೆ ಹೇಳಿದೆ. ಇವೊತ್ತು 169 ಎಕರೆ 29 ಗುಂಟೆ ಏನು ಹೇಳುತ್ತಿದ್ದೇನೆ. " acquisition proposals for the formation of Industrial area in Ramnagar taluk." ಅವರು ಮಾಡಿದ್ದಾರೆ, ಆದೇ ಲಿಸ್ಟ್‌ನಲ್ಲಿ ಇರುವಂಥದ್ದು. ಒಳಗಡೆ ಇದೆ, ಬೇಲಿ ಹಾಕಿದ್ದಾರೆ, ಒಂದು ಸಾವಿರ ಎಕರೆಗೆ ಬೇಲಿ ಹಾಕಿದ್ದಾರೆ. ಮತ್ತೆ ಹೆಲಿಕ್ಯಾಪ್ಟರ್ ಬಂತಲ್ಲಾ, ಮಾನ್ಯ ದೇಶ ಪಾಂಡೆಯವರು ಹೇಳಿದರಲ್ಲಾ ಆದರೆ ಇದು ದೇಶಾಪಾಂಡೆಯವರ ಬಾಯಲ್ಲಿ ಏಕೆ ಬಂತೊಗೊತ್ತಿಲ್ಲ. ನಾನು ಹೇಳುವುದಿಲ್ಲ. , ಒಂದು ಸಾವಿರ ಜನ ಯಾವ ಮಾಜಿ ಪ್ರಧಾನಿಯ ಮಗ ಬಂದಿದ್ದ ಎಂದು ಊರಿನ ಜನ ಹೇಳಿದರೆ ಒಪ್ಪುತ್ತೀರಲ್ಲಾ. ಏಕೆಂದರೆ ಒಬ್ಬೊಬ್ಬರು ಒಂದುತರಹ ಹರಿಕಥೆಯ ಮಧ್ಯದಲ್ಲಿ ಒಂದು ಪಾತ್ರವನ್ನುವಹಿಸಿ ಏನೋ ಹೇಳಿದಂತೆ ಹೇಳಿಬಿಟ್ಟು. ದೇಶಪಾಂಡೆಯುವರು ಕುಳಿತುಕೊಂಡುಬಿಟ್ಟರು. ನನ್ನ ಆಪಾದನೆ ಏನು ಎಂದರೆ ಇದನ್ನು ಸರ್ವೆ ಮಾಡಿಸಿದರಲ್ಲಾ ಆ ಉದ್ದೇಶವೇ, ಆ ಕೋಟ್ಯಾಧಿಪತಿ ಯಾರು ಬಂದಿದ್ದಾನಲ್ಲಾ , ಸಾವಿರ ಎಕರೆ ಭೂಮಿಗೆ ಬೇಲಿಯನ್ನು ಹಾಕಿಕೊಳ್ಳುವುದಕ್ಕೆ ಅವನಿಗೆ ಬೇಕು ಎನ್ನುವುದಕ್ಕೋಸ್ಕರವೇ ನೀವು ಸರ್ವೆ ಮಾಡಿಸಿ ಸರ್ಕಾರದ ಖರ್ಚಿನಲ್ಲಿ ಅವನಿಗೆ ಕೊಡುವಂಥ ಒಂದು ದೊಡ್ಡ ಅಕ್ಷಮ್ಯ ಅಪರಾಧ ಆಗಿದೆ. ನಾಳೆ ದಿವಸ ಆ ಜಾಗಕ್ಕೆ ನೀವು ಬರದೇ ಇದ್ದರೆ ಪತ್ರಕರ್ತರನ್ನು ಕರೆದುಕೊಂಡು ಹೋಗುತ್ತೇನೆ, ಮುಖ್ಯಮಂತ್ರಿಗಳೂ ಸಹ ಬರಲಿ, ನಮ್ಮ ವಿರೋಧಪಕ್ಷದ ಇತರೇ ಮುಖಂಡರುಗಳು ಬರಲಿ ಬಹುಶಃ ರಾಜ್ಯದ ಇತಿಹಾಸದಲ್ಲಿ ಸರ್ಕಾರ ಶಾಮೀಲಾಗಿ ಇಷ್ಟೊಂದು ದೊಡ್ಡ ಅಕ್ಷಮ್ಯ

ಅಪರಾಧವನ್ನು ಹಿಂದೆ ಎಂದೂ ನಡೆದಿಲ್ಲ ಅದಕ್ಕೆ ನಾನು ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಂಥ ಕಾಲದಲ್ಲಿ ವಿವರಗಳನ್ನು ಕೊಡುತ್ತೇನೆ.

ಶ್ರೀ ಆರ್ ವಿ. ದೇಶಪಾಂಡೆ : ಇಡೀ ರಾಜ್ಯದಲ್ಲಿ ಇವೊತ್ತು ಬೇರೆ ಬೇರೆ ಕಡೆಗಳಲ್ಲಿ ಲ್ಯಾಂಡ್‌ಗಳನ್ನು ಸರ್ವೆ ಮಾಡುತ್ತಿದ್ದೇವೆ, ಲ್ಯಾಂಡ್‌ಗಳನ್ನು ಅಕ್ವೈರ್ ಮಾಡುತ್ತಿದ್ದೇವೆ. ಮುಖ್ಯವಾಗಿ ನಾವು ಶಾಮೀಲಾಗಿ ಇವರಿಗೆ ಸಹಾಯ ಮಾಡುವಂಥದ್ದು ಏನಿದೆ?

ಶ್ರೀ ಬಿ.ಎಸ್. ಯಡಿಯೂರಪ್ಪ: ಸರ್ವೆ ಮಾಡಿದ್ದೇ ಅವನಿಗೆ ಕೊಡುವುದಕ್ಕೋಸ್ಕರ.

ಶ್ರೀ ಆರ್.ವಿ.ದೇಶಪಾಂಡೆ: ಇಲ್ಲ, ಇಲ್ಲ. ಅವರಿಗೆ ಏನು ಸಂಬಂಧ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇವರು 16 ಎಕರೆ 26 ಗುಂಟೆ ಭೂಮಿಯನ್ನು ಅಕ್ವೈರ್ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ, ಆದರೆ ಅದು ಇರುವುದು ಸಾವಿರ ಎಕರೆಯ ಮಧ್ಯದಲ್ಲಿಯೇ ತಾವು ಬರೀ 16 ಎಕರೆ ಎಂದು ಹೇಳಿದರಲ್ಲಾ ಅದು ಅಷ್ಟೇ ಎಂದು ನಿಜವಾಗಿದ್ದರೆ, ನಾನು ಈ ಸ್ಥಾನದಲ್ಲಿ ಒಂದು ಕ್ಷಣವೂ ಉಳಿಯುವುದಿಲ್ಲ. ಇಲ್ಲವೆಂದರೆ ನೀವು ರಾಜೀನಾಮೆಯನ್ನು ಕೊಡುತ್ತೀರೋ? ಆ 16 ಎಕರೆ ಎಲ್ಲಿದೆ ಗೊತ್ತಾ ಸಾವಿರ ಎಕರೆ ಮಧ್ಯದಲ್ಲಿ ಈಗಾಗಲೇ ದೊಡ್ಡ ಕ್ಲಬ್ ಕಟ್ಟಿದ್ದಾರೆ ಅದರ ಪಕ್ಕದಲ್ಲಿದೆ, ಅದರ ಸ್ಕೆಚ್ಚನ್ನು ಕೊಡಲೇ? ಆಗಲಾದರೂ ರಾಜೀನಾಮೆಯನ್ನು ತಾವು ಕೊಡುತ್ತೀರಾ? ಉಪಾಧ್ಯಕ್ಷರೇ ಇದರ ಬಗ್ಗೆ ಸದನದ ಒಂದು ಸಮಿತಿಯನ್ನು ಮಾಡಿ ಆ ಜಾಗಕ್ಕೆ ಕಳುಹಿಸಿ. ಆಮೇಲೆ ಉತ್ತರ ಹೇಳಿ.

ಶ್ರೀ ಯು. ಆರ್ ಸಭಾಪತಿ: ಮಾನ್ಯ ಉಪಾಧ್ಯಕ್ಷರೆ, ಎಂ. ಆರ್. ಪಿ. ಎಲ್. ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ, ಆದರೆ ಅದಕ್ಕೆ ಉತ್ತರವನ್ನು ಹೇಳುವವರು ಯಾರು?

ಉಪಾಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ತಾವು ಈಗ ಕುಳಿತುಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಉಪಾಧ್ಯಕ್ಷರೇ, ತಾವು ಇಷ್ಟೊಂದು ಬೇಸರವನ್ನು ಏಕೆ ಮಾಡಿಕೊಳ್ಳುತ್ತಿದ್ದೀರೋ ಗೊತ್ತಿಲ್ಲ.

ಉಪಾಧ್ಯಕ್ಷರು : ನಾನು ಏನು ಹೇಳುವುದು ಎಂದರೆ ನಿಮ್ಮ ಸದಸ್ಯರು ಸಭಾಪತಿಯವರಿಗೆ ಕುಳಿತುಕೊಳ್ಳಬೇಡಿ; ಏನು ವಿಷಯವನ್ನು ಹೇಳಿ ಎಂದು ಪ್ರಚೋದನೆಯನ್ನು ಮಾಡುತ್ತಿದ್ದಾರೆ. ಇದು ಸರಿಯೇ?

+ಶ್ರೀ ಸಿದ್ದರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಕ್ಕೆ ಇಚ್ಛೆಯನ್ನು ಪಡುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು. ಮತ್ತು ಇತರ ಪಕ್ಷದ ನಾಯಕರು, ಬೇರೆ ಬೇರೆ ಮಾನ್ಯ ಸದಸ್ಯರುಗಳು ಸುಮಾರು 14- 15 ಗಂಟೆಗಳ ಕಾಲ ನಮ್ಮ ಸರ್ಕಾರದ ಮೇಲೆ ವಿಶ್ವಾಸವಿಲ್ಲವೆಂದು ಹೇಳಿ ನಿರ್ಣಯವನ್ನು ತಂದು ಅನೇಕ ಆರೋಪಗಳನ್ನು ಮಾಡತಕ್ಕಂತಹ ಪ್ರಯತ್ನವನ್ನು ಮಾಡಿದ್ದಾರೆ. ಮಾನ್ಯ ಬಿ. ಎಸ್. ಯಡಿಯೂರಪ್ಪನವರು ನೀವು ನೆಲಗಳ್ಳರ ಜೊತೆಯಲ್ಲಿ ಶಾಮೀಲಾಗಿದ್ದೀರಿ, ಗ್ರಾನೈಟ್ ಕಳ್ಳರ ಜೊತೆಯಲ್ಲಿ ಶಾಮಿಲಾಗಿದ್ದೀರಿ, ತೆರಿಗೆ ಕಳ್ಳರ ಜೊತೆಯಲ್ಲಿ ಶಾಮಿಲಾಗಿದ್ದೀರಿ, ಎಂದು ಬಹಳ ಮೊನಚಾದ ಮಾತುಗಳಲ್ಲಿ ಈ ಸರ್ಕಾರದ ಮೇಲೆ ಆರೋಪಗಳನ್ನು ಮಾಡಿದ್ದಾರೆ.

8: 10 ಪಿ.ಎಂ

ಈಗಾಗಲೇ ಮಾನ್ಯ ಸಚಿವರುಗಳಾದ ಸಿಂಧ್ಯರವರು, ಮಾನ್ಯ ನಾಗೇಗೌಡರು, ಮಾನ್ಯ ದೇಶಪಾಂಡೆಯವರು, ಮಾನ್ಯ ಪ್ರಕಾಶ್‌ರವರು ಮಾತನಾಡಿ ಪ್ರತಿಪಕ್ಷದವರು ಮಾಡಿರತಕ್ಕ ಆರೋಪಗಳಲ್ಲಿ ಎಳ್ಳಷ್ಟು ಸತ್ಯಾಂಶ ಇಲ್ಲವೆಂದೂ ಇವು ರಾಜಕೀಯ ಪ್ರೇರಿತವಾದ ಆರೋಪಗಳು, ಕೇವಲ ಪ್ರಚಾರಕ್ಕೋಸ್ಕರ ಮಾಡಿರತಕ್ಕ ರಾಜಕೀಯ ಮಾತುಗಳು ಎಂಬುದನ್ನು ಬಹಳ ಸ್ಪಷ್ಟವಾಗಿ ಅವರ ಆರೋಪಗಳನ್ನು ನಿರಾಕರಣೆ ಮಾಡುವುದರ ಮೂಲಕ ತಿಳಿಸಿದ್ದಾರೆ. ಅವುಗಳ ಬಗ್ಗೆ ನಾನು ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಇವರು ಎರಡನೇ ಸಾರಿ ಅವಿಶ್ವಾಸ ನಿರ್ಣಯವನ್ನು ತರುತ್ತಿರುವುದು. ಕಳೆದವರ್ಷ ಆಗಸ್ಟ್‌ನಲ್ಲಿ ಅವಿಶ್ವಾಸ ನಿರ್ಣಯವನ್ನು ತಂದಿದ್ದರು. ಆಗ ಮಾನ್ಯ ಬಿ.ಜೆ.ಪಿ.ಯ ಯಡಿಯೂರಪ್ಪ ನವರು ಮಾತ್ರ ತಂದಿದ್ದರು. ಆದರೆ ಈಗ ಮತ್ತೆ ಈ ಬಿ.ಜೆ.ಪಿ.ಯವರ ಜೊತೆ ಕಾಂಗ್ರೆಸ್ ಮಿತ್ರರು, ಕೆ.ಸಿ.ಪಿ.ಯವರು, ಮಾನ್ಯ ವಾಟಾಳ್ ನಾಗರಾಜ್‌ರವರು ಎಲ್ಲರೂಸೇರಿ ತಂದಿದ್ದಾರೆ. ಇದಕ್ಕೆ ಇವರೆಲ್ಲರೂ ರುಜು ಮಾಡಿದ್ದಾರೆ. ಆಗ ಆಗಸ್ಟ್ 14ನೇ ತಾರೀಖಿನವರೆಗೆ ಒಟ್ಟು 28 ದಿನಗಳಕಾಲ ಈ ಸದನ ನಡೆದಿದೆ. ಯಾವ ಹಂತದಲ್ಲೂ ಕೂಡ ಈ ಸರ್ಕಾರದ ಮೇಲೆ ನಮಗೆ ವಿಶ್ವಾಸ ಇಲ್ಲವೆಂದು ಹೇಳುವುದಕ್ಕೆ ಆಗಲಿಲ್ಲ. ಅನಮೇಕ ವಿಚಾರಗಳು ಈ ಸದನದಲ್ಲಿ ಚರ್ಚೆ ಆದುವು. ಇಲಾಖೆಗಳ ಮೇಲಿನ ಬೇಡಿಕೆಗಳ ಬಗ್ಗೆ ಚರ್ಚೆ ಆಯಿತು. ಆಗ ಯಾವುದೇ ಮಂತ್ರಿಯಮೇಲಾಗಲಿ, ಅಥವಾ ಮುಖ್ಯ ಮಂತ್ರಿಗಳಮೇಲೆ ಆಗಲಿ ಯಾವುದೇ ಆರೋಪಗಳನ್ನೂ ಇವರು ಮಾಡುವುದಕ್ಕೆ ಆಗಲಿಲ್ಲ. ಅವತ್ತೂ ಕೂಡ ಅವಿಶ್ವಾಸ ನಿರ್ಣಯಕ್ಕೆ ಉತ್ತರವನ್ನು ಕೊಟ್ಟಿದ್ದೇವೆ, ಇವತ್ತೂ ಕೂಡ ಹೇಳುತ್ತಿದ್ದೇನೆ. ಕಳೆದ 20 ತಿಂಗಳಿಂದ ಯಾವುದೇ ಆಪಾದನೆ ಇಲ್ಲದಿರತಕ್ಕ ಸರ್ಕಾರ ಇದೆ ಎಂದು ಹೇಳುವುದಾದರೆ, ಅದು ನಮ್ಮ ಸರ್ಕಾರ ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಸಾಮಾನ್ಯ ಆರೋಪಗಳನ್ನು ಯಾರು ಬೇಕಾದರು ಮಾಡಬಹುದು. ಸಾರ್ವಜನಿಕ ಸಭೆಗಳಲ್ಲಿ ನಾವೂ ಕೂಡ ರಾಜಕಾರಣಿಗಳು ಅಧಿಕಾರದಲ್ಲಿದ್ದಾಗ ಅಷ್ಟು ಹೊಡೆದರು, ಇಷ್ಟು ಹೊಡೆದರು ಎಂದು ಅಪಾದನೆ ಮಾಡುತ್ತೇವೆ. ಆದರೆ ಯಾವುದೇ ಒಂದು ನಿರ್ದಿಷ್ಟ ಆರೋಪಗಳನ್ನು ಮಾಡುವಾಗ ಅದಕ್ಕೆ ಪೂರಕವಾದ ಪುರಾವೆಗಳನ್ನು ಇಟ್ಟುಕೊಂಡು ತಮ್ಮನ್ನು

ಭೇಟಿಯಾಗಿ, ತಮ್ಮ ಅನುಮತಿಯನ್ನು ಪಡೆದು ಅದನ್ನು ಮಾಡಬೇಕಾಗುತ್ತದೆ. ಆದರೆ ಒಂದೇ ಒಂದು ಆರೋಪವನ್ನೂ ಕೂಡ ಇವರು ಈ ಸರ್ಕಾರದ ಮೇಲೆ ಮಾಡುವುದಕ್ಕಾಗಿಲ್ಲ ಎಂಬುವುದನ್ನು ಈ ರಾಜ್ಯದ ಜನತೆ ತಿಳಿದುಕೊಂಡಿದ್ದಾರೆಂದು ತಮ್ಮ ಮೂಲಕ ಅವರಿಗೆ ತಿಳಿಸಬಯಸುತ್ತೇನೆ. ಈ ಸರ್ಕಾರ ಬಂದಮೇಲೆ ಈ ಸರ್ಕಾರದಲ್ಲಿ ಹಣಕಾಸೇ ಇಲ್ಲ ಎಂದು ಹೇಳಿದರು. ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನಮಂತ್ರಿ ಯಾಗಿ, ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಬಹಳ ಚೆನ್ನಾಗಿದೆ ಎಂದು ಹೇಳುತ್ತಾರೆ, ಆದರೆ ವಸ್ತುಸ್ಥಿತಿ ಕೇವಲ ಸಂಬಳ ಕೊಡುವುದಕ್ಕೆ ಮಾತ್ರವೇ ನಿಮ್ಮಲ್ಲಿರುವುದು, ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ನಿಮ್ಮಲ್ಲಿ ಹಣ ಇಲ್ಲವೆಂದು ಮಾನ್ಯ ಯಡಿಯೂರಪ್ಪನವರೂ ಹಾಗೂ ಇನ್ನೂ ಕೆಲವು ಸದಸ್ಯರು ಹೇಳಿದರು. ಮಾನ್ಯ ಸದಸ್ಯರಾದ ಮುನಿಯಪ್ಪನವರೂ ಕೂಡ ಅಪರೂಪಕ್ಕೆ ಮಾತನಾಡಿ.....

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ: ನೀವು ಅವಕಾಶ ಕೊಡುವುದಾದರೆ ಅವರು ಪ್ರತಿದಿನ ಮಾತನಾಡುತ್ತಾರೆ.

ಶ್ರೀ ಸಿದ್ದರಾಮಯ್ಯ: ಅವರು ಮಾತನಾಡಿರುವುದು ಅಪರೂಪ ನೀವು ಅವರಿಗೆ ಅವಕಾಶ ವನ್ನೇ ಕೊಡುವುದಿಲ್ಲವಲ್ಲಾ; ಅವರಿಗೂ ಅವಕಾಶ ಕೊಡಿ. ದಿನವೂ ಮಾತನಾಡಲೆಂದು ನಮ್ಮ ಆಸೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಯಾರೂ ಮಾತನಾಡುವುದೇ ಬೇಡ ಎಂದು ನೀವೇ 5-6 ಜನ ಮಾತನಾಡುತ್ತಿದ್ದೀರಿ. ಮಾನ್ಯ ಹೆಗಡೆಯವರ ಪರವಾಗಿರುವವರು ಮಾತನಾಡಿದಿರಿ, ಮಾನ್ಯ ದೇವೇಗೌಡರ ಪರವಾಗಿರುವವರು ಮಾತನಾಡಿದಿರಿ; ಜೆ.ಹೆಚ್.ಪಟೇಲರ ಪರವಾಗಿರುವವರೂ ಮಾತನಾಡಿದಿರಿ. ಹೀಗೆ ಒಬ್ಬೊಬ್ಬರೂ ಒಬ್ಬೊಬ್ಬರ ಪರವಾಗಿರುವವರು ಮಾತನಾಡಿದಿರಿ. ಪರವಾಗಿಲ್ಲ ಮಾತನಾಡಿ.

ಶ್ರೀ ಸಿದ್ದರಾಮಯ್ಯ: ಹಾಗಾದರೆ ನಾನೂ ಕೂಡ ಹೇಳಬೇಕಾಗುತ್ತದೆ. ಮಾನ್ಯ ನರಸಿಂಹರಾಯರ ಪರವಾಗಿರುವವರು ಯಾರು? ಪವಾರ್ ಪರವಾಗಿರುವವರು ಯಾರು? ಕರುಣಾಕರನ ಪರವಾಗಿರುವವರು ಯಾರು ಎಂದು ಹೇಳಲೇ ? ಯಾರು ಯಾರ ಪರವಾಗಿದ್ದಾರೆಂಬುದು ಅಲ್ಲ. ನಾವೆಲ್ಲರೂ ಇರತಕ್ಕದ್ದು ಜನತಾದಳದ ಪರವಾಗಿ. ಮಾನ್ಯ ಮುಖ್ಯ ಮಂತ್ರಿಗಳ ನೇತೃತ್ವ ಇರುವಂಥ ಸರ್ಕಾರದ ಪರವಾಗಿ. ಅದನ್ನು ಬಿಟ್ಟು ಬೇರೆ ಯಾರ ಪರವಾಗಿಯೂ ಇಲ್ಲ. ಇತಿಹಾಸ ವನ್ನೆಲ್ಲಾ ಬಿಟ್ಟು, ಎತಕ್ಕೆ ಪದೇ ಪದೇ ಮಾತನಾಡುವುದು ಬೇಡ. ರಾಜಕಾರಣದ ಇತಿಹಾಸವನ್ನು ಮಾಡುವುದು ಬೇಡ. ಆಗಿರತಕ್ಕ ವಿಷಯಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾತನಾಡೋಣ. ಈಗ ಅದನ್ನೆಲ್ಲಾ ಕೆದಕುತ್ತಾ ಹೋದರೆ ಅವರಿಗೂ ಕೋಪ ಬರುತ್ತದೆ. ಆದ್ದರಿಂದ ಈಗ ಅದು ಬೇಡ. ನಾವು ಅಧಿಕಾರಕ್ಕೆ ಬಂದಾಗ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಈ ಸದನದಲ್ಲಿ ಶ್ವೇತಪತ್ರದಲ್ಲಿ ಮಂಡಿಸಿದ್ದೆ. ಈಗ ಅದರ ಬಗ್ಗೆ

ಹೇಳುವುದಕ್ಕೆ ಹೋಗುವುದಿಲ್ಲ. ನನ್ನ ಆಯವ್ಯಯ ಭಾಷಣದಲ್ಲೂ ಕೂಡ ಹೇಳಿದ್ದೆ. ನಾನು ಅಧಿಕಾರವನ್ನು ವಹಿಸಿಕೊಂಡಾಗ, 527 ಕೋಟಿ ರೂ. ಗಳ ಹೊರೆಯನ್ನು ಹೊತ್ತುಕೊಂಡು ಅಧಿಕಾರಕ್ಕೆ ಬಂದೆವು. ಸುಮಾರು 100 ಕೋಟಿ ರೂ. ಗಳಿಗೂ ಹೆಚ್ಚಿನ ಚಿಲ್ಲರೆಗಳಿಗೆ ಟ್ರೆಜರಿಯಲ್ಲಿ ಹಣ ಪಾವತಿ ಆಗಿರಲಿಲ್ಲ. ನಮ್ಮ ಮೇಲೆ ಸುಮಾರು 200 ಕೋಟಿ ರೂ. ಗಳ ಸಾಲ ಪಿಯರ್‌ಲೆಸ್‌ನವರದ್ದು ಇತ್ತು. 50 ಕೋಟಿ. ರೂ.ಗಳನ್ನು ಕೆನರಾ ಬ್ಯಾಂಕಿಗೆ ಸಾಲ ಕೊಡಬೇಕಾಗಿತ್ತು. ಸುಮಾರು ಇನ್ನೂರು ಚಿಲ್ಲರೆ ಕೋಟಿ ರೂ. ಗಳಷ್ಟು ಪಿ.ಡಬ್ಲ್ಯೂ.ಡಿ, ನೀರಾವರಿ ಇಲಾಖೆಗೆ ಸಂಬಂಧಪಟ್ಟ ಬಿಲ್ಲುಗಳಿಗೆ ಹಣ ಪಾವತಿ ಆಗಿರಲಿಲ್ಲ. ನಾವು ಡಿಸೆಂಬರ್ ತಿಂಗಳಲ್ಲಿ ಅಧಿಕಾರಕ್ಕೆ ಬಂದಾಗ ಇಷ್ಟು ಹಣ ಕೊಡಬೇಕಾಗಿತ್ತು. ಇವತ್ತು ನಾನಾದರೂ ಬಹಳ ಹೆಮ್ಮೆಯಿಂದ ಹೇಳುತ್ತೇನೆ. ಇವತ್ತು ಟ್ರೆಜರಿಯಲ್ಲಿ ನಾವು ಪಾವತಿ ಮಾಡಬೇಕಾಗಿರುವ ಒಂದೇ ಒಂದು ಬಿಲ್ಲೂ ಕೂಡ ಬಾಕಿ ಉಳಿದಿಲ್ಲ. ಹಾಗಾದರೆ, ನಮ್ಮ ಆರ್ಥಿಕ ಪರಿಸ್ಥಿತಿ ಈಗ ಚೆನ್ನಾಗಿಲ್ಲವೆ? ಎಲ್ಲಾ ಬಿಲ್ಲುಗಳನ್ನೂ ಚುಕ್ತಾ ಮಾಡಿಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಲ್ಲೂ ಕೆಲಸ ಆಗಿಲ್ಲ.

ಶ್ರೀ ಸಿದ್ದರಾಮಯ್ಯ : ಕೆಲಸ ಆಗಿದೆ, ಅಥವಾ ಇಲ್ಲ, ಎಂಬುದನ್ನೂ ಹೇಳುತ್ತೇನೆ.

ಶ್ರೀ ಕುಂಬ್ಳೆ ಸುಂದರರಾವ್ : ಆರ್ಥಿಕ ಪರಿಸ್ಥಿತಿ ಸರಿಯಾಗಿದ್ದರೆ ಪಿ.ಡಬ್ಲ್ಯೂ. ಡಿ ಕೆಲಸವನ್ನು ಒಬ್ಬೊಬ್ಬ ಶಾಸಕರ ಕ್ಷೇತ್ರಕ್ಕೆ 30 ಲಕ್ಷದ ಕೆಲಸ ಮಾಡಿಸುತ್ತೇವೆಂದು ಹೇಳಿದ್ದವರು ಈಗ ಕೇವಲ 10 ಲಕ್ಷಕ್ಕೆ ಏತಕ್ಕೆ ನಿಲ್ಲಿಸಿದಿರಿ?.......

ಶ್ರೀ ಸಿದ್ದರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಈ ರೀತಿ ಸದಸ್ಯರು ಮಧ್ಯೆ ಮಧ್ಯೆ ಮಾತನಾಡುವುದಾದರೆ ಇದು ಸರಿಹೋಗುವುದಿಲ್ಲ. ನಾನು ಉತ್ತರವನ್ನು ಕೊಟ್ಟಮೇಲೆ ಬೇಕಾದರೆ ನೀವು ಏನಾದರೂ ಕೇಳುವುದಿದ್ದರೆ ಕೇಳಿ. ನೀವು ಹೇಳುವಾಗ ನಾವು ಸುಮ್ಮನೆ ಕೂತಿರಲಿಲ್ಲವೇ? ನೀವು ಮಾನ ಮರ್ಯಾದೆ ಇಲ್ಲದಿರುವವರು, ರಾಜೀನಾಮೆಯನ್ನು ಕೊಟ್ಟು ಹೋಗಿ, ಎಂದು ನೀವು ಹೇಳಿದ್ದನ್ನು ನಾವು ಕೇಳಲಿಲ್ಲವೆ? ನಾವು ಹೇಳುವುದಕ್ಕೆ ಕೇಳುವುದಕ್ಕೆ ನಿಮಗೇನು ಕಷ್ಟ? ನಾವು ಹೇಳುವುದನ್ನು ಕೇಳಿ. 1995-96ನೇ ಇಸವಿಯಲ್ಲಿ ಒಮ್ಮೆ ಕೂಡ ನಮ್ಮ ಸರ್ಕಾರ ಓವರ್ ಡ್ರಾಫ್ಟ್‌ನ್ನು ತೆಗೆದುಕೊಂಡಿಲ್ಲ. ಹಾಗಾದರೆ ನಾವು ಆರ್ಥಿಕವಾಗಿ ದಿವಾಳಿ ಆಗಿದ್ದೇವೆಯೆ? ಒಂದೇ ಒಂದು ಚೆಕ್ಕೂ ಕೂಡ ಹಣವಿಲ್ಲವೆಂದು ಬೌನ್ಸ್ ಆಗಿರುವಂಥ ನಿದರ್ಶನ ನಾವು ಅಧಿಕಾರಕ್ಕೆ ಬಂದಮೇಲೆ ಇಲ್ಲ. ಇದಕ್ಕೆ ನಾವು ರಾಜೀನಾಮೆಯನ್ನು ಕೊಡಬೇಕೆ? ಈ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡಿದ್ದಕ್ಕೆ ನಾವು ರಾಜೀನಾಮೆಯನ್ನು ಕೊಡಬೇಕೆ? ನಾವು ರಾಜೀನಾಮೆಯನ್ನು ಕೊಡಬೇಕೇ ಅಥವಾ ಬೇಡವೇ ಎಂಬುದನ್ನು ಈ ರಾಜ್ಯದ ಜನತೆ ತೀರ್ಮಾನ ಮಾಡುತ್ತದೆ. ಈಗಾಗಲೇ ನಾವು ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡಿರುವ ಪರಿಣಾಮವಾಗಿಯೇ 1994ರ ಡಿಸೆಂಬರ್‌ನಿಂದ ಇದುವರೆಗೂ ನಡೆದಂಥ ಎಲ್ಲ

ಚುನಾವಣೆಗಳಲ್ಲೂ ನಮಗೆ ಜನತೆ ಆಶೀರ್ವಾದವನ್ನು ಮಾಡಿದ್ದಾರೆ ಎಂಬ ಮಾತನ್ನು ಅವರ ಗಮನಕ್ಕೆ ತರಬಯಸುತ್ತೇನೆ. ಈ ವಸ್ತುಸ್ಥಿತಿಯನ್ನು ಹೇಳುತ್ತಿರುವುದಕ್ಕೆ ನಾವು ರಾಜೀನಾಮೇಯನ್ನು ಕೊಡಬೇಕೆ ? ಪ್ರಥಮ ಬಾರಿಗೆ ತೆರಿಗೆ ವಸೂಲಿಯಲ್ಲಿ ಹೆಚ್ಚು ಮಾಡತಕ್ಕ ಕೆಲಸವನ್ನು ನಮ್ಮ ಸರ್ಕಾರ ಮಾಡಿತು. ನಾನು ಹಣಕಾಸಿನ ಮಂತ್ರಿಯಾಗಿ ಈ ಮಾತನ್ನು ಅತ್ಯಂತ ಹೆಮ್ಮೆಯಿಂದ ಹೇಳುತ್ತಿದ್ದೇನೆ. 1995-96ರಲ್ಲಿ ರೆವಿನ್ಯೂ ಗ್ರೋಥ್ 25-26 ಪರ್ಸೆಂಟ್ ಆಯಿತು. ಈರೀತಿ ಹಿಂದೆ ಯಾವ ಕಾಲದಲ್ಲೂ ಆಗಿರಲಿಲ್ಲ. ಇಷ್ಟೊಂದು ಆರ್ಥಿಕ ಪರಿಸ್ಥಿತಿಯನ್ನುಸುಧಾರಣೆ ಮಾಡಿರುವಂಥ ನಾವು ತೆರಿಗೆ ಕಳ್ಳರ ಜೊತೆ ಶಾಮಿಲಾಗಿದ್ದೇವೆಯೇ ? 1994-95ರಲ್ಲಿ 2800 ಕೋಟಿ ರೂ. ಗಳು ಕಮರ್ಷಿಯಲ್ ಟ್ಯಾಕ್ಸ್ ಬಾಬ್ತು ವಸೂಲಿ ಆಗಿದ್ದರೆ, ನಾನು ಹಣಕಾಸಿನ ಮಂತ್ರಿ ಆದಮೇಲೆ 3503 ಕೋಟಿ ರೂ. ಗಳನ್ನು ಅಂದರೆ ಸುಮಾರು 700 ಕೋಟಿ ರೂ. ಗಳಷ್ಟು ತೆರಿಗೆಯನ್ನ ಹೆಚ್ಚಾಗಿ ವಸೂಲ್ಮಾಡಿದ್ದೇವೆ. ಹಾಗಾದರೆ ನಾವು ತೆರಿಗೆ ಕಳ್ಳರೇ? ಸ್ಟ್ಯಾಂಪ್ಸ್ ರಿಜಿಸ್ಟ್ರೇಷನ್ ವಿಚಾರದಲ್ಲಿ ಇವತ್ತು ಜಾಲಪ್ಪನವರು ನಮ್ಮ ಜೊತೆ ಇಲ್ಲ, ಅಲ್ಲಿ ಕೇಂದ್ರದ ಮಂತ್ರಿಗಳಾಗಿದ್ದಾರೆ. ಅವರು ರೆವಿನ್ಯೂ ಮಂತ್ರಿಯಾಗಿ 184 ಕೋಟಿ ರೂಪಾಯಿಗಳನ್ನು ಒಂದು ವರ್ಷದಲ್ಲಿ ಹೆಚ್ಚು ವಸೂಲ್ಮಾಡಿದರು. ಇದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ನಾವು ತೆರಿಗೆಗಳ್ಳರಾ ? ಭೂಮಿಗಳ್ಳರು, ಭೂಮಿಯವರ ಜೊತೆ ಶಾಮೀಲಾಗಿದ್ದೇವೆ. ಆಮೇಲೆ ಎಕ್ಸೈಜ್‌ನವರ ಜೊತೆ ಸೇರಿಕೊಂಡಿದ್ದೇವೆ. ಲಿಕ್ಕರ ಲಾಬಿ ಜೊತೆ ಸೇರಿ ಕೊಂಡಿದ್ದೇವೆ ಎಂದೆಲ್ಲಾ ಹೇಳಿದಿರಿ ಈ ಸರ್ಕಾರ ಯಾವ ಕಾರಣಕ್ಕೂ ಲಿಕ್ಕರ್ ಲಾಬಿಯಾಗಲಿ, ಗ್ರ್ಯಾನೈಟ್ ಲಾಬಿಯಾಗಲಿ, ತೆರೆಗೆ ಲಾಬಿಯಾಗಲಿ ಆವರ ಜೊತೆ ಶಾಮೀಲು ಮಾಡಿಕೊಳ್ಳತಕ್ಕ ಪ್ರಶ್ನೆ ಇಲ್ಲ. ಯಾವ ಕಾರಣಕ್ಕೂ ಆ ಪ್ರಶ್ನೆ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ: ಒಂದೇ ಒಂದು ಸಣ್ಣ ಉದಾಹರಣೆಯನ್ನು ಮಾನ್ಯ ಹಣಕಾಸಿನ ಮಂತ್ರಿಗಳ ಗಮನಕ್ಕೆ ತರುತ್ತೇನೆ. ನಾನು ಕ್ಲಾರಿಫಿಕೇಷನ್ ಕೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಇದು ಅವಿಶ್ವಾಸ ನಿರ್ಣಯ ಎಂಬುದು ನನಗೆ ಗೊತ್ತಿದೆ. ಬೆಂಗಳೂರು ಅರ್ಬನ್‌ನಲ್ಲಿ ಜುಲೈ ಒಂದರಿಂದ ಜುಲೈ 31ರವರೆಗೆ 1995-96ರಲ್ಲಿ 5 ಕೋಟಿ 60 ಲಕ್ಷ ರೂಪಾಯಿ ಸಂಗ್ರಹವಾಗಿದ್ದರೆ, 1996-97ರಲ್ಲಿ ಈ ವರ್ಷ ಒಂದೇ ತಿಂಗಳಲ್ಲಿ ಜುಲೈ ಒಂದರಿಂದ 31 ರವರೆಗೆ 3,46,45,555 ರೂಪಾಯಿಸಂಗ್ರಹವಾಗಿದೆ. ಅಂದರೆ 2,13,54,449 ರೂಪಾಯಿ ಒಂದೇ ತಿಂಗಳಲ್ಲಿ ಬೆಂಗಳೂರು ನಗರದಲ್ಲಿ ಕಡಿಮೆಯಾಗಿದೆ. 12 ತಿಂಗಳಿಗೆ ಎಷ್ಟಾಯಿತು ಸ್ವಾಮಿ? ದಾಸಪ್ಪ ಅಂಡ್ ಕಂಪನಿ ಅವರು ಚುನಾವಣೆಯಲ್ಲಿ ಮಾಡಿದಂಥ ಉಪಕಾರಕ್ಕೆ ಕನ್‌ಸಿಷಿನ್ ಕೊಡುವುದಕ್ಕೋಸ್ಕರ ತಾನೇ ಈ ವ್ಯವಹಾರ. ತಮ್ಮ ಹತ್ತಿರ ಅಂಕಿಅಂಶ ಇಲ್ಲವೆಂದರೆ ಕಳುಹಿಸಿಕೊಡುತ್ತೇನೆ ನೋಡಿ.

ಶ್ರೀ ಸಿದ್ದರಾಮಯ್ಯ: ಎಕ್ಸೈಜ್‌ನಲ್ಲಿ ಇವರು ಬಹಳ ಕಡಿಮೆಯಾಗಿದೆ ಎಂಬ ಮಾತು ಹೇಳುತ್ತಿದ್ದಾರೆ. 1995-96 ಅಂದರೆ ಹೋದ ವರ್ಷ ಏಪ್ರಿಲ್ ನಿಂದ ಜುಲೈವರೆಗೆ 2478 ಕೋಟಿ ರೂಪಾಯಿ ವಸೂಲಾಗಿದ್ದರೆ, 1996-97ರಲ್ಲಿ 278 ಕೋಟಿ ರೂಪಾಯಿ ಆದೇ

ಅವಧಿಯಲ್ಲಿ ಆಗಿದೆ. From April to July, the growth rate is 29% ಎಲ್ಲಿ ನಾವು ಲಿಕ್ಕರ್ ಲಾಬಿಯವರ ಜೊತೆ ಶಾಮೀಲಾಗಿ ಹೋಗಿಬಿಟ್ಟೆವು, ದಾಸಪ್ಪನವರ ಜೊತೆ ಸೇರಿಕೊಂಡೆವು? ಎಕ್ಸೈಜ್ ಬಗ್ಗೆ ನಾವು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ , ಈ ಸಾರಿ ಸಾರಾಯಿ ನಿಲ್ಲಿಸತಕ್ಕ ಕ್ರಮ ತೆಗೆದುಕೊಳ್ಳುತ್ತೇವೆಂಬ ಮಾತನ್ನು ನಾವು ಹೇಳಿದ್ದೆವು.

ಶ್ರೀ ವಾಟಾಳ್ ನಾಗರಾಜ್ : ನಿಲ್ಲಿಸಿಬಿಟ್ಟಿದ್ದೀರಲ್ಲವೆ?

ಶ್ರೀ ಸಿದ್ದರಾಮಯ್ಯ : ನಿಲ್ಲಿಸುತ್ತೇವೆ. We are committed to it. ಪ್ರೊಹಿಬಿಷನ್ ತರುವುದು ಸಾರಾಯಿಗೆ ಎಂದು ಹೇಳಿದ್ದೇವೆ. ನಾವು ಒಟ್ಟಾರೆ ಪ್ರೊಹಿಬಿಷನ್ ತರುತ್ತೇವೆಂದು ಎಲ್ಲಿಯೂ ಹೇಳಿಲ್ಲ. ಸಾರಾಯಿ ಬಂದ್ ಮಾಡುತ್ತೇವೆಂಬ ಮಾತು ಹೇಳಿದ್ದೇವೆ. ಹಿಂದೆ ನಮ್ಮ ಸರ್ಕಾರ ಇದ್ದಾಗ ಹೆಂಡ ಬಂದ್ ಮಾಡತಕ್ಕ ಕೆಲಸ ಮಾಡಿದ್ದೆವು. ಅದನ್ನು ಕೂಡ ತಮ್ಮ ಗಮನಕ್ಕೆ ತರುವುದುಕ್ಕೆ ಬಯಸುತ್ತೇನೆ. ನಾವು ಬಡವರಿಗೆ ತೊಂದರೆಯಾಗಬಾರದೆಂಬ ಕಾರಣಕ್ಕೋಸ್ಕರ ಜನತೆಗೆ ಕೊಟ್ಟಿರತಕ್ಕ ಮಾತು ಸಾರಾಯಿ ಬಂದ್ ಮಾಡುತ್ತೇವೆಂದು. ಆದರೆ ಇದರಿಂದ ಆಗತಕ್ಕ ಪರಿಣಾಮಗಳು ಬಗ್ಗೆ ಪರಿಶೀಲನೆ ಮಾಡಿ ವರದಿ ಕೊಡುವುದಕ್ಕೆ ನನ್ನ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಿದ್ದಾರೆ. ಆದು ಅಕ್ಟೋಬರ್ ಒಳಗಡೆ ವರದಿ ಕೊಡಬೇಕೆಂದು ಇದೆ. ಏಕೆಂದರೆ ನಾವು ಪಕ್ಕದ ರಾಜ್ಯಗಳಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ನೋಡಬೇಕು ಮತ್ತು ನಾವು ಸಾರಾಯಿ ಬಂದ್ ಮಾಡುವುದರಿಂದ ಸರ್ಕಾರಕ್ಕೆ ಆಗತಕ್ಕ ನಷ್ಟ ಮತ್ತು ಅದನ್ನು ಯಾವ ರೀತಿ ತುಂಬಿಕೊಳ್ಳಬೇಕೆಂದು ವಿಚಾರ ಮಾಡಬೇಕು. ಅದಕ್ಕೆ ಏನು ಕಾರ್ಯಕ್ರಮ ಹಾಕಿಕೊಳ್ಳಬೇಕೆಂಬುದರ ಬಗ್ಗೆ ಮತ್ತು ಇದರ ಮೇಲೆ ಅವಲಂಬನೆಯಾಗಿರತಕ್ಕ ಜನರು ಕೂಡ ಇದ್ದಾರೆ, ಅವರ ಬಗ್ಗೆ ವಿಚಾರ ಮಾಡಿ ವರದಿ ಕೊಡಬೇಕೆಂದು ಹಿಂದಿನ ಮುಖ್ಯಮಂತ್ರಿಗಳಾಗಿದ್ದಂಥ ಮತ್ತು ಈಗಿನ ಪ್ರಧಾನಿಗಳಾದ ಸನ್ಮಾನ್ಯ ದೇವೇಗೌಡರು ನನ್ನ ಅಧ್ಯಕ್ಷನನ್ನಾಗಿ ಮಾಡಿದರು. ನಾವು ಇಲ್ಲಿಯವರೆಗೆ 2-3 ಸಭೆಗಳನ್ನು ಮಾಡಿದ್ದೇವೆ. ಈಗ ಆಸೆಂಬ್ಲಿ ಬಂತು, ಹಾಗಾಗಿ ನಾವು ಬೇರೆ ರಾಜ್ಯಗಳಿಗೆ ಹೋಗಿ ನೋಡುವುದಕ್ಕೆ ಆಗಿಲ್ಲ, ವರದಿ ಏನೂ ಕೊಡುವುದಕ್ಕೆ ಆಗಿಲ್ಲ. ಇಷ್ಟು ಮಾತ್ರ ಹೇಳುತ್ತೇನೆ ಇದರಿಂದ ನಮಗೆ ಎಷ್ಟೇ ನಷ್ಟವಾದರೂ ಕೂಡ ನಾವು ಸಾರಾಯಿ ಬಂದ್ ಮಾಡುವುದಕ್ಕೆ ಬದ್ಧರಾಗಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ .....

(ಗೊಂದಲ)

ಮಾಡುತ್ತೇವೆಂದು ಹೇಳಿದರೂ ನಿಮಗೆ ಕೋಪ. ಒಂದೂವರೆ ವರ್ಷದಲ್ಲಿ ಅಲ್ಲ ಹೇಳಿದ್ದು, ಈಗ ಹೇಳಿರುವುದು. ಆದುದರಿಂದ ನಾವು ಈ ಸಾರಿ ಜುಲೈನಿಂದ ಅಕ್ಟೋಬರ್‌ವರೆಗೆ ಹರಾಜು ಮಾಡಬಾರದೆಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದೆವು. ತೀರ್ಮಾನ ಮಾಡಿ 1995-96 ರಲ್ಲಿ ಎಷ್ಟಕ್ಕೆ ಹೋಗಿತ್ತು ಅದರ ಮೇಲೆ 8 ಪರ್ಸೆಂಟ್ over and above the last year's rental ಅದರ ಮೇಲೆ ಮಾಡಬೇಕೆಂದು ಮಾಡಿದೆವು . ಇದು ಸುಮಾರು 69

ತಾಲ್ಲೂಕುಗಳಲ್ಲಿ ಈ ರೀತಿ ಒಟ್ಟಿಕೊಂಡು ಕೆಲವರು ಮುಂದೆ ಬಂದಿದ್ದಾರೆ. ಆ ರೀತಿ ನಾವು ತೆಗೆದುಕೊಂಡು ಕೊಡುತ್ತಿದ್ದೇವೆ. ಇನ್ನು"

ಉಪಾಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಎನೆಂದರೆ ಇದು ಅವಿಶ್ವಾಸ ನಿರ್ಣಯ. ಇದರ ಮೇಲೆ ತಾವು ಹೀಗೆ ಮಾಡಿದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮತ್ತೆ ನಾನು ಹೇಳುವುದಿಲ್ಲ. ಒಂದೇ ಒಂದು ಮಾಹಿತಿಯನ್ನು ಕಳುಹಿಸಿಕೊಡುತ್ತೇನೆ. ನಾನು ಮಾನ್ಯ ನಂಜೇಗೌಡರಿಗೆ ಹೇಳುತ್ತಿದ್ದೆ. 1995-96ರದ್ದು, ದಾಸಪ್ಪ ಆಂಡ್ ಕಂಪನಿಯದ್ದು ಹೇಳಿದೆ, ಅದು ಬೇಡ. ಸರ್ಕಾರ ಒಟ್ಟು 33 ತಾಲ್ಲೂಕುಗಳಲ್ಲಿ ವಿಧಿಸುತ್ತಿದೆ. 33 ತಾಲ್ಲೂಕುಗಳಲ್ಲಿ ಹೋದ ವರ್ಷ ಹರಾಜು ಮಾಡಿಸಿದಾಗಿ ಜುಲೈ ಒಂದು ತಿಂಗಳಲ್ಲಿ 14, 41, 24,000 ರೂಪಾಯಿ ಆದಾಯ ಬಂದಿತ್ತು. ಈ ಸಾರಿ 9,00,98,307 ರೂಪಾಯಿ ಆದಾಯ ಬಂದಿದೆ. ಅಂದರೆ ವ್ಯತ್ಯಾಸ ಸುಮಾರು 4,49,00,000. ಅಂದರೆ ಇವತ್ತು 33 ತಾಲ್ಲೂಕುಗಳಲ್ಲಿ ಆದಾಯ ಕಡಿಮೆಯಾಗಿದೆಯಲ್ಲಾ ಇದರ ಪ್ರಕಾರ ಒಂದು ವರ್ಷಕ್ಕೆ 56 ಕೋಟಿ ರೂಪಾಯಿ ಇದೇ ರೀತಿ ನೀವು ನಡೆಸಿದರೆ ಕಡಿಮೆಯಾಗುತ್ತದೆ 33 ತಾಲ್ಲೂಕುಗಳಲ್ಲಿ 56 ಕೋಟಿ. ಅವತ್ತು ಏನು ಹೇಳಿದೆ, 200 ಕೋಟಿ ರೂಪಾಯಿ, ಹೋದವರ್ಷಕ್ಕಿಂತ ಆದಾಯ ಕಡಿಮೆಯಾಗುವುದು ಇದೆ ನಿಮ್ಮ ಈ ವ್ಯವಹಾರದಿಂದ ಎಂದು ಹೇಳಿದೆ. ಅಂಕಿಅಂಶ ಬೇಕಾದರೆ ಮಾನ್ಯ ಶಾಣಪ್ಪನವರು ನೋಡಲಿ, ಆದಾಯ ಅದು ಹೌದೋ ಅಲ್ಲವೋ ಎಂದು ಹೇಳಲಿ. ಇದು ಲೂಟಿ ಅಲ್ಲವೇ? ಇದು ಒಳ ಒಪ್ಪಂದ ಅಲ್ಲವೇ?

ಶ್ರೀ ಕೆ.ಎಸ್.ಈಶ್ವರಪ್ಪ: ಅಂಗಡಿಯಲ್ಲಿ ಎಣ್ಣೆ ಕೇಳಿದರೆ ಬೆಣ್ಣೆ ಕೊಟ್ಟರಂತೆ, ಹಾಗಾಯಿತು...

(ಗೊಂದಲ)

ಉಪಾಧ್ಯಕ್ಷರು : ತಾವು ದಯಮಿಟ್ಟು ಕುಳಿತುಕೊಳ್ಳಿ.

ಶ್ರೀ ಜಿ.ಬಿ. ಶಿವಕುಮಾರ್ : ಇದು ಅವಿಶ್ವಾಸ ನಿರ್ಣಯ ಅಲ್ಲ. ಉತ್ತರ ಕೊಡಲು ಅರ್ಹವಾದ ನಿರ್ಣಯ ಅಲ್ಲ, ಮಾನ್ಯ ಶಾಣಪ್ಪನವರು ಇದಕ್ಕೆ ಉತ್ತರ ಕೊಡಬೇಕಾದ ಅಗತ್ಯ ಇಲ್ಲ, ಇದರಲ್ಲಿ ಏನೂ ಹುರುಳಿಲ್ಲ. ಎಲ್ಲಾ ಈ ಚೆಗೆ ಬಂತು. ಇನ್ನು ಮಾನ ಕಳೆಯುತ್ತಾರೆಂದು....

(ಗೊಂದಲ)

ಉಪಾಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಿದ್ದೀರಿ.

ಶ್ರೀ ಸಿದ್ಧರಾಮಯ್ಯ : ನಾನು ಏಕೆ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಳ್ಳಲಿ? ರಾಜಕಾರಣದಲ್ಲಿ ಇಕ್ಕಟ್ಟಿಗೆ ಸಿಕ್ಕಿಹಾಕಿಕೊಳ್ಳುವ ಪ್ರಶ್ನೆಯೇ ಇಲ್ಲ. ನಾವು ಬಹಳ ಪಾರದರ್ಶಕವಾಗಿದ್ದೇವೆ. ಮಾನ್ಯ ಉಪಾಧ್ಯಕ್ಷರೆ, 69 ತಾಲ್ಲೂಕುಗಳಲ್ಲಿ ಹೋದ ವರ್ಷ ಎಷ್ಟು ಬಂದಿತ್ತು? ನೀವು ಹೇಳಿದ್ದನ್ನೇ ಕೊಡುತ್ತಿದ್ದೇವೆ.

ಶ್ರೀ ಜಿ.ಬಿ.ಶಿವಕುಮಾರ್ : ಸುಮ್ಮನೆ ಏಕೆ ಕಂಠಶೋಷಣೆ ಮಾಡಿಕೊಳ್ಳುತ್ತಿದ್ದೀರಿ? ಅದೇನೂ ಇಲ್ಲ.

ಉಪಾಧ್ಯಕ್ಷರು : ಇವರು ಉತ್ತರ ಹೇಳುತ್ತಾರೆ ಕೊಡಿರಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಉಪಾಧ್ಯಕ್ಷರೆ ಜನರಿಗೆ ಗೊತ್ತಾಗಬೇಕಲ್ಲಾ 69 ತಾಲ್ಲೂಕುಗಳಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚು ಪರ್ಸೆಂಟೇಜ್ ಬರುವ ರೀತಿಯಲ್ಲಿ ಕೊಟ್ಟಿದ್ದೇವೆ. ಇನ್ನು 68 ತಾಲ್ಲೂಕುಗಳಲ್ಲಿ ಹೋದವರ್ಷ ಎಷ್ಟಿತ್ತು ಅಷ್ಟಕ್ಕೆ ಕೊಡಲಾಗಿದೆ. ಏಕೆಂದರೆ ಯಾರೂ 8 ಪರ್ಸೆಂಟ್ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಏಕೆಂದರೆ ಇರತಕ್ಕದ್ದು ನಾಲ್ಕೇ ತಿಂಗಳು, ಮೊದಲನೇ ನಾಲ್ಕು ತಿಂಗಳುಗಳು ಯಾವಾಗಲೂ ಅರಾಕ್‌ಗೆ ಲೀನ್ ಪೀರಿಯಡ್. ಯಾವಾಗಲೂ ಅಕ್ಟೋಬರ್‌ನಿಂದ ಜೂನ್‌ವರೆಗೆ ಅದು ಫ್ಲಷ್ ಪೀರಿಯಡ್ ಆಗುತ್ತದೆ. ಜಾತ್ರೆ, ಮದುವೆಗಳೂ ಅದೆಲ್ಲಾ ಬರುವುದು ಆ ಕಾಲದಲ್ಲಿ ಆದ್ದರಿಂದ ಹೆಚ್ಚು ಆರಾಕ್‌ನಲ್ಲಿ ಬರತಕ್ಕದ್ದು ಆ ಕಾರಣದಿಂದ. ಆ ಕಾರಣದಿಂದ 69ರಲ್ಲಿ ಅಷ್ಟಾಗಿವೆ. ಇನ್ನು 37 ತಾಲ್ಲೂಕುಗಳಲ್ಲಿ ನಮ್ಮ ಎಕ್ಸೈಜ್ ಡಿಪಾರ್ಟ್‌ಮೆಂಟಿನವರೇ ನಡೆಸುತ್ತಾ ಇದ್ದಾರೆ. ಯಾವ ದಾಸಪ್ಪನೂ ಇಲ್ಲ ಯಾವ ಗೀಸಪ್ಪನೂ ಇಲ್ಲ ಯಾರೂ ಇಲ್ಲ. ಇಲಾಖೆಯವರು ನಡೆಸುತ್ತಾ ಇದ್ದಾರೆ 33 ತಾಲ್ಲೂಕುಗಳಲ್ಲಿ. ಅದರಿಂದ ಅವರು ದಾಸಪ್ಪನವರು ನಡೆಸುತ್ತಾ ಇದ್ದಾರೆ, ಇನ್ಯಾವೋನೋ ಅಪ್ಪ ನಡೆಸುತ್ತಾ ಇದ್ದಾನೆ ಅಂದರಲ್ಲಾ ಯಾವಪ್ಪನೂ ಇಲ್ಲ. ಶಾಣಪ್ಪನವರು ನಡೆಸುತ್ತಾ ಇದ್ದಾರೆ ಅಷ್ಟೆ It is Shanappa who is running them. ಹೌದು. It is Shanappa who is running it in 33 Talukas. ಆದ್ದರಿಂದ ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರ ಗಮನಕ್ಕೆ ತರತಕ್ಕಂಥದ್ದು ಈ ಏಪ್ರಿಲ್ ನಿಂದ ಜುಲೈವರೆಗೆ 248 ಕೋಟಿ ಬಂದಿದ್ದರೆ, 95-96ರಲ್ಲಿ 96-97ರಲ್ಲಿ 278 ಕೋಟಿ ಬಂದಿದೆ. 30 ಕೋಟಿ ರೂಪಾಯಿ ಹೆಚ್ಚಾಗಿದೆ. ನಾವು ಲಿಕ್ಕರ್‌ನವರ ಜೊತೆ ಒಳ ಒಪ್ಪಂದ ಎಲ್ಲಿ ಸ್ವಾಮಿ ಮಾಡಿಕೊಂಡಿರುವುದು? ಹೇಳುವುದಕ್ಕೇನಂತೆ ಒಳ ಒಪ್ಪಂದ ಹೊರ ಒಪ್ಪಂದ ಚುನಾವಣೆಗಳಿಗೋಸ್ಕರ ಎಂದು ಪ್ರಚಾರಕ್ಕೋಸ್ಕರ ಹೇಳಬಹುದು ಯಡಿಯೂರಪ್ಪನವರು ಆತ್ಮಸಾಕ್ಷಿ ಎಂದು ಹೇಳಿದರು ರಾಜಕಾರಣದಲ್ಲಿ ಆತ್ಮವಂಚನೆಯೇ ಆಗುತ್ತಾ ಇರುವುದು. ಆತ್ಮವಂಚನೆ ಮಾಡಿಕೊಂಡು ಎಲ್ಲಾ ಕೆಲಸ ನಡೆಯುತ್ತಿದೆ. ಅದರ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಆತ್ಮಸಾಕ್ಷಿಯಾಗಿ ಓಟು ಕೊಡಬೇಕೆಂದು ಎಂ.ಎಲ್.ಎ.ಗಳಿಗೆ ಹೇಳಿದರು. ಅವರೆಲ್ಲರೂ ಕೂಡ ಆತ್ಮಸಾಕ್ಷಿಯಾಗಿಯೇ ಇವತ್ತು

ಎದ್ದುನಿಂತುಕೊಂಡು ಓಟು ಕೊಡುತ್ತಾರೆ. ಸರ್ಕಾರಕ್ಕೆ ಬೆಂಬಲ ಸೂಚಿಸುತ್ತಾರೆ. ನೀವು ಆ ಕಡೆ ಅದನ್ನೇ ಮಾಡಿ ಅಷ್ಟೆ, ನೀವೂ ಅಲ್ಲಿನವರೆಲ್ಲಾ ಆತ್ಮಸಾಕ್ಷಿಯಾಗಿ ಮಾಡಿ ಅಷ್ಟೇ ಸಾಕು.ಇನ್ನು ಗ್ರಾನೈಟ್ ಕಳ್ಳರು ಎಂದು ಹೇಳುತ್ತಾರೆ. ಗ್ರಾನೈಟ್ ಕಳ್ಳರ ಜೊತೆ ಶಾಮೀಲಾಗಿ ಬಿಟ್ಟಿದ್ದೀರಿ ಎಂದರು. ಮಾನ್ಯ ಉಪಾಧ್ಯಕ್ಷರೆ, ನಾವು ಅಧಿಕಾರಕ್ಕೆ ಬಂದಾಗ 94-95ರಲ್ಲಿ ಗ್ರಾನೈಟ್‌ನಿಂದ ಬಂದಿದ್ದಂಥ ಹಣ ಸರ್ಕಾರಕ್ಕೆ 55 ಕೋಟಿ 10 ಲಕ್ಷ ರೂಪಾಯಿ. 95-96ರಲ್ಲಿ ಎಸ್. ಡಿ. ಜಯರಾಂ ಅವರು ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡಮೇಲೆ ಒಂದು ವರ್ಷದಲ್ಲಿ 101 ಕೋಟಿ 65 ಲಕ್ಷ ರೂಪಾಯಿ ವಸೂಲಾಗಿದೆ. 101 ಕೋಟಿ 65 ಲಕ್ಷ. ನಾವು ಗ್ರಾನೈಟ್ ಕಳ್ಳರ ಜೊತೆ ಶಾಮೀಲಾಗಿಬಿಟ್ಟಿದ್ದೀವಾ ? ಗ್ರಾನೈಟ್ ಕಳ್ಳರ ಜೊತೆ ಶಾಮೀಲು. ಇಲ್ಲಿಯವರೆಗೆ 20 ಕೋಟಿ 95 ಲಕ್ಷ ರೂಪಾಯಿ ಮೂರು ತಿಂಗಳಲ್ಲಿ ವಸೂಲು ಮಾಡಿದ್ದಾರೆ. ಆದಾಯ ಬಂದಿರುವದು ಸರ್ಕಾರಕ್ಕೆ. ಅಷ್ಟೇ ಅಲ್ಲ, ಇಳಕಲ್‌ನಲ್ಲಿ ಜಿಮ್ ಗ್ರಾನೈಟ್, ವಿಜಾಪುರ ಜಿಲ್ಲೆ ಡಿ.ಸಿ.

ಶ್ರೀ ವಾಟಾಳ್ ನಾಗರಾಜ್ : ವೀರಮಣಿ.

ಶ್ರೀ ಸಿದ್ಧರಾಮಯ್ಯ : ವೀರಮಣಿಯೋ ಗೀರಮಣಿಯೋ ಅದು ಯಾರೋಗೊತ್ತಿಲ್ಲ. ಜಿಮ್ ಗ್ರಾನೈಟ್‌ನವರು ಸರ್ಕಾರಿ ಜಮೀನಿನಲ್ಲಿ ಕಲ್ಲು ತೆಗೆದು ಹೊಡೆಯುತ್ತಾ ಇದ್ದರು. 95ನೇ ಇಸವಿ, ನಾವು ಅಧಿಕಾರಕ್ಕೆ ಬಂದಮೇಲೆ ವಿಜಾಪುರ ಜಿಲ್ಲೆ ಡಿ.ಸಿ.ಯವರು ಅದು ಸರ್ಕಾರದ ಜಮೀನು ಎಂದು ಆಜ್ಞೆ ಮಾಡಿದರು. ಸುಮಾರು 70 ಕೋಟಿ ರೂಪಾಯಿಗಳ ಕಲ್ಲುಗಳನ್ನು ಸೀಜ್ ಮಾಡಿದರು. ಈ ಆರ್ಡರ್ ಮೇಲೆ ಕೋರ್ಟಿಗೆ ಹೋದರು ಜಿಮ್ ಗ್ರಾನೈಟ್‌ನವರು ಮತ್ತು ಬೇರೆಬೇರೆಯವರೆಲ್ಲಾ. ಕೋರ್ಟಿನಲ್ಲಿ ಇವತ್ತು ಅದು ಸರ್ಕಾರದ ಜಮೀನು ಎಂದು ಹೇಳಿ ತೀರ್ಮಾನ ಮಾಡಿದ್ದಾರೆ. ಅದರಿಂದ ಸುಮಾರು ನೂರಾರು ಕೋಟಿ ರೂಪಾಯಿ ಸರ್ಕಾರಕ್ಕೆ ಇವತ್ತೆ ಆದಾಯ ತರತಕ್ಕ ಕೆಲಸವನ್ನು ಮಾಡಿರತಕ್ಕದ್ದು ಅದು ನಮ್ಮ ಸರ್ಕಾರ ಎನ್ನತಕ್ಕಂಥ ಮಾತನ್ನು ಇವತ್ತು ಹೇಳಲಿಕ್ಕೆ ಬಯಸುತ್ತೇನೆ. ಗ್ರಾನೈಟ್‌ನವರ ಜೊತೆ ಶಾಮೀಲು ; ಏಕೆ ಮಾಡಿರಲಿಲ್ಲ ಹಿಂದಿನವರು ? ಇದನ್ನು 15 ವರ್ಷದಿಂದ ಏಕೆ ಮಾಡಿರಲಿಲ್ಲ ? ಇದು ಶಾಮೀಲಂತೆ. ಇದು ನಾವು ಮಾಡಿರತಕ್ಕದ್ದು. ಮಾನ್ಯ ಅಧ್ಯಕ್ಷರೇ, ಆದ್ದರಿಂದ ಈ ರಾಜ್ಯಕ್ಕೆ ಬರಬೇಕಾಗಿರತಕ್ಕ ಆದಾಯವನ್ನು ವಸೂಲು ಮಾಡುವುದರಲ್ಲಿ ನಾವು ಯಾರ ಮೂಲಜಿಗೂ ಕೂಡ ಒಳಗಾಗಿಲ್ಲ., ಒಳಗಾಗುವುದೂ ಇಲ್ಲ. ಬಹಳ ಕಟ್ಟುನಿಟ್ಟಾಗಿ ವಸೂಲು ಮಾಡತಕ್ಕ ಕೆಲಸ ಮಾಡುತ್ತೇವೆ; ಮುಂದೆಯೂ ಮಾಡುತ್ತೇವೆ. ರಾಜ್ಯದ ಅಭಿವೃದ್ಧಿಗೆ ಹೆಚ್ಚು ಹಣ ಖರ್ಚು ಮಾಡತಕ್ಕ ಕೆಲಸವನ್ನು ಕೂಡ ನಾವು ಮಾಡುತ್ತೇವೆ ಎನ್ನತಕ್ಕ ಮಾತನ್ನೂ ಕೂಡ ಹೇಳುವುಕ್ಕೆ ಇಷ್ಟಪಡುತ್ತೇನೆ. ಇನ್ನು ನೀರಾವರಿ ಬಗ್ಗೆ ಬಹಳ ಮಾತನಾಡಿದ್ದಾರೆ. ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ನಾವು ಎಷ್ಟು ಖರ್ಚು ಮಾಡುತ್ತಿದ್ದೇವೆ, ಹಿಂದೆ ಎಷ್ಟು ಖರ್ಚು ಮಾಡುತ್ತಿದ್ದರು, ಶ್ರೀಮಾನ್ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಅದಕ್ಕೆ ಯಾವ ಕಾಯಕಲ್ಪ ಕೊಟ್ಟರು ಎನ್ನತಕ್ಕದ್ದನ್ನು ಈ ರಾಜ್ಯದ ಜನತೆ, ರಾಜ್ಯದ ರೈತರು ಅರ್ಥ ಮಾಡಿಕೊಂಡಿದ್ದಾರೆ ಎನ್ನತಕ್ಕಂಥ ಮಾತನ್ನು ಇವತ್ತು ಹೇಳಲಿಕ್ಕೆ ಬಯಸುತ್ತೇನೆ. ಶ್ರೀಮಾನ್

ದೇವೇಗೌಡರು ನೀರಾವರಿಗೋಸ್ಕರ ಹೋರಾಟ ಮಾಡಿದ್ದಾರೆ. ಅದನ್ನು ಯಾರೂ ಅಲ್ಲಗಳೆಯುವ ಹಾಗಿಲ್ಲ.

ಶ್ರೀ ಎಂ. ಶ್ರೀನಿವಾಸ್ : ಮೇಜು ತಟ್ಟಿರಿ.

ಶ್ರೀ ಸಿದ್ಧರಾಮಯ್ಯ: ನೀವು ತಟ್ಟಿರಿ, ಆಗ ನೀವೂ ಇದ್ದಿರಿ ರಾಜೀನಾಮೇ ಕೊಟ್ಟಿದ್ದರು ಹಣ ಕೊಡಲಿಲ್ಲ ಎಂದು.

ಶ್ರೀ ಜಿ.ಬಿ.ಶಿವಕುಮಾರ್ : ನಾವು ಮೇಜು ತಟ್ಟುತ್ತೇವೆ. ವಿರೋಧಪಕ್ಷದವರು ನೀವು ಹೀಗೆ ಹೇಳಿಕೊಂಡು ಹೋದರೆ ಜನ ನಿಮಗೆ ತಟ್ಟುತ್ತಾರೆ. ತಿಳಿದುಕೊಂಡು ಬಿಡಿ.

ಶ್ರೀ ಸಿದ್ಧರಾಮಯ್ಯ: ಇವತ್ತು ದೇವೇಗೌಡರ ಹೆಸರು ಹೇಳಿದತಕ್ಷಣವೇ ನಿಮಗೆ ನಡುಕ ಏಕಪ್ಪಾ ಶುರುವಾಗುತ್ತದೆ? ಏತಕ್ಕೆ ಒಬ್ಬ ರೈತನ ಮಗ, ಒಬ್ಬ ಕನ್ನಡಿಗ ಪ್ರದಾನಿಯಾಗಿದ್ದಾನೆ ಎಂದು ಹೇಳಿ ನಾವೆಲ್ಲಾ ಹೆಮ್ಮೆ ಪಡೋಣ. ಅವರು ತಪ್ಪು ಮಾಡಿದರೆ ತಪ್ಪು ಮಾಡಿದರು ಎಂದು ಹೇಳೋಣ. ಇವತ್ತು ಕಾವೇರಿ ವಿಚಾರದಲ್ಲಾಗಲೀ, ಕೃಷ್ಣಾ ನೀರಿನ ವಿಚಾರದಲ್ಲಾಗಲೀ, ಈ ಸರ್ಕಾರ ಯಾವ ಕಾರಣಕ್ಕೂ ಕೂಡ ರೈತರ ಹಿತವನ್ನು ಬಲಿ ಕೊಡುವುದಿಲ್ಲ. ಅದಕ್ಕಾಗಿ ಯಾವುದೇ ಹೋರಾಟಕ್ಕೆ ಯಾವ ತ್ಯಾಗಕ್ಕೂ ಕೂಡ ಸಿದ್ಧ ಎನ್ನತಕ್ಕ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಇದರಲ್ಲಿ ಯಾವ ರಾಜಿ ಇಲ್ಲ ಎನ್ನತಕ್ಕ ಮಾತನ್ನು ಕೂಡ ಬಹಳ ಸ್ಪಷ್ಟವಾದ ಮಾತುಗಳಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇನೆ, ಅದಕೋಸ್ಕರವೇ ನೀರಾವರಿಗೆ, ಇವತ್ತು ಮೇಜರ್ ಇರಿಗೇಷನ್ ಮಿಡಿಯಂ ಇರಿಗೇಷನ್, ಹೋದ ವರ್ಷ 725 ಕೋಟಿ ರೂಪಾಯಿ ಖರ್ಚಾಗಿದ್ದರೆ, ಈ ವರ್ಷ 1168 ಕೋಟಿ ರೂಪಾಯಿ ಗಳನ್ನು ಇಟ್ಟಿದ್ದೇವೆ, ಪ್ಲಾನ್‌ನಲ್ಲಿ ಕಾವೇರಿ ಬೇಸಿನ್ ಬಿಟ್ಟು, ಇಷ್ಟು ಹಣವನ್ನೂ ಕೂಡ ಖರ್ಚು ಮಾಡುತ್ತೇವೆ. ಹೋದವರ್ಷ ಹೇಳಿದರು, ಸ್ವಲ್ಪ ಕೇಳಿ ಶಂಕರಲಿಂಗೇಗೌಡರೇ.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ: 45 ಜನ ಮಂತ್ರಿಗಳಿದ್ದಾರಲ್ಲಾ, ಅದನ್ನು ಅವರು ಸ್ವಾಗತ ಮಾಡುತ್ತಾರೆ.

ಶ್ರೀ ಸಿದ್ಧರಾಮಯ್ಯ : ಹೌದು , ಅದೂ ಇರಬೇಕಾಗುತ್ತದೆ. 45 ಜನರನ್ನೂ ಮಾಡಬೇಕಾಗುತ್ತದೆ. ರಾಜ್ಯದಲ್ಲಿ ಎಲ್ಲರಿಗೂ ಅವಕಾಶ ಕೊಡಬೇಕಾದರೆ ಒಂದೊಂದು ಸಾರಿ ಮಾಡಬೇಕಾಗುತ್ತದೆ. ಜನ ಕೇಳುವುದು 45 ಜನ ಮಂತ್ರಿ ಮಾಡಿದ್ದೀರಿ ಎಂಬುದನ್ನು ಅಲ್ಲ, ಜನರ ಪರವಾಗಿ ಕೆಲಸ ಮಾಡುತ್ತಿದ್ದೀರಿ ಪ್ರಾಮಾಣಿಕವಾಗಿ ದಕ್ಷತೆಯಿಂದ ಎನ್ನತಕ್ಕದ್ದು ಜನ ಬಯಸುತ್ತಾರೆಯೇ ಹೊರತು ಎಷ್ಟು ಜನರನ್ನು ಮಾಡಿದ್ದಾರೆ ಎನ್ನುವಂಥ ಮಾತನ್ನು ಯಾರೂ ಕೇಳುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಇವತ್ತು ಅಪ್ಪರ್‌ಕೃಷ್ಣ ಒಂದಕ್ಕೇ 760 ಕೋಟಿ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಅಂದರೆ ಕೃಷ್ಣ ಭಾಗ್ಯಜಲನಿಗಮದಿಂದ ಮತ್ತೆ ಬಜೆಟ್ಟಿನಲ್ಲಿ

ಇಟ್ಟಿರತಕ್ಕದ್ದು 260 ಕೋಟಿ ರೂಪಾಯಿ, ಆದರ ಜೊತೆಗೆ, ಅದು ಬರುತ್ತದೆ ಎನ್ನತಕ್ಕ ಆಸೆಯಿಂದ ನಾನು ಹೇಳುತ್ತೇನೆ. ದೇವೇಗೌಡರು ಒಬ್ಬ ರೈತನ ಮಗ. ನೀರಾವರಿ ಬಗ್ಗೆ ಆಸಕ್ತಿ ಇರುವುದರಿಂದ ಇಡೀ ದೇಶದ ರೈತರ ಬಗ್ಗೆ, ಇವತ್ತು 900 ಕೋಟಿ ರೂಪಾಯಿಗಳನ್ನು ಪ್ರಥಮ ಬಾರಿಗೆ ಅವರ ಬಜೆಟ್ಟಿನಲ್ಲಿ ಇಡತಕ್ಕಂಥ ಪ್ರಯತ್ನವನ್ನು ಮಾಡಿದ್ದಾರೆ ಎನ್ನತಕ್ಕದ್ದನ್ನೂ ಕೂಡ ಇವತ್ತು ನಾವೆಲ್ಲಾ ಸ್ವಾಗತ ಮಾಡುತ್ತೇವೆ. ಹಿಂದೆ ಏತಕ್ಕೆ ಮಾಡಲಿಲ್ಲ? ಒಬ್ಬ ರೈತನ ಮಗ ಇವತ್ತು ಪ್ರಧಾನಿಯಾಗಿದ್ದಾನೆ. ಕೆಂಪು ಕೋಟೆಯ ಮೇಲೆ ಬಾವುಟ ಹಾರಿಸುತ್ತಾನೆ ಎಂದಾಗ ಈ ವ್ಯವಸ್ಥೆ, ಕಾಲು ಹಿಡಿದುಕೊಂಡು ಎಳೆಯತಕ್ಕ ಪ್ರಯತ್ನವನ್ನು ಮಾಡುತ್ತೆವೆ. ನೀವು ಮಾಡುವುದಿಲ್ಲ, ವ್ಯವಸ್ಥೆ ಮಾಡುತ್ತದೆ. ಪಾಪ ಶ್ರೀನಿವಾಸ್ , ನೀವು ಯಾವಾಗಲೂ ಮಾಡುವುದಿಲ್ಲ. ನಮ್ಮ ಜೊತೆಯಲ್ಲಿದ್ದವರು. ಅವರು ಹೇಗೆ ಮಾಡುತ್ತಾರೆ? ಮಾಡುವುದಿಲ್ಲ. ಕಳೆದ ಚುನಾವಣೆಯಲ್ಲಿ ಶ್ರೀಮಾನ್ ದೇವೇಗೌಡರು, ಜೆ.ಹೆಚ್. ಪಟೇಲರು ನಾವು ಎಲ್ಲಾ ಚುನಾವಣೆಗೆ ಹೋದಾಗ ನಮಗೆ ಹೆಚ್ಚು ಸ್ಥಾನಗಳನ್ನು ಕರ್ನಾಟಕದ ಜನತೆ ಆಶೀರ್ವಾದ ಮಾಡಿ 16 ಸ್ಥಾನಗಳನ್ನು ಕೊಟ್ಟರು. ಹೆಚ್ಚು ಸ್ಥಾನಗಳನ್ನು ಕೊಟ್ಟರೆ. ಇವತ್ತು ಗೊಬ್ಬರಕ್ಕೆ ಹೆಚ್ಚು ಸಬ್ಸಿಡಿಯನ್ನು ಕೊಡುತ್ತೇವೆಂದು ಹೇಳಿದ್ದೆವು. ಇವತ್ತು ಒಂದು ಟನ್‌ಗೆ ಎರಡೂವರೆ ಸಾವಿರದಿಂದ ಮೂರು ಸಾವಿರದವರೆಗೆ ಸಬ್ಸಿಡಿ ಕೊಟ್ಟಿರತಕ್ಕದ್ದು ದೇವೇಗೌಡರು, ರೈತನ ಮಗ ಎಂದು ಮೆಚ್ಚುಗೆಯಿಂದ ಹೇಳಬೇಕಾಗಿದೆ.

8:40 ಪಿ.ಎಂ

ಕಬ್ಬು ಕೂಡ ಉಳಿಯಬಾರದೆನ್ನುವ ಕಾರಣಕ್ಕೋಸ್ಕರ, ಇವತ್ತು ಕಬ್ಬನ್ನು ಅರೆಯಲಿಕ್ಕೆ ಲೆಸೆನ್ಸ್ ತೆಗೆದುಕೊಳ್ಳಬೇಕಾಗಿದ್ದರೆ ಅವರಿವರ ಹತ್ತಿರ ಅಡ್ಡಾಡಬೇಕಾಗಿತ್ತು. ಯಾರ್‍ಯಾರಿಗೋ ಗೊಗರೆಯಬೇಕಾಗಿತ್ತು , ಇವತ್ತು ಹೇಳದೆ ಕೇಳದೆ 16 ಷುಗರ್ ಫ್ಯಾಕ್ಟರಿಗಳಿಗೆ ಪರವಾನಗಿ ಯನ್ನು ಕೊಟ್ಟಿರತಕ್ಕವರು ಶ್ರೀಮಾನ್ ದೇವೇಗೌಡರು. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ರೈತರು ಬೆಳೆಬಂತಹ ಕಬ್ಬು ಅದನ್ನು ಅರೆಯಬೇಕು, ರೈತರಿಗೆ ಬೆಲೆ ಸಿಗಬೇಕು ಎನ್ನುವ ಕಾರಣಕ್ಕೆ ಇವತ್ತು ಈ ನಿರ್ಣಯವನ್ನು ಮಾಡಿದ್ದಾರೆಂದರೆ ರೈತರ ಸರ್ಕಾರವೆಂದು ಹೇಳುವುದಕ್ಕಾಗುವುದಿಲ್ಲ? ಇನ್ನೂ ಕುಡಿಯುವ ನೀರಿನ ಬಗ್ಗೆ ಮಾನ್ಯ ಎಂ.ಪಿ. ಪ್ರಕಾಶರವರು ಹೇಳಿದರು. ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಕಳೆದ ಎರಡು ವರ್ಷಗಳ ಬಜೆಟ್‌ನ್ನು ನೀವು ನೋಡಬೇಕು. ಡಿಸ್ಟ್ರಿಕ್ಟ್ ಪ್ಲಾನ್‌ಗೆ ಹಿಂದಿನ ಸರ್ಕಾರ 540 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೆ. ನಾವು 1995-96ನೇ ಸಾಲಿನಲ್ಲಿ 620ಕೋಟಿ ಇಟ್ಟಿದ್ದೇವೆ. 1996-97ನೇ ಸಾಲಿಗೆ 732ಕೋಟಿ ರೂಪಾಯಿಗಳನ್ನು. ಡಿಸ್ಟ್ರಿಕ್ಟ್ ಪ್ಲಾನ್‌ಗೆ ಇಟ್ಟಿದ್ದೇವೆಂದರೆ ನಾವು ಗ್ರಾಮೀಣಾಭಿವೃದ್ಧಿಯ ಪರವಾಗಿದ್ದೇವೆಯೋ ಅಥವಾ ಇಲ್ಲವೋ ಎನ್ನುವುದನ್ನು ತಾವೇ ನೋಡಿ. 1995-96ನೇ ಸಾಲಿನಲ್ಲಿ 154 ಕೋಟಿ ರೂಪಾಯಿಗಳನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಕುಡಿಯುವ ನೀರಿಗಾಗಿ ಖರ್ಚು ಮಾಡಿದರೆ, 1996-97ರಲ್ಲಿ 258ಕೋಟಿ ರೂಪಾಯಿಗಳನ್ನು ಖರ್ಚುಮಾಡತಕ್ಕ ನಿರ್ಣಯವನ್ನು ಮಾಡಿದ್ದರೆ, ಅದಕ್ಕೋಸ್ಕರ ರಾಜೀನಾಮೆಯನ್ನು ಕೊಡಬೇಕೇ? ಹಳ್ಳಿಯ ಜನರಿಗೆ ನೀರು ಕೊಟ್ಟಿದ್ದಕ್ಕೋಸ್ಕರ? ಇವತ್ತು

ಕೇಂದ್ರ ಸರ್ಕಾರ ಮಿನಿಮಮ್ ನೀಡ್ಸ್ ಪ್ರೋಗ್ರಾಮ್ ಮಾಡಿ first time in the history of India ಎಲ್ಲಾ ಮುಖ್ಯಮಂತ್ರಿಗಳನ್ನು ಕರೆದು ಯಾವುದು ಮೂಲಭೂತ ಸೌಕರ್ಯಗಳಿವೆ, ಅತ್ಯಂತ ಅಗತ್ಯವಾದ ಕುಡಿಯುವ ನೀರು, ಪ್ರಾಥಮಿಕ ಆರೋಗ್ಯ, ಪ್ರಾಥಮಿಕ ಶಿಕ್ಷಣ, ಆಹಾರ, ರಸ್ತೆಗಳು, ಕೂಡು ರಸ್ತೆಗಳ ಮನೆಗಳು ಇದರ ಬಗ್ಗೆ ಇವತ್ತು ಹೆಚ್ಚು ಹಣವನ್ನು ಖರ್ಚುಮಾಡಬೇಕೆಂದು ತೀರ್ಮಾನ ಮಾಡಿರುವುದಕ್ಕೆ ತಾವು ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕಾಗುತ್ತದೆಂದು ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಹೆಚ್. ಎಸ್. ಶಂಕರ ಲಿಂಗೇಗೌಡ : ಮಾನ್ಯ ಉಪಾಧ್ಯಕ್ಷರೆ, ನಾನು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : (ಉಪ ಮುಖ್ಯಮಂತ್ರಿಗಳು) : ಮಾನ್ಯ ಶಂಕರಲಿಂಗೇಗೌಡರೇ, ಅಲ್ಲಿ ಪಾಯಿಂಟೂ ಇಲ್ಲ ಆರ್ಡರೂ ಇಲ್ಲ ತಾವು ಕುಳಿತುಕೊಳ್ಳಿ ಮಾನ್ಯ ಉಪಾಧ್ಯಕ್ಷರೇ ,ನಾನು ಈಲ್ಡ್ ಆಗಿಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಬಹಳ ಪ್ರೀತಿಯಿಂದ ಹೇಳುತ್ತಿದ್ದಾರೆ ಮಳೆಬಿದ್ದು ರಸ್ತೆಗಳು ತೂತು ಬಿದ್ದಿರುವುದು ನಿಜ ನಾನು ಇಲ್ಲವೆಂದು ಹೇಳುತ್ತಿಲ್ಲ ಅದನ್ನು ಸರಿಪಡಿಸಿಕೊಡೋಣ. ನಾನು ಇಲ್ಲ ಎಂದು ಹೇಳಿದೇನೋ ? ನಾನು ಇಲ್ಲವೆಂದು ಹೇಳಿಲ್ಲ. ಆದ್ದರಿಂದ ಇವತ್ತು ನಾವು ಎಲ್ಲಾ ಅಭಿವೃದ್ಧಿ ಕೆಲಸಗಳನ್ನು, ಅದು ನೀರಾವರಿ ಇರಬಹುದುದು ಪ್ರಾಥಮಿಕ ಶಿಕ್ಷಣ ಇರಬಹುದು, ಪ್ರಾಥಮಿಕ ಆರೋಗ್ಯವಿರಬಹುದು, ಕುಡಿಯುವ ನೀರಿನ ಕೆಲಸವಿರ ಬಹುದು, ಹಳ್ಳಿಗಾಡಿನ ಅಭಿವೃದ್ಧಿ ಕೆಲಸವಿರಬಹುದುದು, ಇವೆಲ್ಲಕ್ಕೂ ಕೂಡ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಇದು ನಮ್ಮ ಆದ್ಯತೆ ಇದು ಗ್ರಾಮೀಣಪ್ರದೇಶದಲ್ಲಿ ಒಂದು ಬದಲಾವಣೆಯನ್ನು ಗ್ರಾಮೀಣ ಜನರ ಕೈಗೆ ಶಕ್ತಿಯನ್ನು ಕೊಡತಕ್ಕ ಅವರಿಗೆ ಕೆಲಸ ಕೊಡತಕ್ಕ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಅವರಿಗೆ ನಾನು ತಿಳಿಸಲಿಕ್ಕೆ ಬಯಸುತ್ತಿದ್ದೇನೆ. ಆದರಿಂದ ಇವತ್ತು ಏನೂ ಕೆಲಸ ನಡೆಯುತ್ತಿಲ್ಲ ಎಲ್ಲಾ ಕೆಲಸಕಾರ್ಯಗಳು ನಿಂತುಹೋಗಿಬಿಟ್ಟಿವೆ. ಅಭಿವೃದ್ಧಿ ಕೆಲಸಗಳೆಲ್ಲಾ ನಿಂತು ಹೋಗಿಬಿಟ್ಟಿವೆ, ಮಾನ್ಯ ಉಪಾಧ್ಯಕ್ಷರೆ, ನಾವು ಈಗಾಗಲೇ ನಾನು ಮೊದಲೇ ಹೇಳಿದಹಾಗೆ ಎಲ್ ಓಸಿ ಜುಲೈವರೆಗೆ ನೀರಾವರಿ ಮತ್ತು ಪಿ.ಡಬ್ಲ್ಯೂ. ಡಿ. ಎಲ್ಲವನ್ನು ಕೂಡ ಬಿಡುಗಡೆ ಮಾಡಿದ್ದೇವೆ. ಜಿಲ್ಲಾಪಂಚಾಯಿತಿಗೆ ಪ್ರತಿ ತಿಂಗಳೂ ಕೂಡ ಹನ್ನೆರಡನೇ ಒಂದು ಭಾಗ ಹಣವನ್ನೇ ನಾವೇನು ಬಜೆಟ್‌ನಲ್ಲಿಟ್ಟಿದ್ದೇವೆ ರೂರಲಿ ಡೆವಲಪಮೆಂಟ್‌ಗೆ: ಅಷ್ಟನ್ನು ಪ್ರತಿ ತಿಂಗಳೂ ಕೂಡತಪ್ಪದೆ ಬಿಡುಗಡೆ ಮಾಡುತ್ತಿದ್ದೇವೆ. ಒಂದು ಮಾತನ್ನು ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಯಡಿಯೂರಪ್ಪನವರು ಹೇಳಿದರು, ನಿಮ್ಮ ಬಜೆಟ್‌ನಲ್ಲಿ ಸುಮಾರು 2378ಕೋಟಿ

ರೂಪಾಯಿಗಳನ್ನು ಸಾಲ ಮತ್ತು ಬಡ್ಡಿಗೆ ಕೊಡುತ್ತಿದ್ದೀರಿ ಎಂದು ಹೇಳಿದರು. 862ಕೋಟಿ ರೂಪಾಯಿ ಇದರಲ್ಲಿ ವೇಸ್ ಅಂಡ್ ಮೀನ್ಸ್ ಸೇರಿರುತ್ತದೆ. ಅದರಲ್ಲಿ ನಾವು ತೆಗೆದುಕೊಳ್ಳುವುದು ವಾಪಸ್ಸು ಕೊಡುವುದು ಇದೆಲ್ಲ ಇರುತ್ತದೆ. ಅದನ್ನು ಕಳೆದರೆ 1511 ಕೋಟಿ ರೂಪಾಯಿ ಅಸಲು ಮತ್ತು ಬಡ್ಡಿಯನ್ನು ಕೇಂದ್ರಸರ್ಕಾರಕ್ಕೆ ಎಲ್ಐಸಿಗೆ ಇವುಗಳಿಗೆ ನಾವು ಕೊಡುತ್ತೇವೆ. ಇದು ಎಲ್ಲಾ ಕಾಲದಲ್ಲೂ ನಡೆದುಕೊಂಡು ಬಂದಿರುವುದು. ಒಂದು ಮಾತನ್ನು ಅತ್ಯಂತ ಹೆಮ್ಮೆಯಿಂದ ಹೇಳಲಿಕ್ಕೆ ಬಯಸುತ್ತೇನೆ. ಇಡೀದೇಶದಲ್ಲಿ ನಾವು ಕರ್ನಾಟಕ ರಾಜ್ಯ ಟೋಟಲ್ ರೆವಿನ್ಯೂ ರೀಸಿಟ್ಸ್‌ನಲ್ಲಿ ನಾವು ಅಸಲು ಮತ್ತು ಬಡ್ಡಿ ಯನ್ನು ಕೊಡತಕ್ಕದ್ದರಲ್ಲಿ ನಮ್ಮದು 14.38. ಇಡೀದೇಶದ ಅಲ್ ಇಂಡಿಯಾ ಅವರೆ. ಎಲ್ಲ ರಾಜ್ಯಗಳದ್ದು 16.4 ಚಿಲ್ಲರೆ, ನಾವು ಕೆಳಗಡೆ ಇದ್ದೇವೆ ಡೆಟ್ ಸರ್ವಿಸ್‌ನಲ್ಲಿ ಇದನ್ನು ನಾನು ಹೇಳುವುದಿಲ್ಲ. ರೀಸರ್ವ ಬ್ಯಾಂಕ್ ಆಫ್ ಇಂಡಿಯಾ ಅವರ ವರದಿನಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಕಳೆದ 10 ವರ್ಷಗಳಲ್ಲಿ ಜನತಾದಳ ಸರ್ಕಾರ ಬಂದಮೇಲೆ ಈ ರಾಜ್ಯದ ಅರ್ಥಿಕ ಪರಿಸ್ಥಿತಿ ಅತ್ಯಂತ ಸುಭದ್ರವಾಗಿದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ., ಈ ರಾಜ್ಯದ ಜನತೆಯ ಕಲ್ಯಾಣ ಕೆಲಸಗಳನ್ನು ಮಾಡತಕ್ಕ ಎಲ್ಲಾ ಪ್ರಾಮಾಣಿಕ ಪ್ರಯತ್ನವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪರಿಶಿಷ್ಟ ಜಾತಿಯವರಿಗೆ ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ನಲ್ಲಿ ನೀವು ಹಣವನ್ನು ಖರ್ಚು ಮಾಡಿಲ್ಲ, ಅದು ಲ್ಯಾಫ್ಸ್ ಆಗಿ ಹೋಯಿತು ಎಂದು ಹೇಳಿದ್ದಾರೆ ಮಾನ್ಯ ರಾಮಕೃಷ್ಣರವರು ಮತ್ತು ಶ್ರೀಮಾನ್ ಯಡಿಯೂರಪ್ಪನವರು ಕೂಡ ಹೇಳಿದ್ದಾರೆ. ಲ್ಯಾಫ್ಸ್ ಇಲ್ಲ. 1991-92 ರಲ್ಲಿ ಒಟ್ಟು ಖರ್ಚಾದದ್ದು 110ಕೋಟಿ. 1992-93ರಲ್ಲಿ 160ಕೋಟಿ. 1993-94ರಲ್ಲಿ 258ಕೋಟಿ. 1994-95ರಲ್ಲಿ 289ಕೋಟಿ. ಕಳೆದ ವರ್ಷ 1995-96 315ಕೋಟಿ. ಇಟ್ಟಿದ್ದು 338ಕೋಟಿ. ಎಲ್ಲಿ ಅನ್‌ಸ್ಪೆಂಟ್ಸ್ ಲ್ಯಾಫ್ಸ್ ಆಯಿತು ಸ್ವಾಮಿ ? ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಈ ಸರ್ಕಾರ ಪರಿಶಿಷ್ಟ ಜಾತಿಯವರ ಬಗ್ಗೆ ಕಳಕಳಿಯಿಲ್ಲ ಅವರು ಹಣ ಖರ್ಚುಮಾಡಿಲ್ಲ ಎಂದು ಹೇಳಿದ್ದೀರಿ. ಅದು ಸರಿಯಾಲ್ಲ ನೀವು ಹೇಳಿದ್ದು 149ಕೋಟಿ ಮತ್ತು 54 ಕೋಟಿ ಅದು ಪ್ಲಾನ್‌ನಲ್ಲಿ ಷೆಡ್ಯೂಲ್ಡ್‌ಕಾಸ್ಟ್ ಮತ್ತ ಷೆಡ್ಯೂಲ್ಡ್ ಟ್ರೈಬ್‌ನವರಿಗೆ ಇದ್ದದ್ದು. ಎಸ್.ಸಿ.ಪಿ. ಯಲ್ಲಿ ಎಲ್ಲಾ ಹಣವನ್ನು ಬಳಸತಕ್ಕ ಕೆಲಸವನ್ನು ಮಾಡಿದ್ದೇವೆ. ಹೋದವರ್ಷ 338 ಕೋಟಿ ಇದ್ದರೆ ಈ ವರ್ಷ 415ಕೋಟಿ ರೂಪಾಯಿಗಳನ್ನು ಎಸ್ ಸಿ. ಪಿ .ಯಲ್ಲಿ ಖರ್ಚು ಮಾಡತಕ್ಕ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ, ಈ ಸರ್ಕಾರ ಯಾರು ಬಡವರು ಇದ್ದಾರೆ ದಲಿತವರ್ಗದ ಜನರು ಎನಿದ್ದಾರೆ, ಆ ವರ್ಗದ ಪರವಾಗಿ ಅವರಿಗೆ ಸಾಮಾಜಿಕ ನ್ಯಾಯ ಕೊಡುವುದರಲ್ಲಿ ಯಾವಾಗಲೂ ಕೂಡ ಹಿಂದೆ ಬೀಳುವುದಿಲ್ಲವೆನ್ನತಕ್ಕ ಮಾತನ್ನೂ ಕೂಡ ಅತ್ಯಂತ ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತಿದ್ದೇನೆ. ಹಾಗೆಯೇ ಹೆಚ್. ಕೆ.ಡಿ. ಬಿ. ಮತ್ತು ಎಂ.ಎ.ಡಿ.ಬಿ. ಅನ್ನು ರೀಜನಲ ಇಂಬ್ಯಾಲೆನ್ಸ್ ಹೋಗಬೇಕೆಂದು ಸ್ಥಾಪನೆ ಮಾಡಿದೇವೆ. ಅದಕ್ಕೆ ಹಣವನ್ನು ಬಿಡುಗಡೆ ಯಾಡುತ್ತಿಲ್ಲವೆನ್ನತಕ್ಕ ಮಾತನ್ನು ಹೇಳಿದ್ದಾರೆ. ಅದರಲ್ಲಿ ಏನಾಗಿದೆ ಅಂದರೆ, ನಾವು ಕಳೆದ ವರ್ಷ 45ಕೋಟಿ ಬಿಡುಗಡೆ ಮಾಡಿದ್ದೆವು. ಅದರಲ್ಲಿ ಪಿ.ಡಿ.ಅಕೌಂಟ್‌ನಲ್ಲಿ 27 ಕೋಟಿ, ಸುಮಾರು 73ಕೋಟಿ ಬಿಡುಗಡೆ ಮಾಡಿದ್ದೆವು. ಅದರಲ್ಲಿ ಪಿ.ಡಿ.ಅಕೌಂಟ್‌ನಲ್ಲಿ 27 ಕೋಟಿ. ಸುಮಾರು 73ಕೋಟಿ ಅದು 1991-92ಕ್ಕೆ ಖರ್ಚು ಮಾಡುವಂಥದ್ದು .

1992-93ಕ್ಕೆ ಖರ್ಚು ಮಾಡುವುದು 1993-94ರಿಂದ ಶುರುವಾಗಿದೆ. ನಾವು ಹೆಚ್‌ಕೆಡಿಬಿಗೆ ಬಿಡುಗಡೆ ಮಾಡುವುದು ಅವರು ಖರ್ಚು ಮಾಡದೆ ಪಿ.ಡಿ. ಅಕೌಂಟ್ಸ್‌ನಲ್ಲಿ ಇಟ್ಟುಕೊಳ್ಳುವುದು. ಈ ತರಹ ಆಗಿ ಆ ಹಣ ಖರ್ಚಾಗಲಿಲ್ಲ. ಅದಕ್ಕೇ ನಾವು ಈ ಸಲ 60 ಕೋಟಿ ಇಟ್ಟಿದ್ದೇವೆ. 60 ಕೋಟಿ ರೂಪಾಯಿಗಳನ್ನೂ ಕೂಡ ಈ ಸಲ ಬಿಡುಗಡೆ ಮಾಡುತ್ತೇವೆ. ಈಗಾಗಲೇ 15ಕೋಟಿ ಹೆಚ್.ಕೆ.ಡಿ.ಬಿ.ಗೆ ಬಿಡುಗಡೆ ಮಾಡಿದ್ದೇವೆ. ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಿದ್ದೇವೆ. ಆದ್ದರಿಂದ ಮಾನ್ಯ ಉಪಾಧ್ಯಕ್ಷರೇ, ಹೆಚ್.ಕೆ.ಡಿ.ಬಿ. ಇರಬಹುದು, ಬಾರ್ಡರ್ ಏರಿಯಾ ಡೆವಲಪ್‌ಮೆಂಟ್ ಇರಬಹುದು, ಮಲೆನಾಡು ಏರಿಯಾ ಡೆವಲಪ್‌ಮೆಂಟ್ ಇರಬಹುದು, ಇವೆಲ್ಲಕ್ಕೂ ಕೂಡ ನಾಲ್ಕನೇ ಒಂದು ಭಾಗದಷ್ಟು ಹಣವನ್ನು ಇವತ್ತು ಬಿಡುಗಡೆ ಮಾಡಿದ್ದೇವೆ. ಎಲ್ಲದಕ್ಕೂ ಕೂಡ ಹಣ ಇದೆ. ಹಣದ ಕೊರತೆ ಇಲ್ಲ. ಬೇಕಾದಾಗ ಹಣ ಬಿಡುಗಡೆ ಮಾಡತಕ್ಕಂಥ ಕೆಲಸ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ನಾನು ಬಹಳ ಸ್ಪಷ್ಟ ಮಾತುಗಳಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಆದ್ದರಿಂದ ನಾವು ಕಾವೇರಿಯಲ್ಲಿ, ಕೃಷ್ಣಾದಲ್ಲಿ ಯಾರು ದೇವೇಗೌಡರು ಹೇಳಿದರು ಎಂದು ಕೇಳಿಕೊಂಡು ಅವರ ಕುರ್ಚಿ ಉಳಿಸುವುದಕ್ಕೋಸ್ಕರ, ಇಲ್ಲಿ ಕುರ್ಚಿ ಉಳಿಸುವುದಕ್ಕೋಸ್ಕರ ಈ ಕೆಲಸವನ್ನು ಯಾವತ್ತೂ ಕೂಡ ಮಾಡುವುದಿಲ್ಲ. ಕುರ್ಚಿಗೆ ಅಂಟಿಕೊಂಡು ಕುಳಿತುಕೊಳ್ಳತಕ್ಕಂಥ ಜಾಯಮಾನ ನಮ್ಮ ಪಕ್ಷದ ಸಂಸ್ಕೃತಿ ಅಲ್ಲವೆನ್ನುವುದನ್ನೂ ಕೂಡ ನಾನು ಹೇಳುವುದಕ್ಕೆ ಬಯಸುತ್ತೇನೆ. ಅದಕ್ಕೋಸ್ಕರ ಅಧಿಕಾರದಲ್ಲಿ ಕುಳಿತುಕೋಳ್ಳುವ ಪ್ರಶ್ನೆ ಇಲ್ಲವೇ ಇಲ್ಲ. ಅಂತಹ ಪರಿಸ್ಥಿತಿ ಬಂದರೆ ನಾವು ಬಿಟ್ಟು ಹೋಗುತ್ತೇವೆ. ಜನ ಆಶೀರ್ವಾದ ಮಾಡಿದರೆ ನಾವು ಅಧಿಕಾರದಲ್ಲಿ ಇರುತ್ತೇವೆ. ಅಧಿಕಾರ ಏನು ಯಾವತ್ತೂ ಶಾಶ್ವತ ಅಲ್ಲ. ಅಧಿಕಾರ ಬರುತ್ತದೆ ಅಧಿಕಾರ ಹೋಗುತ್ತದೆ. ಆದ್ದರಿಂದ ಕೃಷ್ಣಾ ನೀರಿನಲ್ಲಿ ಕೂಡ ಯಾವುದೇ ಕಾರಣಕ್ಕೆ ಅನ್ಯಾಯ ಮಾಡಲಿಕ್ಕೆ ಬಿಡುವುದಿಲ್ಲ. ಕಾವೇರಿಯಲ್ಲಿಯೂ ಅನ್ಯಾಯ ಮಾಡುವುದಕ್ಕೆ ಬಿಡುವುದಿಲ್ಲ. ಇಷ್ಟು ನಾನು ಬಹಳ ಸ್ಪಷ್ಟವಾಗಿ ಹೇಳುತ್ತಾ, ಮಾನ್ಯ ವಿರೋಧ ಪಕ್ಷದವರು ತಂದಿರತಕ್ಕಂಥ ಅವಿಶ್ವಾಸ ನಿರ್ಣಯದ ಮಹತ್ವ, ಗಂಭೀರತೆ ಎಲ್ಲಾ ನೀವು....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಒಂದು ರಾಂಗ್ ಇನ್‌ಫಾರ್ಮೇಷನ್ ಹೋಗಬಹುದು. ಏಕೆಂದರೆ ತಾವು ಕೊಟ್ಟಂಥ ಅನ್ಯುಯಲ್ ರಿಪೋರ್ಟ್‌ನಲ್ಲೇ ಪೇಜ್ ನಂಬರ್ 5 ಅಥವಾ 7ನ್ನು ತಾವು ಓದಿ ನೋಡಿ. ತಾವು ಕೊಟ್ಟಿದ್ದನ್ನೇ ನಾವು ಓದಿ ಹೇಳಿದ್ದೇವೆಯೇ ಹೊರತು ನಾವೇನೂ ಸೃಷ್ಟಿ ಮಾಡಿ ಹೇಳಿಲ್ಲ. ಆದರಲ್ಲಿ ತಾವು ಪ್ಲಾನ್ ಸೆಕ್ಟರ್‌ನಲ್ಲಿ ಕ್ಲಿಯರ್ ಆಗಿ ಹೇಳಿದ್ದೀರಿ - Rs. 159 crores is provided. Out of that, the amount spent is only Rs. 54 crores. It means that nearly Rs. 103 crores was unspent, ಎನ್ನುವುದು ತಾವು ನಮಗೆ ಒದಗಿಸಿ ಕೊಟ್ಟಂಥ ಪುಸ್ತಕದಲ್ಲಿ ಇರುವುದು. ನಂತರ ಪರಫಾರ್ಮೆನ್ಸ್ ಬಜೆಟ್‌ನಲ್ಲಿ ಕೂಡ ನೋಡಿದಾಗ, ಅದರ ಪ್ರಕಾರ ಎಲ್ಲಾ ಲೆಕ್ಕವನ್ನು ತೆಗೆದುಕೊಂಡಾಗ , ಡಿಸ್ಟ್ರಿಕ್ಟ್ ಸೆಕ್ಟರ್ ಹಿಡಿದುಕೊಂಡು ಸ್ಟೇಟ್ ಪ್ಲಾನ್‌ವರೆಗೆ, ಬಹುಶಃ ಸೆಂಟ್ರಲ್ ಸೆಕ್ಟರ್‌ನಲ್ಲಿ ಮಾತ್ರ more or less 100% unspent ಆಗಿದೆ. ಆದರೆ ಡಿಸ್ಟ್ರಿಕ್ಟ್ ಮತ್ತು ಸೆಂಟ್ರಲ್ ಸೆಕ್ಟರ್ ಎರಡರಲ್ಲಿಯೂ ಕೂಡ unspent ಇದು ಉಳಿದಿದೆ.

ಅದು ಲ್ಯಾಫ್ಸ್ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಬಹುದು. ಆದರೆ ಯಾವ ಹಣ ಯಾವ ವೆಚ್ಚಕ್ಕಾಗಿ ನಾವು ನಿಗದಿ ಮಾಡಿರುತ್ತೇವೆ, ಆ ವರ್ಷಕ್ಕೇ ಅದನ್ನು ಖರ್ಚು ಮಾಡಿದರೆ ಅದರ ಪ್ರಯೋಜನವಾಗುತ್ತದೆ. ಅದರ ಹೊರತಾಗಿ ಹಣ ಇದೆಯಲ್ಲ, ಎಲ್ಲಿ ಹೋಗಿದೆ ಎನ್ನತಕ್ಕಂಥ ಮಾತು ಅಲ್ಲ. ಪುಸ್ತಕದ ತಪ್ಪು ಇರಬಹುದು, ನಾವು ಹೇಳುವುದು ತಪ್ಪಲ್ಲ. ನೀವು ಕೊಟ್ಟಂಥ ಪುಸ್ತಕ ತಪ್ಪು ಇರಬಹುದು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಖರ್ಗೆಯವರು ಹೇಳಿರ ತಕ್ಕದ್ದನ್ನು ನಾನು ಡಿಸ್ಪ್ಯೂಟ್ ಮಾಡುವುದಿಲ್ಲ. ಅದಕ್ಕೆ ನಾನು ಹೇಳಿದೆ, ಈಗ ಎಸ್.ಸಿ.ಪಿ. ಬಗ್ಗೆ ಹೇಳಿದರು. ಅವರು ಹೇಳುತ್ತಿರುವುದು ಪ್ಲಾನ್ . 159 ಕೋಟಿಯಲ್ಲಿ ನಾವು 54 ಕೋಟಿ ಬಿಡುಗಡೆ ಮಾಡಿರುವುದು ನವೆಂಬರ್‌ವರೆಗೆ. ಡಿಸೆಂಬರ್, ಜನವರಿ, ಫೆಬ್ರವರಿ, ಮಾರ್ಚ್ ಇದರ ಲೆಕ್ಕ ಅಲ್ಲಿ ಕೊಟ್ಟಿಲ್ಲ. ಆ ನಾಲ್ಕು ತಿಂಗಳಲ್ಲಿ ಖರ್ಚು ಮಾಡಿರತಕ್ಕಂಥಾದ್ದು ಆನ್ಯುಯಲ್ ರಿಪೋರ್ಟ್‌ನಲ್ಲಿ ಬರೆದಿಲ್ಲ. ಆದ್ದರಿಂದ ಆ ಮಾಹಿತಿ ಅವರಿಗೆ ಸಿಗದೇ ಇರುವುದರಿಂದ ಅವರು ಹೇಳುತ್ತಿದ್ದಾರೆ. ಬೇರೆ ಇಲಾಖೆಗಳಲ್ಲಿ ಪಿ.ಡಿ. ಅಕಾಂಟ್ಸ್‌ನಲ್ಲಿ ಇಟ್ಟುಕೊಳ್ಳಕೂಡದು ಎಂದು ಸ್ಪಷ್ಟವಾಗಿ ಹೇಳಿದರೂ ಸೋಷಿಯಲ್ ವೆಲ್‌ಫೇರ್‌ನಲ್ಲಿ ಹಣ ಲ್ಯಾಫ್ಸ್ ಆಗಬಾರದು ಎನ್ನುದ ಕಾರಣಕ್ಕೆ ಅವರಿಗೆ ಪಿ.ಡಿ. ಅಕೌಂಟ್ಸ್‌ನಲ್ಲಿ ಇಟ್ಟುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಏಕೆಂದರೆ ಇದು ಪರಿಶಿಷ್ಟ ಜಾತಿಗೋಸ್ಕರ ಇರತಕ್ಕಂಥ ಹಣ. ಇದು ಯಾವುದೇ ಕಾರಣಕ್ಕೆ ಖರ್ಚಾಗದೆ ಉಳಿಯಬಾರದು ಎನ್ನುವ ಕಾರಣಕ್ಕೋಸ್ಕರ ಇದನ್ನು ಮಾಡಿದ್ದೇವೆ. ಆದ್ದರಿಂದ ಮಾನ್ಯ ಉಪಾಧ್ಯಕ್ಷರೇ, ಅವರು ಒಪ್ಪಿಕೊಳ್ಳುತ್ತಾರೆ ಎನಿಸುತ್ತದೆ. ಅವರು ತಂದಿರತಕ್ಕಂಥ ಅವಿಶ್ವಾಸ ನಿರ್ಣಯವನ್ನು ವಾಪಸ್ಸು ತೆಗೆದುಕೊಂಡು, ನಾವೆಲ್ಲಾ ರಾಜ್ಯದ ಅಭಿವೃದ್ಧಿಗೆ ಒಟ್ಟಾಗಿ ಕೆಲಸ ಮಾಡೋಣ. ಇನ್ನೂ ಮೂರೂವರೆ ವರ್ಷ ನಾವು ನೀವು ಎಲ್ಲಾ ರಾಜಕಾರಣ ಮಾಡುವುದು ಬೇಡ. ಜನರ ಅಭಿವೃದ್ಧಿಯಿಂದ , ರಾಜ್ಯದ ಅಭಿವೃದ್ಧಿಯಿಂದ, ಈ ರಾಜ್ಯದ ಬೆಳವಣಿಗೆಗೆ ನಮ್ಮ ಸಹಕಾರ, ಸಹಾಯ ಎಲ್ಲವನ್ನೂ ತೆಗೆದುಕೊಂಡು ಮಾಡತಕ್ಕಂಥ ಕೆಲಸವನ್ನು ಮಾಡುತ್ತೇವೆ. ಆದ್ದರಿಂದ ಅವರು ಸಹಕಾರ ಕೊಡಲಿ ಎಂದು ಮನವಿ ಮಾಡಿ ಇದನ್ನು ಕೈಬಿಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಜಯಪ್ರಕಾಶ ಹೆಗಡೆಯವರು ಒಂದೆರಡು ನಿಮಿಷ ಕ್ಲಾರಿಫಿಕೇಷನ್ ಹೇಳುತ್ತಾರೆ.

(ಗೊಂದಲ)

ಉಪಾಧ್ಯಕ್ಷರು : ನಾನು ಜಯಪ್ರಕಾಶ ಹೆಗಡೆಯವರನ್ನು ಕರೆದಿದ್ದೇನೆ.

+ಶ್ರೀ ಕೆ. ಜಯಪ್ರಕಾಶ ಹೆಗಡೆ : ನನ್ನ ಹಿರಿಯ ಸಹದ್ಯೋಗಿಗಳು ವಿರೋಧ ಪಕ್ಷದವರು ಮಾಡಿಸಿದಂಥ ಅವಿಶ್ವಾಸ ನಿರ್ಣಯದ ಮೇಲೆ ಸರ್ಕಾರದಿಂದ....

(ಗೊಂದಲ)

ಉಪಾಧ್ಯಕ್ಷರು: ದಯವಿಟ್ಟು ಎಲ್ಲರೂ ತಿಳಿದುಕೊಳ್ಳಬೇಕು. ಇದು ಅವಿಶ್ವಾಸ ನಿರ್ಣಯ, ಚರ್ಚೆ ಮಾಡತಕ್ಕಂಥಾದ್ದು ಅಲ್ಲ. ಜಯಪ್ರಕಾಶ ಹೆಗಡೆಯವರೇ ತಾವು ಮಾತನಾಡಿ.....

ಶ್ರೀ ಕೆ. ಜಯಪ್ರಕಾಶ ಹೆಗಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಅನೇಕ ಮಂದಿ ಹಿರಿಯ ಸಹದ್ಯೋಗಿಗಳು ವಿರೋಧ ಪಕ್ಷದವರು ಮಂಡಿಸಿದಂಥ ಅವಿಶ್ವಾಸ ನಿರ್ಣಯದ ಮೇಲೆ ಸರ್ಕಾರವು ಮಾಡಿದಂಥ ಕೆಲಸಗಳನ್ನು ಅವರ ಗಮನಕ್ಕೆ ತಂದು , ಅವರ ಹೃದಯಕ್ಕೆ ನಾಟುವಹಾಗೆ ಮಾಡಿ ಇದನ್ನು ಅವರು ಬಹಶಃ ವಾಪಾಸ್ಸು ಪಡೆಯುವಂಥ ಪ್ರಯತ್ನ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದರ ಒಟ್ಟಿಗೆ ನನ್ನ ಇಲಾಖೆಯ ಬಗ್ಗೆ ಹಲವು ಅಪಾದನೆಗಳನ್ನು ಮಾನ್ಯ ಸದಸ್ಯರಾದ ಶ್ರೀ ಸಭಾಪತಿಯವರು ಮಾಡಿದ್ದಾರೆ. ಇದರ ಬಗ್ಗೆ ನಾನು ಕೆಲವು ವಿಶ್ಲೇಷಣೆಗಳನ್ನು ಮಾಡಬೇಕಾಗಿದೆ. ಅವರು ಮೀನುಗಾರಿಕೆ ಇಲಾಖೆಯಲ್ಲಿ ಬಹಳ ಹಣ ಲ್ಯಾಫ್ಸ್ ಆಗಿದೆ ಎಂದು ಹೇಳಿದರು. ಆದರೆ ಹಣ ಲ್ಯಾಫ್ಸ್ ಆಗಿಲ್ಲ. , ಹಿಂದೆ ಆಗಿದೆ. ನಾನು ಅದರ ಬಗ್ಗೆ ಒಂದೆರಡು ಅಂಕಿಅಂಶಗಳನ್ನು ಕೊಡುತ್ತೇನೆ. 1993-94ರಲ್ಲಿ ಶೇಕಡಾ 48ರಷ್ಟು ಖರ್ಚಾಗಿರುವಂಥಾದ್ದು. 1994 ಡಿಸೆಂಬರ್‌ನಲ್ಲಿ ನಮ್ಮ ಸರ್ಕಾರ ಬಂತು. 1994-95ರಲ್ಲಿ ಶೇಕಾಡಾ 62 ರಷ್ಟು ಖರ್ಚಾಗಿರುವಂಥಾದ್ದು. 1995-96ನೇ ಇಸವಿಯಲ್ಲಿ ಶೇಕಡಾ 77.46 ಖರ್ಚಾಗಿರತಕ್ಕಂಥ ಹಣ. ಉಳಿದ ಹಣ ಏಕೆ ಖರ್ಚಾಗಿಲ್ಲವೆಂದರೆ ಅದಕ್ಕೆ ಮಾಹಿತಿಯನ್ನು ನಾನು ಅವರಿಗೆ ಕೊಡುತ್ತೇನೆ. ಕೆಲವು ಕೇಂದ್ರ ಮತ್ತು ರಾಜ್ಯಸರ್ಕಾರದ ಜಂಟಿ ಕಾರ್ಯಕ್ರಮಗಳು ಇವೆ. ಸಮಯಕ್ಕೆ ಸರಿಯಾಗಿ ಕೇಂದ್ರಸರ್ಕಾರದಿಂದ ಹಣ ಬಾರದಿದ್ದರಿಂದ ಕೆಲಸ ಕಾರ್ಯಗಳನ್ನು ಕೈಗೊಳ್ಳವುದಕ್ಕೆ ಆಗಲಿಲ್ಲ. ಅದರ ಬಗ್ಗೆ 1993-94ರಲ್ಲಿ ಮಾನ್ಯ ವಸಂತ ಸಾಲಿಯಾನ ಅವರು ಇದ್ದಾಗ.....

(ಗೊಂದಲ)

ಶ್ರೀ ಕೆ. ಜಯಪ್ರಕಾಶ ಹೆಗಡೆ: ಅವರು ಮಾತನಾಡುವಾಗ ನಾವು ಕೇಳಿದ್ದೇವೆ. ನಾನು ಮಾತನಾಡುವಾಗ ಸ್ವಲ್ಪ ಸಮಾಧಾನದಿಂದ ಕೇಳುವುದಕ್ಕೆ ತಾವು ಹೇಳಬೇಕು. 1993-94ರಲ್ಲಿ ಒಟ್ಟು 568 ಲಕ್ಷ ಬರಬೇಕಾಗಿದ್ದರಲ್ಲಿ 390 ಲಕ್ಷ ಬಂದಿರುವಂಥಾದ್ದು. 1994-95ರಲ್ಲಿ 561.75 ಲಕ್ಷ ಬರುವಂಥಾದ್ದರಲ್ಲಿ ಕೇವಲ 267.86 ಲಕ್ಷ ಬಂದಿದೆ. 355 ಲಕ್ಷ ಬಂದಿಲ್ಲ. ಹಾಗೆ ಅವರು ಇನ್ನೂ ಹಲವು ವಿಷಯುಗಳನ್ನು ಹೇಳಿದರು. 20 ಕೋಟಿ ಕೇವಲ ಮೀನುಗಾರಿಗಕೆ ಒಂದೇ ಇಲಾಖೆಯಲ್ಲಿ ಎಂದರು. ಪ್ರಾಯಶಃ ಇದು ಕೇವಲ ಮೀನುಗಾರಿಕಾ ಕುಟುಂಬದಲ್ಲಿ ಹುಟ್ಟಿ ಮೀನುಗಾರಿಕೆ ಕಸುಬನ್ನೇ ಮಾಡದೆ, ಮೀನುಗಾರರ ಬಗ್ಗೆ ಕಳಕಳಿ ಇಲ್ಲವೆಂದು ಅವರಿಗೆ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿನ್ನೆ ಸಾಯಂಕಾಲ ಅವರು ಮಾತನಾಡಿದ ಧಾಟಿಯನ್ನು ನೋಡಿದರೆ ಇನ್ನೂ ಅನೇಕ ಅಪಾದನೆಗಳನ್ನು ಅವರು ಹೇಳುತ್ತಾರೆ ಎಂದು ನಾನು ಅಂದುಕೊಂಡಿದ್ದೆ. ಆದರೆ ಇವತ್ತು ಬೆಳಿಗ್ಗೆ ಅಂತಹ ದೊಡ್ಡ ಆಪಾದನೆಗಳನ್ನು ಏನೂ ಅವರು

ಮಾಡಲಿಲ್ಲ. ನಿನ್ನೆ ಒಂದು ಮಾತನ್ನು ಹೇಳಿದರು, ಅದರ ಬಗ್ಗೆ ನಾನು ಕೊನೆಗೆ ಬರುತ್ತೇನೆ. ಈಗ ಮಲ್ಪೆಯಲ್ಲಿ ಅದು ಕೇಂದ್ರಸರ್ಕಾರದ ಪುರಸ್ಕೃತ ಯೋಜನೆಯಡಿಯಲ್ಲಿ ಮಲ್ಪೆ 2ನೇ ಹಂತಹ ಕೆಲಸ ಈಗಾಗಲೇ ಪ್ರಾರಂಭವಾಗಿದೆ. ಇದಕ್ಕೆ ಮೊನ್ನೆ 96ನೇ ಇಸವಿಯಲ್ಲಿ ನಮಗೆ ಕೇಂದ್ರ ದಿಂದ ಆಡಳಿತ ಮಂಜೂರಾತಿ ಸಿಕ್ಕಿದೆ. ನಾವು ಈ ಹಿಂದೆಯೇ ಆ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಅದು ಅವರ ಕ್ಷೇತ್ರದಲ್ಲೇ ಇದೆ. ಆದರೆ ಇದು ಅವರ ಗಮನಕ್ಕೆ ಬಂದಿಲ್ಲ. ಅವರು ಅದರ ಬಗ್ಗೆ ಇದೇ ಸದನದಲ್ಲಿ ಪ್ರಶ್ನೆಯನ್ನೂ ಸಹ ಕೇಳಿದ್ದರು. ಹಾಗೆಯೇ ಕೋಡಿಬೆಂಗ್ರೆ ಹಂಗಾರಕಟ್ಟೆ ಬಗ್ಗೆ ಹೇಳಿದರು. ಕೋಡಿಬೆಂಗ್ರೆ ಹಂಗಾರಕಟ್ಟೆಯಲ್ಲಿ ಹಿಂದೆ ನನ್ನ ಹಿರಿಯ ಸಹದ್ಯೋಗಿ ಮಾನ್ಯ ನಾಣಯ್ಯನವರು ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದಾಗ, ನಾನು ಅವರನ್ನು ಕರೆದುಕೊಂಡುಹೋಗಿದ್ದೆ. ಆಗ ಇವರೂ ಸಹ ಜೊತೆಯಲ್ಲಿ ಇದ್ದರು.

ಶ್ರೀ ಯು.ಆರ್. ಸಭಾಪತಿ : ಕೆಲಸ ಅಲ್ಲಿ ಆಗಿದೆಯಾ ?

ಶ್ರೀ ಕೆ. ಜಯಪ್ರಕಾಶ ಹೆಗಡೆ: ಅವರ ಮುಖಂಡರಾದ ಮಾನ್ಯ ಬಂಗಾರಪ್ಪನವರು ಆಗ ಮುಖ್ಯಮಂತ್ರಿಯಾಗಿದ್ದರು, ಕೆಲಸ ಪ್ರಾರಂಭ ಮಾಡುತ್ತೇವೆ ಎಂದು ಅವರು ಶಿಲಾನ್ಯಾಸ ಮಾಡಿದ್ದಾರೆ. ನಂತರ ಬಂದಂಥ ಮುಖ್ಯಮಂತ್ರಿಗಳು ಇಂದು ಕೆಲಸ ಪ್ರಾರಂಭ ಮಾಡುತ್ತೇವೆಂದು , ಶಿಲಾನ್ಯಾಸ ಮಾಡಿ ಒಂದು ಲೋಡು ಮಣ್ಣುಮಾತ್ರ ಬಂದು ಬಿದ್ದಿದೆ. ಆಮೇಲೆ ಈ ಸರ್ಕಾರ ಬಂದಮೇಲೆ ಅವರು ಚುನಾವಣೆ ಪೂರ್ವದಲ್ಲಿ ಏನು ಸ್ವಲ್ಪ ಮರಳನ್ನು ತಂದುಹಾಕಿ ಇಟ್ಟಿದ್ದರು.ಮಾಡಲಿಲ್ಲ. ನಿನ್ನೆ ಒಂದು ಮಾತನ್ನು ಹೇಳಿದರು, ಅದರ ಬಗ್ಗೆ ನಾನು ಕೊನೆಗೆ ಬರುತ್ತೇನೆ. ಈಗ ಮಲ್ಪೆಯಲ್ಲಿ ಅದು ಕೇಂದ್ರಸರ್ಕಾರದ ಪುರಸ್ಕೃತ ಯೋಜನೆಯಡಿಯಲ್ಲಿ ಮಲ್ಪೆ 2ನೇ ಹಂತಹ ಕೆಲಸ ಈಗಾಗಲೇ ಪ್ರಾರಂಭವಾಗಿದೆ. ಹಂಗಾರಕಟ್ಟೆ ಕೆಲಸ ಆಗಿಲ್ಲ ಎಂದು ಹೇಳಿದರು. ಈಗಾಗಲೇ ಅದರ ಕಂಬ ತಯಾರಾಗಿದೆ. ಇನ್ನು ಒಂದು ಹದಿನೈದು ದಿವಸಗಳಲ್ಲಿ ಅದರ ಮೇಲಿನ ಸ್ಲ್ಯಾಬ್ಸ್ ಸಹ ತಯಾರಾಗುತ್ತದೆ. ಇನ್ನು ಒಂದು ಹದಿನೈದು ದಿವಸಗಳಲ್ಲಿ ಅದರ ಮೇಲಿನ ಸ್ಲ್ಯಾಬ್ಸ್ ಸಹ ತಯಾರಾಗುತ್ತದೆ. ಕೋಡಿ ಹೆಜಮಾಡಿ ಜಗ್ಗೆ ಒಂದು ಮಾತನ್ನು ಆಡಿದರು. ಅದು ಲ್ಯಾಂಡ್ ಆಕ್ವಿಸಿಷನ್ ಪ್ರೊಸಿಡಿಂಗ್ಸ್ ಇದೆ. ಅದಕ್ಕೆ ನಾವು ಈಗಾಗಲೇ 23 ಲಕ್ಷ ರೂಪಾಯಿಗಳನ್ನು ಕಟ್ಟಿಯಾಗಿದೆ. ಇನ್ನು ಬಾಕಿ ಹಣವನ್ನು ಫೈನಲ್ ನೋಟಿಫಿಕೇಷನ್ ಬಂದ ಕೂಡಲೇ ನಾವು ತುಂಬುತ್ತೇವೆ. ಮತ್ತೆ ಮಾನ್ಯ ಉಪಾಧ್ಯಕ್ಷರೇ , ಅವರು ಒಂದು ಮಾತನ್ನು ಹೇಳಿದರು. ಮನೆಗಳನ್ನು ಕೊಡುವಾಗ ಪ್ರಾಯಶಃ ವಿರೋಧಪಕ್ಷದಲ್ಲಿರುವಂಥ ಶಿವರಾಮು ಅವರನ್ನು ಎ.ಟಿ.ರಾಮಸ್ವಾಮಿ ಅವರನ್ನು ಕೇಳಿದರೆ ಗೊತ್ತಾಗುತ್ತದೆ. ಅವರವರ ಕ್ಷೇತ್ರಕ್ಕೆ ಮನೆಗಳನ್ನು ಕೊಟ್ಟಿದ್ದೇವೆ. ಇವರಿಗೆ ಕಾಮಾಲೆ ರೋಗ ಬಂದಂತಾಗಿರಬೇಕು. ಇದರ ಬಗ್ಗೆ ಅವರಿಗೆ ಎಲ್ಲಾ ಮಾಹಿತಿ ಇದೆ. ಈ ಮಾಹಿತಿ ಇದ್ದೂ ಈ ಮಾತನ್ನು ಕೇಳುತ್ತಿದ್ದಾರೆ. ಮೂರು ಕ್ಷೇತ್ರಗಳ ಬಗ್ಗೆ ಹೇಳಿದರು. ಒಂದು ಹೊಳೆನರಸೀಪುರ ಇನ್ನೊಂದು ಶ್ರೀನಿವಾಸಪುರ, ಮತ್ತೊಂದು ಬ್ರಹ್ಮಾವರ ಮಾನ್ಯ ಉಪಾಧ್ಯಕ್ಷರೇ , ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಉಪಾಧ್ಯಕರು : ನನ್ನ ಕೆಲಸವನ್ನು ಮಾಡಿಕೊಡಿ ಎಂದು ಹೇಳಲಿಕ್ಕಾಗುವುದಿಲ್ಲ. ಅವರಿಗೆ ಯಾವುದೇ ಚುನಾವಣೆಯಲ್ಲಿ, ಯಾವುದೇ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದರೆ, ಅವರು ಇಲ್ಲದಿದ್ದ ಸಮಯದಲ್ಲಿ, ಅವರ ಕ್ಷೇತ್ರದ ಬಗ್ಗೆ ಆ ವಿಷಯವನ್ನು ಎತ್ತುವಷ್ಟು ಸೌಜನ್ಯ ನಮ್ಮ ಮಾನ್ಯ ಸದಸ್ಯರಿಗೆ ಇಲ್ಲವೆಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಯು ಆರ್. ಸಭಾಪತಿ: ಇದು ತಪ್ಪು. ನಾನು ಅಧ್ಯಕ್ಷರ ಬಗ್ಗೆ ಆರೋಪ ಮಾಡಲಿಲ್ಲ.

ಉಪಾಧ್ಯಕ್ಷರು: ಅವರು ಹೇಳುವುದನ್ನು ತಾವು ಕೇಳಬೇಕು.

(ಗೊಂದಲ)

ಶ್ರೀ ಯು.ಆರ್. ಸಭಾಪತಿ: ನಾನು ಅಧ್ಯಕ್ಷರ ಬಗ್ಗೆ ಮಾತನಾಡಲೇ ಇಲ್ಲ. ನೀವು ಮೂರು ಕ್ಷೇತ್ರಕ್ಕೆ ಮಾತ್ರ ಏಕೆ ಕೊಟ್ಟಿದ್ದೀರಿ, ಕರ್ನಾಟಕ ರಾಜ್ಯದ ಎಲ್ಲಾ ಕಡೆ ಕೊಡಿ ಎಂದು ನಾನು ಹೇಳ್ತಿದೆ.

(ಗೊಂದಲ)

ಶ್ರೀ ಕೆ. ಜಯಪ್ರಕಾಶ ಹೆಗಡೆ: ಕೇಂದ್ರ ಪುರಸ್ಕೃತ ಡೀಸೆಲ್ ಸಬ್ಸಿಡಿ ಬಗ್ಗೆ ಮಾತನಾಡಿದರು. ಕೇಂದ್ರ ಪುರಸ್ಕೃತ ಡೀಸೆಲ ಸಬ್ಸಿಡಿಯಲ್ಲಿ , ಹಿಂದಿನ ಕೇಂದ್ರಸರ್ಕಾರ ಅದನ್ನು ಇನ್ನುಮುಂದೆ ಕೋಡುವುದಿಲ್ಲವೆಂದು ಕ್ಯಾನ್ಸಲ್ ಮಾಡಿದೆ. ಆದರೆ, ರಾಜ್ಯ ಸರ್ಕಾರದಿಂದ ಕೊಡುವಂಥ 34 ಲಕ್ಷ ರೂಪಾಯಿಗಳನ್ನು ನಾವು ಈಗಾಗಲೇ ಕೊಟ್ಟಿದ್ದೇವೆ. ಕೇಂದ್ರದಿಂದ ಅದನ್ನು ಪುನಃ ಕೊಡಿಸುವ ಬಗ್ಗೆ ಪ್ರಯತ್ನವನ್ನು ಮಾಡಿದ್ದೇವೆ. ಇದರ ಮಧ್ಯದಲ್ಲಿ ರಾಜ್ಯಸರ್ಕಾರದಿಂದ ಏನಾದರೂ ವ್ಯವಸ್ಥೆಯನ್ನು ಮಾಡಲಿಕ್ಕೆ ಸಾಧ್ಯವಿದೆಯೇ ಎಂದು ನಾವು ಆ ಒಂದು ವಿಷಯವನ್ನು ಗಮನಿಸುತ್ತಾ ಇದ್ದೇನೆ.

ಉಪಾಧ್ಯಕ್ಷರು: ತಾವು ಮುಕ್ತಾಯ ಮಾಡಿ. ಮುಖ್ಯಮಂತ್ರಿಗಳು ಉತ್ತರ ಹೇಳಬೇಕಾಗಿದೆ....

ಶ್ರೀ ಕೆ. ಜಯಪ್ರಕಾಶ ಹೆಗಡೆ: ಒಂದೆರಡೇ ನಿಮಿಷ ಮಾತನಾಡುತ್ತೇನೆ. ಇನ್ನು ಎನ್.ಸಿ.ಡಿ.ಸಿ ಯಿಂದ ಕರಾವಳಿ ಮೀನುಗಾರಿಕೆಗೆ 23 ಕೋಟಿ ರೂಪಾಯಿಗಳನ್ನು ನಾವು ಈ ಬಾರಿ ತಂದಿದ್ದೇವೆ. 200 ಕೋಟಿ ರೂಪಾಯಿಗಳನ್ನು ಒಳನಾಡು ಮೀನುಗಾರಿಕೆಗೆ ಈ ಸಾರಿ ಇಡಲಿಕ್ಕೆ ಒಂದು ಪ್ರಸ್ತಾವನೆಯನ್ನು ತಯಾರು ಮಾಡದ್ದೇವೆ. ಹಾಗೆಯೇ ಮೈಸೂರಿನ ಎಣ್ಣೆಹೊಳೆ ಕೆರೆಯನ್ನು ಅವರು ಮಹಿಳಾ ಮೀನುಗಾರರ ಸಂಘಕ್ಕೆ ಕೊಟ್ಟದ್ದಾರೆಂದು ಹೇಳಿದರು. ಅದು ಸತ್ಯಕ್ಕೆ ದೂರವಾದುದು. ಕೊಟ್ಟರೂ ತಪ್ಪಿಲ್ಲ. ನಮ್ಮ ಸ್ಕೀಮಿನಲ್ಲಿ ಮಹಿಳಾ ಮೀನುಗಾರರ ಸಂಘಕ್ಕೆ ಕೊಡಲಿಕ್ಕೆ ಅವಕಾಶವಿದೆ. ಅದೂ ಕೊಟ್ಟಿಲ್ಲ, ಅವರು ಹೇಳಿದ್ದುದು ಸತ್ಯಕ್ಕೆ ದೂರವಾದುದು ಎಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಇನ್ನೊಂದು ಡಾ॥ ಜಯರಾಂ ಎಂಬ ಅಧಿಕಾರಿಯ ಬಗ್ಗೆ ಒಂದು ಮಾತನ್ನು ಹೇಳಿದರು. ಮಾನ್ಯ ಉಪಾಧ್ಯಕ್ಷರೇ , ಡಾ॥ ಜಯರಾಮರವರು...........

(ಗೊಂದಲ)

ಉಪಾಧ್ಯಕ್ಷರು : ಈಗ ಸಭಾನಾಯಕರು ಮಾತನಾಡುತ್ತಾರೆ. ತಾವು ಕೂಡಬೇಕು, ತಾವು ಮಾತನಾಡಿ.

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ,..(ಈ ಹಂತದಲ್ಲಿ ಎಂ.ಇ.ಎಸ್.ಶಾಸಕರಾದ ಬಿ.ಐ.ಪಾಟೀಲ, ನಾರಾಯಣರಾವ್ ತರಳೆ, ಹಾಗೂ ಕಾಂಗ್ರೆಸ್ ಶಾಸಕರಾದ ಶ್ರೀ ಪ್ರಕಾಶ್ ಹುಕ್ಕೇರಿ, ಶ್ರೀ ಡಿ.ಬಿ.ನಾಂದಾರ್ ಮುಂತಾದ ಬೆಳಗಾಂ ಭಾಗದ ಶಾಸಕರು ರೈತರ ಕಬ್ಬಿನ ಸಮಸ್ಯೆ ಬಗ್ಗೆ ಕೂಗಾಡುತ್ತಾ , ಸಭಾಧ್ಯಕ್ಷರ ಪೀಠದ ಮುಂಭಾಗಕ್ಕೆ ಬಂದರು.)

ಉಪಾಧ್ಯಕ್ಷರು : ಇದು ಒಳ್ಳೆಯ ಸಂಪ್ರದಾಯ ಅಲ್ಲ. ತಾವು ದಯಮಾಡಿ, ತಮ್ಮ ತಮ್ಮ ಸ್ಥಳಕ್ಕೆ ಹೋಗಬೇಕು. ತಾವುಗಳೆಲ್ಲರೂ ತಮ್ಮ ಸ್ಥಾನಕ್ಕೆ ಹೋಗಿರಿ.......

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಸಭಾಧ್ಯಕ್ಷರೇ , ಆಯಾ ಪಕ್ಷದ ಮುಖಂಡರು..... ಸದನದಲ್ಲಿ ನಾನು ಏನು ಹೇಳಬೇಕು, ಏನು ಉತ್ತರ ಕೊಡಬೇಕೆಂದು ನನಗೆ ಗೊತ್ತು .....ಉತ್ತರ ಬೇಡವೇ ? ಮಾನ್ಯ ಉಪಧ್ಯಕ್ಷರೇ ....

(ಗೊಂದಲ)

ಉಪಾಧ್ಯಕ್ಷರು : ತಾವು ಮಾತನಾಡಿ.........

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಖರ್ಗೆಯವರೇ, ನಾನು ಹೇಳುತ್ತೇನೆ ಕೇಳಿ. ತಾವು ದಯಮಾಡಿ, ತಮ್ಮ ತಮ್ಮ ಸ್ಥಾನಕ್ಕೆ ಹೋಗಬೇಕು. ಇದು ಒಳ್ಳೆಯ ಸಂಪ್ರದಾಯ ಅಲ್ಲ. ತಾವು ದಯಮಾಡಿ, ತಮ್ಮ ಸ್ಥಾನಕ್ಕೆ ಹೋಗಬೇಕು. ಇದು ಒಳ್ಳೆಯದಲ್ಲ. ಅವರಿನ್ನೂ ಉತ್ತರ ಹೇಳಿಲ್ಲ. , ಅವರ ಉತ್ತರದಲ್ಲಿ ಹೇಳುತ್ತಾರೆ, ತಾವು ಹೋಗಿ. ತಾವು ದಯಮಾಡಿ, ತಮ್ಮ ಸ್ಥಾನಗಳಿಗೆ ಹೋಗಿರಿ. ಕಬ್ಬಿನ ಸಮಸ್ಯೆಗೆ ಉತ್ತರ ಹೇಳುತ್ತಾರೆ.

Sri. Narayana Rao Tarae : Sir, we want the assurance from the Hon'ble Chief Minister.

Sri. M.P. Prakash : In the course of his reply, the Hon'ble Chief Minister will reply to it.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಖರ್ಗೆಯವರೇ, ನೀವು ಅವರಿಗೆ ಹೇಳಬೇಕು. ತಾವು ಹೇಳಿ. ಈ ರೀತಿ ಮಾಡಿದರೆ ಹೇಗೆ? ಅವರು ಉತ್ತರ ಹೇಳುವವರೆಗೆ ತಡೆಯುವುದಕ್ಕಾಗುವುದಿಲ್ಲವೇ? ತಾವು ದಯಮಾಡಿ ತಮ್ಮ ಸ್ಥಾನಗಳಲ್ಲಿ ಕೂಡಿಸಿ, ಅವರು ಉತ್ತರ ಹೇಳುತ್ತಾರೆ.

(ಗೊಂದಲ)

ಶ್ರೀ ಜೆ.ಹೆಚ್.ಪಟೇಲ್ : ಮಾನ್ಯ ಉಪಾಧ್ಯಕ್ಷರೇ, ನಾನು ಉತ್ತರ ಕೊಡವುದು ಅವಶ್ಯಕತೆ ಇಲ್ಲವೆಂದು ಕಾಣುತ್ತದೆ. ತಾವು ಮತಕ್ಕೆ ಹಾಕಬಹುದು. ನಾನು ಉತ್ತರ ಕೊಡತಕ್ಕಂಥ ಅವಶ್ಯಕತೆ ಇಲ್ಲ, ಆದ್ದರಿಂದ ಮತಕ್ಕೆ ಹಾಕಬಹುದು.

(ಗೊಂದಲ)

ಉಪಾಧ್ಯಕ್ಷರು : ಇದು ಏನು ಪದ್ಧತಿ? ನೀವು ನಿಯಮಾವಳಿಗಳನ್ನು ಓದಿದ್ದೀರೋ?

(ಗೊಂದಲ)

ಉಪಾಧ್ಯಕ್ಷರು : ಈಗ ಅವಿಶ್ವಾಸ ನಿರ್ಣಯದ ಪ್ರಸ್ತಾಪವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ; " ಈ ಸದನ ಶ್ರೀ ಜೆ.ಹೆಚ್ . ಪಟೇಲ್ ಅವರ ಸಚಿವ ಸಂಪುಟದಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸುತ್ತದೆ "

(ಪ್ರಸ್ತಾವ ತಿರಸ್ಕರಿಸಲ್ಪಟ್ಟಿತು)